# ಶ್ರೀ ಶಾರದಾಪೀಠದ ಮಾಣಿಕ್ಯ

ಶ್ರೀ ಚಂದ್ರಶೇಖರಭಾರತಿ ಸ್ವಾಮಿಗಳ ಜೀವನ ಚರಿತ್ರೆ

ಮತ್ತು ಅವರ ಕೃತಿಗಳ ಅನುವಾದ

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಶಾರದಾಪೀಠದ ಮಾಣಿಕ್ಯ

# ಶಾರದಾಪೀಠದ ಮಾಣಿಕ್ಯ

ಲೇಖಕರು :

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಬೆಂಗಳೂರು-560 011

Sharada Peethada Manikya
by Vidyalankara Prof. S. K. Ramachandra Rao,
Published by Dr. S. R. Sudarshan,
for Surama Prakashana, the publication wing of the
Prof. S. K. Ramachandra Rao Memorial Trust (R),
305, 6th Cross, I Block, Jayanagar,
Bangalore-560 011, Phone : 080-26563957,
E-mail : drsrsudarshan@gmail.com

© : Prof. S. K. Ramachandra Rao Memorial Trust (R)

Pages : xii + 256

Fifth Edition : 2010

Cover Page : J.A. Maitreya
maitreya.jagalur@gmail.com

*Sole Distributors*
**Janapada Prakashana**
Vidyaranyapura, Bangalore.
Phone : 080-23640817

Price : ₹ **120/-**

*Printed at Vagartha, Bangalore. vagartha@yahoo.com*

# ಅನುಕ್ರಮಣಿಕಾ


| | | |
|---|---|---|
| | ಲೇಖಕರ ಪರಿಚಯ | vi |
| | ಮುನ್ನುಡಿ | viii |
| | ಮೊದಲ ಮಾತು | ೧ |
| ೧. | ಅವತರಣಿಕೆ | ೧೫ |
| ೨. | ಮಠದ ಹಿನ್ನೆಲೆ | ೨೩ |
| | ಕುಣಿಗಲ್ಲು ರಾಮಾಶಾಸ್ತ್ರಿಗಳು | ೨೮ |
| | ದಿವಾನ್ ಶೇಷಾದ್ರಿ ಅಯ್ಯರ್ | ೩೦ |
| | ದಿವಾನ್ ಮಾಧವ ರಾಯರು | ೩೩ |
| ೩. | ಮೊದಲ ದಿನಗಳು | ೩೮ |
| | ಶ್ರೀಕಂಠಶಾಸ್ತ್ರಿಗಳು | ೪೧ |
| ೪. | ಕವಲು ದಾರಿ | ೪೬ |
| ೫. | ಪೀಠಾಧಿಪತಿ | ೫೩ |
| ೬. | ಲೌಕಿಕ-ಪಾರಮಾರ್ಥಿಕ | ೬೬ |
| ೭. | ಸೆಣಸಾಟ | ೭೧ |
| | ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳು | ೭೨ |
| ೮. | ಮಠದ ಸಡಗರ | ೮೨ |
| ೯. | ಅವಧೂತ ಪ್ರವೃತ್ತಿ | ೯೨ |
| ೧೦. | ಸಂಚಾರ | |
| ೧೧. | ಅಸ್ವಾಸ್ಥ್ಯದ ಸುಳಿಯಲ್ಲಿ | ೧೦೮ |
| ೧೨. | ಮತ್ತೆ ಸಂಚಾರ | ೧೨೪ |
| ೧೩. | ನಿರ್ಯಾಣ | ೧೩೧ |

| | | |
|---|---|---|
| ೧೪. | ವ್ಯಕ್ತಿತ್ವ | ೧೪೨ |
| ೧೫. | ಸಾರಸ್ವತ ಸಂಪತ್ತು | ೧೬೦ |
| | ಸ್ವಾಮಿಗಳ ಸೂಕ್ತಿಸುಧೆ - ಸಾಧಕರಿಗೆ ಕಿವಿಮಾತು. | ೧೭೬ |
| | ಶ್ರೀ ಗುರು ಕೃತಿ ರತ್ನಮಾಲೆ | ೧೮೭ |
| | (೧) ಗುರುಸ್ಮೃತಿಃ, | ೧೮೯ |
| | (೨) ಪಾದಾವಲಂಬಸ್ತುತಿಃ, | ೧೯೬ |
| | (೩) ದೇಶಿಕ ನವರತ್ನಮಾಲಾ | ೨೦೦ |
| | (೪) ಆಚಾರ್ಯ ಪದಾವಲಂಬನಸ್ತುತಿಃ | ೨೦೩ |
| | (೫) ಗುರುಪ್ರಾರ್ಥನಾಸ್ತೋತ್ರಮ್ | ೨೦೬ |
| | (೬) ದತ್ತನವರತ್ನಮಾಲಿಕಾ | ೨೦೯ |
| | (೭) ದಕ್ಷಿಣಾಮೂರ್ತಿಮಂತ್ರಮಾತೃಕಾಸ್ತವಃ | ೨೧೧ |
| | (೮) ಸಾಂಬಾಷ್ಟಕಮ್ | ೨೧೯ |
| | (೯) ಪಂಚದಶೀಸ್ತೋತ್ರಮ್ | ೨೨೨ |
| | (೧೦) ಶಾರದಾಭುಜಂಗಮ್ | ೨೨೭ |

ಪರಿಶಿಷ್ಟ

| | | |
|---|---|---|
| | ಸದಾಶಿವ ಬ್ರಹ್ಮೇಂದ್ರರು | ೨೩೪ |
| | ಆತ್ಮವಿದ್ಯಾವಿಲಾಸ | ೨೪೧ |

# ಲೇಖಕರ ಪರಿಚಯ



ಪ್ರೊ. ಸಾ.ಕೃ. ರಾಮಚಂದ್ರರಾಯರು (1925–2006) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕ್ಯಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ ' ಮತ್ತು 'ತಿರುಪತಿ ತಿಮ್ಮಪ್ಪ ' ಎಂಬ ಪುಸ್ತಕಗಳು ರಾಜ್ಯಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರಾದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆ ಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಸ್ವಾಮಿಗಳ ಶಿಲ್ಪದ ಚಿತ್ರ (ಲೇಖಕರು ರಚಿಸಿದ್ದು )

# ಮುನ್ನುಡಿ

ಶೃಂಗೇರಿಯ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳನ್ನು ಕುರಿತು ನನ್ನ ತಂದೆಯವರು ಮೊದಲು ಬರೆದ ಪುಸ್ತಕ – 'ಶ್ರೀ ಚಂದ್ರಶೇಖರಭಾರತೀ' ೧೯೬೬ರಲ್ಲಿ ಪ್ರಕಟವಾಯಿತು. ಅದು ೫೪ ಪುಟಗಳ ಸಣ್ಣ-ಪುಸ್ತಕ. ಅದರ ವಿಸ್ತೃತ ಆವೃತ್ತಿಯನ್ನು ''ಶಾರದಾ ಪ್ರಕಾಶನ''ದವರು ೧೯೮೩ರಲ್ಲಿ ಹೊರತಂದರು. ಅದಾದನಂತರ 'ಕಲ್ಪತರು ರಿಸರ್ಚ್ ಅಕಾಡಮಿ'ಯವರು ೧೯೯೪ರಲ್ಲಿ ಆ ಪುಸ್ತಕವನ್ನು ಪುನರ್ಮುದ್ರಣ ಮಾಡಿದರು. ಈ ಮೊದಲು ಮೂರು ಆವೃತ್ತಿಗಳಲ್ಲಿ ಶ್ರೀ ಚಂದ್ರಶೇಖರ ಭಾರತೀಯವರ ಕೃತಿಗಳ ಕನ್ನಡಾನುವಾದ ಇರಲಿಲ್ಲ.

೨೦೦೨ರಲ್ಲಿ 'ಅಭಿಜ್ಞಾನ'ವು ಹೊರತಂದ ನಾಲ್ಕನೆಯ ಮುದ್ರಣದಲ್ಲಿ ಪ್ರೊ. ರಾಮಚಂದ್ರರಾಯರು ಅನುವಾದ ಮಾಡಿದ ಸ್ವಾಮಿಗಳ ಕೃತಿಗಳು ಮತ್ತು ಸದಾಶಿವ ಬ್ರಹ್ಮೇಂದ್ರರ 'ಆತ್ಮವಿದ್ಯಾವಿಲಾಸ'ದ ಕನ್ನಡ ಅನುವಾದವೂ ಸೇರಿದೆ.

ನಾವು ಹೊರತರುತ್ತಿರುವ ಪುಸ್ತಕದಲ್ಲಿಯೂ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಕೃತಿಗಳ ಕನ್ನಡಾನುವಾದ ಹಾಗೂ 'ಆತ್ಮವಿದ್ಯಾವಿಲಾಸ' ಒಳಗೊಂಡಿವೆ. ಪ್ರೊ. ರಾಮಚಂದ್ರರಾಯರು ರಚಿಸಿದ ಸ್ವಾಮಿಗಳ ರೇಖಾಚಿತ್ರಗಳು ಮತ್ತು ಅವರ ಶಿಲ್ಪದ ಚಿತ್ರವನ್ನೂ ಸಹಾ ಕಾಣಬಹುದು. ಮುಖಪುಟದಲ್ಲಿಯೂ ಅವರು ಬಿಡಿಸಿದ ತೈಲವರ್ಣ ಚಿತ್ರವನ್ನು ನೋಡಬಹುದು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ವಾಗರ್ಥ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಕಾರ್ತಿಕ ಪೂರ್ಣಿಮ　　　　　　　　　　ಡಾ|| ಸಾ.ರಾ. ಸುದರ್ಶನ

೨೧-೧೧-೨೦೧೦

# ಮೊದಲ ಮಾತು

ನಾನು ಈ ಪುಸ್ತಕವನ್ನು ಬರೆದದ್ದು ಯಾಕೆಂದು ನಾಲ್ಕುಮಾತು ಹೇಳಬೇಕು. ಈ ಪುಸ್ತಕಕ್ಕೆ ವಿಷಯವಾದ ಸ್ವಾಮಿಗಳು (ಶೃಂಗೇರಿಯ ಆಗಿಹೋದ ಜಗದ್ಗುರುಗಳು, ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳು) ನನಗೆ ಪೂಜಾಸ್ಥಾನೀಯರು. ಅವರನ್ನು ನಾನು ಮೊದಲು ಕಂಡದ್ದು ಹದಿಮೂರು ವರ್ಷಗಳ ಹುಡುಗನಿದ್ದಾಗ. ಅಂದಿನಿಂದ ಇಂದಿನವರೆಗೂ ಅವರನ್ನು ನಾನು ನೆನೆಯದಿದ್ದ ದಿನವಿಲ್ಲ, ಅವರನ್ನು ಸ್ಮರಿಸದೆ ಆರಂಭಿಸಿದ ಅಧ್ಯಯನವಿಲ್ಲ, ಅವರ ನೆರವನ್ನು ಕೋರದೆ ಮೊದಲು ಮಾಡಿದ ಅನುಷ್ಠಾನವಿಲ್ಲ. ನನಗೆ ಅವರಲ್ಲಿ ಏಕನಿಷ್ಠೆ; ಬೇರೊಬ್ಬ ಗುರುವನ್ನು ಅರಸುವ ಅಗತ್ಯ ನನಗೆ ಈವರೆಗೆ ಬಂದುದಿಲ್ಲ!

ಅವರು ನನ್ನ ಗುರುಗಳೆಂದರೆ ನಾನೇನು ಅವರಲ್ಲಿ ವಾಡಿಕೆಯಂತೆ ವಿದ್ಯೆಯನ್ನು ಕಲಿತವನಲ್ಲ, ಅವರಿಂದ ಯಾವುದಾದರೂ ಮಂತ್ರೋಪದೇಶವನ್ನು ಪಡೆದುಕೊಂಡವನಲ್ಲ, ಶೃಂಗೇರಿಮಠಕ್ಕೆ ಸೇರಿದವನೂ ಅಲ್ಲ. ನಾನು ಅವರನ್ನು ಕಂಡದ್ದು ಮೂರು ಬಾರಿ ಅಷ್ಟೆ; ಎರಡು ಬಾರಿ ನಂಜನಗೂಡಿನಲ್ಲಿ, ಒಂದು ಬಾರಿ ಬೆಂಗಳೂರಿನಲ್ಲಿ. ಮೊದಲ ಬಾರಿ ನೋಡಿದ ನೆನಪನ್ನು ಮುಂದೆ ಕಾಣಿಸಿದ್ದೇನೆ. ಮಠಕ್ಕೆ ಸೇರಿದವರೊಬ್ಬರು, ಶಾಲೆಯಲ್ಲಿ ಓದುತ್ತಿದ್ದ ನನ್ನನ್ನು ಕರೆದೊಯ್ದು ಅವರೆದುರು ನಿಲ್ಲಿಸಿ, ನನ್ನನ್ನು ಅವರು ನೋಡುವಂತೆ, ನನ್ನ ಕುಶಲವನ್ನು ಕೇಳುವಂತೆ, ನನ್ನ ಕಡೆ ತಮ್ಮ ಮಂದಹಾಸವನ್ನು ಬೀರುವಂತೆ ಮಾಡಿದುದು ಎರಡನೆಬಾರಿ, ಅದೂ ನಂಜನಗೂಡಿನಲ್ಲೇ; ಆಗಲೂ ಮುಂದೆ ಇನ್ನೊಂದು ಬಾರಿಯೂ ಅವರನ್ನು ಹತ್ತಿರದಿಂದ ಕಣ್ಣುತುಂಬ ನೋಡುವುದಾಯಿತು; ಅವರು ನನ್ನ ಕಡೆ ಕಣ್ಣನ್ನು ಹಾಯಿಸಿ ನಸುನಕ್ಕಾಗ ಆ ನೋಟವನ್ನೂ ನಗುವನ್ನೂ ಒಡಲಲ್ಲಿ ಭಕ್ತಿಯಿಂದ ತುಂಬಿಕೊಳ್ಳುವುದಾಯಿತು. ಈ ಮಾತಿಗೆ ಅರವತ್ತನಾಲ್ಕು ವರ್ಷಗಳು ಸಂದಿವೆಯಾದರೂ ಇಂದೂ ನಾನೂ

ಕಣ್ಣುಮುಚ್ಚಿ ಅವರ ಮಂದಹಾಸವನ್ನು ಸ್ಪಷ್ಟವಾಗಿಯೇ ಕಾಣಬಲ್ಲೆ. ಎಂದರೆ, ನನ್ನ ಮೇಲೆ ಒದಗಿದ ಪ್ರಭಾವ ಎಷ್ಟು ಪ್ರಬಲವಾದುದು! ಹೀಗಿರುವಾಗ, ಅವರನ್ನು ಗುರುಗಳೆಂದು ಭಾವಿಸಿದರೆ ತಪ್ಪಾಗದಲ್ಲವೆ?

ನಾನು ಅವರನ್ನು ಮೊದಲು ಕಂಡದ್ದು ಹೀಗೆ : ನಾನು ನಂಜನಗೂಡಿನ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ನಡೆದದ್ದು. ನಂಜನಗೂಡು ಮೈಸೂರಿಗೆ ಹದಿನಾಲ್ಕು-ಹದಿನೈದು ಮೈಲಿ ದೂರವಿರುವ ಊರು, ಹೆಸರಾದ ಶೈವಕ್ಷೇತ್ರ. ಶೃಂಗೇರಿಮಠದ ಸರ್ವಾಧಿಕಾರಿಗಳಾಗಿದ್ದವರು ಈ ಊರವರೇ ಆಗಿದ್ದುದರಿಂದ ಶೃಂಗೇರಿಮಠಕ್ಕೂ ಈ ಊರಿಗೂ ಒಂದು ಬಗೆಯ ನಂಟು ಇದ್ದಿತು. ಶೃಂಗೇರಿಸ್ವಾಮಿಗಳು ಈ ಊರಿಗೆ ಬಂದುಹೋಗುವುದು ಹಿಂದಿನ ಉಗ್ರನರಸಿಂಹಭಾರತೀಸ್ವಾಮಿಗಳ ಕಾಲದಿಂದ ವಾಡಿಕೆಯಾಗಿದ್ದಿತು.

ಒಂದು ದಿನ ಮಧ್ಯಾಹ್ನ ಇದ್ದಕ್ಕಿದ್ದಂತೆ ಶಾಲೆಗೆ ರಜೆ ಎಂದರು. ಕಾರಣ, ಯಾರೋ ದೊಡ್ಡಸ್ವಾಮಿಗಳೊಬ್ಬರು ಊರಿಗೆ ದಯಮಾಡಿಸುತ್ತಿದ್ದಾರೆಂದು. ವಿದ್ಯಾರ್ಥಿಗಳಾದ ನಮಗೆಲ್ಲ ಶಾಲೆಗೆ ಬಿಡುವು ಎಂದೊಡನೆ ಆಟಕ್ಕೆ ಅವಕಾಶವೆಂದು ಹಿಗ್ಗು. ಆದರೆ ಶಾಲೆಯಿಂದ ನಾವು ನಾಲ್ಕೈದು ಮಂದಿ ಹುಡುಗರು ಹೊರಕ್ಕೆ ಹೊರಡುತ್ತಿರುವಾಗ, ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಬಿ. ರಾಜೀವಲೋಚನಂ ಎನ್ನುವವರು ನಮ್ಮನ್ನು ಕರೆದು ''ರಜವೆಂದು ಬೀದಿಬೀದಿ ಅಲೆಯಬೇಡಿ. ಊರಿಗೆ ಶೃಂಗೇರಿ ಸ್ವಾಮಿಗಳು ಬರುತ್ತಿದ್ದಾರೆ. ಅವರನ್ನು ನೋಡಿ ಒಂದಿಷ್ಟು ಪುಣ್ಯ ಕಟ್ಟಿಕೊಳ್ಳಿ ! ಮೈಸೂರಿನಿಂದ ಹೊರಟಿದ್ದಾರೆ. ನಾಲ್ಕು ಗಂಟೆ ಸುಮಾರಿಗೆ ಬರುತ್ತಾರಂತೆ. ಊರ ಬಾಗಿಲಲ್ಲಿ ಕಾದು ನಿಂತುನೋಡಿ. ಆಮೇಲೆ ದರ್ಶನ ದೊರೆಯುವುದು ಕಷ್ಟ'' ಎಂದು ಹೇಳಿದರು.

ಮುಖೋಪಾಧ್ಯಾಯರು ಹೊರಗೆ ಒರಟೆನಿಸಿದರೂ ಒಳಗೆ ಮೆದುವಾದ ಮನುಷ್ಯ. ಪಾಠ ಚೆನ್ನಾಗಿ ಹೇಳುತ್ತಿರಿಂದ, ಅಡಿಗಡಿಗೆ ತಮ್ಮ ಹಾಸ್ಯದಿಂದ ನಮ್ಮನ್ನೆಲ್ಲ ನಗೆಯಲ್ಲಿ ತೇಲಿಸುತ್ತಿದ್ದುದರಿಂದ ನಮಗೆಲ್ಲ ಅಚ್ಚುಮೆಚ್ಚಾಗಿದ್ದರು. ಅವರು ಪರಮಸಾತ್ವಿಕರೆಂದೂ, ಅಗಡಿಯ ಆನಂದವನ-ಆಶ್ರಮಕ್ಕೆ ನಡೆದು ಕೊಳ್ಳುತ್ತಿದ್ದರೆಂದೂ ನನಗೆ ಮುಂದೆ ತಿಳಿದುಬಂದಿತು. ಅವರ ಮಾತನ್ನು

ಮೀರಲಾರದೆ, ಮೇಲಾಗಿ ಮರುದಿನ ನಮ್ಮನ್ನು ಕೇಳಿಯಾರೆಂಬ ಅಂಜಿಕೆಯಿಂದ, ನಾವು ಸ್ವಾಮಿಗಳನ್ನು ಎದುರುಗೊಳ್ಳಲು ಹೊರಟೆವು.

ಮೈಸೂರು ರಸ್ತೆ ಊರಿನ ಹೆದ್ದಾರಿಯನ್ನು ಸೇರುವ ಕಡೆ ಸಣ್ಣದೊಂದು ಗುಂಪು ಆಗಲೇ ನೆರೆದಿತ್ತು. ನಮ್ಮ ಶಾಲೆಯಿದ್ದುದು ಊರ ಹೊರಗೆ, ಮೈಸೂರುರಸ್ತೆಯ ಬದಿಯಲ್ಲೇ; ವಿಶಾಲವಾದ ಆಟದ ಮೈದಾನವನ್ನು ದಾಟಿದರೆ ಊರ ಹೆದ್ದಾರಿ. ದೂರದಿಂದಲೇ ಜನರ ಗುಂಪನ್ನು ಗುರುತಿಸಿ, ನೇರವಾಗಿ ಅಲ್ಲಿಗೆ ನಡೆದೆವು. ಆದರೆ ಶೃಂಗೇರಿ ಎಲ್ಲಿದೆಯೋ, ಸ್ವಾಮಿಗಳು ಯಾರೋ, ಇಲ್ಲಿಗೆ ಬರುವ ಕಾರಣವೇನೋ ಅದೊಂದೂ ನಮಗೆ ತಿಳಿಯದು. ಶಾಲೆಗೆ ರಜವೆಂದು ಸಂತೋಷ; ಊರ ಬಾಗಿಲಲ್ಲಿ ಏನೋ ಸಂಭ್ರಮವೆಂದು ಕುತೂಹಲ; ಮುಖ್ಯೋಪಾಧ್ಯಾಯರ ನಿರ್ಬಂಧ, ಅಷ್ಟೆ.

ಅಲ್ಲಿ ನೆರೆದಿದ್ದವರನ್ನೆಲ್ಲಾ ನೋಡಿದಾಗ ಮುಖ್ಯೋಪಾಧ್ಯಾಯರು ಕಾಣಿಸಲಿಲ್ಲ. ಬೇರೆ ಕೆಲವರು ಅಧ್ಯಾಪಕರಿದ್ದರು; ನಮಗೆ ತಿಳಿದ ಹಲವರು ಊರ ಹಿರಿಯರಿದ್ದರು. ಆದರೆ ದೊಡ್ಡ ಮಠದ ಸ್ವಾಮಿಗಳು ಊರಿಗೆ ಬರುವಾಗ ಇಷ್ಟೇ ಜನ ನೆರೆಯುವುದೇ ? — ಎನಿಸಿತು. ಊರ ಬಾಗಿಲಲ್ಲಿ ಹಸಿರುತೋರಣವಾಗಲಿ ಇರಲಿಲ್ಲ. ಸಂಭ್ರಮವನ್ನು ಕಾಣದೆ ನಮಗೆ ಸ್ವಲ್ಪ ನಿರಾಶೆಯೇ ಆಯಿತು.

ನಮಗೆ ಆಮೇಲೆ ತಿಳಿಯಿತು, ಸ್ವಾಮಿಗಳಿಗೆ ಸಂಭ್ರಮವೆಂದರೆ ಆಗದೆಂದು. ತಮ್ಮ ಸಂಚಾರವನ್ನು ಕುರಿತು ಪ್ರಚಾರವನ್ನು ಅವರು ಒಪ್ಪುತ್ತಿರಲಿಲ್ಲವಂತೆ. ಮೇಲಾಗಿ ಸ್ವಾಮಿಗಳಿಗೆ ಆರೋಗ್ಯವಿಲ್ಲವೆಂದೂ ಜನ ಹೇಳುತ್ತಿದ್ದರು. ದೂರದ ಕಾಲಡಿಯೆಂಬಲ್ಲಿ (ಕೇರಳರಾಜ್ಯಕ್ಕೆ ಸೇರಿದ ಊರು) ಕೆಲಕಾಲ ಕಳೆಯಲು ಹೋಗುತ್ತಿದ್ದಾರೆಂದೂ, ದಾರಿಯಾಗಿ ನಂಜನಗೂಡಿಗೆ ಬರುವರೆಂದೂ ಜನ ಅಂದುಕೊಳ್ಳುತ್ತಿದ್ದುದನ್ನು ಕೇಳಿದೆವು. ಮಠದ ಅಧಿಕಾರಿಗಳೇ ನಿರ್ಬಂಧದಿಂದ ಅವರನ್ನು ಅಲ್ಲಿಗೆ ಸಾಗಿಸುತ್ತಿದ್ದಾರೆಂದೂ ಕೆಲವರ ಅಭಿಪ್ರಾಯವಾಗಿದ್ದಿತು. ಏನೋ, ಅಂತೂ ಅವರು ಇಲ್ಲಿಗೆ ಬರುವುದು ಬಹುಮಂದಿಗೆ ತಿಳಿಯದು; ತಿಳಿದಿದ್ದರೆ ಪರಿಷೆ ಹೆಚ್ಚಿರುತ್ತಿದ್ದಿತು ಎಂದು ತೋರಿತು ನಮಗೆ.

ನೆರೆದಿದ್ದವರ ನಡುವೆ ನಾವೂ ಸೇರಿ, ಅವರ ಮಾತುಗಳನ್ನೆಲ್ಲಾ ಕಿವಿಗೆ ಹಾಕಿಕೊಂಡೆವು. ಸ್ವಾಮಿಗಳಿಗೆ ಆರೋಗ್ಯವಿಲ್ಲವೆಂದು ಒಬ್ಬರು; ಹುಚ್ಚು ಹಿಡಿದಿದೆಯೆಂದು ಇನ್ನೊಬ್ಬರು; ಅದೇನು ಹುಚ್ಚಲ್ಲ, ಮಠದ ಜಂಜಾಟದಿಂದ ಬೇಸತ್ತು ಹಾಗಾಗಿದ್ದಾರೆ ಎಂದು ಮತ್ತೊಬ್ಬರು; ಅವರು ಜೀವನ್ಮುಕ್ತರು, ಅವರ ಚರ್ಯೆ ನಮಗೇನು ತಿಳಿಯುತ್ತದೆ ? ಎಂದು ಮಗದೊಬ್ಬರು. ಇಂಥ ಮಹಾತ್ಮರು ನಮ್ಮ ಊರಿಗೆ ದಯಮಾಡಿಸುತ್ತಿದ್ದಾರೆ, ನಮ್ಮ ಪುಣ್ಯಕ್ಕೆ ಎಣೆಯುಂಟೆ? ಎಂದು ಒಂದು ದನಿ. ಹೌದು, ಶೃಂಗೇರಿಗೆ ಹೋಗಿ ತಿಂಗಳುಗಳು ಕಾದರೂ ಅವರ ದರ್ಶನ ದೊರೆಯದು! ಎಂದು ಮಾರ್ದನಿ. ಮಠದ ವ್ಯವಹಾರವನ್ನೆಲ್ಲಾ ಕಿರಿಯ ಸ್ವಾಮಿಗಳು ನೋಡಿಕೊಳ್ಳುತ್ತಾರೆ, ಇವರು ತಮ್ಮ ಪಾಡಿಗೆ ತಾವು ನದಿಯ ಆಚೆ ನರಸಿಂಹ ವನ ಎಂಬಲ್ಲಿ ಒಂಟಿಯಾಗಿ ಇರುತ್ತಾರೆ, ಮನಸ್ಸು ಬಂದಾಗ ಮಾತ್ರ ಜನರಿಗೆ ಕಾಣಿಸಿ ಕೊಳ್ಳುತ್ತಾರೆ ಎಂದು ಒಬ್ಬರ ವಿವರಣೆ.

ಅಷ್ಟಿಷ್ಟೆನ್ನುವುದರಲ್ಲಿ ಜನರ ಗುಜುಗುಜು ಹೆಚ್ಚಿತು. ಮೈಸೂರು ರಸ್ತೆಯಲ್ಲಿ ದೂರದಲ್ಲಿ ಬರುತ್ತಿದ್ದ ಸ್ವಾಮಿಗಳ ಪರಿವಾರವನ್ನು ಜನ ಗುರುತಿಸಿದರು. ಮುಂದಾಗಿ ಬಂದವರೊಬ್ಬರು ಸ್ವಾಮಿಗಳು ಬಂದರೆಂದು ತಿಳಿಸಿದರು. ಜನ ಮೈಯೆಲ್ಲಾ ಕಣ್ಣಾಗಿ ನಿಂತರು. ದೌಡಾಯಿಸಿ ಬರುತ್ತಿದ್ದ ಪರಿವಾರ ಊರ ಹತ್ತಿರ ಬರುವಾಗ ಮೆಲ್ಲಗೆ ನಡೆಯಿತು. ಸ್ವಾಮಿಗಳ ಪರಿವಾರವೂ ಸಣ್ಣದೇ; ಎಂಟು-ಹತ್ತು ಜನ ಇದ್ದರು ಅಷ್ಟೆ. ಅವರೆಲ್ಲಾ ವೈದಿಕರಂತೆ ಕಾಣುತ್ತಿದ್ದರು; ನಡೆದೇ ಬರುತ್ತಿದ್ದರು. ಅವರ ನಡುವೆ ಒಂದು ಮೇನೆ. ಮೇನೆಯನ್ನು ನಾನು ಕಂಡದ್ದು ಅದೇ ಮೊದಲು. ಉದ್ದನೆಯ ಪೆಟ್ಟಿಗೆಯಂತೆ ಕಾಣುತ್ತಿದ್ದ ಆ ಮೇನೆಯ ಹಿಂದೆಮುಂದೆ ಅಡ್ಡೆಗಳಿದ್ದು ಇಬ್ಬರು ಬೋವಿಗಳು ಅದನ್ನು ಹೆಗಲ ಮೇಲೆ ಹೊತ್ತು ನಡೆದುಬರುತ್ತಿದ್ದರು. ದೊಡ್ಡ ಮೆರವಣಿಗೆಯನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಎದುರುನೋಡುತ್ತಿದ್ದ ನಮಗೆ ಇನ್ನಷ್ಟು ನಿರಾಶೆಯಾಯಿತು!

ಮೈಸೂರು ಹೆದ್ದಾರಿಯಿಂದ ಊರಿನ ಹೆದ್ದಾರಿಗೆ ಸ್ವಾಮಿಗಳ ಪರಿವಾರ ತಿರುಗಿ, ಅಲ್ಲಿ ನೆರೆದು ನಿಂತಿದ್ದ ಜನಸಂದಣಿಯೆದುರು ನಿಂತಿತು. ಬೋವಿಗಳು ತಾವು ಹೊತ್ತು ತರುತ್ತಿದ್ದ ಮೇನೆಯನ್ನು ನಡುಬೀದಿಯಲ್ಲೇ ಕೆಳಗಿಳಿಸಿದರು. ಪರಿವಾರದ ಹಿರಿಯರೊಬ್ಬರು ಮೇನೆಯ ಬಾಗಿಲನ್ನು ಅತ್ತ ಸರಿಸಿದರು. ಒಳಗೆ

ಸ್ವಾಮಿಗಳು ಪದ್ಮಾಸನ ಹಾಕಿ ಕುಳಿತಿದ್ದುದು ನಮಗೆಲ್ಲ ಕಂಡಿತು. ಒಡನೆಯೇ ನೆರೆದ ಜನರೆಲ್ಲ ಭಯಭಕ್ತಿಗಳಿಂದ ಕೈಜೋಡಿಸಿ, ಬೀದಿಯಲ್ಲೇ ಅಡ್ಡಬಿದ್ದು ನಮಸ್ಕರಿಸಿದರು.

ಮೇನೆಯ ಒಳಗಿನಿಂದ ಸ್ವಾಮಿಗಳು ಮುಂದೆ ಬಗ್ಗಿ, ತಲೆಯನ್ನು ಸ್ವಲ್ಪ ಹೊರಗೆ ಹಾಕಿ ಕಿರುನಗೆಯನ್ನು ಸೂಸುತ್ತ, ತಾವು ಕೈ ಜೋಡಿಸಿ ತಲೆಬಾಗಿಸಿ ಜನರ ನಮಸ್ಕಾರವನ್ನು ಗುರುತಿಸಿದರು. ಸಾಮಾನ್ಯವಾಗಿ ಎಲ್ಲ ಸ್ವಾಮಿಗಳು ಜನಸಾಮಾನ್ಯರಿಗೆ ಮಾಡುವ ಆಶೀರ್ವಾದದ ಗತ್ತಾಗಲೀ ಠೀವಿಯಾಗಲೀ ನಮಗೆ ಕಾಣಿಸಲಿಲ್ಲ. ಮುಖದ ಮೇಲಿನ ಮಂದಹಾಸ ಸಹಜವಾಗಿಯೇ ಇದ್ದಿತು; ಅದರಲ್ಲಿ ತೋರಿಕೆಯ ಛಾಯೆಯೂ ಇರಲಿಲ್ಲ, ಹೆಗ್ಗಳಿಕೆಯ ಧ್ವನಿಯೂ ಇರಲಿಲ್ಲ. ಇದನ್ನೆಲ್ಲ ನೋಡುತ್ತ ಹಿಂದೆ ನಿಂತಿದ್ದ ನಾವು ಹುಡುಗರು ನಮಸ್ಕರಿಸಲೂ ಇಲ್ಲ, ಅಡ್ಡಬೀಳಲೂ ಇಲ್ಲ. ಏನು ಮಾಡಬೇಕೆಂದು ತಿಳಿಯದೆ ಸ್ವಾಮಿಗಳ ಮುಖವನ್ನೆ ದಿಟ್ಟಿಸಿ ನೋಡುತ್ತ ನಿಂತುಬಿಟ್ಟಿದ್ದೆವು. ಆದರೆ ಸ್ವಾಮಿಗಳ ನೋಟ ನಮ್ಮ ಮೇಲೂ ಬಿದ್ದಿತು; ಅದೇ ಮಂದಹಾಸ ನಮಗೂ ಸಂದಿತು!

ಅಷ್ಟು ಕಾಂತಿಯಿಂದ ಕೂಡಿದ, ಕಳೆಕಳೆಯಾದ ಮುಖವನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಮುಖದ ಮೇಲೆಲ್ಲ ಹರಡಿಕೊಂಡು, ಹೊರಗೆ ಉಕ್ಕಿ ಹರಿಯುತ್ತಿದ್ದ ಕಿರುನಗೆಯಂತೂ ಮನಸ್ಸಿನ ಮೇಲೆ ಬಲವಾದ ಮುದ್ರೆಯನ್ನೊತ್ತಿತು. ಈ ಮಾತಿಗೆ ಐವತ್ತನ್ನೂ ಮೀರಿ ವರ್ಷಗಳು ಕಳೆದಿದ್ದರೂ ಇಂದಿಗೂ ಕಣ್ಣು ಮುಚ್ಚಿದರೆ ಆ ನೆಮ್ಮದಿಯ ಮುಖ, ಆ ಅಮಾಯಕವಾದ ನಗೆ ಮನಸ್ಸಿನಲ್ಲಿ ಎದ್ದು ನಿಲ್ಲುತ್ತವೆ. ಆ ನೋಟದ ನೆನಪು ಒಂದಿಷ್ಟೂ ಮಾಸದೆ ಉಳಿದುಕೊಂಡಿದೆ!

ನೆರೆದವರು ಯಾರೂ ಸ್ವಾಮಿಗಳನ್ನು ಮಾತನಾಡಿಸುವ ಧೈರ್ಯ ಮಾಡಲಿಲ್ಲ; ಸ್ವಾಮಿಗಳೂ ತಾವಾಗಿ ಯಾರನ್ನೂ ಮಾತನಾಡಿಸಲಿಲ್ಲ. ಅವರ ಮುಖದ ಮೇಲಿದ್ದ ನಗೆ ಮಾತ್ರ ಎಲ್ಲರನ್ನೂ ಎಡೆಬಿಡದೆ ತಣಿಸುತ್ತಿತ್ತು. ಇವರನ್ನು ಕಣ್ಣಾರೆ ಕಂಡುದೇ ತಮ್ಮ ಭಾಗ್ಯವೆಂದು ಜನ ಬಗೆದು ಅವರ ರೂಪವನ್ನು ತಮ್ಮತಮ್ಮ ಒಡಲಲ್ಲಿ ತುಂಬಿಸಿಕೊಳ್ಳುತ್ತಿದ್ದಂತೆ ತೋರಿತು. ಸ್ವಾಮಿಗಳ ಪರಿವಾರಕ್ಕೆ ಸೇರಿದವರೊಬ್ಬರು ಊರ ಹಿರಿಯರೊಬ್ಬರೊಂದಿಗೆ ಮೆಲುದನಿಯಲ್ಲಿ ಮಾತನಾಡುತ್ತಿದ್ದರು, ಅಷ್ಟೆ.

ಐದು-ಹತ್ತು ನಿಮಿಷಗಳು ಹೀಗೆ ಮೌನವಾದ ಸ್ವಾಗತ ಸಂದಮೇಲೆ ಸ್ವಾಮಿಗಳು ತಮ್ಮ ತಲೆಯನ್ನು ಹಿಂದಕ್ಕೆ ಸರಿಸಿಕೊಂಡು ಮೊದಲಿನಂತೆ ನೆಟ್ಟಗೆ ಕುಳಿತರು. ಮೊದಲು ಮೇನೆಯ ಬಾಗಿಲನ್ನು ಅತ್ತ ಸರಿಸಿದ ಹಿರಿಯರೇ, ಮತ್ತೆ ಬಾಗಿಲನ್ನು ಮುಚ್ಚಿದರು. ಬೋವಿಗಳು ಮೇನೆಯನ್ನು ಮೇಲೆತ್ತಿ, ಹೆಗಲ ಮೇಲೆ ಹೊತ್ತು ಊರ ಹೆದ್ದಾರಿಯಲ್ಲಿ ನಡೆದರು. ಸ್ವಾಮಿಗಳೊಂದಿಗೆ ಬಂದಿದ್ದವರೂ, ಅವರನ್ನು ಎದುರುಗೊಳ್ಳಲು ಬಂದಿದ್ದ ಊರವರೂ ಮೇನೆಯೊಂದಿಗೆ ಊರೊಳಗೆ ಹೊರಟರು.

ಊರಲ್ಲಿ ಅವರ ಬಿಡಾರಕ್ಕೆಂದು ಗೊತ್ತಾಗಿದ್ದ ಮಹಾರಾಜರ ಅರಮನೆಯ ಒಂದು ಭಾಗದಲ್ಲಿ ಸ್ವಾಮಿಗಳಿಗಾಗಿ ಒಂದು ಕೋಣೆಯನ್ನು ಸಜ್ಜುಗೊಳಿಸಿದ್ದರು. ಅಲ್ಲಿಗೆ ಸಾಮಾನ್ಯವಾಗಿ ಪರಿವಾರದ ಹಿರಿಯರಲ್ಲದೆ ಬೇರೆಯವರನ್ನು ಬಿಡುತ್ತಿರಲಿಲ್ಲ. ಸ್ವಾಮಿಗಳೂ ಹೊರಗೆ ಬರುತ್ತಿರಲಿಲ್ಲ. ಹಗಲಾಗಲೀ ರಾತ್ರಿಯಾಗಲೀ ಅವರು ಎಲ್ಲರೆದುರು ವಾಡಿಕೆಯಂತೆ ಪೂಜೆಯನ್ನೇನೂ ಮಾಡುತ್ತಿರಲಿಲ್ಲ. ಪೂಜಾಮೂರ್ತಿಗಳನ್ನಾಗಲೀ ಸಾಮಗ್ರಿಗಳನ್ನಾಗಲೀ ತಂದೂ ಇರಲಿಲ್ಲವೆಂದು ಜನ ಹೇಳುತ್ತಿದ್ದರು. ಅವರು ಪ್ರವಚನಗಳನ್ನು ನಡೆಸುತ್ತಿರಲಿಲ್ಲ. ಜನರಿಗೆ ಉಪದೇಶ ಮಾಡುವುದನ್ನು ಅವರು ನಿಲ್ಲಿಸಿ ಹಲವಾರು ವರ್ಷಗಳಾಗಿದ್ದುವಂತೆ ! ಹೀಗಾಗಿ ಜನರಿಗೆ ಸ್ವಾಮಿಗಳನ್ನು ನೋಡುವುದೇ ದುಸ್ತರವಾಗಿದ್ದಿತು.

ಆದರೆ ಅವರು ಅಲ್ಲಿದ್ದ ಮೂರುನಾಲ್ಕು ದಿನಗಳು ದಿನವೂ ಸಂಜೆ ಅರಮನೆಯ ಮುಂಭಾಗದಲ್ಲಿ ಬಲಗಡೆಯ ಕೋಣೆಯಲ್ಲಿ ಸ್ವಾಮಿಗಳ ದರ್ಶನಕ್ಕೆಂದು ಕೆಲವರು ನೆರೆಯುವರು. ಸ್ವಾಮಿಗಳು ಅಲ್ಲಿಗೆ ಬಂದು ಕೆಲವು ನಿಮಿಷಗಳು ನಿಲ್ಲುವರು; ಜನರು ನಮಸ್ಕಾರ ಮಾಡುವರು. ಯಾರೊಂದಿಗೂ ಮಾತುಕತೆಯಿಲ್ಲ. ಮತ್ತೆ ಸ್ವಾಮಿಗಳು ಕೋಣೆಯನ್ನು ಬಿಟ್ಟು ತಮ್ಮ ಗುಹೆಯನ್ನು ಸೇರಿಕೊಳ್ಳುವರು.

ಸ್ವಾಮಿಗಳು ಊರಿಗೆ ಬಂದ ಮಾರನೆಯ ದಿನ ಸಂಜೆ ನಾನು ಒಬ್ಬ ಸಹಪಾಠಿಯೊಂದಿಗೆ ಅವರ ದರ್ಶನಕ್ಕೆಂದು ಹೋದೆ. ಅರಮನೆಯ ಎದುರೇ ಈ ಸಹಪಾಠಿಯ ಮನೆ; ಅವನು ನನ್ನ ಹತ್ತಿರದ ಸ್ನೇಹಿತನೂ ಆಗಿದ್ದುದರಿಂದ,

ಶೃಂಗೇರಿ ಮಠದ ಸರ್ವಾಧಿಕಾರಿಗಳ ಸಹೋದರರೊಬ್ಬರ ಮೊಮ್ಮಗನೂ ಆಗಿದ್ದುದರಿಂದ, ಅವನ ಮನೆಗೆ ಎಂದಿನಂತೆ ಹೋಗಿದ್ದ ನನಗೆ ಅಂದು ಈ ಅವಕಾಶ ಒದಗಿತು. ಅವನಿಗೆ ಸ್ವಾಮಿಗಳ ಬಿಡಾರದಲ್ಲಿ ಎಲ್ಲರೂ ಪರಿಚಿತರೇ ! ಅವನೊಂದಿಗೆ ಹೋದಾಗ ನನಗೂ ಅಲ್ಲಿ ಎಲ್ಲಿಯೂ ತಡೆಯಿಲ್ಲ! ಸ್ವಾಮಿಗಳನ್ನು ನೋಡಲು ಬಾಯೆಂದು ಕರೆದವನೂ ಅವನೇ ಎನ್ನಿ. ನನಗೆ ಸ್ವಾಮಿಗಳ ದರ್ಶನವನ್ನು ಒದಗಿಸಿಕೊಟ್ಟ ಇವನ ಉಪಕಾರವನ್ನು ನನ್ನ ಉಸಿರಿರುವವರೆಗೂ ಮರೆಯಲಾರೆ.

ಆ ಸಂಜೆ ಸ್ವಾಮಿಗಳು ಬರುವುದನ್ನೇ ಎದುರುನೋಡುತ್ತ ಕೋಣೆಯಲ್ಲಿ ಹದಿನೈದು - ಇಪ್ಪತ್ತು ಮಂದಿ ನಿಂತಿದ್ದರು; ನಾನೂ ನನ್ನ ಸ್ನೇಹಿತನೂ ಈ ಗುಂಪಿನಲ್ಲಿ ಸೇರಿಕೊಂಡೆವು. ನಾವು ಹುಡುಗರಾಗಿದ್ದುದರಿಂದ ಹಿಂದೆಯೇ ನಿಲ್ಲಬೇಕಾಯಿತು. ನಿಂತಿದ್ದವರು ಯಾರೂ ಮಾತನಾಡುತ್ತಿರಲಿಲ್ಲ; ಎಲ್ಲರ ಮುಖದ ಮೇಲೂ ಭಕ್ತಿ ಎದ್ದುಕಾಣುತ್ತಿತ್ತು. ಕೆಲವರು ಕಣ್ಣುಮುಚ್ಚಿದ್ದರು ; ಕೆಲವರ ನೋಟ ಕೆಳಗೆ ಇದ್ದಿತು; ಎಲ್ಲರೂ ಕೈಕಟ್ಟಿಕೊಂಡು ನೆಟ್ಟಗೆ ನಿಂತಿದ್ದರು. ಹುಡುಗರು ನಾವಿಬ್ಬರೇ ಅವರಿವರ ಕಡೆ ಕಣ್ಣಾಡಿಸುತ್ತ, ಅಲ್ಲಲ್ಲಿ ನೋಡುತ್ತ ನಿಂತಿದ್ದವರು !

ಸ್ವಲ್ಪ ಹೊತ್ತು ಹಾಗೆಯೇ ನಿಂತಿರುವಾಗ ಇದ್ದಕ್ಕಿದ್ದಂತೆ ಕೋಣೆಯ ತುಂಬ ಯಾವುದೋ ಹೊಂಬೆಳಕು ತುಂಬಿಕೊಂಡಂತಾಯಿತು. ಇದ್ದ ವಾತಾವರಣದಲ್ಲಿ ಅಪೂರ್ವವಾದ, ಅಲೌಕಿಕವಾದ ಗಾಂಭೀರ್ಯವೊಂದು ಸೇರಿ-ಕೊಂಡಂತಾಯಿತು. ಎಲ್ಲರೂ ಒಮ್ಮೆಲೆ ಬೆಚ್ಚಿ ಕೋಣೆಯ ಒಳಬಾಗಿಲ ಕಡೆ ನೋಡಿದರು. ಸ್ವಾಮಿಗಳು ಆಗತಾನೇ ಕೋಣೆಯ ಹೊಸ್ತಿಲನ್ನು ದಾಟಿ ಒಳಗೆ ಬಂದು ನಿಂತಿದ್ದರು. ಹೊಸ್ತಿಲ ಹಿಂದೆ ಒಳಗಿನ ಕೋಣೆಯಲ್ಲೇ ಸ್ವಾಮಿಗಳ ಎಡಬಲ ಸೇವಕರೊಬ್ಬರು ಕೈಕಟ್ಟಿಕೊಂಡು ನಿಂತಿದ್ದರು.

ಸಾಮಾನ್ಯ ಎತ್ತರದ ಆಳು ; ಕೃಶವಾದ ಮೈಕಟ್ಟು; ಕಂದುಬಣ್ಣದ ಮೈಬಣ್ಣ, ನಡುವಿಗೆ ಉಟ್ಟು ಅದರ ಒಂದು ಭಾಗವನ್ನೇ ಮೇಲೆ ಹೊದ್ದ ಕಾವಿಬಟ್ಟೆ; ಮಡಿಮಾಡಿದ್ದರೂ ಹಳೆಯದು, ಅಂಚಿರಲಿಲ್ಲ, ಮೆರುಗೂ ಇರಲಿಲ್ಲ. ಕೊರಳಲ್ಲಿ ರುದ್ರಾಕ್ಷಿಮಾಲೆಯಿರಲಿಲ್ಲ, ಕಾಲಲ್ಲಿ ಹಾವುಗೆ ಇರಲಿಲ್ಲ. ಹಿರಿಯ

ಜಗದ್ಗುರುಗಳೆಂದು ಸೂಚಿಸುವ ಯಾವ ಆಡಂಭರವೂ ಇಲ್ಲ; ಸಾಮಾನ್ಯವಾದ ಬಡಸಂನ್ಯಾಸಿಯಂತೆ ನಿಂತಿದ್ದರು. ಆದರೆ ಅವರ ಮುಖದ ಮೇಲೆ ಮೂಡಿಕೊಂಡಿದ್ದ ಕಳೆ ನೋಡಿದವರ ಕಣ್ಣುಕೋರೈಸುವಂಥದು, ಮುಖದಿಂದ ಮಿಂಚುತ್ತಿದ್ದ ಕಿರುನಗೆ ನೆರೆದವರನ್ನೆಲ್ಲಾ ಬಿಗಿದುಹಿಡಿದಿತ್ತು.

ಸ್ವಾಮಿಗಳನ್ನು ಕಂಡಾಗ ಭಕ್ತರು ಅಡ್ಡಬೀಳುವುದು ವಾಡಿಕೆ, ಆದರೆ ಅದಕ್ಕೆ ಆ ಕೋಣೆಯಲ್ಲಿ ಎಡೆಯಿರಲಿಲ್ಲ. ನೆರೆದವರೆಲ್ಲ ನಿಂತಲ್ಲೆ ಕೈಜೋಡಿಸಿ ತಲೆಬಾಗಿಸಿ ನಮಸ್ಕರಿಸಿದರು. ಸೂಜಿ ಬಿದ್ದರೆ ಕೇಳಿಸುವಷ್ಟು, ನಿಂತವರು ಉಸಿರಾಡುವುದೂ ನಿಂತಿತೋ ಎನಿಸುವಷ್ಟು ನೀರವ. ಸ್ವಾಮಿಗಳು ನಿಂತಿದ್ದೂ ಮೌನವಾಗಿಯೇ, ಭಕ್ತರು ನಿಂತಿದ್ದೂ ಮೌನವಾಗಿಯೇ. ಹೀಗೆ ಐದಾರು ನಿಮಿಷಗಳು ಕಳೆದಮೇಲೆ ಇದ್ದಕ್ಕಿದ್ದಂತೆ ಎಲ್ಲರನ್ನೂ ಹಿಡಿದಿದ್ದ ಮೋಡಿ ಹರಿಯಿತು. ಕನಸಿನಿಂದ ಎಂಬಂತೆ ಎಚ್ಚೆತ್ತು ನೋಡಿದರೆ, ಸ್ವಾಮಿಗಳು ನಮ್ಮ ಕಡೆ ಬೆನ್ನು ತಿರುಗಿಸದೆ ಹಾಗೆಯೇ ಒಂದು ಕಾಲನ್ನು ಹಿಂದೆಮಾಡಿ ಹೊಸ್ತಿಲ ಹಿಂದಿಟ್ಟು ಹೊರಡಲು ಸಿದ್ಧವಾಗಿದ್ದಾರೆ. ಮರುಕ್ಷಣದಲ್ಲಿ ನಾವು ಕಂಡದ್ದು ಅವರ ಹಿಂದೆ ನಡೆಯುತ್ತಿದ್ದ ಎಡಬಲ ಸೇವಕರ ಎಡಭಾಗವಷ್ಟೆ.

ಯಾವುದೋ ಒಂದು ಅಲೌಕಿಕವಾದ, ಅಪೂರ್ವವಾದ, ಅಧ್ಭುತವಾದ ಅನುಭವವನ್ನು ಪಡೆದುಕೊಂಡಂತೆ ಭಾಸವಾಯಿತು. ಕೋಣೆಯಿಂದ ಹೊರಬರುವಾಗ ಅದೇ ಗುಂಗು; ಮನೆಗೆ ಹೋಗುವಾಗ ಅದೇ ಮತ್ತು; ದಿನಗಳುರುಳಿದರೂ ಅದೇ ನೆನಪು! ನದಿಯಲ್ಲಿ ಮಿಂದು, ಮಿಂಚನ್ನು ಕಂಡು, ಬಿರುಗಾಳಿಗೆ ಮೈಯೊಡ್ಡಿ ಹೊಸ ಬದುಕನ್ನು ಪಡೆದುಕೊಂಡಂತೆ ಆಯಿತು.

ಅವರ ಬದುಕನ್ನು ಸಾಧನೆಯನ್ನು ಸಿದ್ಧಿಯನ್ನು ಸಾವನ್ನು ಕುರಿತ ವಿವರ-ಗಳನ್ನು ದೊರಕಿಸಿಕೊಳ್ಳುವ ಹಂಬಲವೂ ಬಹುದಿನದ್ದೇ. ಅದು ಮೊದಲಾದ ಸಂದರ್ಭ ಹೀಗೆ: ೧೯೫೪ ರಲ್ಲಿ ಭಾರತ ಸರ್ಕಾರದ ಸಂಸ್ಥೆಯೊಂದರಲ್ಲಿ ಉದ್ಯೋಗಕ್ಕೆ ಅಭ್ಯರ್ಥಿಯಾಗಿದ್ದ ನನ್ನನ್ನು ಸಂದರ್ಶನಕ್ಕೆಂದು ದಿಲ್ಲಿಗೆ ಕರೆದಿದ್ದರು. ಇದೇ ಸಂದರ್ಭದಲ್ಲಿ, ನಾಡಿನ ಮನೋರೋಗತಜ್ಞರೆಂದು ಹೆಸರಾದ ಡಾ. ಎಂ. ವಿ. ಗೋವಿಂದಸ್ವಾಮಿಗಳೂ ಸಂದರ್ಶಕರಲ್ಲಿ ಒಬ್ಬರಾಗಿ ದಿಲ್ಲಿಯಲ್ಲೇ ಇದ್ದರು. ಸಂದರ್ಶನ ಮುಗಿದ ಸಂಜೆ, ಅವರು ತಮ್ಮ ಸ್ನೇಹಿತರಾಗಿದ್ದು ದಿಲ್ಲಿಯಲ್ಲೇ ಇದ್ದ

ನನ್ನ ಸೋದರಮಾವಂದಿರ ಮನೆಗೆ ಬಂದರು; ನಾನು ಅಲ್ಲೇ ಉಳಿದುಕೊಂಡಿದ್ದೆ. ಅವರೂ ನನ್ನ ಸೋದರ ಮಾವನೂ (ಕೆ. ಎನ್. ರಂಗರಾಯರು, ದಿಲ್ಲಿಯಲ್ಲಿ ರೇಲ್ವೆ ಪ್ರಧಾನ ಇಂಜನಿಯರಾಗಿದ್ದವರು) ಮಾತನಾಡುತ್ತ, ಅದೇ ದಿನ ಬೆಳಗ್ಗೆ ಅಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯೊಂದರ ಕಡೆ ಹೊರಳಿದರು. ಶೃಂಗೇರಿ ಸ್ವಾಮಿಗಳು ಎರಡು ದಿನಗಳ ಹಿಂದೆ ತುಂಗಾನದಿಯಲ್ಲಿ ಸ್ನಾನಕ್ಕೆಂದು ಹೋದವರು ನೀರಲ್ಲಿ ಮುಳುಗಿ ತೀರಿಕೊಂಡರೆಂಬುದು ಆ ಸುದ್ದಿ. ಬಹು ಹೊತ್ತಿನವರೆಗೆ ಅವರಿಬ್ಬರೂ ಸ್ವಾಮಿಗಳ ವಿಚಾರ ಮಾತನಾಡುತ್ತಿದ್ದರು. ಆಧ್ಯಾತ್ಮದಲ್ಲಿ ಪ್ರವೃತ್ತಿಯುಳ್ಳ ನನ್ನ ಸೋದರಮಾವ ಸ್ವಾಮಿಗಳನ್ನು ಕಂಡಿದ್ದವರು; ಗೋವಿಂದಸ್ವಾಮಿಯವರು ಸ್ವಾಮಿಗಳ ಚಿಕಿತ್ಸೆಗೆಂದು ಶೃಂಗೇರಿಗೆ ಹೋಗಿಬರುತ್ತಿದ್ದವರು. ಅವರಿಬ್ಬರೂ ಮಾತನಾಡುತ್ತಿರುವಾಗ ನಾನು ಅಲ್ಲೇ ಇದ್ದೆನಾದರೂ, ವಯಸ್ಸಿನ ಮರ್ಯಾದೆಯನ್ನು ಅರಿತುಕೊಂಡು ಆಗ ನಾನೇನು ನಡುವೆ ಬಾಯಿ ಹಾಕಲಿಲ್ಲ. ಆದರೆ ಸ್ವಾಮಿಗಳ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲ ಉಕ್ಕಿ ಬಂದಿತು.

ಮುಂದೆ ನನಗೆ ಡಾ. ಗೋವಿಂದಸ್ವಾಮಿಯವರ ಬಳಿಯೇ ಕೆಲಸ ಮಾಡುವ ಅವಕಾಶ ದೊರೆಯಿತು. ಅವರೊಂದಿಗೆ ಶೃಂಗೇರಿಗೆ ಚಿಕಿತ್ಸೆಗೆಂದು ಹೋಗಿಬರುತ್ತಿದ್ದ ಡಾ. ಸಿ. ಕೆ. ವಾಸುದೇವರಾಯರ ಪರಿಚಯವೂ ಆಯಿತು. ಆಗ ಸಮಯ ಸಿಕ್ಕಾಗಲೆಲ್ಲ ಸ್ವಾಮಿಗಳ ವಿಚಾರವಾಗಿ ಅವರಿಬ್ಬರನ್ನೂ ಕೇಳಿ ತಿಳಿದುಕೊಳ್ಳುವುದು; ಅವರು ದಿವಾನರಿಗೆ ಸ್ವಾಮಿಗಳ ಆರೋಗ್ಯದ ವಿಚಾರವಾಗಿ ಕಳುಹಿಸುತ್ತಿದ್ದ ವರದಿಗಳನ್ನು ನೋಡುವುದು; ವಿವರಣೆಗಳನ್ನು ಪಡೆದುಕೊಳ್ಳುವುದು. ಗೋವಿಂದಸ್ವಾಮಿಯವರಿಗೆ ಸ್ವಾಮಿಗಳ ವಿಚಾರವಾಗಿ ಬಹಳ ಗೌರವ; ವಾಸುದೇವರಾಯರಿಗೆ ಅಸಡ್ಡೆ. ಇದರಿಂದಾಗಿ ಸ್ವಾಮಿಗಳ 'ಮಾನಸಿಕ ಅಸ್ವಾಸ್ಥ್ಯ'ದ ಎರಡು ಮುಖಗಳನ್ನು ಅರಿತುಕೊಳ್ಳುವುದಾಯಿತು. ನಾನು ಆ ಸಂಸ್ಥೆಯಲ್ಲಿ ಮನಃಶಾಸ್ತ್ರವಿಭಾಗದ ಮುಖ್ಯಸ್ಥನಾಗಿದ್ದುದರಿಂದ ಗೋವಿಂದಸ್ವಾಮಿಯವರಾಗಲೀ ವಾಸುದೇವರಾಯರಾಗಲೀ ಬೇಸರಪಡದೆ ನನ್ನ ಕುತೂಹಲವನ್ನು ತಮಗೆ ಸಾಧ್ಯವಿದ್ದಷ್ಟೂ ತಣಿಸಿದರು.

ನನ್ನ ಪೂರ್ವಾರ್ಜಿತಸುಯೋಗವೇನೂ ಅಷ್ಟಕ್ಕೇ ಮುಗಿಯುವಂತಿರಲಿಲ್ಲ. ಗೋವಿಂದಸ್ವಾಮಿಯವರಿಗೆ ಶೃಂಗೇರಿಯ ಸಂಪರ್ಕ ಒದಗಿದ ಮೇಲೆ,

ಅವರು ವೇದಾಂತದಲ್ಲೂ ಸಂಸ್ಕೃತದಲ್ಲೂ ಆಸಕ್ತಿಯನ್ನು ತಳೆದು ಪಂಡಿತರಾಜ ವಿ. ಎಸ್. ರಾಮಚಂದ್ರಶಾಸ್ತ್ರಿಗಳಲ್ಲಿ ಕೆಲವು ಪ್ರಕರಣ-ಗ್ರಂಥಗಳನ್ನು ಓದುತ್ತಿದ್ದರು. ಗೋವಿಂದಸ್ವಾಮಿಯವರ ಸಂಪರ್ಕ ನನಗೆ ಬೆಳೆದಮೇಲೆ ಅವರ ಮನೆಗೆ ಬರುತ್ತಿದ್ದ ರಾಮಚಂದ್ರಶಾಸ್ತ್ರಿಗಳ ಪರಿಚಯವೂ ಆಯಿತು. ಶಾಸ್ತ್ರಿಗಳು ಸ್ವಾಮಿಗಳ ಬಳಿ ವಿದ್ಯೆ ಕಲಿತವರು, ಸ್ವಾಮಿಗಳಿಗೆ ಬೇಕಾದವರು; ಅವರ ತಂದೆ ವೆಳ್ಳೂರು ಸುಬ್ರಹ್ಮಣ್ಯಶಾಸ್ತ್ರಿಗಳು ಸ್ವಾಮಿಗಳ ಪೂರ್ವಾಶ್ರಮದಲ್ಲಿ ಅವರಿಗೆ ಗುರುಗಳಾಗಿದ್ದವರು. ರಾಮಚಂದ್ರಶಾಸ್ತ್ರಿಗಳು ಬೆಂಗಳೂರಲ್ಲೇ ಶಂಕರಪುರದಲ್ಲಿ ವಾಸವಾಗಿದ್ದರು. ಸ್ವಾಮಿಗಳ ವಿಚಾರವಾಗಿ ವಿವರಗಳನ್ನು ಪಡೆದುಕೊಳ್ಳುವುದಕ್ಕೆ ಶಾಸ್ತ್ರಿಗಳೂ ಈಗ ನೆರವಾದರು.

ವಿಧಿ ಒದಗಿಸುವ ಅನುಕೂಲ ಇಷ್ಟೆಂದು ಹೇಳಬರುವುದಿಲ್ಲ. ಸ್ವಾಮಿಗಳನ್ನು ಹತ್ತಿರದಿಂದ ಬಲ್ಲ ಹಲವರು ಮಹನೀಯರ ಪರಿಚಯ ಬೇರೆಬೇರೆ ಕಾರಣಗಳಿಂದ ಆಯಿತು. ರಾಜ್ಯದಲ್ಲಿ ಪ್ರಧಾನ ಇಂಜಿನಿಯರಾಗಿದ್ದ ಶ್ರೀಯುತ ಕಪನೀಪತಿಭಟ್ಟರು ತಮ್ಮ ಸ್ನೇಹಿತರ ಸೋದರಳಿಯನೆಂಬ ಕಾರಣದಿಂದ ನನ್ನ ಮೇಲೆ ತುಂಬ ವಾತ್ಸಲ್ಯವನ್ನು ತಳೆದಿದ್ದವರು; ಅಪಘಾತದಿಂದ ಹಾಸಿಗೆ ಹಿಡಿದಿದ್ದ ಅವರು ನನ್ನನ್ನು ಪಕ್ಕದಲ್ಲಿ ಕೂರಿಸಿಕೊಂಡು ಸ್ವಾಮಿಗಳ ವಿಚಾರ ಗಂಟೆಗಟ್ಟಳೆ ಹೇಳಿದರು, ಹಲವಾರು ದಿನಗಳು ಹೇಳಿದರು. ಅವರು ಹೇಳಿದ ಪ್ರಸಂಗಗಳು, ಅವರು ಹೇಳುವ ರೀತಿ — ಎರಡೂ ನನ್ನ ಮನಸ್ಸಿನ ಮೇಲೆ ಬಲವಾದ ಮುದ್ರೆಯನ್ನೊತ್ತಿವೆ. ಪ್ರಸಿದ್ಧರಾದ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಎಳೆತನದಲ್ಲಿ ಸ್ವಾಮಿಗಳ ಸಹಪಾಠಿಗಳಾಗಿದ್ದವರು, ಅವರನ್ನು ಚೆನ್ನಾಗಿ ಬಲ್ಲವರು, ಮಠದ ವ್ಯವಹಾರವನ್ನು ತಿಳಿದಿದ್ದವರು. ಅವರೇ ಸ್ವಾಮಿಗಳನ್ನು ಕುರಿತ ಪುಸ್ತಕವೊಂದನ್ನು ಬರೆಯ ಬೇಕೆಂದಿದ್ದರಂತೆ; ಕಣ್ಣುಗಳನ್ನು ಕಳೆದುಕೊಂಡವರಾಗಿ ಆ ಕೆಲಸ ನಡೆಯಲಿಲ್ಲ. ಅವರೂ ವಿಶ್ವಾಸದಿಂದ ಹಲವಾರು ವಿವರಗಳನ್ನು ತಿಳಿಯಹೇಳಿದರು. ನನ್ನನ್ನು ಪ್ರೀತಿಯಿಂದ ಕಂಡುಕೊಂಡು ದಾರಿತೋರಿಸುತ್ತಿದ್ದ ಹಿರಿಯರಾದ ಡಿ. ವಿ. ಗುಂಡಪ್ಪನವರು ಈ ವಿಚಾರದಲ್ಲೂ ನನಗೆ ನೆರವಾದರು. ಸ್ವಾಮಿಗಳಿಗೆ ವಿದ್ಯಾಗುರುಗಳಾಗಿದ್ದ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳ ಬಳಿ ಗುಂಡಪ್ಪ ನವರಿಗೆ ಪಾಠ ಆಗಿದ್ದಿತು; ಶಾಸ್ತ್ರಿಗಳನ್ನು ಚೆನ್ನಾಗಿ ಬಲ್ಲವರೂ ಆಗಿದ್ದರು. ಹೀಗೆ ಗುಂಡಪ್ಪನವರಿಗೆ, ಅವರಿಗೆ ಪ್ರತ್ಯಕ್ಷವಾದ ಪರೋಕ್ಷವಾದ ಹಲವು ವಿವರಗಳು ದೊರೆತಿದ್ದುವು; ಅವು ನನಗೆ ಸಂದುವು.

ಇವರಲ್ಲದೆ, ಈ ಬಗೆಯ ಸಹಜ ಸಂಪರ್ಕಕ್ಕೆ ಬರದ ಇತರರ ಪರಿಚಯವನ್ನು ಈ ಕಾರಣಕ್ಕಾಗಿಯೇ ನಾನು ಮಾಡಿಕೊಂಡೆ. ನ್ಯಾಯಮೂರ್ತಿಗಳಾಗಿದ್ದ ನಾಗೇಶ್ವರ ಅಯ್ಯರು, ಸ್ವಾಮಿಗಳ ಎಡಬಲ ಸೇವಕರಾಗಿದ್ದ ಮಹಾಬಲ ಭಟ್ಟರು, ವಿಶ್ವೇಶ್ವರ ಶಾಸ್ತ್ರಿಗಳು, ಚಂದ್ರಶೇಖರ ಭಟ್ಟರು ಮೊದಲಾಗಿ ಹಲವರು ತಮಗೆ ತಿಳಿದ ವಿವರಗಳನ್ನೂ, ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನೂ ತಿಳಿಸಿ ಉಪಕಾರ ಮಾಡಿದರು. ರಹಸ್ಯವೆಂದು ವಿವರಗಳನ್ನು ಹೇಳದವರೂ ಉಂಟು; ಬೇರೆ ಯಾರಿಗೂ ತಿಳಿಸುವುದಿಲ್ಲವೆಂದು ಮಾತು ತೆಗೆದುಕೊಂಡು ತಿಳಿಸಿದವರೂ ಉಂಟು. ಕೊಟ್ಟ ಮಾತನ್ನೇನೋ ಉಳಿಸಿಕೊಂಡಿದ್ದೇನೆನ್ನಿ.

ಸ್ವಾಮಿಗಳನ್ನು ಕುರಿತ ಬರಹಗಳೂ ಹಲವು ನನಗೆ ನೆರವಾದುವು; ಮುಖ್ಯವಾಗಿ ತಿನ್ನವೆಲ್ಲಿಯ ಆರ್. ಕೃಷ್ಣಸ್ವಾಮಿ ಅಯ್ಯರೆಂಬುವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ನಾಲ್ಕೈದು ಪುಸ್ತಕಗಳು. ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದಿಂದ ಸ್ವಾಮಿಗಳ ಪಟ್ಟಾಭಿಷೇಕದ ನಕ್ಷತ್ರೋತ್ಸವ (ಪಟ್ಟವೇರಿ ಇಪ್ಪತ್ತೇಳು ವರ್ಷಗಳು ಕಳೆದ ಉತ್ಸವ) ಸಂದರ್ಭದಲ್ಲಿ 'ಭಕ್ತಿಕುಸುಮಾಂಜಲಿ' ಎನ್ನುವ ಸ್ಮರಣ ಗ್ರಂಥವೊಂದು ಪ್ರಕಟವಾಯಿತು (೧೯೩೮). ಬಹುಮಟ್ಟಿಗೆ ಸಂಸ್ಕೃತದಲ್ಲೇ ಇರುವ ಲೇಖನಗಳನ್ನೊಳಗೊಂಡ ಗ್ರಂಥ ಇದು. ಹಲವು ಮಹನೀಯರು ಸ್ವಾಮಿಗಳನ್ನು ಕುರಿತು ಬರೆದಿದ್ದಾರೆ. ಇದರಲ್ಲಿ ಸ್ವಾಮಿಗಳನ್ನು ತೀರ ಹತ್ತಿರದಿಂದ ಬಲ್ಲವರಾಗಿ ಅವರ ಪಟ್ಟಾಭಿಷೇಕದ ಸಮಯದಲ್ಲೂ ಪ್ರಧಾನಪಾತ್ರವಹಿಸಿ ರಾಮೇಶ್ವರಯಾತ್ರೆಯಲ್ಲೂ ಅವರೊಂದಿಗೆ ಇರುತ್ತ ಇದ್ದು, ಅರಮನೆಯ ಧರ್ಮಾಧಿಕಾರಿಗಳೂ ಮಠದ ವಿದ್ವಾಂಸರೂ ಆಗಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳು ಸ್ವಾಮಿಗಳ ಪೂರ್ವಜೀವನದ ವಿವರಗಳನ್ನೆಲ್ಲ ಸಂಸ್ಕೃತಲೇಖನವೊಂದರಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ಈ ಪುಸ್ತಕವಲ್ಲದೆ ಅಧಿಷ್ಠಾನ ಮುಗಿದ ಸಮಯದಲ್ಲಿ ಮಠದ ಕಡೆಯಿಂದ ಹೊರಬಂದ ಸ್ಮರಣ ಗ್ರಂಥದಲ್ಲೂ ಹಲವಾರು ಹಿರಿಯರು ಸ್ವಾಮಿಗಳ ವಿಚಾರವಾಗಿ ಬರೆದ ಬರಹಗಳಿವೆ. ಕನ್ನಡದಲ್ಲಿ ಹುರಗಲವಾಡಿ ಲಕ್ಷ್ಮೀ ನರಸಿಂಹಶಾಸ್ತ್ರಿಗಳು, ಗಮಕಿ

ರಾಮಕೃಷ್ಣಶಾಸ್ತ್ರಿಗಳು, ಮೀಮಾಂಸಾಕಂಠೀರವ ವೈದ್ಯನಾಥಶಾಸ್ತ್ರಿಗಳು, ಶಾಸ್ತ್ರರತ್ನಾಕರ ಕರುಂಗಲಂ ಕೃಷ್ಣಶಾಸ್ತ್ರಿಗಳು, ಟಿ. ಎಲ್. ವೆಂಕಟರಾಮ ಅಯ್ಯರು, ಶ್ರೇಷ್ಠ ನ್ಯಾಯಮೂರ್ತಿಗಳಾಗಿದ್ದ ಎನ್. ಚಂದ್ರ ಶೇಖರ ಅಯ್ಯರು ಮತ್ತು ಪತಂಜಲಿಶಾಸ್ತ್ರಿಗಳು, ಮುಂಬಯಿಯ ಮಂತ್ರೇಶ್ವರ ಶರ್ಮಾ ಮೊದಲಾದವರು ಅಲ್ಲಲ್ಲಿ ಆಗಾಗ ಮಾಡಿಕೊಟ್ಟಿರುವ ನೆನಪುಗಳಿವೆ. ಇವನ್ನೆಲ್ಲ ನೋಡಿ ವಿವರಗಳನ್ನು ಸಂಗ್ರಹಿಸಿದುದಾಯಿತು.

ಹೀಗೆ ಈ ಪುಸ್ತಕವನ್ನು ಬರೆಯುವಲ್ಲಿ ಹಲವರಿಗೆ ಋಣಿಯಾಗಿದ್ದೇನೆ. ಆದರೆ ಈ ವಿವರಗಳನ್ನು ಸಂಗ್ರಹಿಸುವಾಗ ಪುಸ್ತಕವನ್ನು ಬರೆಯಬೇಕೆಂದು ಬಯಕೆಯೇನೂ ಇರಲಿಲ್ಲ. ನನ್ನ ಅರಿವು ಆಳವಾದೀತೆಂಬ ಉದ್ದೇಶ-ವಷ್ಟೇ ಇದ್ದಿತು. ಕೊಂಚಮಟ್ಟಿಗೆ, ಮನಃಶಾಸ್ತ್ರವಿದ್ಯಾರ್ಥಿಯಾಗಿ ಕುತೂಹಲವೂ ಇದ್ದಿತೋ ಏನೋ! ಪುಸ್ತಕ ಬರೆಯುವ ಹವ್ಯಾಸ ನನಗಿದೆಯಾದರೂ, ಸ್ವಾಮಿಗಳನ್ನು ಈ ಚಪಲಕ್ಕೆ ಗುರಿಮಾಡಬಾರದೆಂದು ಬಗೆದು ಅತ್ತ ಗಮನ ಹರಿಸಲಿಲ್ಲ. ಈಚೆಗೆ ನನ್ನ ಮಿತ್ರರೊಬ್ಬರ ಒತ್ತಾಯದಿಂದ ನಾನು ಸಂಗ್ರಹಿಸಿದ ವಿವರಗಳಲ್ಲಿ ಕೆಲವನ್ನು ಈ ಪುಸ್ತಕರೂಪದಲ್ಲಿ ಹೆಣೆದಿದ್ದೇನೆ.

ಅವರ ಹಿರಿಮೆಯ ಪ್ರಚಾರ ಪುಸ್ತಕದ ಉದ್ದೇಶವಲ್ಲ. ಅವರೇ ಪ್ರಚಾರವನ್ನು ಬಯಸಲಿಲ್ಲ. ಪೀಠಾಧಿಪತಿಗಳಾಗಿ ಪ್ರಚಾರಕ್ಕೆ ಬೇಕಾದಂತೆ ಇದ್ದ ಪರಿಕರಗಳನ್ನೆಲ್ಲ ಬದಿಗೊತ್ತಿ, ಕಡೆಗೆ ಪೀಠದ ಬಿಂಕವನ್ನೂ ಬಿಟ್ಟು ಬಿಡಿಬೀಸಾಗಿ ನಿಂತವರು ಅವರು; ಸಾಧನೆಯಿಂದ ಪಡೆದುಕೊಂಡ ಸಿದ್ಧಿಗಳನ್ನು ಮೆರೆಯಿಸದೆ, ಲೆಕ್ಕಿಸದೆ ಒಳಮುಖವಾಗಿ ಉಳಿದುಕೊಂಡವರು (ಅವರಿಗೆ ಸಿದ್ಧಿಗಳಿದ್ದುದೇನೋ ನಿರ್ವಿವಾದ; ಅವುಗಳನ್ನು ಅನುಭವದಲ್ಲಿ ಕಂಡುಕೊಂಡವರು ಈಗಲೂ ಇದ್ದಾರೆ, ನಾನೇ ಇದ್ದೇನೆ!). ಇನ್ನು ಈ ಪುಸ್ತಕದಿಂದ ಏನು ಪ್ರಚಾರವಾಗಬೇಕು? ಪುಸ್ತಕದ ಉದ್ದೇಶ ಮಿತ್ರರು ಹೇಳಿದ್ದೇ — ನಮ್ಮ ಕಾಲದ ಸಂತರೊಬ್ಬರ ಬದುಕು, ಬೆಳವಣಿಗೆ, ಬವಣೆ, ಸಂದರ್ಭದ ಒತ್ತಡ, ಸಾಧನೆ, ಸಿದ್ಧಿ, ಸ್ವಭಾವ, ಪ್ರಭಾವ ಇವುಗಳ ಸಮಗ್ರಚಿತ್ರವೊಂದನ್ನು ಒದಗಿಸುವುದು, ಅಷ್ಟೆ.

ಈ ಪುಸ್ತಕವನ್ನು ಸಿದ್ಧಗೊಳಿಸುವಾಗ ಹಲವಾರು ದಿನಗಳು ಅವರ ಧ್ಯಾನದಲ್ಲೇ ಕಳೆಯಬೇಕಾದುದು ನನಗಾದ ಮೊದಲ ಲಾಭ, ಸಾಧನೆಗೆ ಅವಕಾಶ. ಪುಸ್ತಕವನ್ನು ಓದಿ ಕೆಲವರಾದರೂ ಸ್ವಾಮಿಗಳ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳುವುದು ಸಾಧ್ಯವಾದರೆ ಅದು ನನಗಾಗುವ ಎರಡನೆಯ ಲಾಭ, ಸಮಾಧಾನ.

-ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ನಮಃ ಶ್ರೀಶಾರದಾಪೀಠಮಾಣಿಕ್ಯಾಯ ಮಹಾತ್ಮನೇ ।
ಬ್ರಹ್ಮವಿದ್ಯಾದ್ವಿತೀಯಾಯ ಚಂದ್ರಶೇಖರಯೋಗಿನೇ ॥

# ೧. ಅವತರಣಿಕೆ

ಚಂದ್ರಶೇಖರಭಾರತೀಸ್ವಾಮಿಗಳೆಂದು ಹೆಸರಾದುದು ಸಂನ್ಯಾಸಿಯಾಗಿ ಶೃಂಗೇರಿಮಠದ ಜಗದ್ಗುರು ಪಟ್ಟವೇರಿದಮೇಲೆ. ಸಂನ್ಯಾಸಿಯಾಗುವಾಗ ಹಳೆಯ ಬದುಕು ತೀರಿ ಹೊಸ ಬದುಕು ಮೊದಲಾಯಿತೆಂದು ಸೂಚಿಸಲು ಮೊದಲಿನ ಹೆಸರನ್ನು ಮರೆತು ಹೊಸ ಹೆಸರನ್ನು ತಳೆಯುವುದು ವಾಡಿಕೆ. ಇವರ ಹಳೆಯ ಹೆಸರು ನರಸಿಂಹನೆಂದು. ಶಾಲೆಯಲ್ಲಿ ದಾಖಲೆಗೆಂದು ಬರೆದುಕೊಂಡ ಹೆಸರು ಪಟಗುಪ್ಪೆ ಈಶ್ವರೀ ನರಸಿಂಹಶಾಸ್ತ್ರೀ. ಪಟಗುಪ್ಪೆ ಅವರ ಮನೆತನದ ಮೂಲಸ್ಥಳ. ಸಾಗರ ಮತ್ತು ನಗರಗಳ ನಡುವೆ ಕುಶಾವತೀನದಿಯ ದಂಡೆಯ ಮೇಲಿರುವ ಒಂದು ಸಣ್ಣ ಅಗ್ರಹಾರ ಇದು. ಈಶ್ವರಿಯೆನ್ನುವುದು ಮನೆತನದ ಹೆಸರು.

ಹಲವಾರು ತಲೆಮಾರುಗಳಿಂದ ಶೃಂಗೇರಿಯಲ್ಲಿ ನೆಲೆಸಿದ್ದ ಮನೆತನ ಅದು. ಮುಲಕನಾಡು ಬ್ರಾಹ್ಮಣರು ಎಂದಮೇಲೆ ತೆಲುಗು ಸೀಮೆಯವರು, ಯಾವುದೋ ಕಾಲದಲ್ಲಿ ಇಲ್ಲಿಗೆ ವಲಸೆಬಂದವರು. ಮನೆಮಾತು ತೆಲುಗು; ಆದರೆ ಕನ್ನಡಕ್ಕೆ ಒಗ್ಗಿಕೊಂಡುಬಂದ ತೆಲುಗು. ವೈದಿಕ ಬ್ರಾಹ್ಮಣರು; ಸೂತ್ರ ಆಪಸ್ತಂಭ, ಗೋತ್ರ ಗರ್ಗಸ. ವೈದಿಕರೆಂದು ಪೌರೋಹಿತ್ಯ ಮಾಡಿ ಊರೂರು ತಿರುಗಿ ಹಣವನ್ನು ಹಿಡಿದುಕೊಂಡವರಲ್ಲ; ಕಾಲಕ್ಕೆ ತಕ್ಕಂತೆ ಲೌಕಿಕ-ಉದ್ಯೋಗವನ್ನು ಹಿಡಿದು ಹೊಟ್ಟೆ ಹೊರೆದುಕೊಂಡವರೂ ಅಲ್ಲ; ಶೃಂಗೇರಿಯವರಾಗಿ ಮಠವನ್ನೇ ಅವಲಂಬಿಸಿ ಉಪಾಯದಿಂದ ದೊಡ್ಡ ಕುಳವಾದವರೂ ಅಲ್ಲ. ಆರ್ಥಿಕವಾಗಿ ಏನೇನೂ ಅನುಕೂಲವಾಗಿದ್ದವರಲ್ಲ; ಬಡವರಾಗಿ ಮಡುಗಿದ ಹಾಗೆ ಇರುವವರು. ದೇವರು ಕೊಟ್ಟ ಬಡತನವನ್ನು ನೀಗಿಸಿಕೊಳ್ಳಲು ಹವಣಿಸಿದವರೂ ಅಲ್ಲ!

ಬಡವರಾದರೂ ಬ್ರಾಹ್ಮಣ್ಯಕ್ಕೆ ಹೊಂದಿಕೊಂಡುಬಂದ ಕೆಲವೊಂದು ಕಟ್ಟಳೆಯನ್ನು ಸಾಧ್ಯವಾದಷ್ಟೂ ಹಳೆಯ ಕಾಲದಂತೆಯೇ ಉಳಿಸಿಕೊಂಡು ಬಂದವರು. ಸ್ವಲ್ಪ ಮಟ್ಟಿಗೆ ವೇದಭಾಗಗಳನ್ನು ಕಲಿತು, ಕಲಿಯಬೇಕೆಂದು ಬಂದ ವಿದ್ಯಾರ್ಥಿ ಒಬ್ಬಿಬ್ಬರಿಗೆ ಕಲಿಸುವರು. ಮನೆಯ ಹಿರಿಯರಲ್ಲೊಬ್ಬರು ವಿದ್ವಾಂಸರಾಗಿದ್ದವರು; ಮಠದ ಆಸ್ಥಾನಪಂಡಿತರೆಂದು ಹೆಸರಾದವರು. ಅವರ ಕಾಲದಲ್ಲಿ ಮಠದಿಂದ ಈ ಮನೆತನಕ್ಕೆ ಅಲ್ಪಸ್ವಲ್ಪ ನೆರವು ದೊರಕತೊಡಗಿತು. ವಾಸಕ್ಕೆ ಸಣ್ಣದೊಂದು ಮನೆ; ಅಡುಗೆಗೆ ಮಠದ ಉಗ್ರಾಣದಿಂದ ಅದೋ ಇದೋ ಪಡಿತರ; ವಿಶೇಷ ಉತ್ಸವಗಳ ಸಮಯದಲ್ಲಿ ಮಠದಿಂದ ಕೊಂಚ ಸಂಭಾವನೆ. ಹೀಗೆ ಮಠದ ನಂಟು ಇದ್ದರೂ ಮಠದ ಕಾರುಬಾರಿನಲ್ಲಿ ಕಾಲಿರಿಸದೆ, ಹೊರಗಿನ ಹವ್ಯಾಸಕ್ಕೆ ಕೈಹಾಕದೆ, ಅಧಿಕಾರಿಗಳ ಅನುಗ್ರಹಕ್ಕಾಗಿ ಬಾಯಿಬಿಡದೆ ತಮ್ಮ ಪಾಡಿಗೆ ತಾವು ಗಮ್ಮನೆ ಇರುವವರು.

ನೆರೆಹೊರೆಯಲ್ಲಿ ಇವರು ಅಮಾಯಕರೆಂದೂ, ಏನನ್ನೂ ಅರಿಯದವರೆಂದೂ, ಸರಳಸ್ವಭಾವದವರೆಂದೂ ಪರಿಚಿತರು. ಊರವರಿಗೆ ಇವರ ಮೇಲೆ ಆದರವೂ ಇಲ್ಲ, ಆಗ್ರಹವೂ ಇಲ್ಲ. ಇಂಥವರನ್ನು ಕಂಡು ಅಸೂಯೆಪಡುವವರು ಯಾರು ? ಇವರಿಗೆ ಆಗದವರು ಯಾರು? ಇವರಿಗೆ ಅಂಜುವವರು ಯಾರು ? ಇವರನ್ನು ಒಲಿಸಿಕೊಳ್ಳಬೇಕೆಂದು ಬಯಸುವವರು ಯಾರು ? ಊರ ಹಗರಣವಾಗಲೀ, ಮಠದ ರಾಜಕಾರಣವಾಗಲೀ ಇವರಿಗೆ ದೂರವೇ. ಈ ಮನೆತನಕ್ಕೂ ಮಠಕ್ಕೂ ಇದ್ದ ಅಲ್ಪಸ್ವಲ್ಪ ಸಂಬಂಧವೂ ನರಸಿಂಹನ ಅಜ್ಜನ ಕಾಲದಿಂದ ಅಷ್ಟೆ.

ನರಸಿಂಹನ ಅಜ್ಜ ಸುಬ್ಬಾಶಾಸ್ತ್ರಿಗಳು ಘನಪಂಡಿತರು; ವ್ಯಾಕರಣ ಶಾಸ್ತ್ರದಲ್ಲಂತೂ ಎತ್ತಿದ ಕೈ. ಹೆಚ್ಚಿನ ವಿದ್ಯೆಗಾಗಿ ಹಾತೊರೆದು, ಶೃಂಗೇರಿ ಕುಗ್ರಾಮವನ್ನು ಬಿಟ್ಟು ಬೇರೆ ಊರುಗಳಲ್ಲಿ ಅಡ್ಡಾಡಿ, ತೆಲುಗುದೇಶದಲ್ಲಿ ಎಲ್ಲೋ ನಿಂತು ಸ್ವಲ್ಪ ಅನುಕೂಲವನ್ನು ಪಡೆದುಕೊಂಡವರು. ಆ ಊರಿಗೆ ಶೃಂಗೇರಿಯ ಜಗದ್ಗುರುಗಳು ಸಂಚಾರಕ್ರಮದಿಂದ ಬಂದವರು ಶೃಂಗೇರಿಯ ಈ ಸುಬ್ಬಾಶಾಸ್ತ್ರಿಗಳನ್ನು ಕಾಣುವುದಾಯಿತು. ಅವರ ವಿದ್ವತ್ತನ್ನು ಅರಿತುಕೊಂಡು ಅವರನ್ನು ತಮ್ಮ ಆಸ್ಥಾನವಿದ್ವಾಂಸರೆಂದು ನೇಮಿಸಿಕೊಂಡು ತಮ್ಮೊಡನೆ ಶೃಂಗೇರಿಗೆ ಕರೆದುಕೊಂಡುಬಂದರು. ಅಲ್ಲಿ ಅವರಿಗೊಂದು ಸಣ್ಣ ಮನೆ, ಮಠದಿಂದ ಸ್ವಲ್ಪ

ನೆರವನ್ನೂ ಒದಗಿಸಿಕೊಟ್ಟರು. ಆದರೆ ಈ ಶಾಸ್ತ್ರಿಗಳು ಸ್ವಭಾವದಲ್ಲಿ ವಿರಕ್ತರು; ಮಠದ ವಿದ್ವಾಂಸರಲ್ಲಿ ಸಾಮಾನ್ಯವಾಗಿ ಇರುವ ಹೆಮ್ಮೆ, ಬಿಮ್ಮು, ಪೋಟಿ, ಅಸೂಯೆ ಇವು ಒಂದೂ ಇಲ್ಲ. ಇಂಥವರು ಮಠದ ವಾತಾವರಣದಲ್ಲಿ ಇರುವುದು ಕಷ್ಟ. ಬೇಸರಗೊಂಡ ಶಾಸ್ತ್ರಿಗಳು ಊರನ್ನೂ ಮಠವನ್ನೂ ಬಿಟ್ಟು ಅವಧೂತರಾಗಿ ಎಲ್ಲಿಯೋ ಹೊರಟುಹೋದರು. ಎಲ್ಲಿ ಹೋದರೋ ಏನಾದರೋ ಯಾರಿಗೂ ತಿಳಿಯದು. ಹಿಮಾಲಯದ ಕಡೆ ಹೋದರೆಂದು ಜನ ಅಂದುಕೊಳ್ಳುತ್ತಿದ್ದರು. ಹಳ್ಳಿಯ ಜನರಿಗೆ ಊರಿಂದ ದೂರ ಎಲ್ಲಿ ಹೋದರೂ ಹಿಮಾಲಯವೇ!

ಮನೆಯಲ್ಲಿ ಉಳಿದವರು ಹೆಂಡತಿ, ಒಬ್ಬನೇ ಮಗ. ಮಠದಿಂದ ಸಲ್ಲುತ್ತಿದ್ದ ಅಷ್ಟಿಷ್ಟು ನೆರವೇನೋ ಮುಂದುವರಿಯಿತು. ಆದರೆ ಮಗನೇನು ವಿದ್ಯಾವಂತನಾಗಿ, ಆಸ್ಥಾನ ವಿದ್ವಾಂಸನೆನಿಸಿಕೊಳ್ಳುವ ಹಾಗಿರಲಿಲ್ಲ. ತಂದೆಯಿಂದ ಸ್ವಲ್ಪಮಟ್ಟಿಗೆ ವೇದಭಾಗವನ್ನು ಕಲಿತಿದ್ದನಷ್ಟೆ. ತಂದೆಯೋ ಮೊದಲೇ ವಿರಕ್ತರು; ತಮ್ಮ ಧ್ಯಾನ, ಪೂಜೆ, ಜಪತಪಗಳಲ್ಲೇ ಕಾಲಕಳೆಯುವರು; ಮಗ ವಯಸ್ಸಿಗೆ ಬರುವ ಸಮಯಕ್ಕೆ ಮನೆಯನ್ನೇ ಬಿಟ್ಟು ಹೊರಟುಹೋದರು. ಇನ್ನು ಮಗನ ಅಧ್ಯಯನವೆಲ್ಲಿ ಬಂತು? ಮೇಲಾಗಿ ಮಗನಿಗೆ ತಂದೆಯ ವಿದ್ಯೆಯಿರದಿದ್ದರೂ ತಂದೆಯ ಮುಗ್ಧಸ್ವಭಾವ ಇದ್ದಿತು. ಅಂಥ ಬುದ್ಧಿವಂತನೂ ಅಲ್ಲವಾಗಿ, ಬೇರೆ ಯಾವ ಉದ್ಯೋಗವನ್ನು ಹಿಡಿಯುವುದೂ ಆಗದು. ಕೈ ಹಿಡಿದ ಹೆಂಡತಿಯೂ ಗಂಡನಿಗೆ ಅನುರೂಪಳೇ; ಅಷ್ಟೇ ಮುಗ್ಧ ಸ್ವಭಾವ, ಅದೇ ಅಮಾಯಕತೆ! ಎಂದಮೇಲೆ ಬಡತನ ಗಟ್ಟಿಯಾದುದು ಆಶ್ಚರ್ಯವೇನಲ್ಲ.

ಸುಬ್ಬಾಶಾಸ್ತ್ರಿಗಳ ಈ ಮಗನ ಹೆಸರು ಗೋಪಾಲಶಾಸ್ತ್ರಿ; ಜನರು ಗೋಪಶಾಸ್ತ್ರಿಯೆಂದೇ ಕರೆಯುವರು. ಹೆಂಡತಿಯ ಹೆಸರು ಲಕ್ಷ್ಮಮ್ಮ. ಇವರ ಹೆಸರು ಉಳಿದುಬಂದಿರುವುದು ಚಂದ್ರಶೇಖರಭಾರತೀಸ್ವಾಮಿಗಳ ತಂದೆ-ತಾಯಿಯರೆಂದು ಅಷ್ಟೆ. ಅವರ ಸ್ವಭಾವ ಹಸುಗೂಸುಗಳದ್ದು; ಯಾವ ಲೋಕವ್ಯವಹಾರವನ್ನೂ ಅರಿಯದವರು, ಕಪಟ ಕಾಣದವರು, ಪಾಪಭೀರುಗಳು. ಗೋಪಾಶಾಸ್ತ್ರಿಗಳ ಸ್ವಭಾವವನ್ನು ಸೂಚಿಸುವ ಸಂಗತಿಯೊಂದನ್ನು ಅವರನ್ನು ಬಲ್ಲವರಿಂದ ಕೇಳಿದ್ದೇನೆ. ಶಾಸ್ತ್ರಿಗಳಿಗೆ ನಸ್ಯದ ಅಭ್ಯಾಸವಿದ್ದಿತಂತೆ. ಅಂಗಡಿಯಿಂದ ನಸ್ಯವನ್ನು ತರಲೆಂದು ಮನೆಯಿಂದ

ಹೊರಟವರು, ದಾರಿಯಲ್ಲಿ ಯಾರಾದರೂ ಎದುರಾಗಿ ಮಾತಾಡಿಸಿದರೆ, ಮಾತು ಮುಗಿಸಿ ಹಾಗೆಯೇ ಮನೆಗೆ ಹಿಂದಿರುಗುತ್ತಿದ್ದರಂತೆ; ತಾವು ಮನೆಯಿಂದ ಹೊರಟ ಉದ್ದೇಶವನ್ನೇ ಮರೆತುಬಿಡುತ್ತಿದ್ದರಂತೆ.

ಇಂಥ ಸ್ವಭಾವದ ಅವರಿಗೆ ಬಡತನ ಅಂಟಿಕೊಂಡು ಬಂದುದು ಆಶ್ಚರ್ಯವೇನಲ್ಲ. ಏನೋ ಇರಲೊಂದು ಜಾಗ, ತಲೆಯ ಮೇಲೊಂದು ಸೂರು, ಮಠದಿಂದ ಅಷ್ಟಿಷ್ಟು ನೆರವು; ಸಾಕೆಂದು ಸುಮ್ಮನಿದ್ದರು. ಹೆಚ್ಚು ಗಳಿಸುವ ಯಾವ ಪ್ರಯತ್ನವನ್ನೂ ಮಾಡದೆ, ತಾನಾಗಿ ಬಂದುದರಲ್ಲಿ ತೃಪ್ತರಾಗಿ, ಹೆರವರನ್ನು ನೋಡಿ ಕರುಬದೆ, ಜನರ ಗುಂಪಿನಲ್ಲಿ ಬೆರೆಯದೆ, ಬೇರೆಯವರ ಹವ್ಯಾಸಕ್ಕೆ ಕೈಯಿಕ್ಕದೆ, ತಮ್ಮ ಪಾಡಿಗೆ ತಾವು ಇರುತ್ತಿದ್ದರು. ಬ್ರಾಹ್ಮಣ್ಯಕ್ಕೆ ಅಗತ್ಯವಾದ ಕರ್ಮಾನುಷ್ಠಾನವನ್ನು ಕೈಲಾದಷ್ಟು ಹಾಗೂ ಹೀಗೂ ಉಳಿಸಿಕೊಂಡಿದ್ದರು. ಬಡವರಾದರೆ ಭಕ್ತಿಗೇನು ಬಡತನವೆ? ನಿಷ್ಠೆಗೇನು ಕೊರತೆಯೆ? ಬಡವರೆಂದು ಅವರಿಗೇನು ಬೇಸರವೂ ಇಲ್ಲ, ಬೇಗುದಿಯೂ ಇಲ್ಲ.

ಆದರೆ ಅವರನ್ನು ಕಾಡುತ್ತಿದ್ದ ಸಂಕಟವೊಂದಿದ್ದಿತು — ಮಕ್ಕಳಾಗಿ, ಉಳಿಯದೇ ಹೋಗುತ್ತಿದ್ದುದು. ಅವರಿಗೆ ಹದಿಮೂರು ಮಕ್ಕಳಾದುವು;

ತಂದೆತಾಯಿಯರು

ಹುಟ್ಟಿದ ಮಕ್ಕಳು ಕೆಲಕಾಲ ಬಾಳುವುವು, ಒಂದಲ್ಲ ಒಂದು ಕಾರಣದಿಂದ ತೀರಿಕೊಳ್ಳುವುವು. ಗೋಪಶಾಸ್ತ್ರಿಗಳೂ ಲಕ್ಷ್ಮಮ್ಮನೂ ಕೊರಗಿ, ಸೊರಗಿ ಬಡವಾದರು. ಕಡೆಗೆ ಯಾರೋ ಹಿರಿಯರು, "ಗೋಕರ್ಣಯಾತ್ರೆ ಮಾಡಿ ಬನ್ನಿ; ಉಡುಪಿಕೃಷ್ಣನಿಗೆ ಹರಕೆ ಹೊತ್ತುಕೊಳ್ಳಿ; ಹುಟ್ಟಿದ ಮಕ್ಕಳು ಉಳಿದಾವು" ಎಂದು ಹೇಳಿದೊಡನೆ ದಂಪತಿಗಳು ಗೋಕರ್ಣದ ಕಡೆ ಹೊರಟರು. ಉಡುಪಿಯ ಕೃಷ್ಣನ ಗುಡಿಯಲ್ಲಿ ಇರುವಾಗಲೇ ಲಕ್ಷ್ಮಮ್ಮನಿಗೆ, ಮುಂದೆ ಹುಟ್ಟುವ ಮಗು ಉಳಿದುಕೊಂಡೀತು ಎಂದು ಅನಿಸಿತಂತೆ. ದೇವರಿಗೆ ಕೈಲಾದ ಸೇವೆಯನ್ನು ಮಾಡಿಸಿ, ಗೋಕರ್ಣಕ್ಕೆ ಹೋಗಿ ಮಹಾಬಲೇಶ್ವರನನ್ನು ಪೂಜಿಸಿ ಶೃಂಗೇರಿಗೆ ಹಿಂದಿರುಗಿದಾಗ ದಂಪತಿಗಳ ಮನಸ್ಸಿನಲ್ಲಿ ಏನೋ ಒಂದು ಬಗೆಯ ಸಮಾಧಾನ.

ಈ ಯಾತ್ರೆಯಿಂದ ಬಂದಮೇಲೆ ಲಕ್ಷ್ಮಮ್ಮ ಹದಿನಾಲ್ಕನೆಯ ಮಗುವನ್ನು ಹಡೆದರು. ಈ ಮಗು ಉಳಿದುಕೊಂಡುದು ಮಾತ್ರವಲ್ಲ, ಹಲವರನ್ನು ಉಳಿಸಿತು, ನಾಡನ್ನೇ ಬೆಳಗಿತು, ಸಾವಿರಾರು ಸಾಧಕರಿಗೆ ದಾರಿದೀಪ-ವಾಯಿತು. ಮುಂದೆ ಚಂದ್ರಶೇಖರಭಾರತೀಸ್ವಾಮಿಗಳೆಂದು ಪ್ರಸಿದ್ಧವಾಯಿತು ಈ ಮಗು. ಹುಟ್ಟಿದ ದಿನ ನಂದನ ಸಂವತ್ಸರದ ಆಶ್ವೀಜಮಾಸದ ಬಹುಳ ಏಕಾದಶಿ, ಹರಿದಿವಸ; ನಮ್ಮ ಈಗಿನ ಎಣಿಕೆಯಂತೆ ೧೮೯೨ ರ ಅಕ್ಟೋಬರ್ ಹದಿನಾರನೆಯ ದಿನ. ಮನೆದೇವರು ನರಸಿಂಹ; ಅಜ್ಜನ ಉಪಾಸ್ಯದೇವತೆಯೂ ನರಸಿಂಹನೇ; ಅಜ್ಜನನ್ನು ಇಲ್ಲಿಗೆ ಕರೆತಂದು ನಿಲ್ಲಿಸಿದವರೂ ನರಸಿಂಹಭಾರತೀಸ್ವಾಮಿಗಳೇ. ಮಗುವಿಗೆ ನರಸಿಂಹನೆಂದು ಹೆಸರಿಟ್ಟುದು ಸಹಜವೇ.

ಗೋಪಶಾಸ್ತ್ರಿಯೇನೂ ದೊಡ್ಡಕುಳವಲ್ಲ; ಪಂಡಿತರೆಂದಾಗಲೀ ಅನುಕೂಲಸ್ಥರೆಂದಾಗಲೀ ಅವರು ಯಾರ ಎಣಿಕೆಗೂ ಬರುವ ಹಾಗಿರಲಿಲ್ಲ. ಅವರಿಗಾಗಲೀ ಲಕ್ಷ್ಮಮ್ಮನಿಗಾಗಲೀ ನಂಟರಿಷ್ಟರೂ ಹಲವರಿರಲಿಲ್ಲ. ಹೀಗಾಗಿ ಮುಂದೆ ಮಹಿಮಾವಂತನಾದ ಮಗು ಹುಟ್ಟಿದಾಗಲೂ ಊರವರಿಗೆ ದೊಡ್ಡ ವಿಷಯವಾಗಲಿಲ್ಲ; ತಂದೆತಾಯಿಯರಿಗೆ ಸಂಭ್ರಮವಷ್ಟೆ. ಆದರೆ ಹಿಂದೆ ಹದಿಮೂರು ಮಕ್ಕಳು ಬೆಳೆದು ತೀರಿಕೊಂಡ ನೆನಪು ಅವರಿಗೆ ಬಲವಾಗಿದ್ದಿತಾಗಿ, ಈ ಮಗುವೂ ಏನಾಗುವುದೋ ಎನ್ನುವ ಅಳುಕು, ಸಂಭ್ರಮ ಅತಿಯಾಗದಂತೆ

ತಡೆದಿದ್ದಿತು. ಆದರೆ ಗೋಕರ್ಣದ ಯಾತ್ರೆ, ಉಡುಪಿಕೃಷ್ಣನ ದರ್ಶನ ಎರಡೂ ಆಗಿದ್ದುದರಿಂದ ಅವರಿಗೆ ಮಗು ಉಳಿದೀತೆಂಬ ಭರವಸೆಯೇನೋ ಮೂಡಿಕೊಂಡಿತು.

ಮಗು ಮೂರು-ನಾಲ್ಕು ವರ್ಷಗಳು ಉಳಿದುಕೊಂಡಮೇಲೆ ಈ ಭರವಸೆಗೊಂದು ಆಸೆಯ ಕವಚ ತೊಡಿಸುವುದಾಯಿತು. ಮಗು ಇನ್ನು ಉಳಿದೀತು, ಬೆಳೆದೀತು, ಮನೆಯನ್ನು ಬೆಳಗೀತು, ಬಡತನವನ್ನು ಇಂಗಿಸೀತು, ಉಳಿದ ಎಲ್ಲರಂತೆ ತಾವೂ ಇರಲಾದೀತು ಎಂಬ ಕನಸನ್ನು ಕಣ್ಣಿಗೆ ಕಟ್ಟಿಕೊಂಡು ತಾಯಿತಂದೆಯರು ಸುಖಪಟ್ಟರು. ಅವರ ಕನಸನ್ನು ಮಣ್ಣುಗೂಡಿಸದೆ ಮಗು ಉಳಿಯಿತು, ಬೆಳೆಯಿತು. ಮನೆಗೆ ಬಳುವಳಿಯಾಗಿ ಬಂದಿದ್ದ ಮುಗ್ಧತೆ, ಅಮಾಯಕತೆ, ಸಂಕೋಚ, ವಿನಯಗಳು ಮಗುವಿನಲ್ಲಿ ಧಾರಾಳವಾಗಿ ಸೇರಿ ಕಂಡುಬಂದುವು. ಆದರೆ ಅಜ್ಜನಿಂದ ಬುದ್ಧಿಶಕ್ತಿಯನ್ನೂ ಪಡೆದುಕೊಂಡಿದ್ದಿತು ಮಗು.

ಮಗು ವಯಸ್ಸಿಗೆ ಬಂದಾಗ ಶಾಲೆಯನ್ನು ಸೇರಿದ್ದಾಯಿತು, ಓದಲು ಮೊದಲಿಟ್ಟದ್ದಾಯಿತು. ಓದು ಎಡಬಿಡದೆ ಮುಂದುವರಿಯಿತು. ಶೃಂಗೇರಿಯೇನೋ ಹಳ್ಳಿಯೆ; ಆದರೆ ಅರಸರೂ ಆದರಿಸುವ ಮಠವಿದ್ದುದರಿಂದ ವಿದ್ಯಾಭ್ಯಾಸದ ವಿಚಾರದಲ್ಲಿ ಅದು ಹಿಂದುಳಿಯುವ ಹಾಗಿರಲಿಲ್ಲ. ಸಂಸ್ಕೃತದ ಓದಿಗೆ ಶಾಲೆಯಿರಬೇಕೆಂಬ ಕಲ್ಪನೆ ಇನ್ನೂ ಮೂಡಿರಲಿಲ್ಲ. ಪಂಡಿತರ ಮನೆಯಲ್ಲೇ ಆ ಓದು. ಸರಕಾರದ ಕಡೆಯಿಂದ ಇಂಗ್ಲಿಷನ್ನೂ ಕನ್ನಡವನ್ನೂ ಕಲಿಸುವ ಶಾಲೆಯೊಂದು ಏರ್ಪಟ್ಟಿದ್ದಿತು. ಅದನ್ನು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ (ಸಂಗ್ರಹವಾಗಿ ಎ. ವಿ. ಸ್ಕೂಲ್) ಎಂದು ಕರೆಯುತ್ತಿದ್ದರು. ಅಲ್ಲಿನ ಪಾಠ-ಪ್ರವಚನವೆಲ್ಲ ಲೌಕಿಕವಾದುದೇ; ಧಾರ್ಮಿಕವೆಂಬಂಥ ವಿವರವೇನೂ ಇರಲಿಲ್ಲ. ಹೆಚ್ಚಿನ ಓದಿಗೆಂದು ದೊಡ್ಡ ಊರಿಗೆ ಬಂದು ಶಾಲಾ-ಕಾಲೇಜುಗಳನ್ನು ಸೇರುವವರಿಗೆ ಇದೊಂದು ಪೂರ್ವಸಿದ್ಧತೆಯಿದ್ದಂತೆ.

ಇಂಗ್ಲಿಷ್ ವಿದ್ಯಾಭ್ಯಾಸದ ಮೇಲೆ ನಮ್ಮವರ ಮೋಹ ಆಗಲೇ (ಎಂದರೆ ನೂರು ವರ್ಷಗಳಿಗೆ ಮೊದಲೇ) ಬೇರೂರಿದ್ದಿತು, ದೊಡ್ಡದೊಡ್ಡ ಊರುಗಳಲ್ಲಿ ಹರಡಿಯೂ ಇದ್ದಿತು. ಶೃಂಗೇರಿಯಂಥ ಹಳ್ಳಿಯಲ್ಲಿ ಅದರ ಕಾವು ಅಷ್ಟಾಗಿ

ಕಾಣದಿದ್ದರೂ, ಅವರ ಬಗ್ಗೆ ಒಲವನ್ನು ಬೆಳೆಸಿಕೊಂಡವರು ಹಲವರಿದ್ದರು. ಸಂಸ್ಕೃತಪಂಡಿತರಿಗೆ ಸಂಸ್ಕೃತದಿಂದಲೇ ತಮ್ಮ ಬಾಳು ಹಸನಾದೀತೆಂಬ ನಂಬಿಕೆ ಒದಗುವುದು ಕಷ್ಟ; ವೈದಿಕರಿಗೆ ಲೌಕಿಕರಂತಾಗಬೇಕೆಂಬ ಹಂಬಲ ಇರುವುದೂ ಸಹಜವೇ. ಹೀಗಾಗಿ ಹಳ್ಳಿಯ ಜನರಿಗೆ ನಗರದ ಆಕರ್ಷಣೆಯ ಜೊತೆಗೆ ಹೊಸ ಬದುಕಿನ ಹೊಸ ದಾರಿಯ ಮೇಲಣ ಆದರವೂ ಸೇರಿಕೊಳ್ಳುವುದು. ಶೃಂಗೇರಿಯಲ್ಲಿ ಬುದ್ಧಿವಂತರೆಂಬ ಹುಡುಗರು ಕಲಿಯುತ್ತಿದ್ದುದು ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲೇ. ಇಂದಿನ ವ್ಯವಹಾರಕ್ಕೆ, ಮುಂದಿನ ವೈಭವಕ್ಕೆ ಹೆದ್ದಾರಿ ಇಂಗ್ಲಿಷೇ — ಎಂದು ಹಳ್ಳಿಯವರು ಆಗಲೂ ನಂಬಿದ್ದರು, ಈಗಲೂ ನಂಬಿದ್ದಾರೆ!

ನರಸಿಂಹನನ್ನು ಈ ಶಾಲೆಗೆ ಸೇರಿಸುವಂತೆ ಗೋಪಶಾಸ್ತ್ರಿಗಳ ಹಿತಚಿಂತಕರು ಸೂಚಿಸಿದರು; ಗೋಪಶಾಸ್ತ್ರಿಗಳಿಗೇನೂ ಇದರ ವಿಚಾರ ತಿಳಿಯದು. 'ಹುಡುಗ ಚುರುಕಾಗಿದ್ದಾನೆ, ಬುದ್ಧಿಶಾಲಿ; ಓದಿನಲ್ಲೂ ಆಸಕ್ತಿಯಿದೆ. ಮುಂದೆ ಬಂದಾನು, ನಿಮ್ಮ ಬದುಕನ್ನು ಬೆಳಗಿಯಾನು, ಈ ಶಾಲೆಗೆ ಸೇರಿಸಿ' ಎಂದು ಅವರು ಮಾಡಿದ ಸೂಚನೆ ಇವರಿಗೆ ಸರಿಯೆಂದೇ ತೋರಿತು. ದಂಪತಿಗಳು ಮುಗ್ಧರಾದರೇನು, ಅಮಾಯಕರಾದರೇನು, 'ಮಗ ಎಲ್ಲರಂತೆ ಬೆಳೆಯಬೇಕು, ವಿದ್ಯಾವಂತ-ನಾಗಬೇಕು, ದೊಡ್ಡ ಕೆಲಸ ಮಾಡಬೇಕು, ಮನೆಗೊಂದು ಹೆಸರನ್ನು ತರಬೇಕು' ಎನ್ನುವ ಬಯಕೆಯಿರುವುದಿಲ್ಲವೆ? ಕತ್ತಲೆ ತೊಲಗಿ ಬೆಳಕು ಹರಿದೀತೆಂಬ ಹಂಬಲವಿರುವುದಿಲ್ಲವೆ?

ನರಸಿಂಹ ಈ ಎ.ವಿ.ಶಾಲೆಯನ್ನು ಸೇರಿ ಪರೀಕ್ಷೆಗಳನ್ನು ಕುಂಟದೆ ಎಡವದೆ ದಾಟಿ, 'ಮಿಡ್ಲ್' ಎಂಬ ಹಂತಕ್ಕೂ ಬಂದು ಮುಟ್ಟಿದ. ಆಗ ಅವನ ವಯಸ್ಸು ಹನ್ನೆರಡು. ಲೋಯರ್ ಸೆಕೆಂಡರಿ ಪರೀಕ್ಷೆಗೆ ಕೂತದ್ದು ಆಯಿತು, ಮೊದಲನೆಯ ವರ್ಗದಲ್ಲೇ ಉತ್ತೀರ್ಣನಾದದ್ದೂ ಆಯಿತು. ಅಂದರೆ ಹುಡುಗ ತುಂಬ ಬುದ್ಧಿಶಾಲಿಯೆನ್ನುವುದರಲ್ಲಿ ಊರವರಿಗಾಗಲಿ, ತಂದೆ- ತಾಯಿಯರಿಗಾಗಲಿ ಅನುಮಾನವೇನು? ಮುಂದೆ ಓದಿದರೆ ಬೆಳಕಿಗೆ ಬರುವುದು ಖಂಡಿತ; ಹಿರಿಯ ಹುದ್ದೆಗಳೂ ದೊರಕಬಹುದು; ಮನೆಗೊಂದು ಆಸರೆ, ಊರಿಗೊಂದು ಹೆಸರು. ಹುಡುಗನನ್ನು ಮುಂದೆ ಓದಿಸಬೇಕೆಂದು ಗೋಪಶಾಸ್ತ್ರಿಗಳ ಒಳಿತನ್ನು ಬಯಸಿದವರು ಸೂಚಿಸಿದರು; ಗೋಪಶಾಸ್ತ್ರಿಗಳೂ ಲಕ್ಷ್ಮಮ್ಮನೂ ಒಪ್ಪಿದರು.

ಆದರೆ ಮುಂದಿನ ಓದು ಶೃಂಗೇರಿಯಲ್ಲೇ ನಡೆಯುವಂತಿಲ್ಲ; ಹತ್ತಿರದ ದೊಡ್ಡ ಊರಿಗೆ ಹೋಗಬೇಕು. ಸಾಯದೆ ಉಳಿದುಕೊಂಡು, ಮನೆಗೊಂದು ಗೆಲುವನ್ನೂ ಮನಸ್ಸಿಗೊಂದು ನೆಮ್ಮದಿಯನ್ನೂ ತಂದಿರುವ ಮಗನನ್ನು ದೂರ ಕಳುಹಿಸುವುದೆಂದರೆ ಆ ತಾಯಿತಂದೆಯರಿಗೆ ಉತ್ಸಾಹ ಸಾಲದು. ಆದರೆ ಹಾಗೆ ಕಳುಹಿಸದೆ ಅವನ ಓದು ಮುಂದೆ ಸಾಗಲಾರದು, ಮಗ ಮುಂದೆ ಬರಲಾರ ಎನ್ನುವ ಅರಿವೂ ಅವರಿಗಿದ್ದಿತು. ಈ ಪರಿಸ್ಥಿತಿಯಲ್ಲಿ ಅವರು ಮಠದ ಸ್ವಾಮಿಗಳನ್ನೊಂದು ಮಾತು ಕೇಳಿದರಾಯಿತು ಎಂದುಕೊಂಡರು. ಮಠಕ್ಕೆ ಹೋಗಿ ಸ್ವಾಮಿಗಳನ್ನು ಕೇಳಿದಾಗ ಅವರು ಮಠದ ಅಧಿಕಾರಿಗಳೊಂದಿಗೆ ಮಾತನಾಡಿ 'ಲೌಕಿಕ ವಿದ್ಯಾಭ್ಯಾಸ ಅವನಿಗೆ ಬೇಡ; ಇಲ್ಲೇ ಮಠದ ಶಾಲೆಯಲ್ಲೇ ಸಂಸ್ಕೃತ, ವೇದಾಂತ ಕಲಿಯಲಿ' ಎಂದುಬಿಟ್ಟರು! ಆಗ ಸ್ವಾಮಿಗಳಾಗಿದ್ದವರು ಸಚ್ಚಿದಾನಂದ ಶಿವಾಭಿನವನೃಸಿಂಹಭಾರತಿಗಳು. ಮಠದ ಸರ್ವಾಧಿಕಾರಿಗಳು ಶ್ರೀಕಂಠಶಾಸ್ತ್ರಿಗಳು. ಹುಡುಗನ ಮೇಲ್ವಿಚಾರಣೆಯಲ್ಲಿ ಅವರ ಪಾಲೂ ಇದ್ದಿತು. ಅದರ ವಿಚಾರ ಮುಂದೆ ಬರುತ್ತದೆ.

ತಾಯಿತಂದೆಯರು ಈಗ ಇಕ್ಕಟ್ಟಿಗೆ ಸಿಕ್ಕಿಕೊಂಡರು. ಮಗನನ್ನು ಲೌಕಿಕವಿದ್ಯೆಯಲ್ಲಿ ತೊಡಗಿಸಬೇಕೆಂಬ ಆಸೆ ಅವರಿಗಿದ್ದಿತು. ಆದರೆ ತಮ್ಮ ಧಣಿಗಳಾದ ಸ್ವಾಮಿಗಳ ಮಾತನ್ನು ಮೀರುವುದು ಹೇಗೆ? ಮಗ ಊರಲ್ಲೇ ಉಳಿದರೆ ತಮಗೇನೋ ಸಂತೋಷವೇ; ಆದರೆ ಈ ವೈದಿಕವಿದ್ಯಾಭ್ಯಾಸದಿಂದ ಬೆಳಗಾಗುವುದು ಹೇಗೆ? ಈ ವಿದ್ಯೆ ಬೇಡವೆಂದೇ ತಾನೇ ಅವನನ್ನು ಎ. ವಿ. ಶಾಲೆಗೆ ಹಾಕಿದುದು? ಕಡೆಗೆ, ಸ್ವಾಮಿಗಳ ಮಾತನ್ನು ಮೀರಲಾರದೆ ನರಸಿಂಹನನ್ನು ವೈದಿಕವಿದ್ಯೆಗೇ ಒಪ್ಪಿಸಿದರು. ಆದರೆ, ತಾಯಿತಂದೆಯರಿಗೆ, ಅದರಲ್ಲೂ ತಾಯಿಗೆ ತುಂಬ ನಿರಾಶೆಯಾಯಿತು. ತಾವು ಕಟ್ಟಿಕೊಂಡಿದ್ದ ಕನಸಿನ ಗೋಪುರ ಕಳಚಿ ಬೀಳುವುದು ಅವರಿಗೆ ಖಂಡಿತವಾಯಿತು.

# ೨. ಮಠದ ಹಿನ್ನೆಲೆ

ಉಗ್ರ ನರಸಿಂಹ ಭಾರತಿ ಸ್ವಾಮಿಯವರು

ಈಗ ಇದರ ಹಿನ್ನೆಲೆಯಾಗಿ ಆ ಮಠದ, ಈ ಸ್ವಾಮಿಗಳ ವಿಚಾರ ಸ್ವಲ್ಪ ಹೇಳಬೇಕು. ನರಸಿಂಹನ ಅಜ್ಜ ಸುಬ್ಬಾಶಾಸ್ತ್ರಿಗಳನ್ನು ಶೃಂಗೇರಿಗೆ ಕರೆತಂದು ಅಲ್ಲಿಯೇ ನಿಲ್ಲಿಸಿದವರು ಉಗ್ರನರಸಿಂಹಭಾರತೀಸ್ವಾಮಿಗಳೆಂದು ಹೇಳಿದೆವಷ್ಟೆ. ಹೆಸರು ಉಗ್ರನರಸಿಂಹಭಾರತೀಯೆಂದಾದರೂ ಅವರ ಸ್ವಭಾವ ಸೌಮ್ಯವೇ. ಅವರು ನರಸಿಂಹೋಪಾಸಕರಾಗಿದ್ದರೆಂದೂ, ಎಡೆಬಿಡದೆ ನರಸಿಂಹನನ್ನೇ ಉಪಾಸನೆ ಮಾಡಿದ್ದರಿಂದ ಅವರ ಮುಖದ ಮೇಲೆ ನರಸಿಂಹನ ಕಳೆಯೇ ಬಂದಿದ್ದಿತೆಂದೂ ಜನ ಹೇಳುತ್ತಿದ್ದರು. ಸ್ವಭಾವ ಸೌಮ್ಯವಾದರೂ,

ಅವರ ತಪಸ್ಸು ಉಗ್ರವೇ ಆಗಿದ್ದಿತಂತೆ. ನಿದ್ದೆಯನ್ನೂ ಹಸಿವನ್ನೂ ಗೆದ್ದು, ದಿನವೂ ಒಂದು ಹಿಡಿ ಹಾಗಲಬಳ್ಳಿಯನ್ನು ಬೇಯಿಸಿ ಅದನ್ನೇ ಅಷ್ಟನ್ನೇ ತಿಂದು ಬದುಕಿದವರಂತೆ!

ಇವರೂ ಶೃಂಗೇರಿಯವರೇ. ಮಠದ ಅಧಿಕಾರಿಯಾಗಿದ್ದ ವೆಂಕಟಾಚಲಭಟ್ಟರ ಮಗ. ಹುಟ್ಟಿದ ವರ್ಷ ೧೭೯೮ ಎಂದು ದಾಖಲೆಯಿದೆ. ಸಣ್ಣ ಹುಡುಗನಾಗಿರುವಾಗಲೇ ಮನೆಬಿಟ್ಟು ದೂರದ ಕಾಶಿಗೆ ಹೋಗಿ ಅಲ್ಲಿ ವಾಂಛೇಶ್ವರಶಾಸ್ತ್ರಿಗಳೆಂಬ ದೊಡ್ಡ ಪಂಡಿತರ ಹತ್ತಿರ ಹತ್ತಾರು ವರ್ಷಗಳು ನಿಂತು ಶಾಸ್ತ್ರಾಭ್ಯಾಸ ಮಾಡಿದರು. ಶೃಂಗೇರಿಗೆ ಹಿಂದಿರುಗಿದಾಗ ಅವರಿಗೆ ಹತ್ತೊಂಬತ್ತು ವರ್ಷಗಳು ಅಷ್ಟೆ. ಹಿಂದಿರುಗಿದ ಕೆಲವು ದಿನಗಳಲ್ಲೇ, ಶೃಂಗೇರಿಮಠದ ಸ್ವಾಮಿಗಳಾಗಿದ್ದ ಅಭಿನವ ಸಚ್ಚಿದಾನಂದಭಾರತಿಗಳು ಇವರಿಗೆ ಸಂನ್ಯಾಸದೀಕ್ಷೆಯನ್ನು ಕೊಟ್ಟು ತಮ್ಮ ಉತ್ತರಾಧಿಕಾರಿಯೆಂದು ನೇಮಿಸಿಕೊಂಡರು; ಮುಂದೆ ಆರು ತಿಂಗಳಲ್ಲೇ ತೀರಿಕೊಂಡರು. ಹೀಗಾಗಿ ಇವರು ಸಣ್ಣ ಪ್ರಾಯದಲ್ಲೇ ಜಗದ್ಗುರುಪೀಠವನ್ನು ಏರಬೇಕಾಯಿತು.

ಅವರು ಜಗದ್ಗುರುಗಳೆಂದು ಪಟ್ಟವಾದುದು ೧೮೧೭ ರಲ್ಲಿ; ಅವರು ತೀರಿಕೊಂಡದ್ದು ೧೮೭೯ರಲ್ಲಿ, ತಮ್ಮ ಎಂಭತ್ತೊಂದನೆಯ ವಯಸ್ಸಿನಲ್ಲಿ. ಪಟ್ಟದಲ್ಲಿದ್ದುದು ಅರವತ್ತೆರಡು ವರ್ಷಗಳು. ಈ ಅವಧಿಯಲ್ಲಿ ಅವರು ಎರಡು ಬಾರಿ ಸಂಚಾರ ಹೋರಟು, ಮೊದಲ ಬಾರಿ ಉತ್ತರ ಭಾರತದಲ್ಲೂ, ಎರಡನೆಯ ಬಾರಿ ದಕ್ಷಿಣ ಭಾರತದಲ್ಲೂ ಸುತ್ತಾಡಿ ಮಠದ ಹೆಸರನ್ನೂ ಹೆಗ್ಗಳಿಕೆಯನ್ನೂ ಹರಡಿದರು. ಆಗ ಮೈಸೂರು ರಾಜ್ಯದ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ೧೮೨೨ ರಲ್ಲಿ ಅವರನ್ನು ಮೈಸೂರಿಗೆ ಕರೆಸಿಕೊಂಡಿದ್ದರು. ಇದಾದ ಕೆಲವು ವರ್ಷಗಳಲ್ಲೇ (೧೮೩೧ರಲ್ಲಿ)ರಾಜ್ಯದ ಆಡಳಿತ ಅರಸರ ಕೈಯಿಂದ ಜಾರಿ ಬ್ರಿಟಿಷ್ ಅಧಿಕಾರಿಗಳ (ಕಮಿಷನರರ) ವಶಕ್ಕೆ ಬಂದಿತು. ಅರಸರು ಅಧಿಕಾರಕ್ಕೆ ಅನರ್ಹರೆಂದು ಹಲವಾರು ಆರೋಪಗಳಿದ್ದು, ಮೈಸೂರ ಅರಸೊತ್ತಿಗೆ ಉಳಿಯುವುದೋ ಇಲ್ಲವೋ ಎಂಬ ಶಂಕೆಯೂ ಇದ್ದಿತು. ಅರಸೊತ್ತಿಗೆಯೇ ಮರೆಯಾದರೆ ಅದರ ಆಸರೆಯಿಂದ ಉಳಿದಿದ್ದ ಮಠ ಉಳಿದೀತೋ ಎಂದು ಸ್ವಾಮಿಗಳೂ ಆತಂಕಪಟ್ಟರು. ಈ ಪರಿಸ್ಥಿತಿಯಲ್ಲಿಯೇ ಅವರು ಮೈಸೂರು ಸೀಮೆಯನ್ನು ಬಿಟ್ಟು ಹೊರಗೆ ಹೊರಟದ್ದು.

ಆದರೆ ರಾಜ್ಯದ ಆಡಳಿತವನ್ನು ಮತ್ತೆ ತಮ್ಮ ವಶಕ್ಕೆ ಪಡೆದುಕೊಳ್ಳಲು ಎಡೆಬಿಡದೆ ಹೆಣಗಾಡುತ್ತಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಉತ್ತರಭಾರತದಲ್ಲಿ ಸಂಚಾರದಲ್ಲಿದ್ದ ಸ್ವಾಮಿಗಳಿಗೆ ಮತ್ತೆಮತ್ತೆ ಪತ್ರ ಬರೆದು ರಾಜ್ಯಕ್ಕೆ ಹಿಂದಿರುಗುವಂತೆ ಕೇಳಿಕೊಳ್ಳುತ್ತಿದ್ದರು. ಸ್ವಾಮಿಗಳೂ ೧೮೫೪ರಲ್ಲಿ ಹಿಂದಿರುಗಿ ಮೈಸೂರಿಗೆ ಬಂದು ಅರಸರನ್ನು ನೋಡಿದರು; ನಾಲ್ಕುವರ್ಷಗಳ ನಂತರ ಬೆಂಗಳೂರಿನಲ್ಲಿ ಆಗ ರಾಜ್ಯ-ಕಮಿಷನರ್ ಆಗಿದ್ದ ಬೌರಿಂಗನನ್ನೂ ನೋಡಿದ್ದ ದಾಖಲೆಯಿದೆ, ಸಂದರ್ಭವೇನೋ ತಿಳಿಯದು.

ತಮ್ಮ ಮಠದ ಬಗ್ಗೆ ಸ್ವಾಮಿಗಳಿಗೆ ಆತಂಕವಿದ್ದುದು ಸಹಜವೇ. ಹಿಂದೆ ಮೊದಲ ಅಭಿನವ ಸಚ್ಚಿದಾನಂದಭಾರತಿಗಳು ಸ್ವಾಮಿಗಳಾಗಿದ್ದಾಗ (೧೭೪೨-೧೭೬೭), ಮೈಸೂರು ಸೀಮೆಯನ್ನು ಆಳುತ್ತಿದ್ದ ಹೈದರಾಲಿಗೂ ಮಠವನ್ನು ಆದರದಿಂದ ಕಾಣುತ್ತಿದ್ದ ಮಹಾರಾಷ್ಟ್ರದ ಆಳರಸ ಪೇಶ್ವೆ ಮಾಧವರಾಯನಿಗೂ ವಿರಸವುಂಟಾಗಿ, ಆ ಸ್ವಾಮಿಗಳೂ ಇಲ್ಲಿಂದ ಕಾಲುತೆಗೆದು ನಾಸಿಕಕ್ಕೆ ಹೋಗಿ ಅಲ್ಲಿ ಮಠವನ್ನು ಏರ್ಪಡಿಸಿಕೊಂಡಿದ್ದರು. ಹತ್ತಾರು ವರ್ಷಕಾಲ ಶೃಂಗೇರಿ ಮಠದ ಆಡಳಿತ ನಾಸಿಕದಿಂದಲೇ ನಡೆಯಬೇಕಾಗಿತ್ತು. ೧೭೭೦ರ ಸುಮಾರಿಗಷ್ಟೇ ಶೃಂಗೇರಿ ಮಠ ಶೃಂಗೇರಿಗೇ ಹಿಂದಿರುಗುವುದಾದದ್ದು. ಹೈದರನೂ ಈ ಮಠದ ಸ್ವಾಮಿಗಳನ್ನು ಗೌರವದಿಂದಲೇ ಕಂಡನೆನ್ನಿ. ಆದರೆ ಈಗ ಹೇಗೋ? ಪರದೇಶದವರಾದ, ಸರ್ವತಂತ್ರಸ್ವತಂತ್ರರಾದ ಬ್ರಿಟಿಷರದ್ದು ಯಾವ ಧೋರಣೆಯೋ?

ಶೃಂಗೇರಿ ಸ್ವಾಮಿಗಳಿಗೂ ಮೈಸೂರು–ಅರಸೊತ್ತಿಗೆಗೂ ಹಿಂದಿನಿಂದ ಸಾಗಿಬಂದ ನಂಟು. ಈ ಸ್ವಾಮಿಗಳ ಹಿಂದಿನವರ ಹಿಂದಿನವರಾದ ಮುಮ್ಮಡಿ ಸಚ್ಚಿದಾನಂದಭಾರತಿಗಳನ್ನು (೧೭೭೦-೧೮೧೪) ಮುಮ್ಮಡಿ ಕೃಷ್ಣರಾಜ ಒಡೆಯರವರು ರಾಜರಾದೊಡನೆ (೧೮೧೧ರಲ್ಲಿ) ಮೈಸೂರಿಗೆ ಕರೆಸಿಕೊಂಡಿದ್ದರು. ಮುಂದಿನ ಸ್ವಾಮಿಗಳು ಇಮ್ಮಡಿ ಅಭಿನವ ಸಚ್ಚಿದಾನಂದಭಾರತಿಗಳನ್ನೂ (೧೮೧೪-೧೮೧೭) ಈ ಅರಸರು ನೋಡಿದ್ದರು. ಆದರೆ, ಮಠದ ಅಧಿಕಾರಿಯಾಗಿದ್ದ ವೆಂಕಟಾಚಲಭಟ್ಟರಿಗೆ ಮಠದ ಆಡಳಿತವನ್ನು ಕುರಿತು ನಿರೂಪವೊಂದನ್ನು ಅರಸರು ಕಳುಹಿಸಿದ್ದರು. ಅದರಲ್ಲಿ ಸ್ವಾಮಿಗಳಿಗೆ ಆಡಳಿತ ಸಾಮರ್ಥ್ಯ ಸಾಲದೆಂಬ ಧ್ವನಿಯಿದೆ. ಈ ಸ್ವಾಮಿಗಳ ಹಿಂದಿನವರ

ವಿಚಾರವಾಗಿ ದಿವಾನ್ ಪೂರ್ಣಯ್ಯನವರಿಗೆ ಕೆಲವು ಸಂದೇಹಗಳಿದ್ದುವು. ಆಳರಸರ ಮರ್ಜಿ ಹಿಡಿದು ಮಠ ಬಾಳಬೇಕಾಗುತ್ತದೆ.

ಉಗ್ರನರಸಿಂಹಭಾರತಿಗಳು ವ್ಯವಹಾರದಲ್ಲಿ ಎಷ್ಟು ದಕ್ಷರೋ ಪರಮಾರ್ಥದಲ್ಲೂ ಅಷ್ಟೇ ನಿಷ್ಠರು. ಈ ಉಭಯಕೌಶಲದಿಂದಾಗಿ ಮೈಸೂರು ಅರಸರು ಮಾತ್ರವಲ್ಲದೆ ಹೈದರಾಬಾದ್, ಗ್ವಾಲಿಯರ್, ಇಂದೂರು, ಭಾವನಗರ ಮೊದಲಾದ ರಾಜ್ಯಗಳ ಅರಸರೆಲ್ಲ ಇವರನ್ನು ಗೌರವದಿಂದ ಕಂಡುಕೊಂಡರಾಗಿ ಮಠದ ಹೆಗ್ಗಳಿಕೆಯನ್ನು ಆಂಗ್ಲ-ಅಧಿಕಾರಿಗಳು ಕಡೆಗಾಣಿಸುವಂತಿರಲಿಲ್ಲ. ಮೊದಲು ಸಂಚಾರವನ್ನು ಮುಗಿಸಿ ಶೃಂಗೇರಿಗೆ ಹಿಂದಿರುಗಿದಾಗ ಅವರಿಗೆ ಅರವತ್ತು ವರ್ಷ ವಯಸ್ಸು. ಆಗ ಅವರಿಗೆ ಶಿಷ್ಯಪರಿಗ್ರಹದ ಕಡೆ ಮನಸ್ಸು ಹೋಯಿತು. ಆಗ ಮೈಸೂರು ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ನೆರವಿನಿಂದ ಅವರ ಆಸ್ಥಾನವಿದ್ವಾಂಸರಾಗಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳ ಮೂರನೆಯ ಮಗ ಶಿವಸ್ವಾಮಿಯೆಂಬ ಎಂಟು ವರ್ಷದ ಹುಡುಗನನ್ನು ಸಚ್ಚಿದಾನಂದ ಶಿವಾಭಿನವನೃಸಿಂಹಭಾರತಿಯೆಂಬ ಹೆಸರಿನಿಂದ ತಮ್ಮ ಶಿಷ್ಯನೆಂದೂ ಉತ್ತರಾಧಿಕಾರಿಯೆಂದೂ ಪರಿಗ್ರಹಿಸಿ ಮೈಸೂರಿನಲ್ಲೇ ಅವನಿಗೆ ಸಂನ್ಯಾಸ ದೀಕ್ಷೆ, ಉತ್ತರಾಧಿಕಾರ ಪಟ್ಟಗಳನ್ನು ಕೊಟ್ಟು ಅವರೊಂದಿಗೆ ಎರಡನೆಯ ಬಾರಿ ಸಂಚಾರವನ್ನು ದಕ್ಷಿಣಭಾರತದ ಕಡೆ ಕೈಗೊಂಡರು. ಶೃಂಗೇರಿಗೆ ಹಿಂದಿರುಗಿದ್ದು ಹತ್ತು ವರ್ಷಗಳಾದ ಮೇಲೆ!

ಉಗ್ರನರಸಿಂಹಭಾರತೀಸ್ವಾಮಿಗಳ ವ್ಯಕ್ತಿತ್ವವನ್ನು ಸೂಚಿಸುವ ಹಲವು ಕಥೆಗಳಿವೆ. ನಿದರ್ಶನಕ್ಕೆ ಒಂದು. ಮುಮ್ಮಡಿ ಕೃಷ್ಣರಾಜ ಒಡೆಯರು ಇವರ ಮೇಲೆ ತುಂಬ ಭಕ್ತಿಯನ್ನು ಇರಿಸಿಕೊಂಡಿದ್ದರು. ಈ ಅರಸರಿಗೆ ಅಷ್ಟೋತ್ತರ-ಶತನಾಮಾವಳಿಯನ್ನು ರಚಿಸುವುದೆಂದರೆ ಪ್ರೀತಿ. ಕಣ್ಣಿಗೆ ಕಂಡ ದೇವತೆಗಳ ಮೇಲೆಲ್ಲ ಗುರುಗಳ ಮೇಲೆಲ್ಲ ಅಷ್ಟೋತ್ತರ ಶತನಾಮಾವಳಿಗಳನ್ನು ಹೆಣೆದಿದ್ದಾರೆ. ಇವೆಲ್ಲವನ್ನೂ ಸೇರಿಸಿ ಕಲ್ಲಚ್ಚಿನ ಒಂದು ಪುಸ್ತಕವನ್ನೂ ಸಿದ್ಧಪಡಿಸಿದರು. ಉಗ್ರನರಸಿಂಹಭಾರತಿಗಳ ಮೇಲೂ ಒಂದು ಅಷ್ಟೋತ್ತರ ಶತನಾಮಾವಳಿಯನ್ನು ರಚಿಸಿ, ನೂರೆಂಟು ವಿಶೇಷಣಗಳನ್ನು ಕಲ್ಪಿಸಿ ಸ್ವಾಮಿಗಳ ಮುಖ್ಯ ಗುಣಗಳನ್ನೆಲ್ಲ ಪಟ್ಟಿಮಾಡುವುದು ಅವರ ಉದ್ದೇಶ.

ಹೀಗೆ ರಚನೆ ಮಾಡಿ, ಉಗ್ರನರಸಿಂಹಭಾರತಿಯವರನ್ನು ಕಂಡು ಅವರಿಗೆ ಇದನ್ನು ಒಪ್ಪಿಸಿದರು. ಸ್ವಾಮಿಗಳು ಅದನ್ನೆತ್ತಿಕೊಂಡು ಅದರ ಮೇಲೆ ಕಣ್ಣಾಡಿಸಿ, ''ಎಲ್ಲ ಸರಿಯೇ, ಆದರೆ ಒಂದು ಲೋಪವಾಗಿಬಿಟ್ಟಿದೆ!'' ಎಂದರು. ಅರಸರು ಕೈಜೋಡಿಸಿ ಕುತೂಹಲದಿಂದ ''ಏನೆಂದು ಅಪ್ಪಣೆಯಾಗಬೇಕು, ತಿದ್ದಿಕೊಳ್ಳುತ್ತೇನೆ'' ಎಂದು ಕೇಳಿಕೊಂಡರು. ಸ್ವಾಮಿಗಳು ನಗುತ್ತ ''ಒಂದು ನಾಮವನ್ನು ಬಿಟ್ಟುಬಿಟ್ಟಿದ್ದೀರಿ. ಅದೇನೆಂದರೆ —'ಚಂಡೀಶ್ವರ ವರಲಬ್ಧ ಬಾಧಿರ್ಯಪರಿತೋಷಿತಃ' ಎನ್ನುವುದು'' ಎಂದರು. ಈ ನಾಮಕ್ಕೆ ಅರ್ಥ 'ದೇವರು ವರವಾಗಿ ಕೊಟ್ಟ ಕಿವುಡಿನಿಂದ ಸಂತೋಷವಾಗಿರುವುದು' ಎಂದು! ಆ ಕಾಲಕ್ಕೆ ಸ್ವಾಮಿಗಳಿಗೆ ಕಿವಿ ಮಂದವಾಗಿದ್ದು ಬೇರೆಯವರ ಮಾತು ಕೇಳಿಸುತ್ತಿರಲಿಲ್ಲ. ಇದೊಂದು ದೈವಾನುಗ್ರಹವೆಂದೇ ಅವರು ಬಗೆದಿದ್ದರು. ಅವರಿವರ ಮಾತನ್ನು ಕೇಳಿಸಿಕೊಂಡು ಮನಸ್ಸನ್ನು ಕೆಡಿಸಿಕೊಳ್ಳುವ ಕಾರಣವಿಲ್ಲವಷ್ಟೆ! ಮತ್ತೆ ಅವರು ಒಮ್ಮೊಮ್ಮೆ ಈ ಕಿವುಡನ್ನೇ ಕುರಿತು ಹಾಸ್ಯಕ್ಕೆ ''ನಾನು ಯಾರ ಮಾತನ್ನೂ ಕೇಳುವುದಿಲ್ಲ! ನನ್ನ ಮಾತನ್ನೇ ಎಲ್ಲರೂ ಕೇಳಬೇಕು!'' ಎನ್ನುವರು.

ಇನ್ನೊಂದು ನಿದರ್ಶನ. ಮಠದ ಎಲ್ಲ ಪರಿಚಾರಕರೂ ನೇರವಾಗಿ ನಡೆದುಕೊಳ್ಳುವರೆಂದು ಯಾರು ಹೇಳುತ್ತಾರೆ? ಮಠವೆಂದರೆ ಕುಹಕಿಗಳು, ಕೇಡಿಗರು, ಆಸೆಬುರುಕರು, ವಂಚಕರು ಸೇರಿಕೊಳ್ಳುವುದು ಎಲ್ಲರಿಗೂ ತಿಳಿದದ್ದೇ. ಈ ಸ್ವಾಮಿಗಳ ಸುತ್ತಲೂ ಇಂಥವರು ನೆರೆದಿದ್ದರೆಂದು ತೋರುತ್ತದೆ. ಅದರಿಂದ ಮಠಕ್ಕೆ ಕೆಟ್ಟಹೆಸರು ಮಾತ್ರವಲ್ಲದೆ, ಬಡತನವೂ ಬಂದೀತೆಂದು ಅವರು ತಿಳಿದಿದ್ದರು. ಅವರು ತಿರುಪತಿಯಾತ್ರೆಗೆ ಹೋಗಿದ್ದ ಸಮಯ ದೇವರ ಮುಂದೆ ತಮ್ಮ ಕೋರಿಕೆಗಳನ್ನು ಇಟ್ಟು ವೇಂಕಟೇಶ ಸ್ತುತಿ- ಯೊಂದನ್ನು ರಚಿಸಿದರು. ಅವರ ಕೋರಿಕೆಗಳಲ್ಲಿ ಒಂದು ''ದಾರಿದ್ರ್ಯಂ ಮಮ ದುಷ್ಟಭೃತ್ಯ ಜನಿತಂ''— ಇದನ್ನು ಪರಿಹಾರಮಾಡು ದೇವರೇ, ಎಂದು !

ಈ ಸ್ವಾಮಿಗಳು ಶಿಷ್ಯಪರಿಗ್ರಹಮಾಡಿ ದಕ್ಷಿಣಭಾರತ ಪ್ರವಾಸವನ್ನು ಮುಗಿಸಿ ಶೃಂಗೇರಿಗೆ ಹಿಂದಿರುಗಿದಮೇಲೆ ಎರಡು ವರ್ಷಗಳ ನಂತರ ೧೮೭೭ರಲ್ಲಿ ಮುಕ್ತರಾದರು. ಅವರ ಶಿಷ್ಯರಾದ ಸಚ್ಚಿದಾನಂದ ಶಿವಾಭಿನವ- ನೃಸಿಂಹಭಾರತಿಗಳು ಪಟ್ಟಕ್ಕೆ ಬಂದಾಗ ಇಪ್ಪತ್ತೊಂದು ವರ್ಷ ವಯಸ್ಸು. ಹಿರಿಯ ಸ್ವಾಮಿಗಳ ಜೊತೆಗೆ ಹದಿಮೂರು ವರ್ಷಗಳು ಇದ್ದರಾಗಿ, ಮಠದ ಆಡಳಿತ

ನೃಸಿಂಹಭಾರತೀ ಸ್ವಾಮಿ

ವಿಚಾರವನ್ನೆಲ್ಲ ಚೆನ್ನಾಗಿ ಅರಿತಿದ್ದರು; ಶಾಸ್ತ್ರಭಾಗದಲ್ಲಿ ವಿಶೇಷವಾದ ಜ್ಞಾನವನ್ನೂ ಪಡೆದಿದ್ದರು. ಜೊತೆಗೆ ವ್ಯಕ್ತಿತ್ವದಲ್ಲಿ ಸಹಜವಾದ ಸಾಮರ್ಥ್ಯ, ಸೌಶೀಲ್ಯ, ಗಾಂಭೀರ್ಯಗಳಿದ್ದವು. ೧೯೧೨ ರಲ್ಲಿ ತೀರಿಕೊಳ್ಳುವವರೆಗೂ, ಎಂದರೆ ಮೂವತ್ತುಮೂರು ವರ್ಷಗಳು, ಮಠದ ಅಧಿಪತಿಗಳಾಗಿದ್ದರೂ ನಾಡಿನ ಅರಸರಂತೆ ಮೆರೆದರು; ಅಷ್ಟು ಉಜ್ವಲವಾದ ವ್ಯಕ್ತಿತ್ವ ಅವರದ್ದು.

## ಕುಣಿಗಲ್ಲು ರಾಮಾಶಾಸ್ತ್ರಿಗಳು

ಅವರು (ಸ್ವಾಮಿಗಳು) ಮೈಸೂರು – ಅರಮನೆಯ ಆಸ್ಥಾನ ವಿದ್ವಾಂಸರೂ, ಮಹಾರಾಜರಿಗೆ ಆಪ್ತರೂ, ಪ್ರಕಾಂಡ ಪಂಡಿತರೆಂದು ಹೆಸರಾಗಿದ್ದವರೂ, 'ಶತಕೋಟಿ' ಯೆಂಬ ತರ್ಕಗ್ರಂಥವನ್ನು ಬರೆದವರೂ ಆದ

ಕುಣಿಗಲ್ಲು ರಾಮಶಾಸ್ತ್ರಿಗಳ ಮೂರನೆಯ ಮಗ. ಕುಣಿಗಲ್ಲು ರಾಮಶಾಸ್ತ್ರಿಗಳ ಹಿರಿಯರು ಮೈಸೂರು ಜಿಲ್ಲೆಯ ಎಡತೊರೆ (ಈಗ ಕೃಷ್ಣರಾಜನಗರ) ಎಂಬ ಊರವರು. ರಾಜಾಶ್ರಯವನ್ನು ಪಡೆದು ಮೈಸೂರಿಗೆ ಬಂದು ಅಲ್ಲೇ ನೆಲೆಸಿದ್ದರು. ರಾಮಶಾಸ್ತ್ರಿಗಳ ತಾಯಿಯ ತೌರೂರಾದ ಕುಣಿಗಲ್ಲು ಎಂಬುದು ಹೇಗೋ ಅವರ ಹೆಸರಿಗೆ ಸೇರಿಕೊಂಡು ಬಂದಿತು. ಇವರ ಜೀವನ ಚರಿತ್ರೆಯನ್ನು ಎಂ. ಎಸ್. ಪುಟ್ಟಣ್ಣನವರು ಬರೆದಿದ್ದಾರೆ (೧೯೧೦, 'ಕಾವ್ಯಾಲಯ'ದಿಂದ ೧೯೫೨).

ರಾಮಶಾಸ್ತ್ರಿಗಳ ಹಿರಿಯ ಮಗ ಲಕ್ಷ್ಮೀನರಸಿಂಹಶಾಸ್ತ್ರಿಗಳೆಂಬುವರೂ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪಂಡಿತರಾಗಿದ್ದರು. ರಾಮಶಾಸ್ತ್ರಿಗಳ ಮೂರನೆಯ ಮಗನೇ ಶೃಂಗೇರಿ ಸ್ವಾಮಿಗಳಾದ ಶಿವಸ್ವಾಮಿ. ಇನ್ನೂ ಹುಡುಗನಾಗಿದ್ದಾಗಲೇ ತಂದೆಯೂ, ಅನಂತರ ತಾಯಿಯೂ ತೀರಿಕೊಂಡರಾಗಿ, ಲಕ್ಷ್ಮೀನರಸಿಂಹಶಾಸ್ತ್ರಿಗಳ ಪೋಷಣೆಯಲ್ಲೇ ಬೆಳೆದನು. ಉಗ್ರನರಸಿಂಹಭಾರತಿಗಳು ಇವನನ್ನು ತಮ್ಮ ಉತ್ತರಾಧಿಕಾರಿಯೆಂದು ಪರಿಗ್ರಹ ಮಾಡಿದಮೇಲೆ ಪೂರ್ವಾಶ್ರಮದ ಅಣ್ಣ ಲಕ್ಷ್ಮೀನರಸಿಂಹಶಾಸ್ತ್ರಿಗಳ ಬಳಿಯೇ ತರ್ಕ, ವೇದಾಂತಗ್ರಂಥಗಳ ಪಾಠ ನಡೆಯಿತು.

ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಗಂಡುಮಕ್ಕಳಿರಲಿಲ್ಲವಾಗಿ ಅವರ ಕಡೆಗಾಲದಲ್ಲಿ ರಾಮಶಾಸ್ತ್ರಿಯೆಂಬ ಹುಡುಗನನ್ನು ದತ್ತು ತೆಗೆದುಕೊಂಡರು. ಇವರೂ ಮುಂದೆ ಕುಣಿಗಲ್ಲು ರಾಮಶಾಸ್ತ್ರಿಗಳೆಂದೇ ಹೆಸರಾಗಿ ಮೈಸೂರು ಆಸ್ಥಾನ ವಿದ್ವಾಂಸರೂ ಅರಮನೆಯ ಧರ್ಮಾಧಿಕಾರಿಗಳೂ ಆದರು; ಶೃಂಗೇರಿ ಮಠದ ಸ್ವಾಮಿಗಳ ಅಂತರಂಗಶಿಷ್ಯರಾದುದೂ ಸಹಜವೇ. ಸ್ವಾಮಿಗಳ ಆಡಳಿತ, ವಿದ್ಯಾಸಂಸ್ಥೆಗಳ ವ್ಯವಸ್ಥೆ, ಗ್ರಂಥರಚನೆ ಮೊದಲಾದವುಗಳಲ್ಲಿ ಇವರ ನೆರವು ವಿಶೇಷವಾಗಿ ಇದ್ದಿತು. ಹಿರಿಯ ಕುಣಿಗಲ್ಲು ರಾಮಶಾಸ್ತ್ರಿಗಳು ಮೈಸೂರಿನಲ್ಲೇ ಇರುತ್ತಿದ್ದರೂ, ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯ ಭಕ್ತರಾಗಿದ್ದುಕೊಂಡು ಆಗಾಗ ನಂಜನಗೂಡಿನಲ್ಲೇ ವಾಸ ಮಾಡುತ್ತಿದ್ದುದೂ ಉಂಟು. ಹೀಗಾಗಿ ಅವರ ಮನೆತನದ ಒಂದು ಶಾಖೆ ನಂಜನಗೂಡಿನಲ್ಲೇ ಉಳಿದುಕೊಂಡಿತು.

ಮನೆತನದ ಈ ಶಾಖೆಗೆ ಸೇರಿದವರು ಮಠದ ಸರ್ವಾಧಿಕಾರಿಗಳಾಗಿ ೨೫ ವರ್ಷಗಳು ಸ್ವಾಮಿಗಳಿಗೆ ಬಲಗೈಯಾಗಿ ನೆರವಾದ ಶ್ರೀಕಂಠಶಾಸ್ತ್ರಿಗಳೊಬ್ಬರು. ಅವರಿಗೆ ಮೊದಲು ತಂಜಾವೂರಿನ ಸಾತನೂರು ಸುಬ್ರಹ್ಮಣ್ಯಶಾಸ್ತ್ರಿಗಳೆಂಬ

ಪಂಡಿತರು ಮಠದ ಸರ್ವಾಧಿಕಾರಿಗಳಾಗಿದ್ದರು. ಶ್ರೀಕಂಠಶಾಸ್ತ್ರಿಗಳೂ ಕಿರಿಯ ಕುಣಿಗಲ್ಲು ರಾಮಶಾಸ್ತ್ರಿಗಳೂ ಸಮಸಾಮಯಿಕರು; ಸೋದರವಾವೆಯವರು; ಇಬ್ಬರೂ ಶೃಂಗೇರಿಮಠದ ಮುಖ್ಯಶಿಷ್ಯರಾಗಿ ಈ ಸ್ವಾಮಿಗಳ ಕಾಲದಲ್ಲೂ ಮುಂದೆ ಸ್ವಾಮಿಗಳಾದ ಚಂದ್ರಶೇಖರಭಾರತಿಗಳ ಕಾಲದಲ್ಲೂ ವಿಶೇಷವಾದ ಪ್ರಭಾವವನ್ನು ಬೀರಿದರು.

ಶಿವಸ್ವಾಮಿಯು ಸ್ವಾಮಿಯಾಗಿ, ಹಿರಿಯ ಸ್ವಾಮಿಗಳಾದ ಉಗ್ರ ನರಸಿಂಹಭಾರತಿಗಳೊಂದಿಗೆ ದಕ್ಷಿಣಭಾರತ ಯಾತ್ರೆಮಾಡಿಬಂದಾಗ ಮಠಕ್ಕೆ ತಮಿಳುನಾಡಿನಿಂದಲೂ ಕೇರಳದಿಂದಲೂ ಹಲವಾರು ಶ್ರೀಮಂತರೂ ಅಧಿಕಾರಿಗಳೂ ವಿದ್ವಾಂಸರೂ ಶಿಷ್ಯರಾಗಿ ದೊರೆತರು. ಹಿರಿಯಸ್ವಾಮಿಗಳು ತೀರಿ ಕೊಂಡಮೇಲೆ ಕಿರಿಯವರಿಗೇ ಪಟ್ಟವಾಗಿ ಆರು ವರ್ಷ ಕಳೆದಮೇಲೆ, ಶೃಂಗೇರಿಮಠದ ಸವಾರಿ ಗೋಕರ್ಣಕ್ಕೆ ಚಿತ್ತೈಸಿ (ಹಿರಿಯಸ್ವಾಮಿಗಳು ತಮ್ಮ ಕಡೆಗಾಲದಲ್ಲಿ ಗೋಕರ್ಣಕ್ಕೆ ಹೋಗಿಬರಬೇಕೆಂದು ಬಯಸಿ, ಅದು ಕೈಗೂಡದೆ ಇದ್ದುದರಿಂದ), ಅಲ್ಲಿಂದ ಮುಂದೆ ಪುಣೆಯವರೆಗೂ ಸಾಗಿ, ನಾಲ್ಕು ವರ್ಷಗಳ ಸಂಚಾರ ಮುಗಿಸಿ ಶೃಂಗೇರಿಗೆ ಹಿಂದಿರುಗಿತು.

## ದಿವಾನ್ ಶೇಷಾದ್ರಿ ಅಯ್ಯರು

ಇವರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು ಶೃಂಗೇರಿಯ ಮಠವನ್ನು ಆಳುತ್ತಿರುವಾಗ ಮೈಸೂರು ಮಹಾರಾಜರಾಗಿದ್ದವರು ಚಾಮರಾಜ ಒಡೆಯರು (೧೮೬೮-೧೮೯೪) ಇವರಿಗೆ ಉಗ್ರನರಸಿಂಹ ಭಾರತಿಗಳಿಂದಲೇ ಶಿವಪಂಚಾಕ್ಷರೀಮಂತ್ರೋಪದೇಶವಾಗಿದ್ದುದರಿಂದ ಶೃಂಗೇರಿಮಠದ ಬಗ್ಗೆ ತುಂಬ ಗೌರವವಿದ್ದಿತು. ಅವರ ಆಳ್ವಿಕೆಯ ನಡುಭಾಗದಲ್ಲಿ (೧೮೮೩ರಲ್ಲಿ) ಸಂಸ್ಥಾನದ ದಿವಾನರಾಗಿ ನೇಮಕಗೊಂಡ ಸರ್. ಕೆ. ಶೇಷಾದ್ರಿ ಅಯ್ಯರೊಂದಿಗೆ ಚಾಮರಾಜ ಒಡೆಯರು ಶೃಂಗೇರಿಗೆ ಬಂದಿದ್ದರು. ಮೈಸೂರು ಅರಸೊತ್ತಿಗೆಯಲ್ಲಿ ಶೃಂಗೇರಿಗೆ ಬಂದ ರಾಜರಲ್ಲಿ ಇವರೇ ಮೊದಲಿನವರು. ೧೮೮೫ರ ಡಿಸೆಂಬರ್ ಏಳರಂದು ಚಾಮರಾಜ ಒಡೆಯರ ಜೊತೆಗೆ ಶೃಂಗೇರಿಗೆ ಬಂದ ಶೇಷಾದ್ರಿ ಅಯ್ಯರು ಕೇರಳದ ಕಡೆಯ ತಮಿಳರು; ವೈದಿಕರ ವಂಶಕ್ಕೆ ಸೇರಿದವರು, ಹಿರಿಯರ ಕಾಲದಿಂದ ಶೃಂಗೇರಿಮಠದ ಶಿಷ್ಯರು,

ಕರ್ಮನಿಷ್ಠೆಯುಳ್ಳವರು, ವಿದ್ಯಾಭಿಮಾನಿಗಳು. ಅವರು ಸ್ವಾಮಿಗಳ ವ್ಯಕ್ತಿತ್ವವನ್ನು ಮೆಚ್ಚಿಕೊಂಡು ಮಠದ ಕೆಲಸದಲ್ಲಿ ತುಂಬ ಸಹಾಯಕರಾದರು. ಇವರು ತಮ್ಮ ತಲೆಯನ್ನು ಹರ್ಬರ್ಟ್ ಸ್ಪೆನ್ಸರಿಗೂ, ಹೃದಯವನ್ನು ಪರಬ್ರಹ್ಮನಿಗೂ ಮೀಸಲಾಗಿಟ್ಟಿದ್ದರೆಂದು ಸರ್ ವಿಲಿಯಂ ವಿಲ್ಸನ್ ಹಂಟರ್ ಬರೆದಿದ್ದಾನೆ. ಇವರು ೧೮೮೩ರಲ್ಲಿ ದಿವಾನ್ ಪದವಿಯಲ್ಲಿ ನೇಮಕಗೊಂಡಾಗ ಮೂವತ್ತೊಂದು ವರ್ಷ ವಯಸ್ಸಷ್ಟೆ. ಮುಂದೆ ಚಾಮರಾಜ ಒಡೆಯರು ಕಾಲವಾಗಿ (೧೮೯೪ರಲ್ಲಿ), ವಾಣೀವಿಲಾಸ ಸನ್ನಿಧಾನದ ಕೆಂಪು ನಂಜಮ್ಮಣ್ಣಿಯವರು ರೀಜೆಂಟ್ ಆಗಿರುವಾಗಲೂ ದಿವಾನರಾಗಿಯೇ ಇದ್ದರು. ಒಟ್ಟು ಹದಿನೆಂಟು ವರ್ಷಗಳು ಈ ಅಧಿಕಾರದಲ್ಲಿದ್ದುಕೊಂಡು ೧೯೦೧ರ ಮಾರ್ಚ್ ತಿಂಗಳಲ್ಲಿ ನಿವೃತ್ತರಾಗಿ ಅದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ತೀರಿಕೊಂಡರು.

ಸ್ವಾಮಿಗಳು ಎರಡನೆಯ ಬಾರಿ ದಕ್ಷಿಣದ ಯಾತ್ರೆಯನ್ನು ಕೈಗೊಂಡಾಗ (೧೮೯೧ರಲ್ಲಿ) ಮೈಸೂರಿನಲ್ಲಿ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಮನೆಯಲ್ಲೇ ತಂಗಿದ್ದು ಮುಂದೆ ಹೊರಟರು. ಒಂದೆರೆಡು ವರ್ಷಗಳ ಹಿಂದೆ ಮಠದ ಸರ್ವಾಧಿಕಾರಿಯಾಗಿ ನೇಮಕಗೊಂಡಿದ್ದ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳಿಗೂ ಶೇಷಾದ್ರಿ ಅಯ್ಯರಿಗೂ ವಿಶೇಷವಾದ ಪರಿಚಯ ಒದಗಿಬಂದುದು ಆಗಲೇ. ಈ ಯಾತ್ರೆಯಿಂದ ಸ್ವಾಮಿಗಳು ಹಿಂದಿರುಗಿ ಬಂದಮೇಲೆ ೧೮೯೫ರಲ್ಲಿ (ಮನ್ಮಥಸಂವತ್ಸರದ ಶ್ರಾವಣಶುಕ್ಲಷಷ್ಠಿ ಶನಿವಾರದಂದು) ಶೃಂಗೇರಿಮಠದ ವತಿಯಿಂದ ವೇದಶಾಸ್ತ್ರಾಧ್ಯಯನಕ್ಕೆಂದು 'ಸದ್ವಿದ್ಯಾ ಸಂಜೀವಿನೀ' ಪಾಠಶಾಲೆಯನ್ನು ಆರಂಭಮಾಡಿದ್ದು; ಏಕಾಂತವಾಸ, ತಪಶ್ಚರ್ಯೆ, ಸ್ವಾಧ್ಯಾಯಗಳ ಮೇಲೆ ಆದರ ಹೆಚ್ಚಾಗಿ ತುಂಗಾನದಿಯ ಆಚೆದಡದಲ್ಲಿ (ದಕ್ಷಿಣದ ಕಡೆ) ಅರಣ್ಯಭಾಗವನ್ನು ಆಶ್ರಮದಂತೆ ಮಾರ್ಪಡಿಸಿ, ಅದಕ್ಕೆ ತಮ್ಮ ಗುರುಗಳ ಹೆಸರಿನಲ್ಲಿ 'ನರಸಿಂಹವನ'ವೆಂದು ಹೆಸರಿಟ್ಟು ಅಲ್ಲೇ ನೆಲೆಸಲು ಸಂಕಲ್ಪಿಸಿದರು.

ಈ ನರಸಿಂಹವನದ ವ್ಯವಸ್ಥೆಯಾದದ್ದು ೧೮೯೭ರಲ್ಲಿ (ಹೇವಿಳಂಬಿ ಸಂವತ್ಸರದ ಆಶ್ವೀಜ ಬಹುಳ ಪಂಚಮಿ). ಮರುವರ್ಷ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರು (ಇನ್ನೂ ಪಟ್ಟಕ್ಕೆ ಬರದೆ, ವಾಣೀವಿಲಾಸ ಸನ್ನಿಧಾನದವರೇ ರೀಜೆಂಟ್ ಆಗಿ ಅಧಿಕಾರ ಮಾಡುತ್ತಿದ್ದಾಗ) ತಮ್ಮ ಉಪಾಧ್ಯಾಯ ಫ್ರೇಜರ್

ಅವರೊಂದಿಗೆ ದರ್ಶನಕ್ಕೆಂದು ಶೃಂಗೇರಿಗೆ ಬಂದಾಗ ಅವರು ಸ್ವಾಮಿಗಳನ್ನು ಕಂಡದ್ದು ನರಸಿಂಹವನದಲ್ಲೇ. ನರಸಿಂಹವನದಲ್ಲಿ ವಾಸ ಮಾಡುವುದು ಅವರಿಗೆ ತುಂಬ ಹಿತವೆನಿಸಿದ್ದಿತು.

ಶೇಷಾದ್ರಿ ಅಯ್ಯರ ಪರಿಚಯುವಾಗುವ ಮೊದಲೇ ಸ್ವಾಮಿಗಳಿಗೆ ಶಂಕರಾಚಾರ್ಯರ ಜನ್ಮಸ್ಥಳವನ್ನು ಕಾಲಡಿಯಲ್ಲಿ ಗುರುತಿಸಿ ಅಲ್ಲಿ ಆಚಾರ್ಯರಿಗೆ ಸ್ಮಾರಕವೊಂದನ್ನು ವ್ಯವಸ್ಥೆ ಮಾಡಬೇಕೆಂಬ ಬಯಕೆಯಿದ್ದಿತು. ಶೇಷಾದ್ರಿ ಅಯ್ಯರು ಕೇರಳದವರೇ ಆಗಿದ್ದುದರಿಂದ, ಮೈಸೂರು ಸಂಸ್ಥಾನದ ದಿವಾನರಾಗಿ ಪ್ರಭಾವಶಾಲಿಗಳಾಗಿದ್ದುದರಿಂದ, ಗುರುಭಕ್ತರಾಗಿದ್ದುದರಿಂದ ಅವರನ್ನು ಕೇರಳಕ್ಕೆ ಕಳುಹಿಸಿ ಆಚಾರ್ಯರ ಜನ್ಮಸ್ಥಳವನ್ನು ಕಂಡುಹಿಡಿದರು.

ಕೋಟೆಯಂ ವಿಭಾಗದಲ್ಲಿ ಕುತ್ತನಾಡಿಗೆ ಸೇರಿದಂತೆ ಕಾಲಡಿಕಾರ ಮಂಜಪ್ಪರ ಪ್ರೊವರ್ತಿಯೆಂಬಲ್ಲಿ ಕೈಪಳ್ಳಿ ನಂಬೂದರಿ ಎಂಬುವರ ಹೆಸರಿನಲ್ಲಿ ತೆಕ್ಕೆಮಠಂ ಎಂಬ ಸಂಸ್ಥೆಯ ಸ್ವಾಮಿಯವರ ಅಧೀನದಲ್ಲಿದ್ದ ಸ್ಥಳವನ್ನು ಕೆಲವೊಂದು ಮಾಹಿತಿಗಳ ಮೇಲೆ ಶಂಕರಾಚಾರ್ಯರ ಜನ್ಮಸ್ಥಳವೆಂದು ಶೇಷಾದ್ರಿ ಅಯ್ಯರು ನಿರ್ದೇಶಿಸಿದರು. ಸ್ವಾಮಿಗಳು ಅವರ ನಿರ್ದೇಶನವನ್ನು ಒಪ್ಪಿದರು. ಆಗ ಅಲ್ಲಿ ಯಾವ ಧಾರ್ಮಿಕ ವಿವರಗಳೂ ಇರಲಿಲ್ಲ. ಆಚಾರ್ಯರ ಹೆಸರು ಆ ಕಡೆ ಉಳಿದೇ ಇರಲಿಲ್ಲ. ಶಂಕರಾಚಾರ್ಯರ ಜನ್ಮಸ್ಥಳ ಕಾಲಡಿ ಎಂಬುದನ್ನು ಕೇರಳದವರೇ ಅರಿಯರು! ಶಂಕರಾಚಾರ್ಯರು ಕೇರಳದವರೆಂದು ಪ್ರಸಿದ್ಧರಾದರೂ ಅವರು ಯಾವ ಪ್ರದೇಶದವರೆಂಬುದು ಯಾರಿಗೂ ತಿಳಿದಿರಲಿಲ್ಲ. ಈಗ ಒಂದು ಸ್ಥಳವನ್ನು ಹೇಗೋ ಗುರುತಿಸಿಯಾಯಿತು. ಸ್ವಾಮಿಗಳು ಕುಂಭಕೋಣದ ನಡುಕಾವೇರಿ ಶ್ರೀನಿವಾಸಶಾಸ್ತ್ರಿಗಳೆಂಬುವರನ್ನು ಪ್ರತಿವರ್ಷವೂ ಅಲ್ಲಿಗೆ ಕಳುಹಿಸಿ ವೈಶಾಖ ಶುದ್ಧ-ಪಂಚಮಿಯಿಂದ ಐದು ದಿನಗಳ ಕಾಲ ಶಂಕರಜಯಂತೀ-ಉತ್ಸವವನ್ನು ನಡೆಸಿ ಬರುವಂತೆ ಏರ್ಪಡಿಸಿದರು.

ಆ ಸ್ಥಳವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿ ಶಂಕರಾಚಾರ್ಯರ ಆಲಯವನ್ನು ಕಟ್ಟಬೇಕೆಂದು ಮನಸ್ಸಿದ್ದಿತಾದರೂ, ಅದನ್ನು ಆಗಮಾಡಿಸುವ ಬಗೆ ಹೇಗೆಂದು ಅರಿಯದೆ ಹಲವಾರು ವರ್ಷಗಳು ಸುಮ್ಮನಿದ್ದರು. ೧೮೯೫ರಲ್ಲಿ ರಾಮಚಂದ್ರಯ್ಯರೆಂಬುವರು ಸ್ವಾಮಿಗಳ ದರ್ಶನಕ್ಕೆಂದು ಶೃಂಗೇರಿಗೆ ಬಂದರು;

ಬಂದು, ಸ್ವಾಮಿಗಳಿಂದ ಮಂತ್ರೋಪದೇಶವನ್ನೂ ಪಡೆದರು. ತಂಜಾವೂರು ಜಿಲ್ಲೆಯ ನನ್ನಿಲಂ ತಾಲೂಕಿನ ಪನಂಗುಡಿಯವರಾದ ಅವರು ಮೊದಲು ಮದರಾಸಿನಲ್ಲಿ ವಕೀಲರಾಗಿದ್ದರು. ಆಮೇಲೆ ತಿರುವಾಂಕೂರಿನ ಶ್ರೇಷ್ಠನ್ಯಾಯಾಲಯದಲ್ಲಿ ಜಡ್ಜಿಯಾಗಿದ್ದರು; ಒಂದು ವರ್ಷವಾದನಂತರ ಮೈಸೂರುಸಂಸ್ಥಾನದ ದಿವಾನ್ ಶೇಷಾದ್ರಿ ಅಯ್ಯರ ಮಿತ್ರರಾದರು.

ಅವರು ಶೃಂಗೇರಿಸ್ವಾಮಿಗಳಿಗೆ ಭಕ್ತರಾಗಿ ಮಠದ ಮುಖ್ಯ ಶಿಷ್ಯರೆಂದಾದರು. ಅದೇ ಕಾಲಕ್ಕೆ ಸರಿಯಾಗಿ, ಮೈಸೂರು ಸಂಸ್ಥಾನದಲ್ಲಿ ಉತ್ತಮ ಅಧಿಕಾರವನ್ನು ಪಡೆದಿದ್ದ ವಿಶ್ವನಾಥ ಮಾಧವರಾವ್ ಪಾಠಣಕರ (ವಿ. ಪಿ. ಮಾಧವರಾವ್) ಎಂಬುವರು ತಿರುವಾಂಕೂರಿಗೆ ದಿವಾನರಾಗಿ ನೇಮಕಗೊಂಡರು. ೧೯೦೫ರಲ್ಲಿ ರಾಮಚಂದ್ರ ಅಯ್ಯರು ಮಠದ ಸರ್ವಾಧಿಕಾರಿ ಶ್ರೀಕಂಠಶಾಸ್ತ್ರಿಗಳೊಂದಿಗೆ ತಿರುವಾಂಕೂರಿಗೆ ಹೋಗಿ ದಿವಾನ ಮಾಧವರಾಯರನ್ನೂ ಮಹಾರಾಜರನ್ನೂ ಕಂಡು ಮಾತನಾಡಿ ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಯನ್ನು ಶೃಂಗೇರಿಸ್ವಾಮಿಗಳ ವಶಕ್ಕೆ ತಂದುಕೊಳ್ಳುವ ಕೆಲಸವನ್ನು ಮಾಡಿದರು.

## ದಿವಾನ್ ಮಾಧವ ರಾಯರು :

ಈ ವ್ಯವಹಾರ ಪೂರೈಸಿದ ಮೇಲೆ ಸ್ವಾಮಿಗಳು ಕಾಲಡಿಗೆ ಬಂದು, ಸ್ಥಳವನ್ನು ತಮ್ಮ ವಶಕ್ಕೆ ತೆಗೆದುಕೊಂಡ ಸೂಚನೆಯಾಗಿ ಆಚಾರ್ಯರ ಆಲಯದಲ್ಲಿ ಮೂರ್ತಿಪ್ರತಿಷ್ಠೆ ಮಾಡಿ ಕುಂಭಾಭಿಷೇಕ ಮಾಡಬೇಕೆಂದು ಕರೆಬಂದಿತು. ೧೯೦೭ರ ಫೆಬ್ರುವರಿ ತಿಂಗಳಲ್ಲಿ ಸ್ವಾಮಿಗಳು ಶೃಂಗೇರಿಯನ್ನು ಬಿಟ್ಟು ಕಾಲಡಿಗೆ ಹೋಗುವ ಮಾರ್ಗವಾಗಿ ಬೆಂಗಳೂರಿಗೆ ಬಂದರು. ಆ ಹೊತ್ತಿಗೆ ಮಾಧವರಾಯರು ಮೈಸೂರುಸಂಸ್ಥಾನದ ದಿವಾನರಾಗಿ ನೇಮಕಗೊಂಡಿದ್ದರು. ದಿವಾನ್ ಪೂರ್ಣಯ್ಯನವರ ವಂಶೀಕರೂ ಯಳಂದೂರು ಜಹಗೀರುದಾರರೂ ಆಗಿದ್ದ ಪಿ. ಎನ್. ಕೃಷ್ಣಮೂರ್ತಿಯವರು ದಿವಾನರಾಗಿ ನಿವೃತ್ತರಾದಮೇಲೆ, ೧೯೦೬ರಿಂದ ೧೯೦೯ರ ಮಾರ್ಚ್ ೧೩ರವರೆಗೆ ಮಾಧವರಾಯರೇ ದಿವಾನರಾಗಿದ್ದರು.

ಈ ಮೊದಲೇ ಅವರಿಗೆ ಸ್ವಾಮಿಗಳ ಪರಿಚಯವಿದ್ದಿತು. ಅವರು ಶಿವಮೊಗ್ಗಜಿಲ್ಲೆಯಲ್ಲಿ ಡೆಪ್ಯುಟಿ ಕಮಿಷನರ್ ಆಗಿದ್ದಾಗ, ಸ್ವಾಮಿಗಳು ಗೋಕರ್ಣಕ್ಕೆ ಯಾತ್ರೆ ಹೋಗಿದ್ದು ಅಲ್ಲಿಗೆ ಬಂದಿದ್ದ ಸ್ವಾಮಿಗಳನ್ನು ಕಂಡಿದ್ದರು; ಅದು ೧೮೮೫ರಷ್ಟು ಹಿಂದೆ. ಆಗಿನಿಂದಲೂ ಮಾಧವರಾಯರು ಸ್ವಾಮಿಗಳ ವಿಚಾರದಲ್ಲಿ ಪೂಜ್ಯಬುದ್ಧಿಯನ್ನಿರಿಸಿಕೊಂಡಿದ್ದರು. ಇವರು ತಂಜಾವೂರಿನವರು; ಮಹಾರಾಷ್ಟ್ರದ ಸ್ಮಾರ್ತದೇಶಸ್ಥರು. ಮೈಸೂರು ಸೀಮೆಗೆ ಬಂದು ಗುಮಾಸ್ತೆಯಾಗಿ ಸೇರಿ ದಿವಾನ್‌ಪದವಿಯನ್ನು ಮುಟ್ಟಿದ ಮೇಧಾವಿಗಳು, ಸಾಹಸಿಗಳು.

ಕಾಲಡಿಗೆ ಹೊರಟ ಸ್ವಾಮಿಗಳು ಬೆಂಗಳೂರಿಗೆ ಬಂದು ಮಾಧವ ರಾಯರ ಮನೆಯಾದ 'ಪಾಠಣ ಭವನ'ದಲ್ಲೇ ಬಿಡಾರ ಮಾಡಿದರು. ಮಾಧವರಾಯರ ಉತ್ಸಾಹದಿಂದ, ನೆರವಿನಿಂದ ಬೆಂಗಳೂರಿನ ಶಂಕರಮಠ ಮೈದಳೆಯಿತು. ಆಗ ಚಾಮರಾಜಪೇಟೆಗೂ ಬಸವನಗುಡಿಗೂ ನಡುವೆ ಇದ್ದ ಕಾಡುಪ್ರದೇಶದಲ್ಲಿ ಶಂಕರಪುರ-ವಿಸ್ತರಣ ಮೂಡಿಕೊಂಡಿತು. ಅಲ್ಲಿ ವಿಶಾಲವಾದ ಆವರಣವೊಂದರಲ್ಲಿ ಎರಡೇ ವಾರಗಳಲ್ಲಿ ಆಚಾರ್ಯರ ಗುಡಿ ಸಿದ್ಧವಾಯಿತು. ಕಾಲಡಿಯಲ್ಲಿ ಪ್ರತಿಷ್ಠೆಗಾಗಿ ಸಿದ್ಧಪಡಿಸಿದ್ದ ಆಚಾರ್ಯರ ಹಾಲುಗಲ್ಲಿನ ಮೂರ್ತಿಯನ್ನು ಇಲ್ಲೇ ಪ್ರತಿಷ್ಠೆ ಮಾಡಲಾಯಿತು (ಪ್ಲವಂಗ ಸಂವತ್ಸರದ ವೈಶಾಖಕೃಷ್ಣದ್ವಾದಶೀ ಶುಕ್ರವಾರ).

ಇದನ್ನು ಮುಗಿಸಿಕೊಂಡು ಸ್ವಾಮಿಗಳು ಮುಂದೆ ಪ್ರಯಾಣ ಮಾಡಿ ಕಾಲಡಿಗೆ ಹೋಗಿ ಅಲ್ಲಿ ಶಂಕರಾಚಾರ್ಯರ ಆಲಯದಲ್ಲಿ ಮೂರ್ತಿಪ್ರತಿಷ್ಠೆ, ಆಲಯದ ಕುಂಭಾಭಿಷೇಕ ಮೊದಲಾದುವನ್ನು ಮಾಡಿ (೧೯೧೦ರ ಫೆಬ್ರುವರಿ ೨೧ರಂದು), ಶೃಂಗೇರಿಗೆ ಹಿಂದಿರುಗುವ ದಾರಿಯಲ್ಲಿ ಮತ್ತೆ ಬೆಂಗಳೂರಿಗೆ ಬಂದರು. ಆಗ ಶಂಕರಮಠದಲ್ಲಿ ವೇದವಿದ್ಯಾಶಿಕ್ಷಣಕ್ಕಾಗಿ 'ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ'ಎಂಬ ಹೆಸರಿನಿಂದ ಶಾಲೆಯೊಂದನ್ನು ತೆರೆದರು. ಐವತ್ತು ಮಂದಿ ವಿದ್ಯಾರ್ಥಿಗಳಿಗೆ ಉಚಿತವಾದ ವಸತಿ ಏರ್ಪಡಿಸಿ ಎಂಟು ವರ್ಷಗಳ ಕಾಲ ಪೂರ್ವ ಮೀಮಾಂಸಾ, ವೇದಾಂತ, ವೇದ, ಶಾಸ್ತ್ರಶಿಕ್ಷಣವನ್ನು

ದೊರಕಿಸುವ ಉದ್ದೇಶ ಸ್ವಾಮಿಗಳಿಗಿದ್ದಿತು. ಮಾಧವರಾಯರು ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ವಸತಿಗೃಹಗಳುಳ್ಳ ಅಗ್ರಹಾರವನ್ನು ಮಠದ ಆವರಣದಲ್ಲೇ ಕಟ್ಟಿಸಿಕೊಟ್ಟರು.

ಆದರೆ ಶೃಂಗೇರಿಗೆ ಹಿಂದಿರುಗಿದಮೇಲೆ, ಮೊದಲಲ್ಲಿ ಎಂಟು ಜನ ವಿದ್ಯಾರ್ಥಿಗಳು, ಇಬ್ಬರು ಅಧ್ಯಾಪಕರು ಸಾಕೆಂದು ನಿರ್ಧರಿಸಿ, ಕುಣಿಗಲ್ಲು ರಾಮಶಾಸ್ತ್ರಿಗಳನ್ನು ಬೆಂಗಳೂರಿಗೆ ಕಳುಹಿಸಿ ಈ ಶಾಲೆಯನ್ನು ವ್ಯವಸ್ಥೆಗೊಳಿಸಿದರು. ಅವರೊಂದಿಗೆ ಇಲ್ಲಿಗೆ ಬಂದ ಇಬ್ಬರು ಅಧ್ಯಾಪಕರು ಕರ್ಮನಿಷ್ಠರೂ ಪಂಡಿತರೂ ವೇದಾಧ್ಯಯನವನ್ನು ಸಾಂಗವಾಗಿ ಮಾಡಿದ್ದವರೂ ಆದ ವೆಳ್ಳೂರು ಸುಬ್ರಹ್ಮಣ್ಯಶಾಸ್ತ್ರಿಗಳು (ವೇದಾಂತವನ್ನು ಕಲಿಸಲು) ಮತ್ತು 'ಮೀಮಾಂಸಾ ಕಂಠೀರವ' ಎಂಬ ಬಿರುದನ್ನು ಪಡೆದವರೂ, ಸ್ವಾಮಿಗಳ ಬಳಿಯೇ ಅಧ್ಯಯನ ಮಾಡಿದವರೂ ಆದ ವೈದ್ಯನಾಥಶಾಸ್ತ್ರಿಗಳು (ಪೂರ್ವ-ಮೀಮಾಂಸೆಯನ್ನು ಕಲಿಸಲು).

ಎಂಟು ಮಂದಿ ವಿದ್ಯಾರ್ಥಿಗಳಲ್ಲಿ ನಾಲ್ವರು ಶೃಂಗೇರಿಯವರು; ಅಲ್ಲಿನ 'ಸದ್ವಿದ್ಯಾಸಂಜೀವಿನೀ' ಶಾಲೆಯಲ್ಲಿ ತರ್ಕ, ವ್ಯಾಕರಣಗಳನ್ನು ಆಗಲೇ ಕಲಿತವರು; ಮೂವರು ಪಾಲಕಾಡು ಕಡೆಯವರು; ಒಬ್ಬ ಮೈಸೂರಿನವನು. ಈ ವಿದ್ಯಾರ್ಥಿಗಳಲ್ಲಿ ಮುಂದೆ ಸ್ವಾಮಿಗಳ ಉತ್ತರಾಧಿಕಾರಿಯಾದ ನರಸಿಂಹನೂ ಒಬ್ಬನಾಗಿದ್ದನು. ವಿದ್ಯಾರ್ಥಿಗಳಿಗೆ ತಿಂಗಳಿಗೆ ತಲಾ ಇಪ್ಪತ್ತು ರೂಪಾಯಿಗಳ ವೇತನವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರು. ಕುಣಿಗಲ್ಲು ರಾಮಶಾಸ್ತ್ರಿಗಳು ಸ್ವಾಮಿಗಳ ಅಪ್ಪಣೆಯಂತೆ ಬೆಂಗಳೂರಿಗೆ ಬಂದು ಈ ಶಾಲೆಯನ್ನು ಮಹಾಜನರ ಸಮ್ಮುಖದಲ್ಲಿ ಆರಂಭಮಾಡಿಹೋದರು.

ಸ್ವಾಮಿಗಳು ಕಾಲಡಿಯಾತ್ರೆಯನ್ನು ಮುಗಿಸಿಕೊಂಡು ಹಿಂದಿರುಗುವಾಗ ದಾರಿಯಲ್ಲಿ ನಂದಿಬೆಟ್ಟದ ಮೇಲೆ ಕೆಲವು ಕಾಲ ತಂಗಿದ್ದಾಗ ಅವರ ಆರೋಗ್ಯ ಕೆಟ್ಟಿತು. ಶೃಂಗೇರಿಯನ್ನು ಮುಟ್ಟಿದಾಗಿನಿಂದ ಅವರು ಪೂರ್ಣ ಆರೋಗ್ಯವನ್ನೇ ಕಾಣದಾದರು. ಮುಂದೆ ೧೯೧೨ರ ಮಾರ್ಚ್ ತಿಂಗಳ ಹತ್ತನೆಯ ದಿನ (ಚೈತ್ರ ಶುದ್ಧಬಿದಿಗೆಯಂದು) ಮುಕ್ತರಾದರು. ಆಗ ಅವರಿಗೆ ಐವತ್ತನಾಲ್ಕು ವರ್ಷಗಳಷ್ಟೆ. ಮುಕ್ತರಾಗುವ ಮೊದಲು ಬೆಂಗಳೂರಿನ

'ಗೀರ್ವಾಣಪ್ರೌಢವಿದ್ಯಾಭಿವರ್ಧಿನೀ' ಶಾಲೆಯಲ್ಲಿ ಓದುತ್ತಿದ್ದ ನರಸಿಂಹನನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಲು ಸಂಕಲ್ಪಿಸಿದರು. ಈ ವಿಚಾರ ಮುಂದೆ ಬರುತ್ತದೆ.

ಈ ಸ್ವಾಮಿಗಳು ಕೈಗೊಂಡು ಸಾಧಿಸಿದ ಕೆಲಸಗಳು ಹಲವು. ಅವುಗಳಲ್ಲಿ ಮುಖ್ಯವಾದುದು ಮಠದ ವ್ಯವಸ್ಥೆ. ಇದರ ಅಂಗವಾಗಿಯೇ ಕಾಲಡಿಯಲ್ಲಿ ಶಂಕರರ, ಶಾರದೆಯ ಆಲಯಗಳ ನಿರ್ಮಾಣ, ಶೃಂಗೇರಿಯಲ್ಲೊಂದು ಪ್ರಾಚೀನವಿದ್ಯಾಶಿಕ್ಷಣಕ್ಕೆ ಶಾಲೆ, ಬೆಂಗಳೂರು ಶಂಕರಮಠದಲ್ಲಿ ಇನ್ನೊಂದು ಪ್ರೌಢವಿದ್ಯಾಶಿಕ್ಷಣಕ್ಕೆ ಶಾಲೆ, ಕಾಲಡಿಯಲ್ಲೂ ಶೃಂಗೇರಿಯಲ್ಲೂ ಶಂಕರ ಜಯಂತೀ-ಉತ್ಸವ, ವಿನಾಯಕಚತುರ್ಥಿಯಂದು ವಿದ್ವತ್ಸಭೆ, ತಪೋವನ-ವಾಗಿ ನರಸಿಂಹವನದ ವ್ಯವಸ್ಥೆ, ಶೃಂಗೇರಿಯ ಶಾರದಾದೇವಾಲಯವನ್ನು ಶಿಲಾಕಟ್ಟಡವನ್ನಾಗಿಸುವ ಪ್ರಯತ್ನ ಮೊದಲಾದುವು.

ವಿನಾಯಕಚತುರ್ಥಿಯ ಸಭೆಯ ವಿಚಾರ ಎರಡು ಮಾತು ಹೇಳಬೇಕು. ಇದು ಮಠದಲ್ಲಿ ಹಿಂದಿನಿಂದ ನಡೆದುಕೊಂಡುಬಂದ ಪದ್ಧತಿ- ಯಲ್ಲ. ಸ್ವಾಮಿಗಳ ಪೂರ್ವಾಶ್ರಮದ ತಂದೆ ಕುಣಿಗಲ್ಲು ರಾಮಶಾಸ್ತ್ರಿಗಳು ಮನೆಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ವರ್ಷದಲ್ಲಿ ವಿನಾಯಕಚತುರ್ಥಿ (ಭಾದ್ರಪದಶುಕ್ಲಚತುರ್ಥಿ)ಯಿಂದ ಮೊದಲು ಮಾಡಿ-ಕೊಂಡು ಇಪ್ಪತ್ತೊಂದು ದಿನಗಳು ಪಾಠ ಹೇಳುತ್ತಿರಲಿಲ್ಲ. ಆದರೆ ದಿನವೂ ಸಂಜೆ ಗಣಪತಿಗೆ ಮಂಗಳಾರತಿಯಾಗುವ ಮೊದಲು ತಮ್ಮ ವಿದ್ಯಾರ್ಥಿಗಳಲ್ಲೆ ಒಂದೇ ಶಾಸ್ತ್ರಭಾಗದಲ್ಲಿ ಅಧ್ಯಯನ ಮಾಡುತ್ತಿದ್ದವರನ್ನು ಇಬ್ಬಿಬ್ಬರಾಗಿ ವಿಂಗಡಿಸಿ ಅವರಿಂದ ವಾಕ್ಯಾರ್ಥ (ಎಂದರೆ ಶಾಸ್ತ್ರವಿಚಾರವಾದ ಚರ್ಚೆ: ಸಂಶಯ, ಆಕ್ಷೇಪ, ಪರಿಹಾರ, ಸಮಾಧಾನ, ಸಿದ್ಧಾಂತ ಎನ್ನುವ ರೀತಿಯಲ್ಲಿ) ಮಾಡಿಸುತ್ತಿದ್ದರು. ಇದರಲ್ಲಿ ಹಲವಾರು ಪಂಡಿತರೂ ಪಾಲುಗೊಳ್ಳುವ ಪದ್ಧತಿಯಿದ್ದಿತು. ಇದನ್ನು 'ಗಣಪತಿಸದಸ್ಸು' ಎಂದೂ ಕರೆಯುತ್ತಿದ್ದುದುಂಟು. ಈ ಪದ್ಧತಿಯನ್ನು ಸ್ವಾಮಿಗಳ ಪೂರ್ವಾಶ್ರಮದ ಅಣ್ಣ ಲಕ್ಷ್ಮೀನರಸಿಂಹಶಾಸ್ತ್ರಿಗಳು ಮುಂದುವರೆಸಿಕೊಂಡು ಬಂದಿದ್ದರು. ಇದನ್ನೇ ಸ್ವಾಮಿಗಳು ಮಠದಲ್ಲೂ ವಾಡಿಕೆಗೆ ತಂದರು.

ಈ ಸ್ವಾಮಿಗಳ ವಿಚಾರವನ್ನೂ ಚರಿತ್ರೆಯನ್ನೂ ಅವರೊಂದಿಗೆ ಇಪ್ಪತ್ತು-ಮೂರು ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿದ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಬರೆದು ಪ್ರಕಟಿಸಿದ್ದಾರೆ (ಶ್ರೀನೃಸಿಂಹಭಾರತೀಸ್ವಾಮಿಗಳ ದಿವ್ಯಚರಿತ್ರೆ, ೧೯೨೪).

# ೩. ಮೊದಲ ದಿನಗಳು

ಇನ್ನು ನರಸಿಂಹನ ವಿಚಾರಕ್ಕೆ ಹಿಂದಿರುಗೋಣ. ನರಸಿಂಹನು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದಮೇಲೆ ಮುಂದಿನ ಓದನ್ನು ಕುರಿತು ಸ್ವಾಮಿಗಳ ಸಮ್ಮತಿಯನ್ನು ಪಡೆಯಬೇಕೆಂದು ಗೋಪಾಲ ಶಾಸ್ತ್ರಿಗಳು ಸ್ವಾಮಿಗಳನ್ನು ಕೇಳಿದಾಗ, ಸ್ವಾಮಿಗಳು ಅವನನ್ನು ಸದ್ವಿದ್ಯಾ ಸಂಜೀವಿನೀ ಶಾಲೆಗೇ ಸೇರಿಸುವಂತೆ ಹೇಳಿದರಷ್ಟೆ, ಗೋಪಶಾಸ್ತ್ರಿಗಳು ಸ್ವಾಮಿಗಳ ನಿರ್ಧಾರಕ್ಕೆ ಮಣಿದರು ಎಂದೂ ಹೇಳಿದೆವು. ಅದರ ಹಿನ್ನೆಲೆಯಾಗಿ ಹೇಳಬೇಕಾದ ಕೆಲವು ವಿವರಗಳಿವೆ.

ಗೋಪಶಾಸ್ತ್ರಿಗಳ ತಂದೆ ಸುಬ್ಬಾಶಾಸ್ತ್ರಿಗಳನ್ನು ಶೃಂಗೇರಿಗೆ ಕರೆತಂದು, ಅವರಿಗೆ ಇಲ್ಲಿ ಜೀವನೋಪಾಯವನ್ನು ಉಗ್ರನರಸಿಂಹಭಾರತಿಗಳು ಕಲ್ಪಿಸಿದ- ರೆಂದು ಹಿಂದೆಯೇ ಹೇಳಿದೆ. ಅವರು ಊರನ್ನೂ ಮನೆಯನ್ನೂ ಬಿಟ್ಟು ಅವಧೂತರಾಗಿ ಎಲ್ಲಿಯೋ ಹೊರಟುಹೋದಾಗ, ಈ ಅನುಕೂಲವನ್ನು ಅವರ ಮನೆಯವರಿಗೆ ಮುಂದುವರೆಸಿದವರು ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳು. ತಲೆಯ ಮೇಲೊಂದು ಸೂರು, ತಿಂಗಳಿಗೆ ಅಷ್ಟಿಷ್ಟು ಪಡಿತರ, ಆಗಾಗ ದಾನಧರ್ಮ — ಹೀಗೆ ಮಠದ ನೆರವನ್ನು ಪಡೆದುಕೊಂಡೇ ಗೋಪಶಾಸ್ತ್ರಿಗಳ ಕುಟುಂಬ ಇದ್ದುದರಲ್ಲಿ ನೆಮ್ಮದಿಯಿಂದ ಇದ್ದುದು. ಹೀಗಿರುವಾಗ, ಸ್ವಾಮಿಗಳ ಮಾತನ್ನು ಮೀರುವುದು ಹೇಗೆ ?

ಈ ನಡುವೆ ಇನ್ನೂ ಒಂದು ವಿವರವಿದೆ. ಗೋಪಶಾಸ್ತ್ರಿಗಳಿಗೆ ನರಸಿಂಹ ಹದಿನಾಲ್ಕನೆಯ ಮಗುವೆಂದೂ, ಅವನ ಹಿಂದೆ ಹದಿಮೂರು ಮಕ್ಕಳು ಆಗಿ ಹೋಗಿದ್ದರೆಂದೂ ಈಗಾಗಲೇ ಹೇಳಿದೆ. ದಂಪತಿಗಳು ಗೋಕರ್ಣಯಾತ್ರೆ,

ಕೃಷ್ಣದರ್ಶನ ಮುಗಿಸಿಕೊಂಡು ಬಂದಮೇಲೇ ನರಸಿಂಹ ಹುಟ್ಟಿದ್ದು. ಮುಗ್ಧಸ್ವಭಾವದ ತಂದೆತಾಯಿಯರಿಗೆ, ತಮ್ಮ ಹತ್ತಿರ ಮಕ್ಕಳು ಬೆಳೆದರೆ ಅವರಿಗೆ ಉಳಿಗಾಲವಿಲ್ಲವೆಂದು ಏನೋ ಕಲ್ಪನೆ ಮೂಡಿಕೊಂಡಿತು. ಇದನ್ನು ಯಾರಾದರೂ ಹೇಳಿದರೋ, ಅವರಿಗೇ ಹೊಳೆಯಿತೋ ತಿಳಿಯದು. ಅಂತೂ ನರಸಿಂಹ ಬೆಳೆದು ಉಳಿಯಬೇಕಾದರೆ ತಮ್ಮಿಂದ ದೂರವಿದ್ದರೆ ಒಳಿತೆಂದು ಅನಿಸಿತು. ಆಗ ಊರಿಗೆ ದೊಡ್ಡ ಕುಳವೆಂದರೆ ನಂಜನಗೂಡು ಶ್ರೀಕಂಠಶಾಸ್ತ್ರಿಗಳು; ಇವರು ಮಠದ ಸರ್ವಾಧಿಕಾರಿಗಳು; ಸ್ವಾಮಿಗಳ ಪೂರ್ವಾಶ್ರಮದ ನಂಟರು, ಶ್ರೀಮಂತರು, ವೈಭವದಿಂದ ಬಾಳುವವರು. ಅವರ ಮನೆಯಲ್ಲಿ ಹಲವಾರು ಬಡಹುಡುಗರು ಇದ್ದುಕೊಂಡು ಓದುವರು. ಗೋಪಶಾಸ್ತ್ರಿಗಳು ಸಂಕೋಚಪ್ರಕೃತಿಯವರಾದರೂ ಧೈರ್ಯಮಾಡಿ ತಮ್ಮ ಮಗನಿಗೂ ಆಸರೆ ಕೊಡುವಂತೆ ಕೇಳಿಕೊಂಡರು. ಅವರ ದಯೆಯಿಂದಲಾದರೂ ಮಗ ಉಳಿದುಕೊಂಡು ಬೆಳೆಯಲೆಂದು ಅವರ ಆಸೆ. ಶ್ರೀಕಂಠಶಾಸ್ತ್ರಿಗಳು ಆಗಲೆಂದು ಒಪ್ಪಿದರು.

ನರಸಿಂಹ ಹೀಗೆ ತಮ್ಮ ಮನೆ ಮತ್ತು ಶ್ರೀಕಂಠಶಾಸ್ತ್ರಿಗಳ ಮನೆ ಎರಡರಲ್ಲೂ ಬೆಳೆಯಬೇಕಾಗಿಬಂದಿತು. ಇದರಿಂದ ಅವನ ಪ್ರಕೃತಿ ಸಾಮಾನ್ಯವಾಗಿ ಉಳಿದ ಮಕ್ಕಳಿಗಿರುವುದಕ್ಕಿಂತ ಬೇರೆಯಾದುದು ಸಹಜವೇ. ಮೊದಲೇ ಇದ್ದ, ತಂದೆ ತಾಯಿಯರಿಬ್ಬರಿಂದಲೂ ಪಡೆದುಕೊಂಡ ಸಂಕೋಚಪ್ರವೃತ್ತಿ ಈಗ ಇನ್ನಷ್ಟು ಬಲವಾಯಿತು. ತಂದೆತಾಯಿಯರ ಕರುಳ ನೋವು ಮನದಟ್ಟಾಯಿತು. ಬಯಸಿ ಬಯಸಿ ಹರಕೆಹೊತ್ತು ಪಡೆದುಕೊಂಡ ಒಬ್ಬನೇ ಮಗ ಹೇಗಾದರೂ ಎಲ್ಲಾದರೂ ಉಳಿದರೆ ಸಾಕು ಎಂದು ಮನೆಯಿಂದಲೇ ದೂರವಿರಿಸಲು ಒಪ್ಪಿದರಲ್ಲವೇ? ಬೇರೆಯವರ ಹಂಗಿಗೆ ಸಿಕ್ಕು ಎಷ್ಟು ಸಂಕಟಪಡುವರೋ? ಹೆತ್ತವರ ಒಡಲ ಆಸೆ ಏನೋ? ಅವರ ತ್ಯಾಗಕ್ಕೆ ತನ್ನಿಂದ ಸಲ್ಲುವುದಾದರೂ ಏನು? ಆದರೆ ತಂದೆತಾಯಿಯರ ನಂಬಿಕೆಯನ್ನು ಎದುರಿಸುವುದು ಹೇಗೆ? ಅವರ ನಿರ್ಧಾರಕ್ಕೆ ಪ್ರತಿಹೇಳುವುದು ಹೇಗೆ? ಹಿರಿಯರಾದ ಅವರೂ ಮುಗ್ಧರು, ಎಳೆಯವನಾದ ತಾನೂ ಮುಗ್ಧ!

ಶ್ರೀಕಂಠಶಾಸ್ತ್ರಿಗಳ ಮನೆಯಲ್ಲೇ ಇದ್ದುಕೊಂಡು, ಅವರಿಗೆ ವಿಧೇಯನಾಗಿ, ಅವರು ಹೇಳಿದ ಕೆಲಸಗಳನ್ನೆಲ್ಲ ಮಾಡುತ್ತ, ಅವರ ಅನ್ನವನ್ನುಂಡು, ಅವರ ಮೇಲ್ವಿಚಾರಣೆಯಲ್ಲಿ ಬೆಳೆದ ಬಡಹುಡುಗ ಮುಂದೆ ತಾನು ಮಠಾಧಿಪತಿಯಾಗಿ ಶಾಸ್ತ್ರಿಗಳು ತನ್ನೆದುರು ಟೊಂಕ ಬಗ್ಗಿಸಿ ನಿಲ್ಲುವ ಕಾಲ ಬಂದೀತೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ! ಶಾಸ್ತ್ರಿಗಳೂ ಇದನ್ನು ನಿರೀಕ್ಷಿಸಿರಲಿಲ್ಲ. ಮುಂದೆ ಒದಗಿಬಂದ ಉಭಯಸಂಕಟಕ್ಕೆ ಇದು ನಾಂದಿಯಾಯಿತೋ ಏನೋ. ಅಂತೂ ನರಸಿಂಹನು ಶ್ರೀಕಂಠಶಾಸ್ತ್ರಿಗಳ ಪೋಷಣೆಯಲ್ಲಿದ್ದುಕೊಂಡೇ ಶಾಲೆಗೆ ಸೇರಿ, ಪರೀಕ್ಷೆಯಲ್ಲಿ ತೇರ್ಗಡೆಯಾದದ್ದು. ಸ್ವಾಮಿಗಳು ಬಹುಮಟ್ಟಿಗೆ ಸಂಚಾರದಲ್ಲೇ ಇರುತ್ತಿದ್ದುದರಿಂದ, ಮಠದ ಸರ್ವಾಧಿಕಾರಿಯಾಗಿದ್ದ ಶ್ರೀಕಂಠಶಾಸ್ತ್ರಿಗಳೂ ಶೃಂಗೇರಿಯಲ್ಲಿ ಇರುತ್ತಿದ್ದುದೇ ಕಡಿಮೆ. ಹೀಗಾಗಿ ಮಗನ ಓದಿನ ಹೊಣೆ ತಂದೆತಾಯಿಯರ ಮೇಲೇ ಇದ್ದಿತು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲ ವರ್ಗದಲ್ಲೇ ಉತ್ತೀರ್ಣನಾದಂದು, ಮುಂದಕ್ಕೆ ಆಧುನಿಕ ವಿದ್ಯಾಭ್ಯಾಸ ಪಡೆಯಬೇಕೆಂದು ಹುಡುಗನಿಗೂ ಆಸೆಯಿದ್ದಿತು, ತಂದೆತಾಯಿಯರಿಗೂ ಆಸೆಯಿದ್ದಿತು. ಆದರೆ ಶ್ರೀಕಂಠಶಾಸ್ತ್ರಿಗಳೂ ಸ್ವಾಮಿಗಳೂ ಪ್ರಾಚೀನವಿದ್ಯೆಯಲ್ಲೇ ಅವನನ್ನು ತೊಡಗಿಸಬೇಕೆಂಬ ನಿರ್ಧಾರಕ್ಕೆ ಬಂದರು.

ಇದಕ್ಕೊಂದು ಕಾರಣವೂ ಇದ್ದಿತು. ಸ್ವಾಮಿಗಳು ವಿದ್ಯಾಪಕ್ಷಪಾತಿಗಳು; ಅವರ ಮನೆಯೇ ಪಂಡಿತರದ್ದು; ತಂದೆ, ಅಣ್ಣ ಇಬ್ಬರೂ ಆಸ್ಥಾನ ವಿದ್ವಾಂಸರಾಗಿದ್ದವರು; ಗುರುಗಳೂ, ಪಂಡಿತರೆಂದು ಹೆಸರಾದವರೇ. ಆದರೆ ಆವರೆಗೆ ಮಠದಲ್ಲಿ ಸಂಸ್ಕೃತ ಅಥವಾ ವೇದಾಂತಶಿಕ್ಷಣಕ್ಕೆ ನಿಯೋಜಿತವಾದ ಒಂದು ವ್ಯವಸ್ಥೆಯಿರಲಿಲ್ಲ. ಆಂಗ್ಲವಿದ್ಯೆಯನ್ನೂ ಆಧುನಿಕಶಾಸ್ತ್ರಗಳನ್ನೂ ಕಲಿಸಲು ಎಲ್ಲೆಲ್ಲೂ ಶಾಲೆಗಳು ಮೂಡಿಕೊಳ್ಳುತ್ತಿದ್ದ ಕಾಲ ಅದು. ಸ್ವಾಮಿಗಳು ಮಠದಲ್ಲೇ ಸಂಸ್ಕೃತವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಶಾಲೆಯೊಂದನ್ನು ತೆರೆಯಬೇಕೆಂದು ಮನಸ್ಸುಮಾಡಿ, ೧೮೯೫ರಲ್ಲೇ 'ಸದ್ವಿದ್ಯಾಸಂಜೀವಿನೀ' ಎನ್ನುವ ಹೆಸರಿನಿಂದ ಶಾಲೆಯನ್ನು ಮೊದಲು ಮಾಡಿದರು. ಈ ಶಾಲೆಯಲ್ಲಿ ಆರು ವರ್ಷಗಳ ಅವಧಿಯಲ್ಲಿ ಸಂಸ್ಕೃತಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರಭಾಗಗಳಾದ ತರ್ಕ, ನ್ಯಾಯ, ವ್ಯಾಕರಣ, ಜ್ಯೋತಿಷ, ಮೀಮಾಂಸಾ ಮತ್ತು ವೇದಾಂತಗಳನ್ನೂ

ವಿದ್ಯಾರ್ಥಿಗಳಿಗೆ ಕಲಿಸುವ ವ್ಯವಸ್ಥೆಯಿದ್ದಿತು. ಪ್ರಾಚೀನ ಪದ್ಧತಿಯಲ್ಲಿ, ಗುರುಕುಲದ ಮಾದರಿಯಲ್ಲಿ ಇಲ್ಲಿನ ಶಿಕ್ಷಣ ನಡೆಯಬೇಕೆಂದು ಸ್ವಾಮಿಗಳ ಆಸೆ. ಗುರುಗಳ ಮತ್ತು ವಿದ್ಯಾರ್ಥಿಗಳ ಅನ್ನ-ವಸತಿಗಳನ್ನೆಲ್ಲ ಮಠದವರೇ ಒದಗಿಸುತ್ತಿದ್ದರು.

ಆದರೆ ಆಂಗ್ಲ, ಆಧುನಿಕ ವಿದ್ಯೆ ಆಗತಾನೇ ಹರಡಿಕೊಳ್ಳುತ್ತಿದ್ದ ಆ ಕಾಲದಲ್ಲಿ ಈ ಬಗೆಯ ಶಿಕ್ಷಣಕ್ಕೆ ಹಾತೊರೆಯುವವರು ಯಾರು? ಆ ಶಿಕ್ಷಣದ ಆಕರ್ಷಣೆ ಒದಗುವ ಮೊದಲೇ ಪ್ರಾಚೀನ ವಿದ್ಯೆಯ ಬಗ್ಗೆ ಜನಕ್ಕೆ ಅನಾದರ ಒದಗಿದ್ದಿತ್ತೆನ್ನಿ. ಮತ್ತೆ ಸರಕಾರದ ಕಡೆಯಿಂದ ಶಾಲೆಗಳು ಅಲ್ಲಲ್ಲಿ ಕಾಣಿಸಿಕೊಳ್ಳಲು ತೊಡಗಿದಾಗಲಂತೂ ಸಂಸ್ಕೃತ, ವೇದಾಂತ, ತರ್ಕವೆಂದರೆ ಯಾರು ಬರುವರು? ಆಂಗ್ಲವಿದ್ಯೆಯ ರೆಕ್ಕೆ ಬಲಿತು ಗರಿಗೆದರಿ, ಅದರ ಒಲುಮೆ ದಡಕೊಚ್ಚಿ ಹರಿಯುವಾಗ ಈ ಸಾಂಪ್ರದಾಯಿಕ ವಿದ್ಯೆಯ ಮದ್ದು ಯಾರಿಗೆ ಹಿಡಿಸೀತು? ಲೌಕಿಕದ ಹಂಬಲ ಹೆಚ್ಚುತ್ತಿರುವಾಗ ಶಾಸ್ತ್ರಾಧ್ಯಯನವನ್ನು ನೆಚ್ಚಿ- ಕೊಂಡು ಯಾರು ಕೂಡುತ್ತಾರೆ? ಮಠದ ಅಧಿಕಾರಿಗಳೇ ಪಂಡಿತರೇ ತಮ್ಮ ಮಕ್ಕಳನ್ನು ಈ ಓದಿಗೆ ಹಾಕಲಿಲ್ಲ! ವಿದ್ಯಾರ್ಥಿಗಳನ್ನು ಕಲೆಹಾಕುವುದೇ ಸ್ವಾಮಿಗಳಿಗೊಂದು ಸಮಸ್ಯೆಯಾದುದು ಸಹಜವೇ. ಶಾಲೆ ಶುರುವಾಗಿ ಹತ್ತು ವರ್ಷಗಳಾದರೂ ಸದ್ವಿದ್ಯೆಗೆ ಶೃಂಗೇರಿಯಲ್ಲಿ ಸಂಜೀವಿನಿ ಸಾಕಷ್ಟು ದೊರಕಿರಲಿಲ್ಲ. ತಮ್ಮ ಬಳಿ ಬಂದವರಿಗೆ ಪ್ರಾಚೀನ ವಿದ್ಯೆಯಲ್ಲಿ ಅಭಿಮಾನ ಉಂಟೆಂದು ಕಂಡುಬಂದರೆ, ಮಕ್ಕಳನ್ನು 'ಸದ್ವಿದ್ಯಾಸಂಜೀವಿನಿ' ಶಾಲೆಗೆ ಕಳುಹಿಸುವಂತೆ ಹೇಳುವುದು ಸ್ವಾಮಿಗಳಿಗೆ ವಾಡಿಕೆಯಾಗಿದ್ದಿತು. ಹೀಗೆಯೇ ನರಸಿಂಹನ ತಂದೆ ಗೋಪಶಾಸ್ತ್ರಿಗಳು ಮಗ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣ- ನಾದನೆಂದು ಹೇಳಲು ಸ್ವಾಮಿಗಳನ್ನು ಕಂಡಾಗ ''ಹುಡುಗ ಬುದ್ಧಿವಂತ, ಆಂಗ್ಲವಿದ್ಯೆಯನ್ನು ಮುಂದುವರೆಸುವುದು ಬೇಡ, 'ಸದ್ವಿದ್ಯಾಸಂಜೀವಿನಿ'ಗೆ ಸೇರಿಸು'' ಎಂದುಬಿಟ್ಟರು. ಈ ಸಲಹೆಗೆ ಶ್ರೀಕಂಠಶಾಸ್ತ್ರಿಗಳೂ ತಲೆದೂಗಿದರು. ಇನ್ನು ಮಠದ ಆಸರೆಯಲ್ಲೇ ಬದುಕುತ್ತಿದ್ದ ಗೋಪಶಾಸ್ತ್ರಿಗಳು ಮಾಡುವುದೇನು?

### ಶ್ರೀಕಂಠಶಾಸ್ತ್ರಿಗಳು

ಈ ಸಂದರ್ಭದಲ್ಲಿ ಶ್ರೀಕಂಠಶಾಸ್ತ್ರಿಗಳ ವಿಚಾರ ಸ್ವಲ್ಪ ಹೇಳಬೇಕು. ಏಕೆಂದರೆ ಚಂದ್ರಶೇಖರಭಾರತೀಸ್ವಾಮಿಗಳ ಬದುಕಿನಲ್ಲಿ ಇವರ ಪಾತ್ರ ದೊಡ್ಡದು. ಅವರು

ನಂಜನಗೂಡಿನವರು, ಅವರ ಹಿರಿಯರ ಮನೆಯೊಂದು ಅಲ್ಲಿಯೇ ಇದ್ದಿತು. ಅವರ ಇಳಿವಯಸ್ಸಿನಲ್ಲಿ ನಾನೂ ಅವರನ್ನು ಅಲ್ಲಿ ಕಂಡುದುಂಟು. ಅವರ ಸೋದರರಲ್ಲಿ ಒಬ್ಬರು ಕೃಷ್ಣಶಾಸ್ತ್ರಿಗಳು — ಮೈಸೂರಿನಲ್ಲಿರುತ್ತಿದ್ದರು. ಇನ್ನೊಬ್ಬರು ಯಜ್ಞೇಶ್ವರಶಾಸ್ತ್ರಿಗಳು ನಂಜನಗೂಡಿನಲ್ಲೇ ಇರುತ್ತಿದ್ದರು. ಅವರನ್ನು ನಾನು ಹುಡುಗನಾಗಿ ಬಲ್ಲೆ. ಅವರ ಮೊಮ್ಮಗನೂ ನಾನೂ ಸಹಪಾಠಿಗಳಾಗಿದ್ದುದರಿಂದ, ಸ್ನೇಹಿತರಾಗಿದ್ದುದರಿಂದ ಅವರ ಮನೆಗೆ ಹೋಗಿಬರುತ್ತಿದ್ದೆ. ಹೋದಾಗ ಕರೆದು ಮಾತನಾಡಿಸುವರು, ವಿಚಾರಿಸಿಕೊಳ್ಳುವರು. ಅವರೊಂದಿಗೇ ಶ್ರೀಕಂಠ ಶಾಸ್ತ್ರಿಗಳನ್ನು ಆಗಾಗ ಕಾಣುತ್ತಿದ್ದೆ. ಆದರೆ ಆಗ ಶ್ರೀಕಂಠಶಾಸ್ತ್ರಿಗಳು ನಂಜನಗೂಡಿನಲ್ಲಿ ಇರುತ್ತಿರಲಿಲ್ಲ. ಹತ್ತಿರದ (ಮೂರು ಮೈಲಿದೂರದ) ಕಲ್ಲಹಳ್ಳಿ ಎಂಬಲ್ಲಿ ಇರುತ್ತಿದ್ದರೆಂದು ನೆನಪು.

ಶ್ರೀಕಂಠಶಾಸ್ತ್ರಿಗಳ ವ್ಯಕ್ತಿವೈಭವವನ್ನು ಮಾತಿನಿಂದ ವರ್ಣಿಸುವುದು ಕಷ್ಟ. ನಾನು ನೋಡುವ ವೇಳೆಗೆ ಅವರು ಮುದುಕರು. ಮಠದ ಅಧಿಕಾರವನ್ನು ಬಿಟ್ಟು ಹಲವು ವರ್ಷಗಳಾಗಿದ್ದವು. ಆದರೂ ಎತ್ತರವಾದ ನಿಲುವು, ಉದಾರವಾದ

ಮೈಕಟ್ಟು, ಹೊಳೆಯುವ ಮೈಬಣ್ಣ, ಕಳೆಕಳೆಯಾದ ಮುಖ, ಶುಭ್ರವಾದ ಸೊಗಸಾದ ಉಡುಗೆ, ಗಂಭೀರವಾದ ನಡೆ, ಖಂಡತುಂಡಾಗಿ ಅಧಿಕಾರವುಳ್ಳ ಮಾತು, ದಿಟ್ಟ ನೋಟ ಇವನ್ನು ಮರೆಯುವುದು ಸಾಧ್ಯವಿಲ್ಲ. ಹುಡುಗನಾದ ನನಗೆ ಇವರನ್ನು ನೋಡಿದೊಡನೆ ಭಯವಾಯಿತು. ಆದರೆ ಅವರನ್ನು ಮತ್ತೆಮತ್ತೆ ನೋಡಬೇಕೆಂಬ ಆಸೆಯೂ ಮೊಳೆಯಿತು. ಅಷ್ಟು ಪ್ರಭಾವಶಾಲಿಗಳು ಅವರು. ಅವರ ಶ್ರೀಮದ್ಗಾಂಭೀರ್ಯ ಅರಸರಲ್ಲೂ ಇರುವುದು ಅಪರೂಪ.

ಮೈಸೂರಿನಲ್ಲಿ ವಿದ್ವಾಂಸರಾಗಿ ಮೆರೆದ ಕುಣಿಗಲ್ಲು ರಾಮಶಾಸ್ತ್ರಿಗಳ ಪರಿವಾರಕ್ಕೆ ಸೇರಿದ ಇವರು ತಮ್ಮ ಹತ್ತೊಂಬತ್ತನೆಯ ವರ್ಷ ವಯಸ್ಸಿನಲ್ಲೇ ಶೃಂಗೇರಿಮಠವನ್ನು ಸೇರಿದರು — ತಮ್ಮ ನಂಟ ಶಿವಸ್ವಾಮಿಯು ಮಠದ ಸ್ವಾಮಿಯಾಗಿ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತಿಯೆಂದು ಹೆಸರಿನಿಂದ ಪಟ್ಟಕ್ಕೆ ಬಂದ ಸಮಯದಲ್ಲಿ. ಅಂದಿನಿಂದ ನಲವತ್ತು ವರ್ಷಗಳಿಗೂ ಮಿಕ್ಕು ಮಠದ ಆಡಳಿತವನ್ನು ಸ್ವಾಮಿಗಳ ಪರವಾಗಿ (ಇಪ್ಪತ್ತುನಾಲ್ಕು ವರ್ಷಗಳು ಸಚ್ಚಿದಾನಂದ ಶಿವಾನಭಿನವನೃಸಿಂಹಭಾರತಿಗಳ ಪರವಾಗಿ, ಹದಿನೆಂಟು ವರ್ಷಗಳು ಚಂದ್ರಶೇಖರಭಾರತಿಗಳ ಪರವಾಗಿ) ನಡೆಸಿದರು. ಮಠದ ಯಜಮಾನ್ಯ ಹೆಸರಿಗೆ ಸ್ವಾಮಿಗಳದ್ದೇ. ಆದರೆ ಅವರು ಸಂನ್ಯಾಸಿಗಳು, ಆಶ್ರಮಕ್ಕೆ ಹೊಂದಿಕೊಂಡುಬಂದ ಕಟ್ಟುಪಾಡು ಬಹಳ; ಅವರ ಆಚಾರಕ್ಕೂ ಲೋಕದ ವ್ಯವಹಾರಕ್ಕೂ ಅಂತರ ಹೆಚ್ಚು. ಮಠದ ಆದಾಯ, ಆಸ್ತಿ, ನ್ಯಾಯ, ಉತ್ಸವ, ಸಂಚಾರ, ರಕ್ಷಣೆ ಮೊದಲಾದ ಹಲವು ವಿವರಗಳನ್ನು ನೋಡಿಕೊಳ್ಳಲು ಸ್ವಾಮಿಗಳ ವಿಶ್ವಾಸಕ್ಕೆ ಪಾತ್ರರಾದ ಗೃಹಸ್ಥರು ಇರಬೇಕಾದುದು ಅಗತ್ಯವೇ. ಸ್ವಾಮಿಗಳಿಗೆ ಇವರ ಮೇಲೆ ವಿಶ್ವಾಸವಿದ್ದುದು ಸಹಜವೇ; ನಂಟರೆಂದು ಮಾತ್ರ ಅಲ್ಲ, ಸಮರ್ಥರೆಂಬ ಕಾರಣವೂ ಇದ್ದಿತು. ಶ್ರೀಕಂಠಶಾಸ್ತ್ರಿಗಳು ಪಂಡಿತರ ಮನೆಯಲ್ಲಿ ಹುಟ್ಟಿಬೆಳೆದರೂ ತಾವು ಪಂಡಿತರೆನಿಸಿಕೊಳ್ಳಲಿಲ್ಲ; ಆ ಕಡೆ ಅವರ ಅಭಿರುಚಿ ಅಷ್ಟಾಗಿ ಇರಲಿಲ್ಲ. ಮಠಕ್ಕೆ ಸೇರಿದ ಮೇಲೆ ಸ್ವಾಮಿಗಳ ಬಳಿ ಅಷ್ಟಿಷ್ಟು ಅಧ್ಯಯನಮಾಡುವ ಪ್ರಯತ್ನ ನಡೆಸಿದರಾದರೂ ಅದೇನು ಊರ್ಜಿತ ವಾಗಲಿಲ್ಲ. ಮಠದ ವ್ಯವಹಾರ, ಸ್ವಾಮಿಗಳ ಸಂಚಾರ, ಅಧಿಕಾರಿಗಳ ಸಂಪರ್ಕ, ಶಿಷ್ಯಕೋಟಿಯ ಸಂಗ್ರಹ, ಪೀಠದ ಹೆಗ್ಗಳಿಕೆಯ ಪ್ರಚಾರ — ಹೀಗೆ ಹತ್ತಾರು ಹವ್ಯಾಸಗಳನ್ನು ಹಚ್ಚಿಕೊಂಡಿದ್ದ ಸರ್ವಾಧಿಕಾರಿಗಳು ಅವರು.

'ಸರ್ವಾಧಿಕಾರಿ'ಯೆಂದರೆ ದಿಟವಾಗಿ ಸರ್ವಾಧಿಕಾರಿಯೇ! ತಮ್ಮ ನಂಟರು ಆಗಿದ್ದ ಸ್ವಾಮಿಗಳ ಕಾಲದಲ್ಲೂ, ಅವರು ಮುಕ್ತರಾಗಿ ಅವರ ನಂತರ ಪಟ್ಟಕ್ಕೆ ಬಂದ ಚಂದ್ರಶೇಖರ ಭಾರತೀಸ್ವಾಮಿಗಳ ಕಾಲದಲ್ಲೂ, ಅವರ ಗಮನಕ್ಕೆ ಬರದೆ ಮಠದ ಅಥವಾ ಊರಿನ ಯಾವೊಂದು ಸಣ್ಣ ವ್ಯವಹಾರವೂ ನಡೆಯುವಂತಿಲ್ಲ. ಅವರ ಮನಸ್ಸಿಗೆ ಬಂದುದು ಖಂಡಿತ ನಡೆಯುವುದು; ಅದಕ್ಕೆ ಯಾರೂ ಎದುರಾಗುವ ಹಾಗಿಲ್ಲ. ಅವರು ಅಧಿಕಾರದಲ್ಲಿದ್ದ ನಲವತ್ತು ವರ್ಷಗಳು ಸಾರ್ವಭೌಮರಂತೆಯೇ ಮೆರೆದರು.

ಇದು ಸಾಧ್ಯವಾದುದು ಅವರ ಅಸಾಮಾನ್ಯಸಾಮರ್ಥ್ಯದಿಂದ. ಲೋಕ-ವ್ಯವಹಾರ ಅವರಿಗೆ ಒಗ್ಗಿಬಂದದ್ದು; ಜನಗಳನ್ನು ನಡೆಸುವುದು, ಆಡಳಿತವನ್ನು ಮಾಡುವುದು, ಹಿಡಿದ ಕೆಲಸವನ್ನು ಪಟ್ಟುಬಿಡದೆ ಕೈಗೂಡಿಸಿಕೊಳ್ಳುವುದು ಅವರ ಸ್ವಭಾವಕ್ಕೆ ಅಂಟಿಕೊಂಡುಬಂದ ಗುಣಗಳು. ಮತ್ತೆ, ಅವರ ದರ್ಪ ಹೆಸರುವಾಸಿಯಾದದ್ದು. ಮಠದ ನೌಕರರೆಲ್ಲ ಅವರನ್ನು ಕಂಡರೆ ಬೆದರುವರು; ಸ್ವಾಮಿಗಳೂ ಬೆದರುತ್ತಿದ್ದರೆ ಆಶ್ಚರ್ಯವಿಲ್ಲ! ಯಾರಿಗೂ ಹೆದರುವವರಲ್ಲ. ಯಾವುದಕ್ಕೂ ಅಂಜುವವರಲ್ಲ. ಅಳುಕು-ಆತಂಕಗಳನ್ನು ಕನಸಿನಲ್ಲೂ ಕಂಡರಿಯರು. ಸಂಸ್ಥಾನಗಳ ಅರಸರನ್ನೂ ಅಧಿಕಾರಿಗಳನ್ನೂ ತಲೆಬಾಗಿಸದೆ ಮಾತನಾಡಿಸುವ, ಅವರಿಂದ ಬೇಕಾದ ಕೆಲಸ ಮಾಡಿಸಿಕೊಳ್ಳುವ ಗಂಡು; ಯಾರಿಗೂ ಮಣಿಯದಿರುವ, ಏನನ್ನಾದರೂ ಸಾಧಿಸುವ ಪ್ರಕೃತಿ. ಸ್ವಾಮಿಗಳಿಗೂ ನಮಸ್ಕಾರ ಮಾಡುತ್ತಿರಲಿಲ್ಲವೆಂದು ಜನ ಆಡಿಕೊಳ್ಳುವರು!

ವೈದಿಕಮನೆತನದಲ್ಲಿ ಹುಟ್ಟಿಬೆಳೆದವರಾದುದರಿಂದ ಶಾಸ್ತ್ರಿಗಳು ಕರ್ಮ-ನಿಷ್ಠರು. ಅದರಲ್ಲೂ ವೈಭವವೇ. ಮಠದ ಸ್ವಾಮಿಗಳ ದೇವತಾಪೂಜೆ ಒಂದು ತೂಕವಾದರೆ ಶಾಸ್ತ್ರಿಗಳ ದೇವತಾಪೂಜೆ ಇನ್ನೊಂದು ತೂಕ; ಹೆಚ್ಚೂ ಕಡಮೆ ಅದೇ ಮಟ್ಟದ್ದು! ಮಠದ ಆಚಾರವೆಲ್ಲ ಅವರಿಗೆ ಕರತಲಾಮಲಕ. ಒಮ್ಮೊಮ್ಮೆ ಮಠದ ಮುಖ್ಯಪೂಜೆ ಮಾಡಲು ಸ್ವಾಮಿಗಳಿಗೆ ಅನುಕೂಲವಾಗದಾಗ, ಶಾಸ್ತ್ರಿಗಳೇ ಮಾಡಿ ಮುಗಿಸುವರು! ಅಂತೂ ಶೃಂಗೇರಿಮಠ ಈ ಕಾಲದಲ್ಲಿ ಪ್ರಸಿದ್ಧವಾದುದು, ಪ್ರಬಲವಾದುದು, ಪ್ರಭಾವಶಾಲಿಯಾದುದು ಇವರಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ತಮಿಳುನಾಡಿನ ಹಣವಂತರನ್ನು ಮಠದ ಕಡೆ

ಒಲಿಸಿಕೊಂಡು ಮಠದ ಬೊಕ್ಕಸವನ್ನು ತುಂಬುವ ಧೋರಣೆ ಮೊದಲಾದದ್ದು ಇವರಿಂದಲೇ.

ಇಂಥವರ ಮನೆಯಲ್ಲಿ ಇವರ ಆಸರೆಯಲ್ಲಿ ಬೆಳೆದ ನರಸಿಂಹ, ಮೊದಲೇ ಸಂಕೋಚಪ್ರಕೃತಿಯವನು, ಇನ್ನಷ್ಟು ಧರೆಗಿಳಿದುಹೋದನೆಂದರೆ ಆಶ್ಚರ್ಯ-ವೇನು ? ಅವರ ದರ್ಪದ ಅನುಭವ ಹುಡುಗನಾಗಿದ್ದಾಗ ಮಾತ್ರವಲ್ಲ, ಸ್ವಾಮಿಗಳಾದಮೇಲೂ ಧಾರಾಳವಾಗಿ ಒದಗಿಬಂತು! ಅವರು 'ಮಠದ ಶಾಲೆಗೆ ಸೇರಿಸು!' ಎಂದು ಅಪ್ಪಣೆ ಮಾಡಿದಾಗ ಗೋಪಶಾಸ್ತ್ರಿಗಳೂ ಹ್ಞೂಗುಟ್ಟಿದ್ದರು, ಹುಡುಗನೂ ಒಪ್ಪಿಕೊಂಡ. ಬೇರೆ ದಾರಿಯೆಲ್ಲಿದೆ? ಅವರ ಆಸೆ ಬೆಳಗಿನ ಮಂಜಿನಂತೆ ಕರಗಿಹೋಯಿತು.

# ೪. ಕವಲುದಾರಿ

ನರಸಿಂಹ ತನ್ನೂರಾದ ಶೃಂಗೇರಿಯಲ್ಲೇ ಇದ್ದುಕೊಂಡು ಮಠದ 'ಸದ್ವಿದ್ಯಾಸಂಜೀವಿನೀ' ಶಾಲೆಗೆ ಸೇರಿ ಸಂಸ್ಕೃತ, ತರ್ಕಶಾಸ್ತ್ರಗಳನ್ನು ಕಲಿಯ ತೊಡಗಿದನು. ವೇದಾಂತಕ್ಕೆ ಸಿದ್ಧತೆಯಾಗಿ ತರ್ಕಶಾಸ್ತ್ರವನ್ನು ಕಲಿಯಬೇಕು. ಆಗ ಆ ಶಾಲೆಯಲ್ಲಿ ಒಮ್ಮೊಮ್ಮೆ ಸ್ವಾಮಿಗಳೇ ಪಾಠ ಹೇಳುವರು; ಉಳಿದಂತೆ ಬೇರೆ ಪಂಡಿತರಿದ್ದರು. ಸ್ವಾಮಿಗಳು ಊರಲ್ಲಿದ್ದಾಗ ದಿನವೂ ಶಾಲೆಗೆ ಬಂದು ವಿದ್ಯಾರ್ಥಿಗಳ, ಅಧ್ಯಾಪಕರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುವರು. ಈ ಸಂದರ್ಭದಲ್ಲಿ ನರಸಿಂಹನ ವಿನಯ, ವಿಧೇಯತೆ, ಶಾಂತ ಸ್ವಭಾವ, ವ್ಯಾಸಂಗದಲ್ಲಿ ಶ್ರದ್ಧೆ, ಶಾಸ್ತ್ರಾಭ್ಯಾಸದಲ್ಲಿ ಅಭಿರುಚಿ, ಗುರುದೇವತಾ ಭಕ್ತಿ ಮೊದಲಾದ ಗುಣಗಳನ್ನು ಸ್ವಾಮಿಗಳು ಗಮನಿಸಿದ್ದರಂತೆ. ಅವನಿಗೆ ಆಗಲೇ ನರಸಿಂಹಮಂತ್ರವನ್ನು ಉಪದೇಶಿಸಿದ್ದರೆಂದೂ ಹೇಳುತ್ತಾರೆ. ಇವೆಲ್ಲ ಖಚಿತವಾಗಿ ತಿಳಿಯದು.

ನರಸಿಂಹ ಶಾಲೆಗೆ ಸೇರಿದ ತರುಣದಲ್ಲೇ (೧೯೦೭ರಲ್ಲಿ) ಸ್ವಾಮಿಗಳು ಸಂಚಾರ ಹೊರಡಬೇಕಾಯಿತು. ಕಾಲಡಿಯಲ್ಲಿ ಶಂಕರಾಚಾರ್ಯರ ಜನ್ಮಸ್ಥಳ ವನ್ನು ತಿರುವಾಂಕೂರು ಸರಕಾರದಿಂದ ಪಡೆದುಕೊಂಡು ಶಾರದೆಗೊಂದು ಶಂಕರರಿಗೊಂದು ಎಂದು ಎರಡು ಆಲಯಗಳನ್ನು ಕಟ್ಟಿಸಿ, ಸ್ವಾಮಿಗಳು ಮೂರ್ತಿ ಪ್ರತಿಷ್ಠೆಯನ್ನೂ ಆಲಯಗಳ ಕುಂಭಾಭಿಷೇಕವನ್ನೂ ನಡೆಸಿದ ವಿಚಾರ ಆಗಲೇ ಬಂದಿದೆ.

ಆಗ ಸ್ವಾಮಿಗಳ ಜೊತೆಗೆ ಹೊರಟ ಪರಿವಾರದಲ್ಲಿ ಕುಣಿಗಲ್ಲು ರಾಮ ಶಾಸ್ತ್ರಿಗಳೂ ಇದ್ದರು. ಇವರು ಆಮೇಲೆ ಬರೆದ ಲೇಖನವೊಂದರಲ್ಲಿ, ಸ್ವಾಮಿಗಳು ಸಂಚಾರದಲ್ಲಿರುವಾಗಲೂ ಶೃಂಗೇರಿಯ ಪಾಠಶಾಲೆಯ ವಿದ್ಯಾರ್ಥಿಗಳ

ವಾರ್ಷಿಕ ಪರೀಕ್ಷೆಯ ಉತ್ತರಪತ್ರಿಕೆಗಳನ್ನು ನೋಡುತ್ತಿದ್ದರೆಂದೂ ನರಸಿಂಹನ ಉತ್ತರ ಪತ್ರಿಕೆಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರೆಂದೂ ಬರೆದಿದ್ದಾರೆ. ನರಸಿಂಹನ ಉತ್ತರಗಳು ಪ್ರಶ್ನೆಗೆ ತಕ್ಕಷ್ಟೇ ಇರುತ್ತಿದ್ದುವಂತೆ; ಅತಿಯಾಗಿ ಬರೆಯುವ ಗೋಜಿಗೆ ಹೋಗುತ್ತಿರಲಿಲ್ಲವಂತೆ; ವಿಷಯ ನಿರೂಪಣೆ ನಿಖರ ವಾಗಿ, ಸರಳವಾಗಿ, ಸಮಗ್ರವಾಗಿ ಇರುತ್ತಿದ್ದಿತಂತೆ.

ಹೀಗೆ ನರಸಿಂಹನ ಓದು ಶೃಂಗೇರಿಯ ಮಠದ ಶಾಲೆಯಲ್ಲಿಯೇ ಮೂರು ವರ್ಷಗಳು ನಡೆದುವು. ಅದೇ ವೇಳೆಗೆ ಸ್ವಾಮಿಗಳು ಕಾಲಡಿ ಪ್ರವಾಸವನ್ನು ಮುಗಿಸಿಕೊಂಡು ಶೃಂಗೇರಿಗೆ ಹಿಂದಿರುಗಿದರು. ಬರುವಾಗ ದಾರಿಯಲ್ಲಿ ಬೆಂಗಳೂರಿಗೆ ಬಂದಿದ್ದು ಅಲ್ಲಿನ ಶಂಕರಮಠದಲ್ಲಿ ವೇದಾಂತದ ಶಿಕ್ಷಣಕ್ಕೆಂದು 'ಗೀರ್ವಾಣಪ್ರೌಢವಿದ್ಯಾಭಿವರ್ಧಿನೀ'ಯೆಂಬ ಹೆಸರಿನಿಂದ ಶಾಲೆಯೊಂದನ್ನು ವ್ಯವಸ್ಥೆ ಮಾಡಿದ ವಿಚಾರವನ್ನು ಈಗಾಗಲೇ ಹೇಳಿದೆ. ಸ್ವಾಮಿಗಳಿಗೆ ಈ ಶಾಲೆಗೂ ವಿದ್ಯಾರ್ಥಿಗಳನ್ನು ಕಲೆಹಾಕುವುದೇ ಮತ್ತೆ ಸಮಸ್ಯೆಯಾಗಿತ್ತು. ಶೃಂಗೇರಿಗೆ ಹಿಂದಿರುಗಿದೊಡನೆ, ನರಸಿಂಹನು ತರ್ಕಶಾಸ್ತ್ರವನ್ನು ಮೂರು ವರ್ಷ ಕಲಿತನೆಂಬುದನ್ನು ತಿಳಿದು, ಮುಂದೆ ವೇದಾಂತಕ್ಕೆ ಅನುಕೂಲವಾಗುವ ಪೂರ್ವಮೀಮಾಂಸಾಶಾಸ್ತ್ರವನ್ನು ಕಲಿಯಲು ಬೆಂಗಳೂರಿನ 'ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ'ಶಾಲೆಗೆ ಹೋಗುವಂತೆ ಅಪ್ಪಣೆ ಮಾಡಿದರು.

ತಂದೆತಾಯಿಯರಿಗೆ ಮತ್ತೆ ಇಕ್ಕಟ್ಟಿನ ಪರಿಸ್ಥಿತಿ. ಇಷ್ಟು ದಿವಸ ಮಗ ತಮ್ಮೊಂದಿಗೆ ಊರಲ್ಲೇ ಇರುತ್ತಾನೆಂದು ಸಮಾಧಾನವನ್ನು ತಂದುಕೊಂಡಿದ್ದರು. ಈಗ ಅವನು ಓದಿಗೆಂದು ದೂರದ ಬೆಂಗಳೂರಿಗೆ ಹೋಗಿಬಿಟ್ಟರೆ ತಮ್ಮ ಗತಿಯೇನು? ಅವನನ್ನು ಬೆಂಗಳೂರಿಗೆ ಕಳುಹಿಸುವುದು ಬೇಡವೆಂದು ತಾಯಿ ಗೋಗರೆದಳು, ಹಟ ಮಾಡಿದಳು; ತಂದೆಯೂ ತಮ್ಮ ಅಳಲನ್ನು ಶ್ರೀಕಂಠಶಾಸ್ತ್ರಿಗಳ ಮುಂದೆ ತೋಡಿಕೊಂಡರು. ಆಗ ಸಮಸ್ಯೆಗೆ ಪರಿಹಾರ-ವೆಂಬಂತೆ, ತಂದೆತಾಯಿಯರೂ ಮಗನೊಂದಿಗೆ ಬೆಂಗಳೂರಿಗೇ ಹೋಗಿ, ಶಂಕರಮಠದ ಆವರಣದಲ್ಲೇ ಮನೆಯೊಂದರಲ್ಲಿ ಇರುವುದೆಂದು ಏರ್ಪಾಡಾಯಿತು. ಇದು ೧೯೧೧ರ ಮಾರ್ಚ್ ತಿಂಗಳಲ್ಲಿ ಸ್ವಾಮಿಗಳು ಶೃಂಗೇರಿಗೆ ಹಿಂದಿರುಗಿದೊಡನೆ ನಡೆದದ್ದು.

ಮುಂದೆ ಸುಮಾರು ಒಂದು ವರ್ಷಕಾಲ ನರಸಿಂಹನಿಗೆ ಬೆಂಗಳೂರು ವಾಸ. ಶಂಕರಮಠದ ಹಿಂಬದಿಯ ಅಗ್ರಹಾರದಲ್ಲಿ ದಿವಾನ್ ಮಾಧವ ರಾಯರು ಶಾಲೆಯ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆಂದು ಕಟ್ಟಿಸಿದ್ದ ಕೆಲವು ಮನೆಗಳಿದ್ದುವು. ಒಂದರಲ್ಲಿ ಗೋಪಶಾಸ್ತ್ರಿಗಳು, ಲಕ್ಷ್ಮಮ್ಮ, ನರಸಿಂಹ ಇರುತ್ತಿದ್ದರು. ಹಳ್ಳಿಯ ನೆಮ್ಮದಿಯ ಬದುಕನ್ನು ಬಿಟ್ಟು, ಎಂದಿನಿಂದಲೂ ನೆಲೆಸಿದ್ದ ಶೃಂಗೇರಿಯಿಂದ ಕಾಲುತೆಗೆದು, ಈ ಬೆಂಗಳೂರೆಂಬ ಘೋರಾರಣ್ಯಕ್ಕೆ ಬಂದುದು ಅವರಿಗೇನು ಸೊಗಸಲಿಲ್ಲ. ಆದರೆ ಮಾಡುವುದೇನು?

ಸ್ವಾಮಿಗಳು ನರಸಿಂಹನನ್ನು ಶೃಂಗೇರಿಯಿಂದ ಬೆಂಗಳೂರಿಗೆ ಕಳುಹಿಸುವಾಗ ಮೂರು ಸಂಸ್ಕೃತಶ್ಲೋಕಗಳನ್ನು ರಚಿಸಿ ಆಶೀರ್ವದಿಸಿದರು. ಸ್ವಾಮಿಗಳು ಒಂದು ದಿನ ಕಾಲಭೈರವ ದೇವಾಲಯದಲ್ಲಿದ್ದಾಗ ನರಸಿಂಹನೂ ಸೇರಿ ಮೂವರು ಬ್ರಹ್ಮಚಾರಿಗಳು ಅಲ್ಲಿಗೆ ಬಂದರೆಂದೂ, ಸ್ವಾಮಿಗಳು ಈ ಮೂರು ಶ್ಲೋಕಗಳನ್ನು ಬರೆದುಕೊಳ್ಳುವಂತೆ ಹೇಳಿದರೆಂದೂ ಒಂದು ಒಕ್ಕಣೆಯಿದೆ. ಈ ಮೂರು ಶ್ಲೋಕಗಳನ್ನು ಸ್ವಾಮಿಗಳ ಬಾಯಿಂದಲೇ ಕೇಳಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳು ಉಳಿಸಿದ್ದಾರೆ. ಅವು ಹೀಗಿವೆ:

**ಸಂಸಾರನಾಮಕಸರಿನ್ನಾಥೋತ್ತರಣೇ ತವಾಸ್ತಿ ಯದಿ ವಾಂಛಾ ।**
**ಬಾಲಕ ಶೃಣು ಮದ್ವಚನಂ ಶ್ರುತಿಮಸ್ತಕಸಂಮತಂ ಹಿತೋದರ್ಕಂ ॥ ೧ ॥**

**ಪ್ರವಿಧಾಯ ಸಶಿಖವಪನಂ ಛಿತ್ತ್ವಾ ಯಜ್ಞಾರ್ಥಮಾದೃತಂ ಸೂತ್ರಂ ।**
**ಸ್ವೀಕೃತಪಾರಮಹಂಸ್ಯಃ ಸ್ಥಿರತರಸಾಧನಚತುಷ್ಟಯೋಪೇತಃ ॥ ೨ ॥**

**ಶ್ರದ್ಧಾಭಕ್ತಿಯುತಾತ್ಮಾ ಪ್ರವಿಚಾರಯ ತತ್ತ್ವಮಾತ್ಮನಃ ಸುಚಿರಂ ।**
**ಸದ್ಗುರುಮುಖಾಂಬುಜಾತಸ್ರವದಾಗಮಶೀರ್ಷವಾಕ್ಯಪೀಯೂಷೈಃ ॥ ೩ ॥**

ಈ ಶ್ಲೋಕಗಳ ಅರ್ಥ : "ಸಂಸಾರವೆಂಬ ನದಿಯನ್ನು ದಾಟುವ ಬಯಕೆ ನಿನಗಿದ್ದರೆ, ಹಿತವನ್ನುಂಟುಮಾಡುವ, ಉಪನಿಷತ್ತಿನ ಉಪದೇಶಕ್ಕೆ ಹೊಂದಿಕೊಳ್ಳುವ ನನ್ನ ಮಾತನ್ನು ಕೇಳು. ತಲೆಗೂದಲನ್ನು ತೆಗೆದು, ಜನಿವಾರವನ್ನು ಕಡಿದು, ಸಂನ್ಯಾಸಿಯಾಗಿ, ವಿಧ್ಯುಕ್ತ ಸಾಧನಚತುಷ್ಟಯಗಳನ್ನು ಗಟ್ಟಿಮಾಡಿ- ಕೊಂಡು, ಶ್ರದ್ಧೆಭಕ್ತಿಗಳಿಂದ ಕೂಡಿಕೊಂಡವನಾಗಿ, ಗುರುವಿನ ಮಾತಿನಂತೆ ಆತ್ಮನನ್ನು ಅರಸು

ಇಲ್ಲಿ ಅವರು ಹೇಳಿರುವ ಗುರಿ ಆತ್ಮವಿಚಾರ; ದಾರಿ ಸಾಧನಚತುಷ್ಟಯ (ಎಂದರೆ ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗವಿರಾಗ, ಶಮಾದಿಸಾಧನಸಂಪತ್ತು ಮತ್ತು ಮುಮುಕ್ಷುತ್ವ); ಈ ನಾಲ್ಕು ಯಾವ ದಾರಿಯಲ್ಲಿ ನೆರವಾಗುವುದೋ ಅದು ಸಂನ್ಯಾಸ. ಇಪ್ಪತ್ತು ವರ್ಷ ವಯಸ್ಸಿನ ಯಾವುದೇ ಯುವಕನಿಗೆ ಮಾಡಬಹುದಾದ ಉಪದೇಶ ಇದಲ್ಲ; ವೇದಾಂತವನ್ನು ಓದಿದ ಮಾತ್ರಕ್ಕೆ ಸಂನ್ಯಾಸಿಯಾಗಬೇಕೆಂಬ ನಿಯಮವೂ ಇಲ್ಲ, ಮೇಲಾಗಿ ಸಂನ್ಯಾಸಿಯಾಗಲು ಅಗತ್ಯವಾಗಿ ಬೇಕಾದ ವಿರಕ್ತಿ ತಾನಾಗಿ ಬರಬೇಕು, ಯಾರ ಉಪದೇಶದಿಂದಲೂ ಬರತಕ್ಕದ್ದಲ್ಲವಷ್ಟೆ? ಎಂದಮೇಲೆ, ಸ್ವಾಮಿಗಳು ಹೀಗೇಕೆ ಉಪದೇಶ ಮಾಡಿದರು? ಇದೇನು ಅವರು ಎಲ್ಲರಿಗೂ ಮಾಡುತ್ತಿದ್ದ ಉಪದೇಶವಲ್ಲ. ನರಸಿಂಹನ ಸ್ವಭಾವವನ್ನೂ ಚರ್ಯೆಯನ್ನೂ ಗಮನಿಸಿದ್ದ ಅವರು ಅವನ ವ್ಯಾಸಂಗತತ್ಪರತೆಯನ್ನೂ ವಿಚಾರಶಕ್ತಿಯನ್ನೂ ಅರಿತುಕೊಂಡು ಅವನನ್ನು ತಮ್ಮ ಉತ್ತರಾಧಿಕಾರಿಯೆಂದು ಮನಸ್ಸಿನಲ್ಲೇ ನಿಶ್ಚಯಿಸಿಕೊಂಡಿದ್ದರೆಂದು ಅವರನ್ನು ಚೆನ್ನಾಗಿ ಬಲ್ಲ ಕುಣಿಗಲ್ಲು ರಾಮಶಾಸ್ತ್ರಿಗಳು ಬರೆದಿದ್ದಾರೆ. ನರಸಿಂಹನ ಸ್ವಭಾವದಲ್ಲಿ ವಿರಕ್ತಿಯಿದ್ದಿತೋ ಇಲ್ಲವೋ ತಿಳಿಯದು, ಲೌಕಿಕಪ್ರಸಕ್ತಿಯಂತೂ ಇರಲಿಲ್ಲ; ಯಾವ ವ್ಯವಹಾರಕ್ಕೂ ಅಂಟಿಕೊಳ್ಳದ ಮುಗ್ಧತೆಯಿದ್ದಿತು, ಪರಾಙ್ಮುಖತೆಯಿದ್ದಿತು. ವೇದಾಂತವನ್ನು ಕಲಿಯುವುದು ಹೇಳುವುದಕ್ಕಲ್ಲ, ಬರೆಯುವುದಕ್ಕಲ್ಲ, ಬದುಕಿಗಾಗಿ ಎನ್ನುವ ನಿಷ್ಠೆಯೂ ಇದ್ದಿತು. ಸಂನ್ಯಾಸಿಗೆ ಇರಬೇಕಾದ ಸಹನೆ, ಸಮತ್ವ, ಪರಮಾರ್ಥಶ್ರದ್ಧೆ, ಏಕಾಂತಪ್ರೀತಿ — ಇವು ಅವನಿಗೆ ಆಗಲೇ ಇದ್ದುವು.

ಸ್ವಾಮಿಗಳ ಸ್ವಭಾವದಲ್ಲೂ ಈಗ ಒಂದು ಮಾರ್ಪಾಟು ಒದಗಿದ್ದಂತೆ ತೋರುತ್ತದೆ. ಮೊದಮೊದಲು ಅವರೂ ವ್ಯವಹಾರದಲ್ಲೇ ಸಂಚಾರದಲ್ಲೇ ಇದ್ದವರು; ವೈಭವ, ಒಡ್ಡೋಲಗ, ಅಧಿಕಾರಿಗಳ ಸಂಪರ್ಕ, ಅರಸರ ಸಹವಾಸ ಇವೆಲ್ಲವನ್ನೂ ಬಯಸಿದ್ದವರು. ಮಠದ ಮರ್ಯಾದೆಯನ್ನು ಕಾಪಾಡಬೇಕೆನ್ನುವ ಕಾತರವೇ ಇದಕ್ಕೆ ಕಾರಣವಿದ್ದಿರಬಹುದು, ಮಠದ ಭಂಡಾರವನ್ನು ಬೆಳೆಸಬೇಕೆನ್ನುವ ಹೊಣೆಯ ಅರಿವೂ ಕಾರಣವಾಗಿರಬಹುದು. ಅವರನ್ನು ಜನ ರಾಜಯೋಗಿಗಳೆಂದು ಗುರುತಿಸಿದರು, ಎಂದರೆ ರಜೋಗುಣದ ಅಂಶ ಅವರಲ್ಲಿ ಇಲ್ಲದೆ ಇರಲಿಲ್ಲ. ಆದರೆ ಕಡೆಯ ಬಾರಿ ಸಂಚಾರ ಹೊರಟ

ಕಾಲಡಿಯಾತ್ರೆಯನ್ನು ಮುಗಿಸಿಕೊಂಡು ಶೃಂಗೇರಿಗೆ ಹಿಂದಿರುಗಿದಾಗ ಅವರಲ್ಲಿ ವಿರಕ್ತಿ ದಿಟವಾಗಿ ಮೂಡಿದ್ದಿತು. ವಿರಕ್ತಿ ಮೊದಲು ಇರಲಿಲ್ಲವೆಂದಲ್ಲ; ಮಠಾಧಿಪತಿಯಾದವರಿಗೆ ವಿರಕ್ತಿ ಸುಲಭಸಾಧ್ಯವಲ್ಲ. ಅವರು ೧೯೧೮ ಕ್ಕೆ ಮೊದಲೇ ತುಂಗಾನದಿಯ ಆಚೆದಡದ ಮೇಲೆ ನಿರ್ಜನವಾದ ಕಾಡಿನ ನಡುವೆ ತಮ್ಮ ಗುರುಗಳ ಹೆಸರಿನಲ್ಲಿ 'ನರಸಿಂಹವನ'ವನ್ನು ಏರ್ಪಡಿಸಿ ಅಲ್ಲಿ ತಮ್ಮ ತಪಶ್ಚರ್ಯೆಯನ್ನು ನಿರಾತಂಕವಾಗಿ ನಡೆಸುವುದೆಂದು ನಿಶ್ಚಯಿಸಿಕೊಂಡಿದ್ದರು. ಆದರೆ ಮಹಾರಾಜರು ಬಂದರು, ಬ್ರಿಟಿಷ್ ರೆಸಿಡೆಂಟ್ ಬಂದರು, ತಿರುವಾಂಕೂರಿನ ಅಧಿಕಾರಿಗಳು ಬಂದರು, ಬರೋಡದ ಅರಸರು ಯಾರನ್ನೋ ಕಳುಹಿಸಿದರು, ನಾಟ್ಟುಕ್ಕೋಟೆ ಚೆಟ್ಟಿಯಾರರು ಬಂದರು, ಚಾತುರ್ಮಾಸ್ಯ ಬಂದಿತು, ಭಕ್ತರು ನೆರೆದರು–ಇನ್ನು ನರಸಿಂಹವನದಲ್ಲಿ ಏಕಾಂತವಾಸ ಎಲ್ಲಿ ಬಂತು ? ಸರಿ, ಕಾಲಡಿಯಿಂದ ಕರೆಬಂತು, ಸಂಚಾರ ಹೊರಡಬೇಕು ! ಅಲ್ಲಿ ಆಲಯ, ಪ್ರತಿಷ್ಠೆ, ಕುಂಭಾಭಿಷೇಕ, ಅರಸರ ಆಗಮನ, ಅಧಿಕಾರಿಗಳ ಸಂಭ್ರಮ, ಪೂಜೆ, ಉತ್ಸವ, ಸಭೆ, ಸಮಾರಂಭ, ಜನಸ್ತೋಮ — ವಿರಕ್ತಿಗೆ ಅವಕಾಶ ಎಲ್ಲಿ?

ಸ್ವಾಮಿಗಳಿಗೆ ಸ್ವಭಾವದಿಂದಲೂ ಸಂಸ್ಕಾರದಿಂದಲೂ ಬಂದ ವಿರಕ್ತಿ ಇದ್ದರೂ ಅಧಿಕಾರಿಗಳು, ಭಕ್ತರು ಬಿಡಬೇಕಲ್ಲ? ಅದೂ ಶ್ರೀಕಂಠಶಾಸ್ತ್ರಿಯಂಥವರು ಸರ್ವಾಧಿಕಾರಿಯಾಗಿರುವಾಗ ಅವರ ಉತ್ಸಾಹ, ಸಾಹಸ, ವ್ಯವಹಾರ ಕೌಶಲ್ಯ, ಆಡಂಭರಗಳ ನಡುವೆ ಸ್ವಾಮಿಗಳ ವಿರಕ್ತಿ ಯಾವ ಮೂಲೆಯಲ್ಲೋ! ತಮ್ಮ ಗುರುಗಳು ಮಾಡಬೇಕೆಂದಿದ್ದುದನ್ನೇ ಮುಂದೆ ಚಂದ್ರಶೇಖರಭಾರತಿಸ್ವಾಮಿಗಳು ಮಾಡಿದಾಗ (ಎಂದರೆ ನರಸಿಂಹವನದಲ್ಲಿ ಏಕಾಂತವಾಸವನ್ನೇ ಗಟ್ಟಿಯಾಗಿ ಹಿಡಿದಾಗ) ಅಧಿಕಾರಿಗಳ ಕಣ್ಣಿಗೆ, ಭಕ್ತರ ಕಣ್ಣಿಗೆ, ಅವರು ಹುಚ್ಚರಂತೆ ಕಂಡರು ತಾನೆ! ಅದು ಮುಂದಿನ ಮಾತು.

ಗುರುಗಳಲ್ಲಾದ ಮಾರ್ಪಾಟನ್ನು ಆಗ ಇನ್ನೂ ಹುಡುಗರಾಗಿದ್ದು ಬೆಂಗಳೂರಿನಲ್ಲಿದ್ದ ಸ್ವಾಮಿಗಳು ಅದು ಹೇಗೋ ಗ್ರಹಿಸಿದ್ದರು. ಅವರ ಅನಂತರದ ರಚನೆಯೊಂದು ಇದನ್ನು ಸೂಚಿಸುತ್ತದೆ. ಗುರುಗಳನ್ನು ಕುರಿತು —

**ತುಂಗಾತೀರಲಸತ್ತಪೋವನಭುವಿಸ್ವೈರಂ ಚರನ್ನನ್ವಹಂ**
**ಗಂಗಾವಾರಿಲಸಜ್ಜಟಾವಿಲಸಿತಂ ಚಿತ್ತೇ ಮುದಾ ಭಾವಯನ್ ।**

ತುಂಗಾನಂದವಿಧಾಯಕಃ ಪ್ರಣಮತಾಂ ಶೃಂಗಾದ್ರಿವಾಸಪ್ರಿಯಃ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ ನಾಮ್ನಾಯತೇ ॥

''ತುಂಗೆಯ ಆಚೆ ದಡದಲ್ಲಿ (ನರಸಿಂಹವನದಲ್ಲಿ) ತಪೋವನ-ವನ್ನೇರ್ಪಡಿಸಿಕೊಂಡು ಅಲ್ಲಿಯೇ ಜಟೆಯಲ್ಲಿ ಗಂಗೆಯನ್ನುಳ್ಳ ಶಿವನನ್ನು ಮನಸ್ಸಿನಲ್ಲಿ ಸಂತಸದಿಂದ ಚಿಂತಿಸುತ್ತ, ಮನಬಂದಂತೆ ತಿರುಗಾಡುವರು. ತಮ್ಮ ಬಳಿ ಬಂದವರಿಗೆ ಹೆಚ್ಚಿನ ಆನಂದವನ್ನು ನೀಡುವರು. ಶೃಂಗೇರಿಯಲ್ಲೇ ಇರಲು ಇಚ್ಛಿಸುವವರು. ಅವರೇ ನನ್ನ ಗುರು; ಬೇರೆಯವರ ಹೆಸರನ್ನು ಕೂಡ ಹಿಡಿಯಲಾರೆ.''

ಅಂತೂ ಸ್ವಾಮಿಗಳು ಕಾಲಡಿಯಿಂದ ಶೃಂಗೇರಿಗೆ ೧೯೧೧ರ ಮಾರ್ಚ್ ತಿಂಗಳಲ್ಲಿ ಹಿಂದಿರುಗಿದಾಗ ಅವರ ಆರೋಗ್ಯವೂ ಕೆಟ್ಟಿದ್ದಿತು, ಮನಸ್ಸಿಗೂ ಬೇಸರವಾಗಿದ್ದಿತು. ಎಡೆಬಿಡದ ಲೋಕವ್ಯವಹಾರದಿಂದ ತುಂಬ ಬಳಲಿದ್ದರು. ಐವತ್ತುಮೂರು ವರ್ಷ ವಯಸ್ಸಿನಲ್ಲೇ ಮುಪ್ಪಡರಿದ್ದಿತು. ಮುಂದೆ ಒಂದು ವರ್ಷ ಬದುಕಿದ್ದರಷ್ಟೆ! ಆ ವರ್ಷ ಅವರು ಶೃಂಗೇರಿಯನ್ನು ಬಿಟ್ಟು ಕದಲುವ ಯೋಚನೆ ಮಾಡಲಿಲ್ಲ; ನದಿಯ ಆಚೆ ನರಸಿಂಹವನದಲ್ಲೇ ಹೆಚ್ಚುಕಾಲ ಕಳೆಯುತ್ತಿದ್ದರು. ಈ ಮಾರ್ಪಾಡು ಶೃಂಗೇರಿಗೆ ಹಿಂದಿರುಗಿದ ತರುಣದಲ್ಲೇ ಕಾಣಿಸಿಕೊಂಡಿತು. ಆಗಲೇ ಅವರು ನರಸಿಂಹನಿಗೆ ಮೇಲೆ ಕಾಣಿಸಿದ ಮೂರು ಶ್ಲೋಕಗಳನ್ನು ಆಶೀರ್ವಾದರೂಪವಾಗಿ ರಚಿಸಿಕೊಟ್ಟದ್ದು. ಆಗ ಅವರ ಮನಸ್ಸಿನಲ್ಲಿ ಮುಖ್ಯವಾಗಿ ಕಾಣಿಸಿದ ರಸ ವಿರಕ್ತಿಯದು; ಸಂನ್ಯಾಸಿಗೆ ಒಪ್ಪುವಂಥ ಧರ್ಮ. ತಮ್ಮ ಉತ್ತರಾಧಿಕಾರಿಯಾಗುವ ನರಸಿಂಹನಿಗಾದರೂ ಇದು ಕೈಗೂಡಲಿ ಎಂದು ಅವರ ಬಯಕೆಯೋ ಏನೋ.

ಈ ವಿಚಾರವಾಗಿ ಇನ್ನೂ ಒಂದು ನಿದರ್ಶನವನ್ನು ಸೂಚಿಸುತ್ತಾರೆ. ಶೃಂಗೇರಿ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಸುಂದರಶ್ರೌತಿಗಳು ತಮ್ಮ ಮಗಳಿಗೆ ನರಸಿಂಹನನ್ನು ತಂದುಕೊಳ್ಳುವ ಯೋಚನೆಮಾಡಿ, ಅವನ ತಂದೆತಾಯಿಯರೊಂದಿಗೆ ಪ್ರಸ್ತಾಪಿಸಿ ಅವರ ಸಮ್ಮತಿಯನ್ನು ಪಡೆದುಕೊಂಡು, ಸ್ವಾಮಿಗಳಿಗೆ ಅರಿಕೆ ಮಾಡಿಕೊಳ್ಳಲು ಮಧುರೆ ಜಿಲ್ಲೆಯ ಮೇಲಮಂಗಲ ಎಂಬ ಊರಿಗೆ ಬಂದರಂತೆ. ಸ್ವಾಮಿಗಳು ಸಂಚಾರಕ್ರಮದಲ್ಲಿ ಅಲ್ಲಿದ್ದರು. ಹುಡುಗಿಯ

ತಂದೆ ಸ್ವಾಮಿಗಳನ್ನು ಕಂಡು ಈ ವಿಚಾರವನ್ನು ಹೇಳಿದಾಗ, ಸ್ವಾಮಿಗಳು ''ನರಸಿಂಹನು ಬೇಡ, ಅವನ ದಾರಿ ಬೇರೆ. ಬೇರೆ ಹುಡುಗನನ್ನು ನೋಡು'' ಎಂದು ಹೇಳಿಬಿಟ್ಟರಂತೆ. ಎಂದರೆ ನರಸಿಂಹನ ಮುಂದಿನ ದಾರಿಯನ್ನು ಸ್ವಾಮಿಗಳು ಆಗಲೇ ನಿರ್ಧರಿಸಿದ್ದರೆಂದು ಈ ಪ್ರಸಂಗ ಸೂಚಿಸುತ್ತದೆ.

ಇದೇ ಸಮಯದಲ್ಲಿಯೇ ಸ್ವಾಮಿಗಳು ರಚಿಸಿದ ದೇವೀಸ್ತೋತ್ರ-ವೊಂದರಲ್ಲಿ ''ನನ್ನಲ್ಲಿ ನಮ್ರನಾಗಿರುವ ನರಸಿಂಹನನ್ನು ಸರ್ವಜ್ಞನನ್ನಾಗಿ ಮಾಡು'' **(ಸರ್ವಜ್ಞಂ ಶ್ರೀನೃಸಿಂಹಂ ಕುರು ಶಿವದಯಿತೇ ಸತ್ವರಂ ಮದ್ವಿನಮ್ರಂ)** ಎನ್ನುವ ಮಾತನ್ನು ಕಾಣಬಹುದು. ಇಲ್ಲಿ ಅವರು ಪ್ರಸ್ತಾಪಿಸಿರುವ ನರಸಿಂಹ ಯಾರೆಂದು ಸ್ಪಷ್ಟವಾಗಿರದಿದ್ದರೂ ಈ ನರಸಿಂಹನೇ ಎಂಬ ಸೂಚನೆ ಬಲವಾಗುತ್ತದೆ. ಮೊದಲಿನಿಂದ ಇವನನ್ನೇ ಸ್ವಾಮಿಗಳು ಮನಸ್ಸಿನಲ್ಲಿಟ್ಟುಕೊಂಡಿದ್ದರೆಂದು ಅವರನ್ನು ಚೆನ್ನಾಗಿ ಬಲ್ಲವರಾಗಿದ್ದ, ಅವರ ಆಪ್ತವರ್ಗಕ್ಕೆ ಸೇರಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳು ಬರೆದಿದ್ದಾರೆ. ಮೇಲಿನ ಮೂರು ಶ್ಲೋಕಗಳಲ್ಲಿ ಸಂನ್ಯಾಸವೇ ಅವನಿಗೆ ಉಚಿತವಾದ ದಾರಿ ಎಂದು ಬಿಡಿಸಿ ಹೇಳಿರುವುದನ್ನು ಗಮನಿಸಬೇಕು. ಶ್ಲೋಕಗಳ ಭಾವವನ್ನು ಗ್ರಹಿಸಿ ನರಸಿಂಹನೂ ತಾನು ಮುಂದೆ ಸಂನ್ಯಾಸಿಯಾಗಲೇಬೇಕೆಂದು ನಿರ್ಧರಿಸಿದ್ದನೆಂದು ಹೇಳುತ್ತಾರೆ; ಆದರೆ ಅವರ ಉತ್ತರಾಧಿಕಾರಿಯಾಗುವ, ಮಠಾಧಿಪತಿಯಾಗುವ ಸಂಭವವನ್ನೇನೂ ಅವನು ಊಹಿಸಿರಲಿಲ್ಲ.

# ೫. ಪೀಠಾಧಿಪತಿ

ನರಸಿಂಹನು ಬೆಂಗಳೂರು ಶಂಕರಮಠದ ಶಾಲೆಯಲ್ಲಿ ಒಂದು ವರ್ಷ ಇದ್ದನೋ ಇಲ್ಲವೋ, ಮತ್ತೆ ಶೃಂಗೇರಿಗೆ ಬರಬೇಕಾಯಿತು. ಶೃಂಗೇರಿಯಿಂದ ವಿದ್ಯಾರ್ಥಿಯಾಗಿ ಹೊರಟವನು ಜಗದ್ಗುರುಪೀಠಕ್ಕೆ ಉತ್ತರಾಧಿಕಾರಿಯಾಗಿ ಹಿಂದಿರುಗುವ ಅಗತ್ಯ ಬಿದ್ದಿತು. ಅದು ನಡೆದದ್ದು ಹೀಗೆ:

ಕಾಲಡಿಯಿಂದ ಸ್ವಾಮಿಗಳು ಹಿಂದಿರುಗುವಾಗ ದೇಹಾರೋಗ್ಯ ಕೆಟ್ಟಿತು. ಬೆಂಗಳೂರಿನ ಬಳಿ ನಂದಿಬೆಟ್ಟದಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಂಡು, ತಡ ಮಾಡದೆ ಶೃಂಗೇರಿಗೆ ಬಂದರು. ಬಂದಮೇಲೆ ಆರೋಗ್ಯ ಸುಧಾರಿಸಲಿಲ್ಲ, ಬರುಬರುತ್ತ

ಕೆಡುತ್ತಲೇ ಇದ್ದು ೧೯೧೨ ರ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ತಮ್ಮ ಸಾವು ಹತ್ತಿರ ಬಂದಿತೆಂದು ಕಂಡುಕೊಂಡರು. ಉತ್ತರಾಧಿಕಾರಿಯನ್ನು ಒಡನೆಯೇ ನೇಮಿಸಬೇಕೆಂದು ನಿಶ್ಚಯಿಸಿ, ತಾವು ಮೊದಲೇ ಮನಸ್ಸಿನಲ್ಲಿ ಮಾಡಿಕೊಂಡಿದ್ದಂತೆ ನರಸಿಂಹನನ್ನು ಬೆಂಗಳೂರಿನಿಂದ ಶೃಂಗೇರಿಗೆ ಕರೆತರಲು ತಮ್ಮ ಆಪ್ತರೂ ವಿದ್ವಾಂಸರೂ ಅರಮನೆಯ ಧರ್ಮಾಧಿಕಾರಿಗಳೂ ಆಗಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳಿಗೆ ಅಪ್ಪಣೆ ಮಾಡಿದರು. ಮೊದಲೇ ಸ್ವಾಮಿಗಳು ತಮ್ಮ ಮನೋರಥವನ್ನು ಈ ಶಾಸ್ತ್ರಿಗಳಿಗೆ ತಿಳಿಸಿದ್ದರಂತೆ; ಹಾಗೆಂದು ಶಾಸ್ತ್ರಿಗಳೇ ಬರೆದಿದ್ದಾರೆ. ಆದರೆ ಈ ಸಂಗತಿ ಬೇರೆ ಯಾರಿಗೂ ತಿಳಿದಿರಲಿಲ್ಲ.

ಶೃಂಗೇರಿಯ ಧರ್ಮಪೀಠದ ಉತ್ತರಾಧಿಕಾರದ ಪ್ರಶ್ನೆ ಬಂದಾಗ, ನಾಡಿನ ಒಡೆಯರಾದ ಮೈಸೂರು ಮಹಾರಾಜರ ಸಮ್ಮತಿಯೂ ಅಗತ್ಯವಾಗಿದ್ದಿತು. ಇದಕ್ಕೆ ಹಿನ್ನೆಲೆಯಾಗಿ ಒಂದೆರೆಡು ಮಾತುಗಳನ್ನು ಹೇಳಬೇಕು. ಶೃಂಗೇರಿಮಠವು ವ್ಯವಸ್ಥಿತವಾದದ್ದು ವಿಜಯನಗರಸಾಮ್ರಾಜ್ಯದ ನೆರಳಿನಲ್ಲಿ. ಸಂಗಮನ ಮಗ ಹಕ್ಕ (ಮೊದಲನೆಯ ಹರಿಹರ) ೧೩೪೬ರಲ್ಲಿ ಶೃಂಗೇರಿಗೆ ಬಂದಿದ್ದ. ಅಲ್ಲಿ ಮಠವೊಂದರ ಸ್ಥಾಪನೆಗೆ ಕಾರಣನಾದದ್ದು ಶಾಸನದಲ್ಲಿ ಬಂದಿದೆ. ೧೩೫೬ರಲ್ಲಿ ಮೊದಲನೆಯ ಬುಕ್ಕನ ಕಾಲದಲ್ಲಿ ಭಾರತೀತೀರ್ಥರು ಅಲ್ಲಿ ವಿದ್ಯಾಶಂಕರ ದೇವಾಲಯವನ್ನು ಕಟ್ಟಿಸಿದುದೂ ಹಾಗೆಯೇ ತಿಳಿದುಬರುತ್ತದೆ; ಗುರುಗಳಾದ ವಿದ್ಯಾತೀರ್ಥರ ನೆನಪಿನಲ್ಲಿ ಆದದ್ದು ಇದು. ಇಮ್ಮಡಿ ಹರಿಹರನು ತನ್ನ ಗುರುಗಳಾದ ವಿದ್ಯಾರಣ್ಯರು ೧೩೮೬ರಲ್ಲಿ ತೀರಿಕೊಂಡಂದು ವಿದ್ಯಾರಣ್ಯಪುರವೆಂಬ ಅಗ್ರಹಾರವನ್ನು ಏರ್ಪಡಿಸಿದನು; ಶೃಂಗೇರಿಯ ನೆರೆಯಲ್ಲಿಯೆ ಇರುವ ಊರು ಇದು.

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಮರೆಯಾದಮೇಲೆ ಶೃಂಗೇರಿಯ ಪ್ರಾಬಲ್ಯವು ಕುಗ್ಗಿತು. ಮಠದ ಸ್ವತ್ತನ್ನೆಲ್ಲ ಬೇರೆಯವರು ದಕ್ಕಿಸಿಕೊಂಡರು. ವಿಜಯನಗರದ ಕಡೆಯ ಅರಸ ಸದಾಶಿವರಾಯನ ಸಾಮಂತನಾಗಿ ಕೆಳದಿಯನ್ನು ಆಳುತ್ತಿದ್ದ ವೆಂಕಟಪ್ಪನಾಯಕನ ಕಾಲದಲ್ಲಿ ಮಠದ ಗುಡಿಯೂ ನೆಲೆಗಾಣದೆ ಹೋಯಿತು. ಅವನು ೧೬೨೧ರಲ್ಲಿ 'ಪುನರ್ ಪ್ರತಿಷ್ಠೆಯಂ' ಮಾಡಿದನೆಂಬ ಉಲ್ಲೇಖವಿದೆ. ಮುಂದೆ ಮಠಕ್ಕೆ ಮತ್ತೆ ತೊಂದರೆಗಳು ಒದಗಲು

೧೬೫೨ರಲ್ಲಿ ಸಚ್ಚಿದಾನಂದಭಾರತೀಸ್ವಾಮಿಗಳು (೧೬೨೯- ೧೬೬೨) ಬೇದನೂರಿನ ಶಿವಪ್ಪನಾಯಕನಿಗೆ ಮನವಿ ಮಾಡಿಕೊಂಡರು. ಆತ ವಿಚಾರಣೆ ನಡೆಯಿಸಿ ಪರಭಾರೆಯಾಗಿದ್ದ ಆಸ್ತಿಯನ್ನು ಮತ್ತೆ ಮಠಕ್ಕೆ ಕೊಡಿಸಿಕೊಟ್ಟನು. ಮೈಸೂರಿನ ಹೈದರಾಲಿಯು ೧೭೬೩ ರಲ್ಲಿ ಬೇದನೂರಿನ (ಕೆಳದಿಯ) ಪಾಳೆಯಗಾರಿಕೆಯನ್ನು ವಶಪಡಿಸಿಕೊಂಡಮೇಲೆ ಶೃಂಗೇರಿಯ ಮಠವು ಮೈಸೂರು ದೊರೆಗಳ ರಕ್ಷಣೆಯೊಳಗೆ ಬಂದಿತ್ತು. ಪರಶುರಾಮ ಭಾವು ಎಂಬ ಮರಾಠೀಸಾಹಸಿ ಶೃಂಗೇರಿಮಠಕ್ಕೆ ದಾಳಿಯಿಟ್ಟು ಸುಮಾರು ಅರವತ್ತುಲಕ್ಷ ರೂಪಾಯಿಗಳಷ್ಟು ಆಸ್ತಿಯನ್ನು ಕೊಳ್ಳೆಹೊಡೆದುದಲ್ಲದೆ ಶಾರದೆಯ ಗುಡಿಯಲ್ಲಿ ಮೂರ್ತಿಚಲನೆಯನ್ನು ಮಾಡಿಹೋದ; ಇದು ೧೭೯೧ರಲ್ಲಿ ನಡೆದದ್ದು. ಆಗ ಮಠದ ನೆರವಿಗೆ ನಿಂತು, ದುಸ್ಥಿತಿಯಿಂದ ಪಾರು ಮಾಡಿದವರು ಮೈಸೂರು ದೊರೆಗಳೇ.

ಅಂದಿನಿಂದ ಮೈಸೂರು ದೊರೆಗಳ ಸಮ್ಮತಿ ಶೃಂಗೇರಿಮಠದ ವ್ಯವಹಾರ ದಲ್ಲಿ ಬೇಕಾಗಿದ್ದಿತು. ಆದುದರಿಂದ ಸ್ವಾಮಿಗಳು ಆಗ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಪತ್ರವೊಂದನ್ನು ಬರೆಸಿ, ಬೆಂಗಳೂರಿನ ಶಂಕರಮಠದಲ್ಲಿ ಓದುತ್ತಿರುವ ನರಸಿಂಹನನ್ನು ತಮ್ಮ ನಂತರ ಪಟ್ಟಕ್ಕೆ ತರಬೇಕೆಂದು ತಿಳಿಸಿದರು. ಈ ಪತ್ರವನ್ನು ಅರಮನೆಯ ಧರ್ಮಾಧಿಕಾರಿಗಳೂ ಆಗಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳೇ ತೆಗೆದುಕೊಂಡು ಶೃಂಗೇರಿಯಿಂದ ಹೊರಟು, ಆಗ ಬೆಂಗಳೂರಿನಲ್ಲೇ ಬೀಡುಬಿಟ್ಟಿದ್ದ ಮಹಾರಾಜರಿಗೆ ಒಪ್ಪಿಸಿ, ಅವರ ಅನುಮತಿಯನ್ನು ಪಡೆದುಕೊಂಡರು. ಮಹಾರಾಜರು ಸ್ವಾಮಿಗಳ ಇಚ್ಛೆಯಂತೆ ಬೆಂಗಳೂರಿನ ಶಂಕರಮಠಕ್ಕೆ ಮಠದ ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳ ತಮ್ಮ ಕೃಷ್ಣಶಾಸ್ತ್ರಿಗಳ ಮತ್ತು ಆಸ್ಥಾನ ವಿದ್ವಾಂಸರಾಗಿದ್ದ ತಮ್ಮಯ್ಯಭಟ್ಟರ ಜೊತೆಯಲ್ಲಿ ಬಂದು ಸ್ವಾಮಿಗಳು ಆಯ್ಕೆ ಮಾಡಿಕೊಂಡಿದ್ದ ನರಸಿಂಹನನ್ನು ನೋಡಿದರು. ಆಯ್ಕೆ ಸಮರ್ಪಕವೆಂದು ಮಹಾರಾಜರಿಗೂ ತೋರಲಿಲ್ಲವಂತೆ; 'ಚೆನ್ನಾಗಿಲ್ಲವಲ್ರೀ' ಎಂದು ಶಾಸ್ತ್ರಿಗಳೆದುರು ಮೂಗೆಳೆದರಂತೆ. ಆದರೇನು ಮಾಡುವುದು? ಸ್ವಾಮಿಗಳ ಸಂಕಲ್ಪ ಇದ್ದಂತೆ ಆಗಲಿ ಎಂದು ಒಪ್ಪಿದರು.

ಸ್ವಾಮಿಗಳ ಅಪ್ಪಣೆಯಂತೆ, ಮಹಾರಾಜರ ಸಮ್ಮತಿಯಂತೆ, ಕುಣಿಗಲ್ಲು ರಾಮಶಾಸ್ತ್ರಿಗಳು ನರಸಿಂಹನನ್ನು ಕರೆತರಲು ಬೆಂಗಳೂರಿಗೆ ಹೋದವರು

ನರಸಿಂಹನ ತಂದೆತಾಯಿಯರಿಗೆ ವಿಚಾರವನ್ನು ತಿಳಿಸಲು, ಅವರಿಬ್ಬರೂ ಒಪ್ಪಲಿಲ್ಲ. ಇರುವವನು ಒಬ್ಬನೇ ಮಗ; ದೇವರ ದಯೆಯಿಂದ ಸಾಯದೆ ಉಳಿದುಕೊಂಡ! ಅವನ ಮೇಲೇ ತಮ್ಮ ಕನಸನ್ನೆಲ್ಲ ಕಟ್ಟಿಕೊಂಡಿದ್ದಾರೆ, ಅವನನ್ನೇ ನಂಬಿಕೊಂಡಿದ್ದಾರೆ. ಎಲ್ಲರಂತೆ ಅವನೂ ಮದುವೆಯಾಗಿ, ಉದ್ಯೋಗವನ್ನು ಹಿಡಿದು, ಹಣ ಸಂಪಾದಿಸಿ, ಮನೆಯನ್ನು ಉಳಿಸಿ ಬೆಳೆಸಬೇಕೆಂದಲ್ಲವೆ ಅವರು ಗೋಕರ್ಣಯಾತ್ರೆ ಮಾಡಿಬಂದದ್ದು, ಉಡುಪಿಯ ಕೃಷ್ಣನಿಗೆ ಹರಕೆ ಹೊತ್ತದ್ದು? ಈಗ ಮಗ ಸಂನ್ಯಾಸಿಯಾಗಿ ಮಠಕ್ಕೆ ಅಂಟಿಕೊಂಡು ಕೂಡಬೇಕೆಂದರೆ ಹೇಗೆ? ಬಯಸಿ ಬಯಸಿ ಪಡೆದುಕೊಂಡ ಮಗನಲ್ಲವೆ? ಮನೆಯನ್ನು ಉಳಿಸಬೇಡವೆ? ವಂಶವನ್ನು ಬೆಳೆಸಬೇಡವೆ? ರಾಮಶಾಸ್ತ್ರಿಗಳು ಸ್ವಾಮಿಗಳ ಅಪ್ಪಣೆಯೆಂದರೂ ಕೇಳಲಿಲ್ಲ. ಹೆತ್ತಕರುಳ ನೋವು ಸುತ್ತಲವರಿಗೆ ಅರ್ಥವಾಗುವುದು ಹೇಗೆ? ಮಗ ಸ್ವಾಮಿಯಾಗುವುದು ತಮಗೆ ಎಳ್ಳಷ್ಟೂ ಇಷ್ಟವಿಲ್ಲವೆಂದು ಪಟ್ಟುಹಿಡಿದರು.

ರಾಮಶಾಸ್ತ್ರಿಗಳು ಏನು ಮಾಡಿಯಾರು? ತಮಗೆ ತಿಳಿದಷ್ಟು ಹೇಳಿದರು: ಮಗ ಸ್ವಾಮಿಯಾದಾಗ ತಂದೆತಾಯಿಯರನ್ನು ಮಠವೇ ನೋಡಿ ಕೊಳ್ಳುವುದೆಂದು ಸಮಾಧಾನ ಹೇಳಿದರು; ಆಚಾರ್ಯಪೀಠದಲ್ಲಿ ಕೂರುವುದು ಒಂದು ಮಹಾಯೋಗವೆಂದೂ, ಹಲವು ಪೂರ್ವಜನ್ಮಗಳ ಪುಣ್ಯವಿಶೇಷದ ಫಲವೆಂದೂ, ಮನೆತನಕ್ಕೆ ತಾರಕವಾಗುವ ಸಂದರ್ಭವೆಂದೂ ಬಗೆಬಗೆಯಾಗಿ ತಿಳಿಸಿದರು. ವಾಕ್ಯಾರ್ಥದಲ್ಲಿ, ಸಭೆಯಲ್ಲಿ, ವಾದದಲ್ಲಿ ಎಲ್ಲರ ಬಾಯನ್ನೂ ಮುಚ್ಚಿಸುವ ಪಂಡಿತರಾದರೂ ಈ ಮುಗ್ಧದಂಪತಿಗಳೆದುರು ಅವರ ಬೇಳೆ ಬೇಯಲಿಲ್ಲ. ಬಂದ ಕೆಲಸ ಕೈಗೂಡಲಿಲ್ಲವೆಂದುಕೊಂಡು ಶೃಂಗೇರಿಗೆ ಹೊರಟುನಿಂತರು.

ಆಗ ಇವರ ನಿರಾಶೆಯನ್ನೂ ಆತಂಕವನ್ನೂ ನರಸಿಂಹನೇ ಗ್ರಹಿಸಿ ತನ್ನ ತಂದೆತಾಯಿಯರಿಗೆ ಸಮಾಧಾನ ಹೇಳಿ ಅವರನ್ನು ಒಪ್ಪಿಸಿದನು. ಸ್ವಾಮಿಗಳೇ ತನ್ನನ್ನು ಬೆಂಗಳೂರಿಗೆ ಕಳುಹಿಸುವ ಮುನ್ನ ಸಂನ್ಯಾಸಿಯಾಗೆಂದು ಆಶೀರ್ವಾದ ಮಾಡಿದ್ದರಲ್ಲ? ಸಂನ್ಯಾಸಿಯಾಗುವುದು ತನಗೂ ಸಮ್ಮತವೇ. ಬಿಡಿಸಂನ್ಯಾಸಿಯಾಗಿ ಒಂದೆಡೆ ನಿಲ್ಲದೆ ಊರೂರು ತಿರುಗುತ್ತ ಇದ್ದರೆ, ತಂದೆತಾಯಿಯರು ತನ್ನನ್ನು ನೋಡುವ ಹಾಗೂ ಇಲ್ಲ. ಈಗ ಪೀಠವೊಂದರಲ್ಲಿ

ಇರುವ ಕಾರಣ, ಶೃಂಗೇರಿಯಲ್ಲೇ ಇರಬಹುದು; ತಂದೆತಾಯಿಯರನ್ನೂ ನೋಡಿಕೊಳ್ಳಬಹುದು. ಸಂನ್ಯಾಸಿಗೆ ಪುನರ್ಜನ್ಮವಿಲ್ಲವೆಂದು ಶಾಸ್ತ್ರ ಹೇಳುತ್ತದೆಯಷ್ಟೆ; ಆಗ ವಂಶ ಬೆಳೆಯಬೇಕೆನ್ನುವ ಬಯಕೆ ಸಲ್ಲದು. ಮೇಲಾಗಿ, ಮಠದ ಅನ್ನವನ್ನುಂಡವರು; ಸ್ವಾಮಿಗಳ ಮಾತನ್ನು ಮೀರುವುದು ಸರಿಯಲ್ಲ. ದೊಡ್ಡಮನುಷ್ಯರಾದ ಶಾಸ್ತ್ರಿಗಳು ಇಲ್ಲಿಯವರೆಗೆ ದಯಮಾಡಿಸಿದ್ದಾರೆ. ಅವರನ್ನು ನಿರಾಶೆಗೊಳಿಸಿ ಕಳುಹಿಸುವುದು ತಪ್ಪು. ಇಷ್ಟೆಲ್ಲ ಮಾತುಕತೆ-ಯಾದಮೇಲೆ ತಂದೆತಾಯಿಯರು ಒಪ್ಪಿದರು. ಅವರ ಒಪ್ಪಿಗೆಯನ್ನು ಪಡೆದು ರಾಮಶಾಸ್ತ್ರಿಗಳು ಮಹಾರಾಜರಿಗೆ ಸಂಗತಿಯನ್ನು ತಿಳಿಸಿ ಮೈಸೂರಿಗೆ ಹೊರಟುಹೋದರು.

ನರಸಿಂಹನಿಗೆ ದಿಟವಾಗಿ ಮಠದ ಅಧಿಕಾರ ಎಳ್ಳಷ್ಟೂ ಇಷ್ಟವಿಲ್ಲ. ಮಠದ ಆಡಂಭರ, ಸಂಭ್ರಮ, ಜನಸಂದಣಿ, ಅಧಿಕಾರಿಗಳ ದರ್ಪ, ಬಿಡುವಿಲ್ಲದ ಸಂಚಾರ ಎಲ್ಲವನ್ನೂ ಎಳೆತನದಿಂದ ಕಂಡಿದ್ದ ಅವನಿಗೆ ಅದರ ಆಕರ್ಷಣೆ ಬದಲು ಭಯವೇ ಒದಗಿದ್ದಿತು. ತನ್ನ ಸ್ವಭಾವಕ್ಕೆ ಏನೇನೂ ಸರಿಹೊಂದುವಂಥದಲ್ಲ ಮಠದ ವಾತಾವರಣ ಎನ್ನುವುದು ಅವನಿಗೆ ಖಚಿತವಾಗಿದ್ದಿತು. ಮುಖ್ಯವಾಗಿ ಅವನು ಬಡಹುಡುಗ, ವಿನಯಶಾಲಿ, ವ್ಯಾಸಂಗತತ್ಪರ, ಏಕಾಂತಪ್ರಿಯ, ಮುಗ್ಧ. ಮಠದ ನಿರ್ವಹಣೆ ಅವನ ಸ್ವಭಾವದಲ್ಲೂ ಇಲ್ಲ; ಅವನ ಸಾಮರ್ಥ್ಯವೂ ಅದರಲ್ಲಿ ಇಲ್ಲ; ಅದರಿಂದ ಸಂತೋಷವೇನೂ ಅವನಿಗಿಲ್ಲ. ಮನೆಯಲ್ಲಿ ಹೆತ್ತ ಹಿರಿಯರನ್ನು ನೋಡಿಕೊಳ್ಳುತ್ತ, ಅವರ ಬಯಕೆಗಳನ್ನು ತೀರಿಸುತ್ತ ಇರುವುದೇ ಮಗನ ಕರ್ತವ್ಯವಲ್ಲವೆ? ಅದಕ್ಕಿಂತ ದೊಡ್ಡ ಧರ್ಮ ಇದೆಯೇ?

ಆದರೆ ಸ್ವಾಮಿಗಳು ಅಪ್ಪಣೆ ಮಾಡಿದರೆಂದಮೇಲೆ ತಾನು ಹೇಳುವುದೇನು ? ಅವರ ನಿರ್ಧಾರವನ್ನು ಶಂಕಿಸಬಹುದೆ? ನಿರಾಕರಿಸ-ಬಹುದೆ ? ಅವರ ನಿರ್ಣಯ ಸರಿಯೋ ತಪ್ಪೋ, ತನಗೆ ಯೋಗ್ಯತೆ ಇದೆಯೋ ಇಲ್ಲವೋ, ಮುಂದೇನು ಸುಖವೋ ಕಷ್ಟವೋ-ಶಾಸ್ತ್ರಿಗಳು ಸ್ವಾಮಿಗಳ ಅಪ್ಪಣೆಯನ್ನು ಹೊತ್ತು ತಂದಿದ್ದಾರೆ, ಮಹಾರಾಜರ ಸಮ್ಮತಿಯನ್ನು ದೊರಕಿಸಿಕೊಂಡಿದ್ದಾರೆ; ತಾನು ಮರುಮಾತಾಡದೆ, ಎರಡನೆಯ ಯೋಚನೆ ಮಾಡದೆ ಅವರ ಮಾತಿಗೆ ಒಪ್ಪಬೇಕು; ಮುಂದಿನದು ಭಗವದಿಚ್ಛೆ! ಇದು ನರಸಿಂಹನ ತರ್ಕ.

ಈ ಕಡೆ ಶೃಂಗೇರಿಯಲ್ಲಿ ಸ್ವಾಮಿಗಳ ಬದುಕು ತೂಗುಯ್ಯಾಲೆಯಲ್ಲಿ ಆಡುತ್ತಿದ್ದಿತು. ಆಗಾಗ ಉಸಿರಾಟವೇ ಕಷ್ಟವಾಗಿ ಉಳಿಯಲಾರರೆಂಬ ಶಂಕೆ ಬಲವಾಗುತ್ತಿದ್ದಿತು. ಸ್ವಾಮಿಗಳೂ ತಮ್ಮ ಆಪ್ತರಾದ ಕುಣಿಗಲ್ಲು ರಾಮಶಾಸ್ತ್ರಿಗಳಿಗೆ ಪತ್ರವನ್ನು ವಿವರವಾಗಿ ಬರೆಯಿಸಿ, ಒಡನೆಯೇ ಬೆಂಗಳೂರಿನಿಂದ ನರಸಿಂಹನನ್ನು ಕರೆತರಬೇಕೆಂದು ಅಪ್ಪಣೆ ಮಾಡಿದರು. ಮೈಸೂರಿನಲ್ಲಿದ್ದ ಶಾಸ್ತ್ರಿಗಳಿಗೆ ಪತ್ರವನ್ನು ಮುದ್ದಾಂ ಮುಟ್ಟಿಸುವ ಪ್ರಯತ್ನವಾಯಿತು. ಬೆಂಗಳೂರಿನಿಂದ ನರಸಿಂಹ ಬರುವವರೆಗೂ ಸ್ವಾಮಿಗಳು ಜೀವ ಹಿಡಿದಿರುವರೋ ಇಲ್ಲವೋ ಎಂದು ಅನುಮಾನವಾಗಿ, ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳು ಬೇರೆ ಯಾರಿಗಾದರೂ ಸಂನ್ಯಾಸ ಕೊಡಿಸಿ, ಉತ್ತರಾಧಿಕಾರದ ನೇಮಕವೂ ಬೇಗನೆ ನಡೆದುಹೋದರೆ ಒಳ್ಳೆಯದೆಂದು ಭಾವಿಸಿದರು. ತಮಗೆ ಸರಿಯೆಂದು ಕಂಡ ಒಬ್ಬ ವಟುವಿನ ಹೆಸರನ್ನು ಸೂಚಿಸಿದಾಗ, ಸಾವಿನ ದವಡೆಯಲ್ಲಿದ್ದ ಸ್ವಾಮಿಗಳು "ಅವನಿಗೆ ಪೀಠವನ್ನು ಕೊಡುವುದಕ್ಕಿಂತ ಪೀಠವನ್ನು ತೆರವಾಗಿ ಇಟ್ಟಿರುವುದೇ ವಾಸಿ!" ಎಂದುಬಿಟ್ಟರಂತೆ; ಇನ್ನೊಂದು ಹೆಸರನ್ನು ಸೂಚಿಸಲು "ಅವನು ಬೇಡ" ಎಂದರಂತೆ; ಮತ್ತೂ ಒಂದು ಹೆಸರನ್ನು ಹೇಳಿದಾಗ, ಸ್ವಲ್ಪ ಕಟುವಾಗಿಯೇ "ನರಸಿಂಹನು ಬೆಂಗಳೂರಿಂದ ಬರಲಿ, ಸುಮ್ಮನಿರಿ!" ಎಂದು ಹೇಳಿದರಂತೆ.

ಸ್ವಾಮಿಗಳು ಬದುಕಿರುವಾಗಲೇ ಉತ್ತರಾಧಿಕಾರಿಯ ನೇಮಕವಾದರೆ ಮುಂದೆ ತೊಂದರೆ ಬರಲಾರದೆಂದು ಸರ್ವಾಧಿಕಾರಿಗಳ ಎಣಿಕೆ. ಮಠಗಳಲ್ಲಿ ಸಾಮಾನ್ಯವಾಗಿ, ಅರಸೊತ್ತಿಗೆಗಳಲ್ಲಿರುವಂತೆಯೇ, ಈ ಸಮಸ್ಯೆ ಮೂಡಿ ಕೊಳ್ಳುತ್ತದೆ. ಸ್ವಾಮಿಗಳ ಮುಂಚಿನ ನೆಂಟರು ತಮ್ಮ ಪ್ರಭಾವವನ್ನು ರೂಢಿಸಿ ಕೊಂಡು ತಮ್ಮ ಮನೆತನದಲ್ಲೇ ಮಠಾಧಿಪತ್ಯವನ್ನು ಉಳಿಸಿಕೊಳ್ಳುವುದು ಅಪರೂಪವೇನಲ್ಲ, ಶೃಂಗೇರಿಮಠವೆಂದರೆ ಸಂಪದ್ಭರಿತವಾದ ಮಠ, ಪ್ರಭಾವ ಶಾಲಿಯಾದ ಪೀಠ. ಹೀಗಾಗಿ ಅಲ್ಲಿ ರಾಜಕೀಯ ಇಲ್ಲದೆ ಇರುವುದು ಸಾಧ್ಯವೆ ? ಸ್ವಾಮಿಗಳು ಕಡೆಯವರೆಗೆ ತಮ್ಮ ಉತ್ತರಾಧಿಕಾರಿ ಯಾರೆಂದು ಯಾರಿಗೂ ಹೇಳಿರಲಿಲ್ಲ; ತಮ್ಮ ಮನಸ್ಸಿನಲ್ಲಿ ಏನಿದ್ದಿತೋ ಅದನ್ನು ಹೊರಪಡಿಸಿರಲಿಲ್ಲ.

ತೀರಿಕೊಳ್ಳುವ ಒಂದೆರಡು ದಿನಗಳ ಮುಂಚೆಯಷ್ಟೇ ಅವರು ಕುಣಿಗಲ್ಲು ರಾಮಶಾಸ್ತ್ರಿಗಳನ್ನು ಮೈಸೂರಿಗೆ ಕಳುಹಿಸಿ ಮಹಾರಾಜರಿಗೆ ತಮ್ಮ ಮನದಾಸೆಯನ್ನು ಪತ್ರದಲ್ಲಿ ಕಾಣಿಸಿದ್ದು. ಒಮ್ಮೆ ಮಹಾರಾಜರ ಗಮನಕ್ಕೆ ಬಂದಿತೆಂದರೆ ತಮ್ಮ ಬಯಕೆ ಕೈಗೂಡಿದಂತೆಯೇ; ತಮ್ಮ ಸುತ್ತ ನೆರೆದಿರುವ ತೋಳಗಳು ಆಗ ಏನೂ ಮಾಡಲಾರವು ಎಂದು ಅವರ ವಿಶ್ವಾಸ. ಏಕೆಂದರೆ ತಾವು ತಮ್ಮ ಉತ್ತರಾಧಿಕಾರಿಯೆಂದು ಮನಸ್ಸಿನಲ್ಲಿ ಮಾಡಿಕೊಂಡಿದ್ದ ನರಸಿಂಹ ತಮ್ಮ ಬಳಗದವನಲ್ಲ, ಶ್ರೀಮಂತ ಅಥವಾ ಪ್ರಭಾವಶಾಲಿಯಾದ ಮನೆತನದವನೂ ಅಲ್ಲ, ನೋಡಲು ಅಷ್ಟು ಸೊಗಸಾದವನಲ್ಲ, ಸ್ವಭಾವದಲ್ಲಿ ಉತ್ಸಾಹಶಾಲಿಯಲ್ಲ, ಸಾಹಸಿಯಲ್ಲ, ವ್ಯವಹಾರಚತುರನಲ್ಲ. ಬಡಹುಡುಗನಾಗಿ ಸರ್ವಾಧಿಕಾರಿಗಳ ಮನೆಯಲ್ಲೇ ಬೆಳೆದವನು.

ಇಂಥವನು ಪೀಠಾಧಿಪತಿಯಾದಾನೆಂದು ಯಾರೂ ಎಣಿಸಿರಲಿಲ್ಲ. ಅಧಿಕಾರಿಗಳಿಗೆ ಸ್ವಾಮಿಗಳ ಈ ನಿರ್ಣಯ ಗೊತ್ತಾದಾಗ ಸೋಜಿಗವೆನಿಸಿದುದು ಸಹಜವೇ. ಈ ನಿರ್ಣಯವನ್ನು ಮೊದಲೇ ಹೊರಪಡಿಸಿದ್ದರೆ, ಪ್ರಬಲವಾದ ವಿರೋಧ ಬರುತ್ತಿದ್ದುದೂ ಸಹಜವೇ. ವ್ಯವಹಾರಚತುರರಾದ ಸ್ವಾಮಿಗಳು ಇದನ್ನು ತಿಳಿದೇ ಕಡೆಯವರೆಗೂ ತಮ್ಮ ಅಂತರಂಗವನ್ನು ಬಹಿರಂಗಪಡಿಸಲಿಲ್ಲ. ಮಹಾರಾಜರಿಗೆ ಪತ್ರ ಮುಟ್ಟಿದ ಮೇಲೆ ಅವರ ನಿರ್ಣಯ ಎಲ್ಲರಿಗೂ ತಿಳಿದದ್ದು. ಆ ವೇಳೆಗಾಗಲೆ ಅದು ಸಮಯಸಾಧಕರ, ಸಾಹಸಿಗಳ ಕೈಮೀರಿದ ಸಂಗತಿಯಾಗಿದ್ದಿತು.

ಶಾಸ್ತ್ರಿಗಳು ನರಸಿಂಹನನ್ನು ಕರೆದುಕೊಂಡು ಮೊದಲು ಹೊರಟರು. ಕೆಲವು ದಿನಗಳ ನಂತರ ತಂದೆತಾಯಿಯರು ಬರುವೆವೆಂದರು. ಆದರೆ ಶಾಸ್ತ್ರಿಗಳು ನರಸಿಂಹನೊಂದಿಗೆ ಶೃಂಗೇರಿಯನ್ನು ತಲಪುವಷ್ಟರಲ್ಲಿ, ಎಂದರೆ ಹಿಂದಿನ ದಿನವೇ, ಸ್ವಾಮಿಗಳು ತೀರಿಕೊಂಡಿದ್ದರು. ನರಸಿಂಹ ಶೃಂಗೇರಿಯನ್ನು ಮುಟ್ಟಿದ್ದು ೧೯೧೨ರ ಮಾರ್ಚ್ ೨೧ರಂದು. ಮುಕ್ತರಾದ ಸ್ವಾಮಿಗಳ ಉತ್ತರಕ್ರಿಯೆಗಳು ಆಗಲೇ ಆರಂಭವಾಗಿದ್ದವು. ಅವೆಲ್ಲ ಮುಗಿಯುವವರೆಗೆ ನರಸಿಂಹನಿಗೆ ಸಂನ್ಯಾಸವಾಗಲೀ ಪಟ್ಟಾಭಿಷೇಕವಾಗಲೀ ನಡೆಯುವ ಹಾಗಿಲ್ಲ. ಹದಿನೈದು ದಿನಗಳಷ್ಟು ಕಾಲ ನರಸಿಂಹ ಶೃಂಗೇರಿಯಲ್ಲೇ ಕಾಯಬೇಕಾಯಿತು.

ಈ ಅವಧಿಯಲ್ಲಿ ಪೀಠದ ಉತ್ತರಾಧಿಕಾರಿ ಯಾರಾಗಬೇಕೆಂದು ಚರ್ಚೆ, ನರಸಿಂಹನಿಗೆ ಅವಕಾಶವಿರದಂತೆ ಪ್ರಯತ್ನ, ಅಧಿಕಾರಿಗಳ ರಾಜಕಾರಣ, ದೊರೆಯವರೆಗೂ ಮನವಿ - ಎಲ್ಲವೂ ಜರುಗಿದುವಂತೆ. ಸ್ವಾಮಿಗಳು ಮುಕ್ತರಾದ ಮರುದಿನವೇ ಸರ್ವಾಧಿಕಾರಿಗಳು ಮೈಸೂರಿಗೆ ಹೋಗಿ ಮಹಾರಾಜರನ್ನು ಕಂಡು ಮಾತನಾಡಿದರು. ಮಹಾರಾಜರು 'ನರಸಿಂಹನೇ ಸ್ವಾಮಿಗಳು ಸೂಚಿಸಿದ ಉತ್ತರಾಧಿಕಾರಿ. ಬೇರೆ ಯೋಚನೆ ಮಾಡುವಹಾಗಿಲ್ಲ' ಎಂದು ಖಂಡಿತವಾಗಿ ಹೇಳಿ ಅವರ ಪಟ್ಟಾಭಿಷೇಕದ ವ್ಯವಸ್ಥೆ ಮಾಡುವಂತೆ ಸರ್ವಾಧಿಕಾರಿಗೆ ತಿಳಿಸಿ, ತಮ್ಮ ಪ್ರತಿನಿಧಿಯೊಬ್ಬರನ್ನೂ ಶೃಂಗೇರಿಗೆ ಕಳುಹಿಸಿ ಕೊಟ್ಟರು. ನರಸಿಂಹ ಈ ವಿಚಾರವಾಗಿ ತೀರ ಉದಾಸೀನನಾಗಿಯೇ ಇದ್ದುಬಿಟ್ಟ. ಅವನಿಗೆ ಸಂನ್ಯಾಸದ ಮೇಲೆ ಮನಸ್ಸಿದ್ದರೂ ಪೀಠದ ಮೇಲೆ ಆಸಕ್ತಿಯಿರಲಿಲ್ಲ.

ಮುಂದೆ ಗೋಪಶಾಸ್ತ್ರಿಗಳ ಮಗ ನರಸಿಂಹ ಜಗದ್ಗುರುವಾಗುತ್ತಾನೆ ಎಂದರೆ ಊರವರಿಗಾಗಲೀ ಮಠದವರಿಗಾಗಲೀ ನಂಬಿಕೆಯಿಲ್ಲ. ಎಲ್ಲರನ್ನೂ ಬಿಟ್ಟು ಇವನನ್ನು ಸ್ವಾಮಿಗಳು ಏನೆಂದು ಆರಿಸಿದರು ಎಂದು ಎಲ್ಲರಿಗೂ ಸೋಜಿಗವೇ. ಬುದ್ಧಿಶಾಲಿಯಾದ ಹುಡುಗನೇನೋ ನಿಜ. ಆದರೆ ಶ್ರೀಮಂತರ ಮನೆಯವನಲ್ಲ, ಸ್ವಾಮಿಗಳ ನೆಂಟನಲ್ಲ, ಪ್ರಭಾವವಿರುವ ಮನೆತನವಲ್ಲ. ಗೋಪಶಾಸ್ತ್ರಿಗಳಿಗೆ ಊರಲ್ಲಾಗಲೀ ಮಠದಲ್ಲಾಗಲೀ-ಸ್ಥಾನವಾಗಲೀ ಸನ್ಮಾನವಾಗಲೀ ಇರಲಿಲ್ಲ. ಲೋಕವ್ಯವಹಾರ ತಂದೆಗೂ ತಿಳಿಯದು; ಮಗನಿಗೂ ತಿಳಿಯದು. ಹುಡುಗನಿಗೆ ದಿಟ್ಟತನವೂ ಇಲ್ಲ, ಎದೆಗಾರಿಕೆಯೂ ಇಲ್ಲ, ಜನರನ್ನು ಮೆಚ್ಚಿಸುವ ಜಾಣತನವೂ ಇಲ್ಲ. ಹೋಗಲಿ, ನೋಡಲಾದರೂ ಸೊಗಸಾಗಿರುವನೋ ಎಂದರೆ ಅದೂ ಇಲ್ಲ; ಮೈಬಣ್ಣ ಕಂದು, ಮೈ ಬಡಕಲ, ಆಕಾರ ಕುಳ್ಳೇ; ನೋಟ ನೆಲದ ಮೇಲೇ. ಹಿಂದಿನ ಸ್ವಾಮಿಗಳನ್ನು ನೋಡಿದ್ದವರಿಗೆ 'ಅದು ಆನೆ, ಇದು ಆಡು' ಎನಿಸಿದುದು ಸಹಜವೇ. ಆ ಸ್ವಾಮಿಗಳ ಹೊಳೆಯುವ ಮೈಬಣ್ಣ, ಗಂಭೀರವಾದ ನಿಲುವು, ಕಣ್ಣುಗಳಲ್ಲಿ ತೇಜಸ್ಸು, ಮುಖದ ಮೇಲೆ ದರ್ಪ-ಇವೆಲ್ಲ ಯಾರಲ್ಲಾದರೂ ಭಯ ಭಕ್ತಿಗಳನ್ನು ಹುಟ್ಟಿಸುತ್ತಿದ್ದುವು.

ಮೇಲಾಗಿ, ಆ ಸ್ವಾಮಿಗಳು ಹುಟ್ಟಿದ್ದು ಬೆಳೆದದ್ದು ಮೈಸೂರಿನಲ್ಲಿ; ಶೃಂಗೇರಿಯವರು ಅವರನ್ನು ನೋಡಿದ್ದು ಸ್ವಾಮಿಗಳಾದಮೇಲೆಯೇ. ಆದರೆ ನರಸಿಂಹನನ್ನು ಅವನ ಎಳವೆಯಿಂದ ಊರವರು ಬಲ್ಲರು. ತಂದೆಯನ್ನೂ ಮಗನನ್ನೂ ಅಸಡ್ಡೆಯಿಂದಲೇ ಕಾಣುತ್ತಿದ್ದರು. ಮಠದವರಂತೂ ಇವರನ್ನು ಕಸಕ್ಕಿಂತ ಕಡೆಯಾಗಿ ನೋಡುತ್ತಿದ್ದರು. ನರಸಿಂಹ ಶೃಂಗೇರಿಯಲ್ಲೇ ಇರುತ್ತಿದ್ದಾಗ, ಮಠದಿಂದ ಮನೆಗೆ ದಿನವೂ ಮಜ್ಜಿಗೆಯನ್ನು ತರಬೇಕಾಗಿದ್ದಿತಂತೆ. ಆದರೆ ತರಲು ಪಾತ್ರೆಯಿಲ್ಲದೆ, ಮಠದ ಉಗ್ರಾಣದಿಂದಲೇ ಡಬ್ಬವೊಂದನ್ನು ಎರವಲು ಕೊಂಡಿದ್ದನಂತೆ! ಉಗ್ರಾಣದ ಅಧಿಕಾರಿಗಳು ಅದಕ್ಕಾಗಿ ಅವನನ್ನು ಮೂದಲಿಸಿ ಮಾತನಾಡುತ್ತಿದ್ದರಂತೆ. ಬಡವರೆಂದರೆ ಶ್ರೀಮಂತರಿಗೂ ಅಸಡ್ಡೆ, ಶ್ರೀಮಂತರನ್ನು ಓಲೈಸಿಕೊಂಡಿರುವ ಬಡವರಿಗೂ ಅಸಡ್ಡೆ! ಈ ಬಡಹುಡುಗ ಈಗ ಜಗದ್ಗುರುವಾದರೆ ಹೇಗೆ? ಹಿಂದಿನದನ್ನೆಲ್ಲ ಮರೆಯುವನೋ, ನೆನಪಿರಿಸಿಕೊಂಡು ದಂಡಿಸುವನೋ? ಅಧಿಕಾರವಿಲ್ಲದಾಗ ಇರುವ ವಿನಯ ಅಧಿಕಾರ ಬಂದಮೇಲೂ ಉಳಿಯುವುದೆಂಬ ನೆಚ್ಚಿಗೆಯೇನು?

ಹೀಗಿ ಹಲವು ಕಾರಣಗಳಿಂದ ಹಲವರು ನರಸಿಂಹ ಜಗದ್ಗುರು-ವಾಗುವನೆಂಬ ಸುದ್ದಿ ಕೇಳಿ ಸಂತೋಷಪಡಲಿಲ್ಲ. ಮಠದಲ್ಲೇ ಇದನ್ನು ಸ್ವಾಗತಿಸುವವರು ಇರಲಿಲ್ಲ. ಆದರೆ ಸ್ವಾಮಿಗಳ ಇಚ್ಛೆ ಮಹಾರಾಜರ ಅಪ್ಪಣೆ–ಎರಡರ ಮುಂದೆ ಯಾರೂ ಏನೂ ಮಾಡುವಹಾಗಿರಲಿಲ್ಲ. ತೀರಿಕೊಂಡ ಗುರುಗಳ ಉತ್ತರಕ್ರಿಯೆಗಳು ನಡೆಯುತ್ತಿದ್ದು, ಮುಂದಿನ ಪೀಠಾಧಿಪತಿಯ ಸಂನ್ಯಾಸ, ಪಟ್ಟ ಮೊದಲಾದ ವಿಧಿಗಳ ಕಾರ್ಯಕ್ರಮವನ್ನು ನಿರ್ಧರಿಸಲು ಮಠದಲ್ಲಿ ಸಭೆಯೊಂದು ನೆರೆಯಿತು; ಮಠದ ಹಿರಿಯ ಅಧಿಕಾರಿಗಳೂ, ವಿದ್ವಾಂಸರೂ, ಮಠದ ಭಕ್ತರಾದ ದೊಡ್ಡ ಮನುಷ್ಯರೂ ಮಹಾರಾಜರ ಪ್ರತಿನಿಧಿಗಳೂ ಸೇರಿದ್ದರು. ಸಭೆಯಲ್ಲಿ ಮುಂದೆ ಪೀಠಾಧಿಪತಿಯಾಗುವ ನರಸಿಂಹ ಮಾತ್ರ ಇರಲಿಲ್ಲ, ಅವನ ಕಡೆ ಯಾರ ಗಮನವೂ ಹರಿದಿರಲಿಲ್ಲ!

ಸಭೆ ಸ್ವಲ್ಪ ಹೊತ್ತು ನಡೆದಮೇಲೆ, ಯಾರೋ ಒಬ್ಬರು ಬುದ್ಧಿವಂತರು 'ಸಂನ್ಯಾಸ ಪಟ್ಟ ಮೊದಲಾದುದೆಲ್ಲ ನಡೆಯಬೇಕಾದುದು ನರಸಿಂಹನಿಗೇ, ನಾವು ನಿರ್ಧರಿಸುವ ಕ್ರಮ ಅವನಿಗೆ ತಿಳಿಯಬೇಡವೇ? ಅವನೂ ಸಭೆಯಲ್ಲಿದ್ದರೆ ಒಳ್ಳೆಯದು' ಎಂದು ಸೂಚಿಸಿದರು. ಸಭೆಯವರು ಸಮ್ಮತಿಸಿದ ಮೇಲೆ ಸರ್ವಾಧಿಕಾರಿಗಳು ನರಸಿಂಹನಿಗೆ ಹೇಳಿಕಳುಹಿಸಿದರು. ಹುಡುಗ ಬಂದವನು ದೂರದಲ್ಲಿ ಗೋಡೆಯ ಬಳಿ ಕೈಕಟ್ಟಿಕೊಂಡು ನಿಂತ. ಅವನನ್ನು ಕೂಡುವಂತೆ ಯಾರೂ ಹೇಳಲಿಲ್ಲ; ಸಭೆಯ ಕಾರ್ಯಕಲಾಪ ಮುಂದುವರಿಯಿತು! ಸ್ವಲ್ಪ ಹೊತ್ತಾದಮೇಲೆ ಸಭೆಯಲ್ಲಿದ್ದ ಕೆ. ರಾಮಚಂದ್ರ ಅಯ್ಯರ್ ಎಂಬುವವರು (ಮುಂದೆ ಚಂದ್ರಶೇಖರಭಾರತೀಸ್ವಾಮಿಗಳ ಸಮ್ಮುಖದಲ್ಲೇ ಸಂನ್ಯಾಸವನ್ನು ಸ್ವೀಕರಿಸಿ ರಾಮಾನಂದಭಾರತಿಗಳೆಂದಾದವರು) ನರಸಿಂಹನ ಕಡೆ ತಿರುಗಿ ''ಕೂಡಿ'' ಎಂದರು. ವಿದ್ವಾಂಸರ, ಹಿರಿಯರ ನಡುವೆ ಕೂಡಲು ಸಂಕೋಚದಿಂದ ನಿಂತೇ ಇದ್ದ ನರಸಿಂಹನನ್ನು ನೋಡಿ, ಮತ್ತೆ ''ನಾಳೆ ಜಗದ್ಗುರುಗಳಾಗತಕ್ಕವರು, ನಿಂತಿರಬಾರದು, ಕೂಡಿ!'' ಎಂದರು. ಅದಕ್ಕೆ ನರಸಿಂಹ ನಸುನಗುತ್ತ ''ಅದು ನಾಳೆ ತಾನೆ?'' ಎಂದು ಉತ್ತರ ಕೊಟ್ಟು ನಿಂತೇ ಇದ್ದನು.

ಆ ಹೊತ್ತು ತಾನಿನ್ನೂ ಬ್ರಹ್ಮಚಾರಿಯೇ; ಸಭೆಯಲ್ಲಿದ್ದವರೆಲ್ಲ ಹಿರಿಯರು ಎಂದು ಅವನ ತರ್ಕ. ಈ ಪ್ರಸಂಗವನ್ನು, ಮೇಲೆ ಹೇಳಿದ ರಾಮಚಂದ್ರ ಅಯ್ಯರ ಮಗ ಆರ್. ಕೃಷ್ಣಸ್ವಾಮಿ.ಅಯ್ಯರು (ಮುಂದೆ ಅದೇ ಸ್ವಾಮಿಗಳ ಸಮ್ಮುಖದಲ್ಲಿ ಜ್ಞಾನಾನಂದ ಭಾರತಿಯೆಂಬ ಹೆಸರಿನಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವರು) ತಮ್ಮ ಒಂದು ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಹಿರಿಯ ಸ್ವಾಮಿಗಳ ಉತ್ತರಕ್ರಿಯೆಗಳೆಲ್ಲ ಮುಗಿದನಂತರ, ೧೯೧೨ರ ಏಪ್ರಿಲ್ ಆರನೆಯ ದಿನದಂದು (ಪರೀಧಾವಿಸಂವತ್ಸರದ ಚೈತ್ರ ಬಹುಳ ಪಂಚಮಿ ಶನಿವಾರ) ನರಸಿಂಹನಿಗೆ ಮಠದ ಸರ್ವಾಧಿಕಾರಿ ಶ್ರೀಕಂಠಶಾಸ್ತ್ರಿಗಳು ಶ್ರೀವಿದ್ಯಾಮಂತ್ರೋಪದೇಶ ಮಾಡಿದರು. ತೆಲುಗು ಸೀಮೆಯಿಂದ ಸತ್ಯಾನಂದನಾಥರೆಂಬ ಶ್ರೀವಿದ್ಯೋಪಾಸಕರು ಶಿವಾಭಿನವನೃಸಿಂಹಭಾರತೀ ಸ್ವಾಮಿಗಳ ಕಾಲದಲ್ಲಿ ಶೃಂಗೇರಿಗೆ ಬಂದು ನೆಲೆಸಿ ಶ್ರೀಚಕ್ರಾರ್ಚನೆಯನ್ನು ಹೆಚ್ಚಾಗಿ ಬಳಕೆಗೆ ತಂದರಂತೆ. ಸತ್ಯಾನಂದನಾಥರ ಶಿಷ್ಯರು ಜ್ಞಾನಾನಂದನಾಥರೆಂಬ ದೀಕ್ಷಾನಾಮವನ್ನು ತಳೆದ ಸಿಂಹಂಭಟ್ಟುಲ

ರಾಮಮೂರ್ತಿಶಾಸ್ತ್ರಿಗಳು ಶೃಂಗೇರಿಯಲ್ಲೇ ಇದ್ದುಕೊಂಡು ಶ್ರೀಚಕ್ರಾರ್ಚನ ವಿಧಾನದಲ್ಲಿಯೇ '**ಶ್ರೀಶಾರದಾ ಚತುಃಶತೀಸ್ತವ**'ವೆಂಬ ಸಂಸ್ಕೃತಗ್ರಂಥವನ್ನು ರಚಿಸಿದ್ದಾರೆ (ಬೆಜವಾಡದ ಸೌಭಾಗ್ಯ ಪ್ರೆಸ್‌ನಲ್ಲಿ ಶಾಲೀವಾಹನ ೧೮೫೨ರಲ್ಲಿ ಅಚ್ಚಾಯಿತು). ಇದು ಚಂದ್ರಶೇಖರಭಾರತೀಸ್ವಾಮಿಗಳಿಗೆ ಸಮರ್ಪಿತವಾಗಿದೆ ('ಅರ್ಪಿತಾ ಚಂದ್ರಮೌಳೀಶ್ವರ ಭಾರತೀಗುರುಸನ್ನಿಧೌ' ಎಂಬ ಒಕ್ಕಣೆಯಿದೆ, 'ವಿಜ್ಞಾಪನಂ', ೪). ಶೃಂಗೇರಿಯ ಮಠದಲ್ಲಿ ಶ್ರೀಚಕ್ರಪೂಜೆಯು ಇವರಿಬ್ಬರಿಂದ ಊರ್ಜಿತವಾದಂತೆ ತೋರುತ್ತದೆ. ಸತ್ಯಾನಂದನಾಥರು ಈ ಪರಿಸರದ ಹಲವು ಗೃಹಸ್ಥರಿಗೆ ಉಪಾಸನಾದೀಕ್ಷೆಯನ್ನು ಕೊಟ್ಟ ಉಲ್ಲೇಖವಿದೆ. ಇವರಲ್ಲಿ ಮಾರನಾರಾಯಣ ಜೋಯಿಸರೆಂಬುವರು ಮುಖ್ಯರು. ಮಠದಲ್ಲಿ ಶ್ರೀಚಕ್ರ ಪೂಜೆಗೆ ವಿಶೇಷವಾದ ಸ್ಥಾನವಿದೆ. ಪರಂಪರೆಯ ಸ್ವಾಮಿಗಳೆಲ್ಲ ಈ ಉಪಾಸನೆಯನ್ನು ಮಾಡುವ ಕ್ರಮವಿದೆ.

ಸಾಮಾನ್ಯವಾಗಿ ಸ್ವಾಮಿಗಳೇ ತಮ್ಮ ಉತ್ತರಾಧಿಕಾರಿಗೆ ಈ ಉಪಾಸನೆಯ ದೀಕ್ಷೆಯನ್ನೂ ಅಭಿಷೇಕವನ್ನೂ ಒದಗಿಸುವ ಸಂಪ್ರದಾಯ. ಆದರೆ ಈಗ ಶೃಂಗೇರಿಮಠದಲ್ಲಿ ಸ್ವಾಮಿಗಳು ಉತ್ತರಾಧಿಕಾರಿಯನ್ನು ಕಾಣದೆ ಮುಕ್ತರಾಗಿಬಿಟ್ಟಿದ್ದರು. ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳಿಗೆ ಹಿಂದೆಯೇ ಸ್ವಾಮಿಗಳಿಂದ ಶ್ರೀವಿದ್ಯಾಮಂತ್ರೋಪದೇಶವಾಗಿದ್ದಿತು; ಅವರು ಉಪಾಸನೆಯನ್ನೂ ಮಾಡುತ್ತಿದ್ದರು, ಮುಂದೆ ಪಟ್ಟಕ್ಕೆ ಬರುವ ಸ್ವಾಮಿಗಳಿಗೂ ಶ್ರೀವಿದ್ಯಾಮಂತ್ರೋಪದೇಶವನ್ನು ಮಾಡುವ ಅರ್ಹತೆಯನ್ನೂ ಪಡೆದಿದ್ದರು. ಆದರೆ ಗೃಹಸ್ಥನಾದವನು ಸಂನ್ಯಾಸಿಗೆ ಯಾವ ಉಪದೇಶವನ್ನೂ ನೀಡುವ ಹಾಗಿಲ್ಲ. ಆದುದರಿಂದ ನರಸಿಂಹನು ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ಹಿಂದಿನ ದಿನವೇ, ಇನ್ನೂ ಬ್ರಹ್ಮಚಾರಿಯಾಗಿರುವಾಗಲೇ, ಶಾಸ್ತ್ರಿಗಳು ಶ್ರೀವಿದ್ಯಾಮಂತ್ರೋಪದೇಶ ಮಾಡಿದರು. ಮಠದ ಸಂಪ್ರದಾಯದಂತೆ ನಾರಸಿಂಹ ಮಹಾಮಂತ್ರದ ಉಪದೇಶವೂ ಆಯಿತು.

ಮರುದಿನ ಅಷ್ಟಶ್ರಾದ್ಧ, ವಿರಜಾಹೋಮ, ತುಂಗಾನದಿಯಲ್ಲಿ ಪ್ರೇಷ-ಮಂತ್ರೋಚ್ಚಾರಣೆ ಮೊದಲಾದ ಯತಿದೀಕ್ಷೆಯ ಕಲಾಪಗಳು ನಡೆದು, ಹಿಂದಿನ ಸ್ವಾಮಿಗಳ ಅಧಿಷ್ಠಾನದಲ್ಲಿ ಗುರೂಪಾಸನಾದಿ ಅನುಷ್ಠಾನವಾದ ಮೇಲೆ, ಹಿಂದಿನ ಸ್ವಾಮಿಗಳ ಶಿಷ್ಯರೇ ಆಗಿದ್ದ ಸತ್ಯಾನಂದ ಸರಸ್ವತೀಸ್ವಾಮಿಗಳೆಂಬ

ಸಂನ್ಯಾಸಿಗಳಿಂದ ಮಹಾವಾಕ್ಯ ಸಂಗ್ರಹಣವಾಗಿ ಯೋಗಪಟ್ಟ ಕೊಡಲಾಯಿತು. ಅದಾದ ಮಾರನೆಯ ದಿನ ಜಗದ್ಗುರುಪೀಠಾರೋಹಣವು ನಡೆಯಿತು. ನರಸಿಂಹನು ಈಗ **'ಶ್ರೀಚಂದ್ರಶೇಖರಭಾರತೀ'** ಸ್ವಾಮಿಗಳಾದನು. ಮಠದ ಪರಂಪರೆಯಲ್ಲಿ ಇವರು ಮೂವತ್ತನಾಲ್ಕನೆಯ ಪೀಠಾಧಿಪತಿಗಳು.

ಈ ಪರಂಪರೆಯಲ್ಲಿ 'ಚಂದ್ರಶೇಖರಭಾರತೀ'ಎಂಬ ಹೆಸರು ಈವರೆಗೆ ನಾಲ್ವರಿಗೆ ಬಂದಿದೆ. ವಿದ್ಯಾರಣ್ಯರಾದ ಮೇಲೆ ಪೀಠಕ್ಕೆ ಬಂದವರು ಮೊದಲನೆಯ ಚಂದ್ರಶೇಖರಭಾರತೀಗಳೆಂದು ಹೆಸರಾದವರು; ಪರಂಪರೆಯಲ್ಲಿ ಹದಿಮೂರನೆಯವರು. ಆಮೇಲೆ ಹದಿನೈದನೆಯವರು ಇಮ್ಮಡಿ ಚಂದ್ರಶೇಖರ ಭಾರತೀಗಳು, ಹದಿನೆಂಟನೆಯವರು ಮುಮ್ಮಡಿ ಚಂದ್ರಶೇಖರಭಾರತೀಗಳು; ಈಗ ಆದವರು ನಾಲ್ವಡಿ ಚಂದ್ರಶೇಖರಭಾರತೀಗಳು. ಶೃಂಗೇರಿಮಠದ ಸ್ವಾಮಿಗಳ ಹೆಸರಿಗೆ 'ಭಾರತೀ' ಎಂಬ ಮಾತು ಸೇರಿಕೊಂಡುಬಂದುದು ಮೊದಲ ಚಂದ್ರಶೇಖರಭಾರತೀಸ್ವಾಮಿಗಳ ಕಾಲದಿಂದಲೇ; ನಾಲ್ವಡಿ ಚಂದ್ರಶೇಖರಭಾರತೀಗಳಾದಮೇಲೆ ಬಂದ ಸ್ವಾಮಿಗಳ ಹೆಸರಿನಿಂದ ಈ 'ಭಾರತೀ' ಎಂಬ ನಿರ್ದೇಶನ ಏಕೋ ಜಾರಿಕೊಂಡಿತು. ಮಠದ ಪರಂಪರೆಯ ಇಪ್ಪತ್ತೊಂದು ತಲೆಗಳಲ್ಲಿ 'ಭಾರತೀ' ಎಂಬ ಉಪಾಧಿ ಉಳಿದುಬಂದಿತು.

ಮಗನಿಗೆ ಸಂನ್ಯಾಸ, ಜಗದ್ಗುರುಪಟ್ಟ ಆಗುವಾಗ ತಂದೆ ತಾಯಿಯರು ಶೃಂಗೇರಿಯಲ್ಲಿ ಇರಲಾಗದಿದ್ದುದು ವಿಧಿಯ ಒಂದು ವಿಕಟ. ಬೆಂಗಳೂರಿನಿಂದ ಮೊದಲೇ ಹೊರಟರೂ ದಾರಿಯಲ್ಲಿ ವಾಹನ ಸೌಕರ್ಯವಿರದೆ ಅನಾನುಕೂಲವಾಗಿ ಅವರು ಶೃಂಗೇರಿಯನ್ನು ಮುಟ್ಟಿದಾಗ ಅವರು ಕಂಡದ್ದು ಸಂನ್ಯಾಸಿಯಾದ, ಕಾವಿಬಟ್ಟೆ ತೊಟ್ಟು ಜಗದ್ಗುರುವೆಂದಾದ ಮಗನನ್ನೇ! ಮಗನನ್ನು ಮೊದಲಿನಂತೆ ಮಾತನಾಡಿಸುವ ಹಾಗಿಲ್ಲ, ಮನೆಗೆ ಮಗ ಬರುವ ಹಾಗಿಲ್ಲ, ತಾವು ಮಾಡಿದ ಅಡುಗೆಯನ್ನು ಅವನಿಗೆ ಬಡಿಸುವ ಹಾಗಿಲ್ಲ, ತಮ್ಮ ಕಷ್ಟಸುಖ ಅವನೆದುರು ಹೇಳಿಕೊಳ್ಳುವಹಾಗಿಲ್ಲ. ತಾಯಿಯ ದುಃಖ ಹೇಳತೀರದು. ಅದನ್ನು

ತಿಳಿದ ಮಗ ಜಗದ್ಗುರುವಾಗಿ ಏನು ತಾನೆ ಮಾಡಬಲ್ಲ? ಏನೆಂದು ಸಮಾಧಾನ ಮಾಡಬಲ್ಲ? ಚಂದ್ರಶೇಖರಭಾರತೀ ಸ್ವಾಮಿಗಳ ಹೃದಯವನ್ನು ಕಲಕಿದ ಮೊದಲ ಸಂದರ್ಭ ಇದು; ಅವರ ಭಾವುಕಪ್ರಕೃತಿಯ ಮೇಲೆ ಬಿದ್ದ ಮೊದಲ ಪೆಟ್ಟು. ಅದನ್ನು ಅವರು ಮರೆಯುವುದು ಸಾಧ್ಯವೇ ಆಗಲಿಲ್ಲ.

# ೬. ಲೌಕಿಕ-ಪಾರಮಾರ್ಥಿಕ

ಶೃಂಗೇರಿಯ ಬಡಹುಡುಗನೊಬ್ಬನು ನಾಡಿನಲ್ಲೆಲ್ಲ ಪ್ರಸಿದ್ಧವಾದ, ಹಲವು ಅರಮನೆಗಳಿಗೆ ಗುರುಪೀಠವಾದ, ಆಢ್ಯರಾದ ಲಕ್ಷಾಂತರ ಜನರಿಗೆ ಮಾನ್ಯ-ವೆನಿಸಿದ ಜಗದ್ಗುರುಪೀಠವನ್ನು ತಾನು ಬಯಸದೆ, ತನ್ನ ಪ್ರಯತ್ನವಿಲ್ಲದೆ ಏರುವ ಅವಕಾಶ ಒದಗಿಬಂದುದು ವಿಚಿತ್ರವೇ ಎನ್ನಬೇಕು. ಅವನಿಗಾಗಲೀ ಅವನ ತಾಯಿತಂದೆಯರಿಗಾಗಲೀ ಈ ಜಗದ್ಗುರುಪಟ್ಟ ಬೇಕಾಗಿಯೇ ಇರಲಿಲ್ಲ; ಬೇಡವೆಂದೇ ಅವರ ಆಗ್ರಹವಾಗಿದ್ದಿತು. ಪಟ್ಟವೇರಿದಾಗ ನರಸಿಂಹ ನಿಗೆ ಇಪ್ಪತ್ತು ವರ್ಷಗಳಷ್ಟೆ. ಇಷ್ಟು ದೊಡ್ಡ ಮಠದ ಹರಡಿಕೊಂಡ ಆಡಳಿತವನ್ನು ಈ ಹುಡುಗ ನಿರ್ವಹಿಸಬಲ್ಲನೇ ಎನ್ನುವ ಸಂಶಯ ಮಠಕ್ಕೆ ಸಂಬಂಧಪಟ್ಟವ- ರಿಗೆಲ್ಲ ಇದ್ದುದು ಸರಿಯೇ; ಆಗಿನ ಮಹಾರಾಜರಿಗೂ ಇದ್ದಿತಂತೆ.

ಅದಕ್ಕೆ ಅಗತ್ಯವಾದ ಹಿನ್ನೆಲೆಯಾಗಲೀ ಬೇಕಾದ ಮನೋಧರ್ಮ-ವಾಗಲೀ ಶಿಕ್ಷಣವಾಗಲೀ ಈ ಹುಡುಗನಿಗೆ ಇರಲಿಲ್ಲ. ಶೃಂಗೇರಿಯ ಸ್ವಾಮಿಗಳು ಎಳೆತನದಲ್ಲೇ ಮಠಕ್ಕೆ ಸೇರುವುದೂ ಪಟ್ಟಕ್ಕೆ ಬರುವುದೂ ವಾಡಿಕೆ; ಬ್ರಹ್ಮಚಾರಿಯಾಗಿಯೇ ಸಂನ್ಯಾಸವನ್ನು ಪಡೆದು ಈ ಪೀಠವನ್ನೇರುವುದು ಅಲ್ಲಿನ ಸಂಪ್ರದಾಯ. ಹಿಂದಿನ ಸ್ವಾಮಿಗಳು ಮಠಕ್ಕೆ ಬಂದಾಗ ಅವರಿಗೆ ಎಂಟೇ ವರ್ಷ ವಯಸ್ಸು; ಆದರೆ ಹಿರಿಯ ಗುರುಗಳು ಇನ್ನೂ ಬದುಕಿದ್ದು, ಅವರೊಂದಿಗೆ ಇವರು ಹದಿಮೂರು ವರ್ಷಗಳು ಇದ್ದುಕೊಂಡು, ಅವರೊಂದಿಗೆ ಅಲ್ಲಲ್ಲಿ ಸಂಚಾರವನ್ನೂ ಮಾಡಿ, ಮಠದ ಆಡಳಿತ, ಆಯವ್ಯಯ, ಮರ್ಯಾದೆ, ಪೂಜಾವಿಧಾನ, ಶಿಷ್ಯಕೋಟಿಯ ನಿರ್ವಹಣೆ ಮೊದಲಾದ ಎಲ್ಲ ವಿವರಗಳನ್ನೂ ಚೆನ್ನಾಗಿ ಅರಿತುಕೊಂಡರು. ಹಿರಿಯ ಗುರುಗಳು ತೀರಿಕೊಂಡು ಇವರು ಪಟ್ಟಕ್ಕೆ ಬಂದಾಗ ಅನುಭವ, ಪರಿಚಯ, ಪರಿಶ್ರಮ, ಸಾಮರ್ಥ್ಯ ಎಲ್ಲವೂ ಇದ್ದುವು; ಸ್ವತಂತ್ರರಾಗಿ ಮಠದ ಎಲ್ಲ ವ್ಯವಹಾರಗಳನ್ನೂ ತಾವೇ

ನೋಡಿಕೊಳ್ಳಲಾರಂಭಿಸಿದ್ದರು. ಮುಂದೆ ಮಠದ ಸರ್ವಾಧಿಕಾರಿಗಳಾಗಿ ಮೆರೆದ ಶ್ರೀಕಂಠಶಾಸ್ತ್ರಿಗಳೂ ಅವರ ಗರಡಿಯಲ್ಲೇ ತಯಾರಾದದ್ದು; ಶ್ರೀಕಂಠಶಾಸ್ತ್ರಿಗಳೂ ಅವರಿಗೆ ಹೆದರಿ ವಿಧೇಯರಾಗಿರುತ್ತಿದ್ದರು ಎಂದಮೇಲೆ ಅವರ ದಕ್ಷತೆಯನ್ನು ಊಹಿಸಿಕೊಳ್ಳಬಹುದು!

ಆದರೆ ಚಂದ್ರಶೇಖರಭಾರತೀಗಳಿಗೆ ಈ ಸೌಕರ್ಯವಿರಲಿಲ್ಲ. ಹಿಂದಿನ ಸ್ವಾಮಿಗಳು ಕಣ್ಮರೆಯಾದಮೇಲೇ ಇವರು ಗುರುಪೀಠವನ್ನು ಕಂಡದ್ದು. ಅವರಿಗೆ ಆಡಳಿತದಲ್ಲಿ ಅನುರಕ್ತಿಯಾಗಲೀ ಅನುಭವವಾಗಲೀ ಪರಿಚಯವಾಗಲೀ ಶಿಕ್ಷಣವಾಗಲೀ ಇಲ್ಲದೆ ಅವರಿಗೂ ಹಿಂಸೆಯಾಯಿತು, ಮಠದ ಅಧಿಕಾರಿಗಳಿಗೂ ಹಿಂಸೆಯಾಯಿತು. ಅನುಭವವನ್ನೂ ಸಾಮರ್ಥ್ಯವನ್ನೂ ಧಾರಾಳವಾಗಿ ಪಡೆದಿದ್ದ ಶ್ರೀಕಂಠಶಾಸ್ತ್ರಿಗಳೇನೋ ಸರ್ವಾಧಿಕಾರಿಗಳಾಗಿದ್ದರು. ಆದರೆ ಈಗ ಸ್ವಾಮಿಗಳಾದವರು ಅವರ ಸಲಹೆಯಂತೆ, ಸೂಚನೆಯಂತೆ ಆದವರಲ್ಲ; ಸ್ವಾಮಿಗಳ ನೇಮಕದಲ್ಲಿ ಶಾಸ್ತ್ರಿಗಳ ಪಾತ್ರ ಏನೂ ಇರಲಿಲ್ಲ. ದಿಟವಾಗಿ, ಶಾಸ್ತ್ರಿಗಳು ಮಾಡಿದ ಸಲಹೆಗಳನ್ನು ಹಿಂದಿನ ಸ್ವಾಮಿಗಳು ತಮ್ಮ ಕಡೆಗಾಲದಲ್ಲಿ ತಳ್ಳಿಹಾಕಿ 'ನರಸಿಂಹನು ಬರಲಿ!' ಎಂದುಬಿಟ್ಟಿದ್ದರು.

ಮತ್ತು ಈಗ ಜಗದ್ಗುರುಪೀಠವನ್ನಲಂಕರಿಸಿರುವ ಸ್ವಾಮಿಗಳು ಹುಡುಗ-ರಾಗಿರುವಾಗ ಶಾಸ್ತ್ರಿಗಳ ಮನೆಯಲ್ಲೇ ಬೆಳೆದವರು; ಶಾಸ್ತ್ರಿಗಳ ದರ್ಪದ ಕಾವು ಹುಡುಗನ ಅನುಭವಕ್ಕೆ ಬರದೆ ಇರುವುದು ಸಾಧ್ಯವಿಲ್ಲ. ಇವೆಲ್ಲ ಕಾರಣಗಳಿಂದ ಇನ್ನು ಮುಂದೆ ಶಾಸ್ತ್ರಿಗಳ ಅಧಿಕಾರ ಎಷ್ಟರಮಟ್ಟಿಗೆ 'ಸರ್ವಾಧಿಕಾರ'ವೋ ಎಂಬ ಸಂಶಯ ಅವರಿಗೂ ಇತರ ಅಧಿಕಾರಿಗಳಿಗೂ ಬಂದಿದ್ದರೆ ಹೆಚ್ಚಲ್ಲ. ಅವರ ಆಡಳಿತವನ್ನು ಹೊಸ ಸ್ವಾಮಿಗಳು ಎಷ್ಟರಮಟ್ಟಿಗೆ ಒಪ್ಪುವರೋ ಹೇಳುವುದು ಹೇಗೆ? ಇವರನ್ನೇ ಮಠದ ಸರ್ವಾಧಿಕಾರಿಗಳಾಗಿ ಉಳಿಸಿಕೊಳ್ಳುವರೋ ಎನ್ನುವುದೂ ಖಚಿತವಲ್ಲವಷ್ಟೆ?

ಆದರೆ ಈ ಆತಂಕಕ್ಕೆ ಎಡೆಯಿರಲಿಲ್ಲ. ಶ್ರೀಕಂಠಶಾಸ್ತ್ರಿಗಳ ಪೋಷಣೆಯಲ್ಲಿ ಬೆಳೆದ ಹುಡುಗ ಅವರಲ್ಲಿ ಗೌರವಬುದ್ಧಿಯನ್ನೇ ಇರಿಸಿಕೊಂಡಿದ್ದ; ಸ್ವಾಮಿಗಳಾದಮೇಲೂ ಇದೇನು ಕಡಮೆಯಾಗಲಿಲ್ಲ. ಅಷ್ಟಲ್ಲದೆ, ತಮಗೆ ಸಂನ್ಯಾಸವಾಗುವ ಮೊದಲು ಶ್ರೀವಿದ್ಯಾಮಂತ್ರೋಪದೇಶ, ಶ್ರೀಚಕ್ರಪೂಜೆಯ

ದೀಕ್ಷೆ, ತಾಂತ್ರಿಕ ಅಭಿಷೇಕಗಳನ್ನು ನಡೆಸಿದವರೇ ಶ್ರೀಕಂಠಶಾಸ್ತ್ರಿಗಳು; ಸಂನ್ಯಾಸಿಗಳಾದಮೇಲೂ ಶಾಸ್ತ್ರಿಗಳಲ್ಲಿ ಈ ಗುರುಭಾವವನ್ನೇ ಇರಿಸಿಕೊಂಡಿದ್ದರು. ತಾವು ಜಗದ್ಗುರುಪೀಠವನ್ನೇರಿದ್ದರೂ ಶ್ರೀಕಂಠಶಾಸ್ತ್ರಿಗಳು ತಮ್ಮ ಹಿರಿಯರೆನ್ನುವುದನ್ನು ಮರೆಯಲಿಲ್ಲ; ಮೊದಲಿನಂತೆ ಈಗಲೂ ಅವರಲ್ಲಿ ನಮ್ರತೆಯಿಂದಲೇ ನಡೆದುಕೊಳ್ಳುತ್ತಿದ್ದರು.

ಮೇಲಾಗಿ, ಈ ಸ್ವಾಮಿಗಳಿಗೆ ಮಠದ ಆಡಳಿತದ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಲೋಕವ್ಯವಹಾರದಲ್ಲಿ ಅಭಿರುಚಿಯೂ ಇರಲಿಲ್ಲ. ಈವರೆಗೆ ಮಠವನ್ನು ನಡೆಸಿಕೊಂಡುಹೋದಂತೆಯೇ ಮುಂದೆಯೂ ಅವರು ನಡೆಸಿಕೊಂಡುಹೋಗುತ್ತಾರೆ, ನನಗೇಕೆ ಅದರ ಗೊಡವೆ; ಅವರು ಹೇಳಿದಂತೆ ಮಾಡಿದರಾಯಿತು, ಎನ್ನುವುದು ಸ್ವಾಮಿಗಳ ಮನೋವೃತ್ತಿ. ತಾವು ಸಂನ್ಯಾಸ-ಧರ್ಮವನ್ನು ನಿಷ್ಠೆಯಿಂದ ಪಾಲಿಸಬೇಕು, ವೇದಾಂತದಲ್ಲಿ ಆಳವಾದ ಜ್ಞಾನ ಪಡೆಯಬೇಕು, ಮುಕ್ತಿಗಾಗಿ ತಪಸ್ಸು ಮಾಡಬೇಕು ಎನ್ನುವ ಸಂಕಲ್ಪವನ್ನು ಮಾಡಿಕೊಂಡರು. ಶ್ರೀಕಂಠಶಾಸ್ತ್ರಿಗಳ ಅಧಿಕಾರ, ಆಡಳಿತ ಎಂದಿನಂತೆ ಮುಂದುವರಿಯಿತು.

ಇವರು ಮಾತ್ರವಲ್ಲ, ಬೇರೆ ಯಾರು ಸ್ವಾಮಿಗಳಾಗಿ ಬಂದಿದ್ದರೂ ಶ್ರೀಕಂಠಶಾಸ್ತ್ರಿಗಳನ್ನು ಆಗ ಸರ್ವಾಧಿಕಾರಪದವಿಯಿಂದ ಹೊರದೂಡುವುದು ಆಗುತ್ತಿರಲಿಲ್ಲ. ಮಠದ ಎಲ್ಲ ವಿವರಗಳು ಕರಾರುವಾಕ್ಕಾಗಿ ಸಮಗ್ರವಾಗಿ ತಿಳಿದಿದ್ದುದು ಅವರೊಬ್ಬರಿಗೇ; ಅವರನ್ನು ಬಿಟ್ಟು ಇಪ್ಪತ್ತು ವರ್ಷಗಳಿಂದ ಮಠದಲ್ಲಿ ದೊಡ್ಡದಾಗಲಿ ಸಣ್ಣದಾಗಲಿ ಯಾವೊಂದು ಕೆಲಸವೂ ನಡೆದಿರಲಿಲ್ಲ. ಮಠದ ವ್ಯವಹಾರ, ಸಂಪ್ರದಾಯ ಎರಡಕ್ಕೂ ಅವರೇ ಪ್ರಮಾಣಪುರುಷರು; ಲೌಕಿಕ, ವೈದಿಕ ಎರಡೂ ವಿಭಾಗಗಳು ಮಠದಲ್ಲಿ ಅವರ ಮೇಲ್ವಿಚಾರಣೆಯಲ್ಲೇ ನಡೆಯುವುವು. ಅವರ ಸಾಮರ್ಥ್ಯದ ವಿಚಾರವಾಗಿ ಯಾರಿಗೂ ಯಾವ ಅನುಮಾನವಿರಲಿಲ್ಲ. ಅವರ ಅಧಿಕಾರವನ್ನು ತಪ್ಪಿಸಬೇಕೆಂದಾಗಲೀ, ಕಸಿದುಕೊಳ್ಳಬೇಕೆಂದಾಗಲೀ ಆಸೆಪಟ್ಟ ಗಂಡು ಯಾರೂ ಕಾಣಿಸಿಕೊಳ್ಳಲಿಲ್ಲ; ಅವರಿಗೆ ಎದುರಾಡುವ ಎದೆಗಾರಿಕೆ ಯಾರಿಗೂ ಒದಗಿಬರಲಿಲ್ಲ. ಅವರಿಲ್ಲದೆ ಮಠ ಮೂರು ಗಳಿಗೆಯೂ ನಡೆಯಲಾರದು ಎನ್ನುವಷ್ಟು ಅವರ ಹಿಡಿತ ಮಠದ ಮೇಲೆ.

ಹಿಂದಿನ ಸ್ವಾಮಿಗಳಿಗೂ ಶ್ರೀಕಂಠಶಾಸ್ತ್ರಿಗಳಿಗೂ ಸ್ವಭಾವದಲ್ಲಿ ಹೊಂದಾಣಿಕೆಯಿದ್ದಿತು. ಇಬ್ಬರೂ ಮಠದ ಪ್ರಚಾರ, ಪ್ರಭಾವ, ಪ್ರಗತಿಗಳನ್ನು ಕುರಿತು ಹಗಲಿರುಳೂ ಯೋಚನೆ ಮಾಡುತ್ತಿದ್ದವರು; ಇಬ್ಬರಿಗೂ ವ್ಯವಹಾರದಲ್ಲಿ ಆಸಕ್ತಿ, ಸಾಮರ್ಥ್ಯಗಳು ಸಮಾನವಾಗಿಯೇ ಇದ್ದುವು. ಹೀಗಾಗಿ ಅವರಿಬ್ಬರ ಜೋಡಿ ಮಠದ ಇತಿಹಾಸದಲ್ಲಿ ಕಳೆಗೂಡಿದ್ದಿತು. ಆದರೆ ಈಗ ಸ್ವಾಮಿಗಳಾದವರ ಸ್ವಭಾವ ಶ್ರೀಕಂಠಶಾಸ್ತ್ರಿಗಳ ಸ್ವಭಾವಕ್ಕೆ ತೀರ ವಿರುದ್ಧವಾದುದು. ಅವರಿಬ್ಬರೂ ಪಕ್ಕಪಕ್ಕದಲ್ಲಿ ನಿಂತಾಗಲೇ ಈ ವಿರೋಧ ಎದ್ದು ಕಾಣುತ್ತಿತ್ತು. ಶಾಸ್ತ್ರಿಗಳು ಎತ್ತರವಾದ ಆಳು, ಆಜಾನುಬಾಹು, ದಷ್ಟಪುಷ್ಟವಾದ ಶರೀರ, ಮೈಬಣ್ಣ ಬಿಳುಪು, ಮೇಲೆ ಉಡುಗೆಯಲ್ಲಿ ಠೀವಿ, ನಡಿಗೆಯಲ್ಲಿ ಗತ್ತು. ಸ್ವಾಮಿಗಳು ಕುಳ್ಳು, ತೆಳುವು ಮೈ, ಮೈ ಬಣ್ಣ ಕಂದು, ಉಡುಗೆಯಲ್ಲಿ ಸರಳ, ನಡಿಗೆಯಲ್ಲಿ ನಯ, ಶಾಸ್ತ್ರಿಗಳ ದರ್ಪ, ಸ್ವಾಮಿಗಳ ವಿನಯ; ಅವರ ಠೇಂಕಾರ, ಇವರ ಸಂಕೋಚ; ಅವರ ಪ್ರವೃತ್ತಿ, ಇವರ ನಿವೃತ್ತಿ; ಅವರ ಆಡಂಬರ, ಇವರ ಅನಾದರ; ಅವರ ಲೌಕಿಕ, ಇವರ ಆಧ್ಯಾತ್ಮಿಕ — ಎಲ್ಲ ವಿಧಗಳಲ್ಲೂ ಬೇರೆಬೇರೆಯೇ.

ಸುಮಾರು ಹದಿನೆಂಟು ವರ್ಷಗಳು ಈ ಸ್ವಾಮಿಗಳು ಜಗದ್ಗುರುಗಳಾಗಿ, ಶ್ರೀಕಂಠಶಾಸ್ತ್ರಿಗಳು ಸರ್ವಾಧಿಕಾರಿಗಳಾಗಿ, ಎತ್ತು ಏರಿಗೆ ಎಮ್ಮೆ ನೀರಿಗೆ ಎಂದು ಹೆಣಗಾಡಿದರು. ಈ ಅವಧಿಯಲ್ಲಿ, ಈ ಅವಧಿಯಲ್ಲೇನು, ಬದುಕಿರುವ-ವರೆಗೂ ಸ್ವಾಮಿಗಳು ಮಠದ ವ್ಯವಹಾರದಲ್ಲಿ ಕೈಹಾಕಲಿಲ್ಲ. ಅದನ್ನು ಸಂಪೂರ್ಣವಾಗಿ ಶಾಸ್ತ್ರಿಗಳಿಗೆ ಬಿಟ್ಟಿದ್ದರು. ತಮ್ಮನ್ನು ತಮ್ಮ ಪಾಡಿಗೆ ಬಿಟ್ಟರೆ ಸಾಕೆಂದು ಸ್ವಾಮಿಗಳ ಹೆಬ್ಬಯಕೆ. ಆದರೆ ನೆಪಕ್ಕಾದರೂ ಸ್ವಾಮಿಗಳನ್ನು ಮುಂದಿರಿಸಿಕೊಂಡೇ ಮಠದ ವ್ಯವಹಾರ ನಡೆಯಬೇಕಲ್ಲವೆ? ಸ್ವಾಮಿಗಳಿಲ್ಲದೆ ಸಂಚಾರವೇನು? ಸಂಚಾರವಿಲ್ಲದೆ ಶಿಷ್ಯ ಸಂಗ್ರಹ ಹೇಗೆ? ಶಿಷ್ಯಸಂಗ್ರಹವಿಲ್ಲದೆ ಮಠಕ್ಕೆ ಆದಾಯವೆಂತು? ಆದಾಯವಿಲ್ಲದೆ ಆಡಂಬರ ಸಾಧ್ಯವೇ? ಆಡಂಬರವಿಲ್ಲದೆ ಪ್ರತಿಷ್ಠೆ ಎಲ್ಲಿಯದು? ಮಠದ ಅಧಿಕಾರಿಗಳನ್ನು ನೋಡಿ-ಕೊಂಡು ಯಾರೂ ಮಠವನ್ನು ಮೂಸುವುದಿಲ್ಲ; ಮಠದ ಸ್ವಾಮಿಗಳಿದ್ದರೇ ಜನ ಬಂದು ನೆರೆದಾರು. ಸ್ವಾಮಿಗಳು ವ್ಯವಹಾರ ಬಲ್ಲವರಾದರೇನೋ ಸರಿ, ಪ್ರತಿಭಾವಂತರಾಗಿ ಉತ್ಸಾಹಿಗಳಾಗಿದ್ದರಂತೂ ಸರಿಯೇ ಸರಿ. ಸ್ವಾಮಿಗಳ ಈ ಹೆಗ್ಗಳಿಕೆ ಏನೊಂದು ಇರದಿದ್ದರೂ, ಮಠದ ಪರಂಪರೆ, ಪೀಠದ ಹಿರಿಮೆ

ಎಂದಾದರೂ ಜನ ಬಂದಾರು. ಅರುಳೋ ಮರುಳೋ, ಬೆಪ್ಪೋ ಸಪ್ಪೆಯೋ, ಮಠಕ್ಕೊಂದು ಸ್ವಾಮಿ ಎಂದು ಮುಂದಿದ್ದರೆ, ಸರ್ವಾಧಿಕಾರಿಗಳು ಉಳಿದದ್ದನ್ನೆಲ್ಲ ನೋಡಿಕೊಂಡಾರು. ಆದರೆ ಈ ಸ್ವಾಮಿಗಳು ಕೂತವರು ಏಳದೆ ಇದ್ದರೆ, ಬಂದವರನ್ನು ನೋಡದೆ ಇದ್ದರೆ, ನೋಡಿದವರನ್ನು ಮಾತನಾಡಿಸದೆ ಇದ್ದರೆ ಮಾತನಾಡಿಸಿದವರನ್ನು ಮೋಡಿಮಾಡದಿದ್ದರೆ ಸರ್ವಾಧಿಕಾರಿಗಳೇನು ಮಾಡಿಯಾರು ?

ಅವರ ಸರ್ವಾಧಿಕಾರದ ಹರವಿನೊಳಗೆ ಸ್ವಾಮಿಗಳ ಮೇಲೆ ಅಧಿಕಾರವೂ ಸೇರಿಕೊಳ್ಳಬೇಕಾಯಿತು. ಸ್ವಾಮಿಗಳು ಹೇಗೂ ಸಣ್ಣ ವಯಸ್ಸಿನವರು, ಎಳೆತನದಲ್ಲಿ ತಮ್ಮ ಆಶ್ರಿತರಾಗಿದ್ದವರು, ತಮಗೆ ಎಂದೂ ವಿಧೇಯ-ರಾಗಿರುವವರು, ತಮ್ಮ ಮನಸ್ಸಿಗೆ ಇಷ್ಟೂ ಕಷ್ಟಪಡಿಸಲಾರದವರು, ಜಗದ್ಗುರುಗಳಾದರೂ ತಮ್ಮನ್ನು ಗುರುಭಾವ ದಿಂದಲೇ ಕಾಣುವವರು. ಇವರ ಮೇಲೆ ಅಧಿಕಾರವನ್ನು ನಡೆಸುವುದು ಶಾಸ್ತ್ರಿಗಳಿಗೆ ಏನೂ ಪ್ರಯಾಸವಾಗಲಿಲ್ಲ. ಶಾಸ್ತ್ರಿಗಳನ್ನು ಅಧಿಕಾರದಿಂದ ತಪ್ಪಿಸಲು ಸ್ವಾಮಿಗಳು ಮನಸ್ಸು ಮಾಡಿದ್ದರೆ ಅವರಿಗೆ ಸಾಧ್ಯವಾಗದೆ ಇರುತ್ತಿರಲಿಲ್ಲ. ಆದರೆ ಸ್ವಾಮಿಗಳು ಹಾಗೆ ಯತ್ನಿಸುವುದಿರಲಿ, ಅದರ ಆಲೋಚನೆಯನ್ನೂ ಮಾಡಲಿಲ್ಲ. ವ್ಯವಹಾರವೇ ಬೇಡದವರಿಗೆ ಇವರಾದರೇನು ಮತ್ತೊಬ್ಬರಾದರೇನು? ಅವರಿಂದ ಶಾಸ್ತ್ರಿಗಳಿಗೆ ಏನೂ ತೊಂದರೆ ಯಾಗಲಿಲ್ಲ. ಆದರೆ ಮಠದ ಹಿಂದಿನ ವೈಭವವನ್ನು ಕಂಡ, ಅದಕ್ಕೆ ಬಹುಮಟ್ಟಿಗೆ ಕಾರಣರಾದ ಶಾಸ್ತ್ರಿಗಳಿಗೆ ಈ ಸ್ವಾಮಿಗಳ ಜಡ ಸ್ವಭಾವ ಹಿಡಿಸಲಿಲ್ಲ. ಅವರನ್ನು ತಿದ್ದಲು ಪ್ರಯತ್ನಪಟ್ಟು ವಿಫಲರಾಗಿ ಕೊನೆಗೆ ತಾವೇ ಅಧಿಕಾರದಿಂದ ಕಾಲ್ತೆಗೆದರು.

# ೭. ಪೆಣಸಾಟ

ಸ್ವಾಮಿಗಳು ಪಟ್ಟವೇರಿದ ಕೆಲವು ವರ್ಷಗಳು ಯಾವ ಆತಂಕಕ್ಕೂ ಎಡೆಯಿರದಂತೆ ಸರಿದುವು. ಹಿಂದಿನ ಸ್ವಾಮಿಗಳೂ ತಾವು ಪಟ್ಟಕ್ಕೆ ಬಂದಮೇಲೆ ಆರು ವರ್ಷಗಳು ಶೃಂಗೇರಿಯಲ್ಲೇ ಇದ್ದುಕೊಂಡು ಮುಕ್ತರಾದ ತಮ್ಮ ಗುರುಗಳ ಆರಾಧನೆಯಲ್ಲೇ ಕಳೆದಿದ್ದರು. ಅವರಿಗೆ ಆ ವೇಳೆಗೆ ವಿದ್ಯಾಭ್ಯಾಸ ವಾದರೂ ಪೂರ್ಣವಾಗಿದ್ದಿತು. ಈಗ ಸ್ವಾಮಿಗಳಾದವರಿಗಾದರೊ ಶೃಂಗೇರಿಯಲ್ಲಿ ಮೂರು ವರ್ಷಗಳು ನಡೆದ ವ್ಯಾಕರಣ ಮತ್ತು ತರ್ಕಶಾಸ್ತ್ರದ ಪಾಠ, ಬೆಂಗಳೂರಿನಲ್ಲಿ ಒಂದು ವರ್ಷ ಪಡೆದುಕೊಂಡ ಪೂರ್ವಮೀಮಾಂಸಾಭಾಗದ ಪರಿಚಯ ಇಷ್ಟೇ ಅವರ ವಿದ್ಯಾಭ್ಯಾಸ. ಮಠದ ಸ್ವಾಮಿಗಳಾದವರಿಗೆ ಶಾಸ್ತ್ರ ಪರಿಚಯ ಚೆನ್ನಾಗಿರಬೇಕು ತಾನೆ? ಬರಿಯ ವ್ಯವಹಾರವಲ್ಲದೆ, ವಿದ್ವಾಂಸರನ್ನೂ ಮೆಚ್ಚಿಸುವುದು ಮುಖ್ಯ. ಅವರ ಅನುಗ್ರಹಭಾಷಣಗಳು, ಉಪದೇಶಗಳು, ಸಂಭಾಷಣೆ ಇವು ಮಠದ ಪ್ರತಿಷ್ಠೆಯನ್ನೂ ಪ್ರಭಾವವನ್ನೂ ಕಾಪಾಡುವುವು, ಬೆಳೆಸುವುವು. ಈ ದೃಷ್ಟಿಯಿಂದ ಸರ್ವಾಧಿಕಾರಿಗಳು ಸ್ವಾಮಿಗಳ ವಿದ್ಯಾಭ್ಯಾಸ ಶೃಂಗೇರಿಯಲ್ಲೇ ಮುಂದುವರಿಯುವ ವ್ಯವಸ್ಥೆ ಮಾಡಿದರು.

ಸ್ವಾಮಿಗಳಿಗೆ ಬೇಕಾಗಿದ್ದುದೂ ಅದೇ; ಆದರೆ ಸರ್ವಾಧಿಕಾರಿಗಳು ಎಣಿಸಿದ ಕಾರಣಕ್ಕಾಗಿ ಅಲ್ಲ! ಅವರಿಗೆ ಶಾಸ್ತ್ರಾಭ್ಯಾಸದಲ್ಲಿ ದಿಟವಾದ ಆಸಕ್ತಿಯಿದ್ದಿತು. ಅವರು ಬೆಂಗಳೂರಿನ ಶಂಕರಮಠದಲ್ಲಿ ಕಲಿಯುತ್ತಿರುವಾಗ ವರ್ಷದ ಕಡೆಯ ಒಂದೆರಡು ತಿಂಗಳುಗಳು ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳೆಂಬ ಪಂಡಿತರ ಬಳಿ ತಾವು ಶೃಂಗೇರಿಯಲ್ಲಿ ಓದದೇ ಬಿಟ್ಟ ತರ್ಕಗ್ರಂಥಗಳನ್ನು ಕಲಿಯುತ್ತಿದ್ದರು. ಆಗ ವಿರೂಪಾಕ್ಷಶಾಸ್ತ್ರಿಗಳು ಮಠದ ಶಾಲೆಯಲ್ಲಿ ಅಧ್ಯಾಪಕರಾಗಿರಲಿಲ್ಲ; ನರಸಿಂಹನೇ ಶಂಕರಮಠದ ಅಗ್ರಹಾರದಲ್ಲೇ ಇದ್ದ ಅವರ

ಮನೆಗೆ ಹೋಗಿ ಅವರಿಂದ ಪಾಠ ಹೇಳಿಸಿಕೊಳ್ಳುತ್ತಿದ್ದ. ಈಗ ಶೃಂಗೇರಿಯಲ್ಲಿ ಸ್ವಾಮಿಗಳಾದ ಮೇಲೆ ಬೆಂಗಳೂರಿನಿಂದ ವಿರೂಪಾಕ್ಷಶಾಸ್ತ್ರಿಗಳನ್ನು ಕರೆಸಿಕೊಂಡು ಶೃಂಗೇರಿಯಲ್ಲೇ ಅವರನ್ನು ಉಳಿಸಿಕೊಂಡು ಎರಡು ವರ್ಷಗಳ ಕಾಲ ಅವರ ಬಳಿ ವೇದಾಂತಗ್ರಂಥಗಳನ್ನೂ, ಎಂದರೆ ಪ್ರಸ್ಥಾನತ್ರಯಭಾಷ್ಯಗಳನ್ನೂ, ಅದಕ್ಕೆ ಅನುಕೂಲವಾದ ಕೆಲವು ನ್ಯಾಯಗ್ರಂಥಗಳನ್ನೂ ಅಭ್ಯಾಸಮಾಡಿದರು.

## ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳು :

ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳು ಧಾರವಾಡದ ಕಡೆಯಿಂದ ಸಣ್ಣ ವಯಸ್ಸಿನಲ್ಲೇ ಬೆಂಗಳೂರಿಗೆ ಬಂದು ನುಗ್ಗೆಹಳ್ಳಿ ತಿರುಮಲಾಚಾರ್ಯರೆಂಬ ವಿದ್ವಾಂಸರಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಚಿಕ್ಕೇರೂರು ಸ್ವಾಮಿರಾಯಾ ಚಾರ್ಯರೆಂಬ (೧೮೨೩ - ೧೯೦೩) ಚತುಃಶಾಸ್ತ್ರ ಪಂಡಿತರಲ್ಲಿ ಶಿಷ್ಯಪ್ರವೃತ್ತಿ- ಮಾಡಿದ್ದರು. ಈ ಸ್ವಾಮಿರಾಯಾ ಚಾರ್ಯರು ಪಂಡಿತರು ಮಾತ್ರವಲ್ಲ, ತಪಸ್ವಿಗಳು. ಕಾಶೀ ಮಹಾರಾಜರಿಂದ ಗ್ವಾಲಿಯರ್ ಸಂಸ್ಥಾನದ ಅರಸರಿಂದ ಸನ್ಮಾನಿತರಾಗಿದ್ದು ಕಡೆಗಾಲದಲ್ಲಿ ಹರಪನಹಳ್ಳಿ-ಯಲ್ಲಿರುತ್ತಿದ್ದರು. ವಿರೂಪಾಕ್ಷ ಶಾಸ್ತ್ರಿಗಳು ಅವರ ಬಳಿ ನ್ಯಾಯ, ಮೀಮಾಂಸಾ-ಶಾಸ್ತ್ರಗಳನ್ನು ಕಲಿತದ್ದು ಇಲ್ಲಿಯೆ. ತಮ್ಮ ಗುರುಗಳ ಮೇಲೆ ಶಾಸ್ತ್ರಿಗಳು ಬರೆದಿರುವ ಶ್ಲೋಕ ಇದು —

ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿ

ವಿದ್ವತ್ತಾರಕಶೀತಭಾನುರಮಲೋ ವಾದೀಭಕಂಠೀರವಃ
ಸ್ವಾಂತೇವಾಸಿಶತತ್ರಯಪ್ರವಚನಪ್ರೌಢಪ್ರತಾಪೋಜ್ಜ್ವಲಃ ।
ಶ್ರೀಮದ್ರಾಜಪದಾಗ್ರವರ್ತಿಗುರುರಾಟ್ ಶ್ರೀಸ್ವಾಮಿನಾಮಾ ಗುರುಃ
ಚಿಕ್ಕೇರೂರು ಶುಭಾನ್ವಯಾಬ್ಧಿಶಶಭೃದ್ವೈರಾಗ್ಯಭಾಗ್ಯೋಽವತಾತ್ ॥

ಮುನ್ನೂರು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದವರಂತೆ; ರಾಜಸನ್ಮಾನ-ವಿದ್ದರೂ, ಅಪಾರವಾದ ವೈದುಷ್ಯವಿದ್ದರೂ ವಿರಾಗಿಗಳಂತೆ.

ವಿರೂಪಾಕ್ಷಶಾಸ್ತ್ರಿಗಳಿಗೆ ಹೀಗೆ ಒಬ್ಬರು ಗುರುಗಳು ಮಾಧ್ವ-ಸಂಪ್ರದಾಯದವರು; ಇನ್ನೊಬ್ಬರು (ತಿರುಮಲಾಚಾರ್ಯರು) ಶ್ರೀವೈಷ್ಣವ ಸಂಪ್ರದಾಯದವರು. ದಿವಾನರಾಗಿದ್ದ ಶೇಷಾದ್ರಿ ಅಯ್ಯರ ಮನೆಯಲ್ಲಿ ಶಾಸ್ತ್ರಿಗಳು ತಮ್ಮ ವಿದ್ಯಾರ್ಥಿದೆಶೆಯಲ್ಲೇ ಪುರಾಣಪ್ರವಚನ ಮಾಡುತ್ತಿದ್ದು ಅವರ ಮೆಚ್ಚುಗೆಯನ್ನು ಪಡೆದು, ಅವರ ಮೂಲಕವಾಗಿ ಶೃಂಗೇರಿಮಠದ ಹಿಂದಿನ ಸ್ವಾಮಿಗಳ ಅಭಿಮಾನಕ್ಕೆ ಪಾತ್ರರಾದರು. ಕೆಲವು ಕಾಲ ಇವರು ಈ ಸ್ವಾಮಿಗಳಲ್ಲಿ ಶಿಷ್ಯವೃತ್ತಿಯನ್ನೂ ಮಾಡಿದರು. ಭಾರತಸರಕಾರದಿಂದ 'ಮಹಾ ಮಹೋಪಾಧ್ಯಾಯ' ಎಂಬ ಪ್ರಶಸ್ತಿಯನ್ನೂ, ವಾರಣಾಸಿಯ ವಿದ್ಯಾಪೀಠದಿಂದ 'ತರ್ಕಪಂಚಾನನ' ಎಂಬ ಗೌರವವನ್ನೂ, ಮೈಸೂರು ಮಹಾರಾಜರಿಂದ 'ವಿದ್ಯಾನಿಧಿ' ಎಂಬ ಸನ್ಮಾನವನ್ನೂ ಪಡೆದುಕೊಂಡ ಪ್ರಕಾಂಡ ಪಂಡಿತರು. ಮೊದಲು ತರ್ಕದ ಮೇಲಿದ್ದ ಅವರ ಒಲವು ಸ್ವಾಮಿಗಳ ಸಂಪರ್ಕದಿಂದ ವೇದಾಂತದ ಕಡೆಗೆ ತಿರುಗಿತು. ಬಡತನದಲ್ಲಿ ಬೆಳೆದು, ಕಷ್ಟಗಳನ್ನನುಭವಿಸಿ, ವಿದ್ಯಾರ್ಜನೆಮಾಡಿ, ಅರಮನೆ-ಗುರುಮನೆಗಳಲ್ಲಿ ಸನ್ಮಾನಿತರಾಗಿದ್ದರು, ಮಹಾಜನರ ಗೌರವಕ್ಕೆ ಪಾತ್ರರಾಗಿದ್ದರು. ಗೃಹಸ್ಥರಾದರೂ ನಿಃಸ್ಪೃಹರಾಗಿ, ವಿರಕ್ತರಾಗಿ ಬದುಕನ್ನು ನಡೆಸಿ ಕಡೆಗಾಲದಲ್ಲಿ ಅಭಿನವ-ವಾಲುಕೇಶ್ವರಭಾರತೀ ಎಂಬ ಹೆಸರಿನಿಂದ ಸಂನ್ಯಾಸಿಗಳಾಗಿ ಶೃಂಗೇರಿಯ ಶಾಖಾಮಠವಾದ ಕೂಡಲಿಗೆ ಮಠಾಧಿಪತಿಗಳಾದರು.

ದೊಡ್ಡ ವಿದ್ವಾಂಸರಾದರೂ ಅತ್ಯಂತ ಸರಳರು, ವಿನಯಶೀಲರು; ಜ್ಞಾನಿಗಳಾದರೂ ಕರ್ಮನಿಷ್ಠೆಯುಳ್ಳವರು; ಪರಮಪ್ರಾಮಾಣಿಕರು, ಸದಾಚಾರ-ಸಂಪನ್ನರು, ಸ್ನೇಹಶೀಲರು, ಪ್ರಚಾರವನ್ನು ಒಲ್ಲದವರು, ಅಜಾತಶತ್ರುಗಳು.

ವೇದಾಂತವನ್ನು ಜೀವನೋಪಾಯವಾಗಿ ಮಾರ್ಪಡಿಸದೆ ಜೀವನದ ಮುಖ್ಯರಸವಾಗಿ ನಡೆಸಿಕೊಂಡವರು. ಇವರ ದೊಡ್ಡತನವನ್ನು ಕುರಿತು ಡಿ. ವಿ. ಗುಂಡಪ್ಪನವರು ತಮ್ಮ ಜ್ಞಾಪಕಚಿತ್ರಶಾಲೆಯ ಐದನೆಯ ಸಂಪುಟದಲ್ಲಿ (ವೈದಿಕಧರ್ಮಸಂಪ್ರದಾಯಸ್ಥರು) ಬರೆದಿದ್ದಾರೆ. ಶಾಸ್ತ್ರಿಗಳಲ್ಲಿ ಕೆಲಕಾಲ ವಿದ್ಯಾಭ್ಯಾಸ ಮಾಡಿದ ವೀರಕೇಸರಿ ಸೀತಾರಾಮಶಾಸ್ತ್ರಿಗಳ ಬಾಯಿಯಿಂದಲೂ ಅವರ ಗುಣಗಾನವನ್ನು ಕೇಳಿದ್ದೇನೆ.

ಇಂಥವರ ಬಳಿ ನರಸಿಂಹನು ತರ್ಕಶಾಸ್ತ್ರದ ಕೆಲವು ಪ್ರಕರಣಗ್ರಂಥಗಳನ್ನು ಓದಲು ಮೊದಲಿಟ್ಟುದು ಅವನ ವ್ಯಕ್ತಿತ್ವವನ್ನು ರೂಪಿಸಲು ನೆರವಾಯಿತು. ಶಾಸ್ತ್ರಿಗಳ ಪ್ರವಚನಪದ್ಧತಿಯನ್ನೂ, ನಿಸ್ಸೀಮವಾದ ಮನಸ್ಸನ್ನೂ ನಿಷ್ಕಾಮ ಪ್ರವೃತ್ತಿಯನ್ನೂ, ರೂಢಮೂಲವಾದ ವಿರಕ್ತಿಯನ್ನೂ ಗಮನಿಸಿದ ನರಸಿಂಹನು ಸ್ವಾಮಿಗಳಾದಮೇಲೂ ಇವರ ಬಳಿ ಶಿಷ್ಯಪ್ರವೃತ್ತಿಯನ್ನು ಮಾಡಲು ಹಾತೊರೆದದ್ದು ಸಹಜವೇ. ಮೊದಮೊದಲು ಶಾಸ್ತ್ರಿಗಳು ತಾವು ಗೃಹಸ್ಥರಾಗಿದ್ದು ಸಂನ್ಯಾಸಿಗಳಿಗೆ, ಅದರಲ್ಲೂ ಆಮ್ನಾಯಪೀಠಾಧಿಪತಿಗಳಿಗೆ ಪಾಠ ಹೇಳುವುದು ಸರಿಯಲ್ಲವೆಂದು ಒಪ್ಪಲಿಲ್ಲ. ಆದರೆ ಸ್ವಾಮಿಗಳು ಹಟಮಾಡಿ, ಅವರ ಆಕ್ಷೇಪಗಳಿಗೆಲ್ಲ ಸಮಾಧಾನ ಹೇಳಿ ಒಪ್ಪಿಸಿದರು. ಜಗದ್ಗುರುಪೀಠದಲ್ಲಿದ್ದರೂ, ಸ್ವಾಮಿಗಳು ಈ ಗೃಹಸ್ಥಗುರುಗಳ ವಿಚಾರವಾಗಿ ಭಯಭಕ್ತಿಗಳಿಂದ ನಡೆದುಕೊಂಡು ವೇದಾಂತದಲ್ಲಿ ಪ್ರೌಢಿಮೆಯನ್ನು ಪಡೆದುಕೊಂಡರು. ಅಷ್ಟು ಮಾತ್ರವಲ್ಲ, ಶಾಸ್ತ್ರಿಗಳ ವ್ಯಕ್ತಿತ್ವವನ್ನು ಮೇಲ್ಪಂಕ್ತಿಯಾಗಿ ಪರಿಗ್ರಹಿಸಿ ಅವರ ಗುಣಗಳನ್ನೆಲ್ಲ ರೂಢಿಸಿಕೊಂಡರು. ಸ್ವಾಮಿಗಳ ಮೇಲೆ ಬಿದ್ದ ದೊಡ್ಡ ಪ್ರಭಾವವೆಂದರೆ ವಿರೂಪಾಕ್ಷಶಾಸ್ತ್ರಿಗಳದ್ದು.

ಲೋಕದಲ್ಲಿ ಯಾವ ಕಾಲದಲ್ಲಿಯೂ ಪಂಡಿತರಿಗೇನೂ ಕೊರತೆಯಿಲ್ಲ. ವಿಷಯವನ್ನು ಚೆನ್ನಾಗಿ ತಿಳಿದುಕೊಂಡವರೂ, ಅಷ್ಟೇ ಚೆನ್ನಾಗಿ ತಿಳಿಯ-ಪಡಿಸುವವರೂ ಹಲವರಿರುತ್ತಾರೆ. ಆದರೆ ಆಚಾರ-ವಿಚಾರಗಳೆರಡರಲ್ಲೂ ಪರಿಶುದ್ಧರಾಗಿರುವ ಪಂಡಿತರು ವಿರಳ. ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸ, ಅನುಸಂಧಾನ, ಬೋಧನ, ಸಾಧನ ಎಲ್ಲದರಲ್ಲೂ ಎತ್ತಿದ ಕೈಯಾಗಿರುವ-ವರಂತೂ ತೀರ ವಿರಳ. ವಿರೂಪಾಕ್ಷಶಾಸ್ತ್ರಿಗಳು ಕಡೆಯ ಗುಂಪಿಗೆ ಸೇರಿದವರು.

ಇಂಥ ಮಹನೀಯರ ಪ್ರಭಾವ, ಆದರ್ಶ, ಸಂಪರ್ಕ ದೊರೆತದ್ದು ಸ್ವಾಮಿಗಳ ಪೂರ್ವಪುಣ್ಯವಿಶೇಷವೆಂದೇ ಹೇಳಬೇಕು.

ಸ್ವಾಮಿಗಳು ಅವರ ಹಿರಿಮೆಯನ್ನೂ ತಮ್ಮ ಭಾಗ್ಯವನ್ನೂ ಅರಿತಿದ್ದರು. ಶಾಸ್ತ್ರಿಗಳು ಪಾಠಕ್ಕೆ ಬರುವರೆಂದರೆ, ಕುಳಿತಿದ್ದ ಜಗದ್ಗುರುಗಳು ಯಾವುದಾದ-ರೊಂದು ನೆಪ ಮಾಡಿಕೊಂಡು ಎದ್ದುನಿಲ್ಲುವರು. ಗೃಹಸ್ಥರಾದ ಶಾಸ್ತ್ರಿಗಳು ಪದ್ಧತಿಯಂತೆ ಸ್ವಾಮಿಗಳಿಗೆ ಅಡ್ಡಬೀಳುವಾಗ ಸ್ವಾಮಿಗಳು ಓರೆಯಾಗಿ ನಿಂತಿದ್ದು ಕೈಜೋಡಿಸಿ, ಕಣ್ಣುಮುಚ್ಚಿ, ಮನಸ್ಸಿನಲ್ಲೇ ಅವರಿಗೆ ಸಾಷ್ಟಾಂಗನಮಸ್ಕಾರ ಮಾಡುತ್ತಿದ್ದರಂತೆ; ಶಾಸ್ತ್ರಿಗಳು ಕೂತಮೇಲೆ ಇವರು ಕೂಡುವರು. ಹಿಂದಿನ ಪಾಠಗಳನ್ನೆಲ್ಲ ಒಪ್ಪಿಸಿ, ಅಂದಿನ ಪಾಠದ ವಿಷಯವನ್ನೂ ಒಮ್ಮೆ ನೋಡಿಕೊಂಡಿರುವುದಾಗಿ ಶಾಸ್ತ್ರಿಗಳಿಗೆ ತಿಳಿಸುವರು. ಶಾಸ್ತ್ರಿಗಳು ಪಾಠ ಹೇಳುವಾಗ, ಮೈಯೆಲ್ಲ ಕಿವಿಯಾಗಿ ಕೇಳುವರು; ಶಾಸ್ತ್ರಿಗಳ ಪಾಠವನ್ನು ಬಿಟ್ಟು ಇನ್ನು ಏನೂ ಆ ಎರಡುಮೂರು ಗಂಟೆಗಳ ಕಾಲ ಅವರ ಗಮನಕ್ಕೆ ಬರುತ್ತಿರಲಿಲ್ಲ. ಪಾಠ ಮುಗಿದಮೇಲೆ, ಸ್ವಾಮಿಗಳು ಮತ್ತೆ ಎದ್ದುನಿಲ್ಲುವರು; ಮತ್ತೆ ಮೊದಲಿನಂತೆಯೇ ಗುರುವಂದನ, ಶಾಸ್ತ್ರಿಗಳು ತಮಗೆ ನಮಸ್ಕಾರ ಮಾಡುವಾಗ ಆ ನಮಸ್ಕಾರ ಅವರ ಗುರುಗಳೂ ತಮ್ಮ ಗುರುಗಳೂ ಆದ ಹಿಂದಿನ ಸ್ವಾಮಿಗಳಿಗೇ ಸಲ್ಲುವುದೆಂದು ಸ್ವಾಮಿಗಳ ಭಾವನೆಯಂತೆ. ಇದನ್ನು ಸ್ವಾಮಿಗಳ ಬಾಲ್ಯಮಿತ್ರರೂ, ಒಡನಾಡಿಗಳೂ, ಶಾಸ್ತ್ರಿಗಳ ಆಪ್ತವರ್ಗಕ್ಕೆ ಸೇರಿದ್ದವರೂ ಆಗಿದ್ದ ವೀರಕೇಸರಿ ಸೀತಾರಾಮಶಾಸ್ತ್ರಿಗಳು ನನಗೆ ತಿಳಿಸಿದರು.

ಸ್ವಾಮಿಗಳು ಮುಂದೆ ಇತರರಿಗೆ ಪಾಠ ಹೇಳತೊಡಗಿದಾಗ ವಿರೂಪಾಕ್ಷಶಾಸ್ತ್ರಿಗಳ ಪ್ರವಚನಪದ್ಧತಿಯನ್ನೇ ಹಿಡಿಯುತ್ತಿದ್ದರಂತೆ; ವಿಷಯ ನಿರೂಪಣಕ್ರಮವೂ ಅದೇ; ಮಾತಿನ ಧೋರಣೆಯೂ ಅದೇ. ಎಳೆಯ ವಯಸ್ಸಿನಲ್ಲೇ ಕೇಳಿದ್ದ ಶಾಸ್ತ್ರಿಗಳ 'ಹೇಳೋಣವಾಗಲಿ' 'ಕೂಡೋಣವಾಗಲಿ', 'ನೋಡೋಣವಾಗಲಿ' ಎಂದು ಮುಂತಾದ ಮಾತಿನ ಅಚ್ಚುಕಟ್ಟು ಸ್ವಾಮಿಗಳಿಗೂ ಬಂದುಬಿಟ್ಟಿತು. ಅವರು ಎಂದೂ 'ಹೇಳು' 'ಕೂಡು', 'ನೋಡು' ಎಂದು ಮೊದಲಾಗಿ ಹೇಳುತ್ತಿರಲಿಲ್ಲ. ಬೇರೆಯವರ ಮನಸ್ಸನ್ನು ನೋಯಿಸದೆ, ಗಟ್ಟಿಯಾಗಿ ಮಾತನಾಡದೆ, ದನಿಯನ್ನು ಎತ್ತದೆ, ತಮ್ಮ ಅಭಿಪ್ರಾಯಗಳನ್ನು ನೇರವಾಗಿ,

ಸರಳವಾಗಿ, ಶಾಂತವಾಗಿ, ಮಂಡಿಸುವ ಪದ್ಧತಿ ಸ್ವಾಮಿಗಳಿಗೆ ವಿಶಿಷ್ಟವಾಗಿದ್ದಿತಂತೆ; ಇದೇ ವಿರೂಪಾಕ್ಷ ಶಾಸ್ತ್ರಿಗಳ ಪದ್ಧತಿಯೂ ಆಗಿದ್ದಿತೆಂದು ಹೇಳುತ್ತಾರೆ.

ಶಾಸ್ತ್ರಿಗಳಂತೆಯೇ ಸ್ವಾಮಿಗಳು ತರ್ಕಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರೂ ವೇದಾಂತದ ಕಡೆ ಒಲಿದಿದ್ದರು. ಆದರೆ ಸಂಭಾಷಣೆಯಲ್ಲೂ ಪ್ರವಚನದಲ್ಲೂ ತಾರ್ಕಿಕಪ್ರಕಾರಗಳನ್ನೂ ಯುಕ್ತಿಗಳನ್ನೂ ಧಾರಾಳವಾಗಿ ಬಳಸುತ್ತಿದ್ದುದನ್ನು ಆರ್. ಕೃಷ್ಣಸ್ವಾಮಿ ಅಯ್ಯರ ಬರಹಗಳಿಂದ ತಿಳಿಯಬಹುದು. (ಕೃಷ್ಣಸ್ವಾಮಿ ಅಯ್ಯರು ಸ್ವಾಮಿಗಳ ಸಂಭಾಷಣೆಗಳನ್ನೂ ಪ್ರವಚನಗಳನ್ನೂ ಆಗಾಗಲೇ ಬರೆದಿಟ್ಟುಕೊಂಡು ಅವನ್ನು ಇಂಗ್ಲಿಷಿನಲ್ಲೂ ತಮಿಳಿನಲ್ಲೂ ಪ್ರಕಟಿಸಿದ್ದಾರೆ. ಇವರ ತಂದೆ ರಾಮಚಂದ್ರ ಅಯ್ಯರು ಹಿಂದಿನ ಸ್ವಾಮಿಗಳ ಅಂತರಂಗಭಕ್ತರಾಗಿದ್ದವರು; ಅವರ ವಿಚಾರ ಹಿಂದೊಂದು ಸಂದರ್ಭದಲ್ಲಿ ಬಂದಿದೆ. ಕೃಷ್ಣಸ್ವಾಮಿ ಅಯ್ಯರು ಈ ಸ್ವಾಮಿಗಳ ಸಾನ್ನಿಧ್ಯದಲ್ಲಿ ಬಹುಕಾಲ ಕಳೆದವರು; ಅವರ ಸಮ್ಮುಖದಲ್ಲಿಯೇ 'ಜ್ಞಾನಾನಂದಭಾರತೀ' ಎಂಬ ಹೆಸರಿನಿಂದ ಸಂನ್ಯಾಸಿಗಳೂ ಆದವರು).

ವಿರೂಪಾಕ್ಷಶಾಸ್ತ್ರಿಗಳ ಸಂಪರ್ಕದಿಂದ ಸ್ವಾಮಿಗಳಿಗಾದ ಹಲವು ಲಾಭಗಳಲ್ಲಿ ಪ್ರಧಾನವಾದುದು ವಿರಕ್ತಿಯ ಮನೋಧರ್ಮ ಮೂಡಿಬಂದುದು. ಅವರು ಸಂನ್ಯಾಸಿಗಳಾದಾಗ ಇಪ್ಪತ್ತು ವರ್ಷ ಪ್ರಾಯ. ವಿರಕ್ತಿ ಒದಗುವ ವಯಸ್ಸಲ್ಲ ಅದು; ಅವರು ಸಂನ್ಯಾಸಿಯಾಗಬೇಕೆಂದು ಬಯಸಿದವರೂ ಅಲ್ಲ. ಸಂದರ್ಭದ ಒತ್ತಡವಿರದಿದ್ದರೆ ಸಂನ್ಯಾಸಿಯಾಗುತ್ತಿದ್ದುದು ಅನುಮಾನವೇ. ಸಂನ್ಯಾಸಿಯಾದ ಮೇಲೆ ತಾನಾಗಿ ವಿರಕ್ತಿ ಒದಗುವುದೆಂದೂ ಹೇಳುವಹಾಗಿಲ್ಲ. ವಿರಕ್ತಿಯಿರದೆ ಸಂನ್ಯಾಸಿಯಾಗಿಬಿಟ್ಟರೆ ಅದರಿಂದ ತನಗೂ ಕಿರಿಕಿರಿ, ಸುತ್ತ ಇರುವವರಿಗೂ ತೊಂದರೆ. ಈ ಸ್ವಾಮಿಗಳೇನೋ ಎಳೆಯ ವಯಸ್ಸಿನಿಂದಲೇ ವಿಷಯಾಸಕ್ತರಲ್ಲ; ವ್ಯಾಸಂಗತತ್ಪರರು, ಸಂಯಮವುಳ್ಳವರು. ಆದರೆ ಅಷ್ಟರಿಂದ, ವಯೋಗುಣವಾಗಿ ಮಾರ್ಪಾಡು ಆಗಲಾರದೆಂದು ಹೇಳುವುದು ಹೇಗೆ? ವಿರಕ್ತಿಯೆನ್ನುವುದು ಪ್ರೌಢವಯಸ್ಸಿನಲ್ಲೇ ಮೂಡಿ- ಕೊಳ್ಳಬೇಕಾದ ಗುಣ; ಅದೂ ವಿಚಾರಮಾಡಿ, ವಿಮರ್ಶೆಮಾಡಿ, ತನ್ನ ಹೊಣೆಯನ್ನು ಅರಿತುಕೊಂಡು, ತನ್ನ ಸ್ವಭಾವವನ್ನು ಗಮನಿಸಿ ಪಡೆದುಕೊಳ್ಳ- ಬೇಕಾದ ಮನೋಧರ್ಮ.

· ಸ್ವಾಮಿಗಳು ಆ ಕಾಲದಲ್ಲಿ ರಚಿಸಿದ ಕೆಲವು ಸಂಸ್ಕೃತ ಸ್ತೋತ್ರಪದ್ಯಗಳಲ್ಲಿ ಇದರ ಪ್ರಸ್ತಾಪ ಬರುತ್ತದೆ. ಕವಿಸಮಯವೆಂದೂ, ಸಂಪ್ರದಾಯದ ನೈಚ್ಯಾನುಸಂಧಾನವೆಂದೂ ಸಮಾಧಾನ ಹೇಳಬಹುದಾದರೂ ಪ್ರಸ್ತಾಪದ ಸ್ವಾರಸ್ಯವೇನೂ ಕಡಿಮೆಯಾಗುವುದಿಲ್ಲ, ಸಂದರ್ಭದ ಔಚಿತ್ಯವೂ ಊನವಾಗುವುದಿಲ್ಲ. ದಿಟವಾಗಿ ಅನುಭವಕ್ಕೆ ಬಂದ ಭಾವನೆಗಳೆಂದು ಏಕೆ ಹೇಳಬಾರದು? ಸ್ವಾಮಿಗಳು ತಮ್ಮ ಹೃದಯದಲ್ಲಿ ವಿಷಯಾಸಕ್ತಿ ಇದ್ದುದನ್ನೂ, ವಿರಕ್ತಿ ಇಲ್ಲದುದನ್ನೂ ಗಮನಿಸಿ, ತಮ್ಮ ಅಳಲನ್ನು ತೋಡಿಕೊಂಡು ಗುರುಗಳ ಕರುಣೆಯನ್ನು ಬೇಡಿಕೊಳ್ಳುತ್ತಾರೆ. ನಿದರ್ಶನಕ್ಕೆ ಒಂದೆರೆಡು ಪದ್ಯಗಳನ್ನು ನೋಡಿ. 'ಇಂಥ ಸಮಯದಲ್ಲಿ ಗುರುಗಳು ಕಣ್ಣುಮುಂದೆ ಬಂದು ನಿಲ್ಲಬಾರದೇ, ತನ್ನನ್ನು ಸರಿಯಾದ ದಾರಿಯಲ್ಲಿ ನಡೆಸಬಾರದೇ' ಎಂಬ ಭಾವನೆ ಬೇರೂರಿದಾಗ 'ನವರತ್ನಮಾಲಾ' ಎನ್ನುವ ಕೃತಿ ಸಿದ್ಧವಾಯಿತು. ಪ್ರತಿಪದ್ಯದ ಕಡೆಯಲ್ಲಿ 'ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು' (ಗುರುಗಳು ಬೇಗನೆ ಕಾಣಿಸಿಕೊಳ್ಳಲಿ') ಎನ್ನುವ ಪಲ್ಲವಿ ಬರುತ್ತದೆ. ಮೂರನೆಯ ಪದ್ಯ ಹೀಗಿದೆ-

**ಶಬ್ದಾದಿಮಾನ್ ಹಿ ವಿಷಯಾನ್ ವಿಷತುಲ್ಯಕಕ್ಷ್ಯಾನ್**
**ಜ್ಞಾತ್ವಾಪಿ ತತ್ರ ಬಹುರಾಗವತೋ ಮಮಾಶು ।**
**ಪಾದಾನತಾಖಿಲಜನಸ್ಯ ವಿರಕ್ತಿದಾತಾ**
**ದೃಗ್ಗೋಚರೋ ಭವತು ದೇಶಿಕಸಾರ್ವಭೌಮಃ ॥**

ಸ್ವಾಮಿಗಳು ಇಲ್ಲಿ ತಮ್ಮನ್ನು 'ಇಂದ್ರಿಯವಿಷಯಗಳು ವಿಷಗಳಂತೆ ಹಾನಿಕರ ಎಂದು ತಿಳಿದಿದ್ದರೂ ಒಡಲ ತುಂಬ ಬಯಕೆಗಳು ತುಂಬಿರುವವ' ರೆಂದು ಬಣ್ಣಿಸಿಕೊಂಡಿದ್ದಾರೆ; ತಮ್ಮ ಗುರುಗಳು ಹತ್ತಿರ ಬಂದವರಿಗೆಲ್ಲ ವಿರಕ್ತಿಯನ್ನು ಕೊಡುವವರೆಂದು ಬಗೆದು, 'ಬಹುರಾಗವತೋ ಮಮ ವಿರಕ್ತಿದಾತಾ ಭವತು' ಎಂದು ಬೇಡಿಕೊಂಡಿದ್ದಾರೆ.

ಗುರುಗಳನ್ನೇ ಉದ್ದೇಶಿಸಿ **'ತೋಟಕಸ್ತೋತ್ರ'**ವೆಂಬ ಕೃತಿಯಲ್ಲಿ ಕೆಲವು ಸ್ವಾರಸ್ಯವಾದ ಆತ್ಮಕಥನಗಳಿವೆ-

ಜಲಬುದ್ಬುವತ್ ಕ್ಷಣಭಂಗಯುತೇ
ಮಲಮೂತ್ರವಸಾಸಹಿತೇ ವಪುಷಿ ।
ಕುರುತೇಽಭಿಮತಿಂ ಹೃದಯಂ ಹಿ ಮುಧಾ
ಲಘು ವಾರಯ ದೇಶಿಕ ತಾಂ ದಯಯಾ ॥

ನೀರಮೇಲಣ ಗುಳ್ಳೆಯಂತೆ ತೋರಿಯಡಗುವ ಈ ದೇಹದ ಮೇಲೆ ಅಭಿಮಾನ ತಮಗಿರುವುದನ್ನು ಹೇಳಿಕೊಂಡು, ಗುರುಗಳು ದಯೆಯಿಂದ ಇದನ್ನು ತೊಲಗಿಸಬೇಕೆಂದು ಕೇಳಿಕೊಳ್ಳುತ್ತಾರೆ.

ಕರಣಾನಿ ಸಮಾನಿ ಭವಂತಿ ಕದಾ
ತರಣಂ ನು ಕಥಂ ಭವವಾರಿನಿಧೇಃ ।
ಶರಣಂ ಮಮ ನಾಸ್ತಿ ಗುರೋ ತ್ವದೃತೇ
ನಿರುಪಾಧಿಕೃಪಾಜಲಧೇಽವ ಜವಾತ್ ॥

'ನನ್ನ ಇಂದ್ರಿಯಗಳು ಸುಮ್ಮನಾಗುವುದು ಎಂದು ? ಈ ಸಂಸಾರವೆಂಬ ಸಾಗರವನ್ನು ದಾಟುವೆನೆಂತು? ಗುರುಗಳನ್ನು ಬಿಟ್ಟರೆ ಬೇರೆ ಗತಿಯುಂಟೆ? ನಿಮಿತ್ತವಿರದೆಯೇ ಅವರ ದಯೆ ಸಮುದ್ರವಾಗಿ ಹರಡಿಕೊಂಡಿದೆಯಲ್ಲವೆ? ಅವರೇ ಬೇಗನೆ ಕಾಪಿಡಬೇಕು', ಎಂದು ಅವರ ಕರೆ.

ಚರಿತಂ ನ ಮಯೇಷದಪೀಹ ಶುಭಂ
ಭರಿತಂ ಜಠರಂ ಬಹುಧಾಽಘಚಯಾತ್ ।
ಭುರಿತಂ ಹೃದಯಂ ನಿತರಾಂ ತಮಸಾ
ತ್ವರಿತಂ ವಿಮಲಂ ತನು ತದ್ಗುರುರಾಟ್ ॥

'ಒಳ್ಳೆಯದೆಂಬುದನ್ನು ಇಷ್ಟಾದರೂ ನಾನು ಮಾಡಿದುದಿಲ್ಲ; ಒಡಲ ತುಂಬ ಕೆಟ್ಟ ಯೋಚನೆಗಳೇ ತುಂಬಿವೆ; ಎದೆಯಾಳದಲ್ಲಿ ಕತ್ತಲೆ ದಟ್ಟವಾಗಿ ಕವಿದಿದೆ. ಬಾಳನ್ನು ತಿಳಿಮಾಡುವವರು ಆ ಗುರುವೇ'.

ವಿಷಯೇಷು ಸದಾ ರಮತೇ ಹೃದಯಂ
ವಿಷತುಲ್ಯಧಿಯಂ ದಿಶ ತತ್ರ ಗುರೋ।
ಲಷಿತತ್ವದಪಾಂಗಝರೀ ಪ್ರಸರ-
ತ್ವಚಿರಾನ್ಮಯಿ ಬಂಧವಿನಾಶಕರೀ ॥

'ನನ್ನ ಒಡಲು ವಿಷಯಸುಖಗಳನ್ನೇ ಬಯಸುತ್ತ ತಣಿದಿದೆ, ಅವು ವಿಷಕ್ಕೆ ಸಮಾನವಾದುದೆಂಬ ಬುದ್ಧಿ ಗುರುವಿನಿಂದಲೇ ಬರಬೇಕು. ಈ ಕಟ್ಟನ್ನು ಕಳಚಿ ಬಿಡಿಸಲು ಗುರುವಿನ ಕರುಣೆಯೇ ತಡಮಾಡದೆ ಬಂದೊದಗಲಿ'.

ಸದಸನ್ಮತಿರೇವ ನ ಮೇಽಸ್ತಿ ಗುರೋ
ವಿರತಿಂ ಪ್ರತಿ ಸಾ ಕರಣಂ ಗದಿತಾ ।
ವಿರತಿಃ ಕ್ವ ನು ಮೇ ವಿಷಯಾಶಹೃದಃ
ಕಥಮಾಪ್ನುವ ಏವ ವಿಮುಕ್ತಿಪಥಮ್ ॥

'ಇದು ಒಳ್ಳೆಯದು ಇದು ಕೆಟ್ಟದ್ದು, ಇದು ಇರುವುದು ಇದು ಇಲ್ಲದ್ದು ಎನ್ನುವ ಬುದ್ಧಿಯೇ ನನಗಿಲ್ಲವಲ್ಲ; ಅದನ್ನೇ ವಿರಕ್ತಿಗೆ ಸಾಧಕವಾದುದು ಎಂದು ಹೇಳುತ್ತಾರೆ. ಇನ್ನು ಇಂದ್ರಿಯ ಸುಖಗಳಿಂದ ತುಂಬಿರುವ ಒಡಲಿಗೆ ವಿರಕ್ತಿ ಬರುವುದು ಎಲ್ಲಿ? ಮುಕ್ತಿಯ ದಾರಿಯನ್ನು ಹಿಡಿಯುವುದಾದರೂ ಹೇಗೆ?'

ಬ್ರುವತೇ ನಿಗಮಾ ಬಹುವಾರಮಿದಂ
ಜಗದಭ್ರತಲಾದಿಸದೃಕ್ಷಮಿತಿ ।
ಮಮ ತಾದೃಶಧೀಃ ಸಮುದೇತಿ ಕದಾ
ವದ ದೇಶಿಕ ಮೇಽಙ್ಘ್ರಿಜುಷೇ ಕೃಪಯಾ ॥

'ಶಾಸ್ತ್ರಗಳೇನೋ ಮತ್ತೆಮತ್ತೆ ಜಗತ್ತು ಸಾರವಿಲ್ಲದ್ದು ಎಂದು ಹೇಳುತ್ತಲೇ ಇವೆ. ಆದರೆ ಆ ಬುದ್ಧಿ ನನಗೆ ಬರುವುದು ಯಾವಾಗ?'

ಗುರುಪ್ರಾರ್ಥನಾಸ್ತೋತ್ರ'ವೆಂಬ ಇನ್ನೊಂದು ಕವಿತೆಯಲ್ಲಿ ತಮ್ಮ ಸಂಕಟ- ವನ್ನು ಕಾಣಿಸುತ್ತಾರೆ-

ಶ್ರೀಮಚ್ಛಂಕರದೇಶಿಕೇಂದ್ರರಚಿತೇ ಪೀಠೇ ಜಗದ್ದೇಶಿಕ
ತ್ವಾದೃಕ್ಷಾಃ ಶಿವರೂಪಿಣೋಽಖಿಲವಿದೋ ಬ್ರಹ್ಮಸ್ಥಿತಾ ವರ್ತಿತುಮ್ ।
ಯುಕ್ತಂ ಕೋಽಹಮತೀವ ಮಂದಧಿಷಣೋ ಬಾಹ್ಯೇಷು ಸಕ್ತೋಽಧುನಾ
ಸ್ಥಾತುಂ ತದ್ಭಗವಾನ್ ಭವಾನ್ ಕರುಣಯಾ ಮಾಮುದ್ಧರತ್ವಂಜಸಾ ॥

'ಶ್ರೀಶಂಕರಾಚಾರ್ಯರಿಂದ ಕಲ್ಪಿತವಾದ ಈ ಪೀಠದಲ್ಲಿ, ಗುರುವೇ, ನಿಮ್ಮಂಥ ಶಿವರೂಪಿಗಳು, ಎಲ್ಲವನ್ನೂ ಬಲ್ಲವರು, ಬ್ರಹ್ಮದಲ್ಲೇ ನೆಲೆಗೊಂಡಿರುವವರು ಕೂರುವುದು ಸರಿಯೇ; ಆದರೆ ತುಂಬ ಮಂದಬುದ್ಧಿಯವನೂ ಹೊರಗಣ ವಿಷಯಗಳಲ್ಲೇ ಆಸಕ್ತನಾದವನೂ ಆದ ನಾನು ಈ ಪೀಠದಲ್ಲಿ ಕೂರುವುದು ಸರಿಯಾದೀತೇ? ಆದುದರಿಂದ ನೀವೇ ಕರುಣೆ ತೋರಿ ನನ್ನನ್ನು ಕಾಪಾಡಬೇಕು.'

ಮೇಲಿನ ಕೆಲವು ನಿದರ್ಶನಗಳಿಂದ ಸ್ವಾಮಿಗಳ ಕವಿಹೃದಯ ಯಾವ ಬಗೆಯದೆಂದು ಊಹಿಸಿಕೊಳ್ಳಬಹುದು. ತುಂಬ ಸೂಕ್ಷ್ಮವಾದ, ಲಲಿತವಾದ ಚೇತನ ಅವರದ್ದು. ವ್ಯವಹಾರದ ಕಾವಿಗೆ ಕರಗಿಹೋಗುವಂಥದು; ಆಡಂಬರದ ಅಬ್ಬರಕ್ಕೆ ಅಡಗಿಹೋಗುವಂಥದು; ಜನರ ಕಣ್ಣು ಕೋರೈಸದೆ, ಕಿವಿಗಡಚುವಂತೆ ಗದ್ದಲಮಾಡದೆ, ಗುಟ್ಟಾಗಿ ಹರಿಯುವ ತಿಳಿನೀರಿನ ಝರಿ ಅದು. ಸುಳಿಗಾಳಿ ಬೀಸದೆಡೆಯಲ್ಲಿ ಹಣತೆಯಲ್ಲಿ ಅಲುಗಾಡದೆ ತಂಪಾಗಿ ಬೆಳಗುವ ದೀಪ ಅದು; ಮಠದ ಬಿರುಗಾಳಿಗೆ ಒಡ್ಡಿದ ಸೊಡರಾಗಿ ನಡುಗಾಡಿದ್ದು ಸಹಜವೇ. ಮಠಕ್ಕೆ ಅವರು ಬಾರದೆ ಹೋಗಿದ್ದರೆ ಕವಿಯಾಗಿ ಕೀರ್ತಿಯನ್ನು ಪಡೆಯುತ್ತಿದ್ದರೋ ಏನೋ! ಅವರಿಗೆ ಸಂಗೀತದಲ್ಲಿ ತುಂಬ ಅಭಿರುಚಿಯಿದ್ದಿತು; ಶ್ಲೋಕಗಳನ್ನು ರಸವತ್ತಾಗಿ ಹಾಡುವ ಸಾಮರ್ಥ್ಯವೂ ಇದ್ದಿತಂತೆ.

ಈ ವಿಚಾರ ಹಾಗಿರಲಿ. ಇಲ್ಲಿ ಗಮನಿಸಬೇಕಾದುದು, ಕವಿಯ ಚೇತನವೆಂದಮೇಲೆ ವಿರಕ್ತಿಯು ಸಹಜವಾಗಿ ಬರಲಾರದು. ಸ್ವಾಮಿಗಳಿಗೆ ವಿರಕ್ತಿ ಬಂದುದು ಸ್ವಭಾವದಿಂದಲೂ ಅಲ್ಲ, ದುಃಖದರ್ಶನದಿಂದಲೂ ಅಲ್ಲ (ಅವರು ಮನೆಯಲ್ಲಿ ಅಂಥ ದುಃಖವನ್ನೇನು ಕಂಡಿರಲಿಲ್ಲ); ಶಾಸ್ತ್ರಾಭ್ಯಾಸದಿಂದಲೇ. ಇದಕ್ಕೆ ಅವರು ವಿರೂಪಾಕ್ಷಶಾಸ್ತ್ರಿಗಳಲ್ಲಿ ಪಡೆದ ಶಿಕ್ಷಣ ನೆರವಾಯಿತು. ಬೇರೆ ಯಾವ ಗುರುವಾದರೂ ಶಾಸ್ತ್ರದ ತಾತ್ಪರ್ಯವನ್ನು ಅಷ್ಟು ಪ್ರಭಾವಶಾಲಿಯಾಗಿ ಬೋಧಿಸುವುದು ಸಾಧ್ಯವಿದ್ದಿತೋ ಇಲ್ಲವೋ!

ನಾಲ್ಕು ವರ್ಷಗಳ ಕಾಲ ವಿರೂಪಾಕ್ಷಶಾಸ್ತ್ರಿಗಳಲ್ಲಿ ವೇದಾಂತಗ್ರಂಥಗಳನ್ನು ಅಧ್ಯಯನ ಮಾಡುವಾಗ ಸ್ವಾಮಿಗಳು ತದೇಕಚಿತ್ತರಾಗಿ, ಶಬ್ದಕ್ಕೆ ಮಾತ್ರ ಗಮನಕೊಡದೆ ಅರ್ಥವನ್ನೇ ಪ್ರಧಾನವಾಗಿ ಹಿಡಿದು, ಸಂಸಾರವು

ನಿಃಸಾರವೆಂಬುದನ್ನೂ, ಬ್ರಹ್ಮವೇ ಪರಮಾರ್ಥವೆಂಬುದನ್ನೂ ಖಂಡಿತ-ಮಾಡಿಕೊಂಡರು. ಆಗ ಸಾರ್ಥಕವಾದ ವಿರಕ್ತಿ ಅವರಲ್ಲಿ ತೋರಿಕೊಂಡಿತು. ಮೊದಲೇ ಅಂತರ್ಮುಖವಾದ ಚೇತನ, ಈಗ ಇನ್ನಷ್ಟು ಒಳಗಿನ ಆಳಕ್ಕೆ ಸರಿಯಿತು.

ವಿರೂಪಾಕ್ಷಶಾಸ್ತ್ರಿಗಳು ಒದಗಿಸಿದ ಶ್ರವಣದ ಆಧಾರದ ಮೇಲೆ ಮನನ, ನಿದಿಧ್ಯಾಸನಗಳನ್ನು ಕೈಗೊಳ್ಳಲು ತಮ್ಮ ಬಾಳನ್ನೇ ಮುಡಿಪಿಟ್ಟರು. ಹಾಗೆ ಮುಡಿಪಿಡುವಾಗ ತಾವು ಬಿಡಿಸಂನ್ಯಾಸಿಗಳಲ್ಲವೆಂಬುದನ್ನೂ ಮಠಾಧಿಪತಿಗಳೆಂಬುದನ್ನೂ ಮರೆತರು! ಆದರೆ ಇವರು ಮರೆತರೆ ಸರ್ವಾಧಿ ಕಾರಿಗಳು ಮರೆಯಲಾದೀತೆ? 'ನಾನು ಸಂನ್ಯಾಸಿ' ಎಂಬ ಸ್ವಾಮಿಗಳು; 'ಇಲ್ಲ, ನೀವು ಮಠಾಧಿಪತಿಗಳು' ಎಂದು ಸರ್ವಾಧಿಕಾರಿಗಳು. 'ದಿಟವಾಗಿ ಸಂನ್ಯಾಸಿಯಾದವನು ಮಠಾಧಿಪತಿಯಾಗಲು ಸಾಧ್ಯವೆ ?' ಎಂದು ಸ್ವಾಮಿಗಳ ಸಮಸ್ಯೆ; 'ಮಠಾಧಿಪತಿಯೆಂದಾದವನು ದಿಟವಾಗಿ ಸಂನ್ಯಾಸಿಯಾಗಿರಲಾರ; ವ್ಯವಹಾರದಲ್ಲಿ ನಿಲ್ಲಬೇಕಾಗುತ್ತದೆ, ಸಂನ್ಯಾಸ ಧರ್ಮವನ್ನು ಸಡಿಲಿಸಬೇಕಾಗುತ್ತದೆ' ಎಂದು ಸರ್ವಾಧಿಕಾರಿಗಳ ವಾದ.



# ೮. ಮಠದ ಸಡಗರ

ಇಬ್ಬಗೆಯ ಈ ಮನೋಧರ್ಮಗಳ ಸೆಣಸಾಟದಲ್ಲಿ ಮೊದಲು ಸ್ವಾಮಿಗಳೇ ಸೋತರು. ಗುರುಗಳು ತನ್ನನ್ನು ಶೃಂಗೇರಿಯಿಂದ ಬೆಂಗಳೂರಿಗೆ ಕಳುಹಿಸಿಕೊಡುವಾಗ ರಚಿಸಿಕೊಟ್ಟ ಮೂರು ಆಶೀರ್ವಚನಶ್ಲೋಕಗಳಲ್ಲಿ (ಇವನ್ನು ಹಿಂದೆ ಕಾಣಿಸಿದೆ) 'ಸಂನ್ಯಾಸಿಯಾಗು, ಸಾಧನೆ ಮಾಡು, ಆತ್ಮತತ್ತ್ವವನ್ನು ಅನುಸಂಧಾನಮಾಡು' ಎಂದು ಸ್ಪಷ್ಟವಾದ ಆಣತಿಯಿದೆ. ಸಂನ್ಯಾಸಿಯಾಗಿ ತುರೀಯಾಶ್ರಮಧರ್ಮವನ್ನು ಎಡವದೆ, ಸಡಲಿಸದೆ ಪಾಲಿಸಿದರೆ ಸ್ವಾಮಿಗಳ ಆಣತಿಯನ್ನು ನಡೆಸಿದಂತಾಯಿತು, ತಾನು ಕೃತಕೃತ್ಯನಾದಂತಾಯಿತು. ಆದರೆ ಅದೇ ಗುರುಗಳು ತಮ್ಮ ಕಡೆಗಾಲದಲ್ಲಿ ಕುಣಿಗಲ್ಲು ರಾಮಶಾಸ್ತ್ರಿಗಳ ಮೂಲಕ ತನಗೆ ಕಳುಹಿಸಿದ ಅಪ್ಪಣೆ ತಮಗೆ ಉತ್ತರಾಧಿಕಾರಿಯಾಗಿ ಹೊಣೆಯನ್ನು ಹೊರಬೇಕೆಂದು. ಹೀಗಿರುವಾಗ, ಅವರು ಮಠಾಧಿಪತಿಗಳಾಗಿ ಮಾಡುತ್ತಿದ್ದ ಕೆಲಸವನ್ನು ತನ್ನ ಕೈಲಾದಮಟ್ಟಿಗೆ ತಾನೂ ಮಾಡಿ ಮುಂದುವರಿಸಬೇಕು, ಅವರ ಪ್ರಬಾವವನ್ನು ಸಾಧ್ಯವಾದಷ್ಟುಮಟ್ಟಿಗೆ ಬೆಳೆಸಬೇಕು, ಅವರು ಕೈಗೊಂಡು ಮುಗಿಸುವ ಮೊದಲೇ ಮುಕ್ತರಾದ ಕೆಲಸಗಳನ್ನು ತಾನು ಪೂರೈಸಬೇಕು.

ಈ ವಿಚಾರದಲ್ಲಿ ಸರ್ವಾಧಿಕಾರಿಗಳೇ ಪ್ರಮಾಣಪುರುಷರು; ಗುರುಗಳ ಅಂತರಂಗವನ್ನು ಇವರೇ ಅರಿತಿದ್ದವರು, ಅವರ ವ್ಯವಹಾರಗಳನ್ನೆಲ್ಲ ಇವರೊಬ್ಬರೇ ನಿರ್ವಹಿಸುತ್ತಿದ್ದವರು, ಮಠದ ಬಲಾಬಲಗಳನ್ನೆಲ್ಲ ಚೆನ್ನಾಗಿ ಬಲ್ಲವರು. ಈ ಎಲ್ಲ ವಿಚಾರಗಳೂ ತನಗೆ ಏನೇನೂ ತಿಳಿಯದು! ಆದುದರಿಂದ ಸರ್ವಾಧಿಕಾರಿಗಳು ಹೇಳಿದಂತೆ ಮಾಡುವುದೇ ತನ್ನ ಈಗಿನ ಕರ್ತವ್ಯ-ಹೀಗೆ ಸ್ವಾಮಿಗಳು ಆಲೋಚನೆ ಮಾಡಿ, ಒದಗಬಹುದಾಗಿದ್ದ ವಿರಸವನ್ನು ದೂರಮಾಡಿದರು.

ಹಿಂದಿನ ಸ್ವಾಮಿಗಳು ಕೈಗೊಂಡು ಮುಗಿಸಲಾಗಿದ್ದ ಕೆಲಸಗಳು ಕೆಲವಿದ್ದವು. ಅವುಗಳಲ್ಲೊಂದು ಶೃಂಗೇರಿಯ ಶಾರದಾದೇವಾಲಯದ ಜೀರ್ಣೋದ್ಧಾರ. ಮಲೆನಾಡಿನ ಗುಡಿಗಳ ರೀತಿಯಲ್ಲೇ ಸ್ವಲ್ಪಭಾಗ ಶಿಲಾಮಯ, ಬಹುಭಾಗ ದಾರುಮಯವಾಗಿದ್ದ ಈ ಗುಡಿ ಹಳೆಯದಾಗಿ, ಅಲ್ಲಲ್ಲಿ ಶಿಥಿಲವಾಗಿ ನೋಡಲು ಸೊಗಸಾಗಿರಲಿಲ್ಲ, ವಿಶಾಲವಾಗಿರಲಿಲ್ಲ. ಮಠದ ಮುಖ್ಯ ಆಕರ್ಷಣೆಯಾದ ಈ ಗುಡಿ ಮಠದ ಈಗಿನ ವೈಭವಕ್ಕೆ ಹೊಂದಿಕೊಳ್ಳುವಂತಿರಲಿಲ್ಲ. ಹಿಂದಿನ ಸ್ವಾಮಿಗಳು ದಕ್ಷಿಣದ ಕಡೆ ಮೂರನೆಯ ಬಾರಿ (ಎಂದರೆ ೧೯೮೧ರಲ್ಲಿ) ಸಂಚಾರ ಹೋಗಿದ್ದಾಗ ಮಧುರೆ, ರಾಮನಾಥಪುರ ಪ್ರಾಂತಗಳಲ್ಲಿ ಪ್ರಬಲರಾಗಿದ್ದ ಶ್ರೀಮಂತ ನಗರತ್ತಾರರು (ನಾಟ್ಟುಕ್ಕೋಟ್ಟೈ ಚೆಟ್ಟಿಯಾರರು) ಸೇರಿ ಅವರನ್ನು ಸಂಭ್ರಮದಿಂದ ಎದುರ್ಗೊಂಡು ಶೃಂಗೇರಿಯ ಶಾರದಾದೇವಾಲಯವನ್ನು ಸಂಪೂರ್ಣವಾಗಿ ಬಂಡೆಕಲ್ಲು ಕಟ್ಟಡವಾಗಿ ಮಾಡಲು ಮೂವತ್ತುಸಾವಿರ ರೂಪಾಯಿಗಳನ್ನು ತಮ್ಮ ಕೋವಿಲೂರುಮಠದ ಸ್ವಾಮಿಗಳ ಮೂಲಕ ಸಲ್ಲಿಸಿದ್ದರು. ಗೋಬಿಚೆಟ್ಟಿ- ಪಾಳಯದ ಕಾನಾಡು ಕುತ್ತಾನ್ ರಾಮಸ್ವಾಮಿ ಚೆಟ್ಟಿಯೆಂಬುವರು ತಮಿಳುನಾಡಿನಲ್ಲಿ ಹಲವಾರು ಶಿವಾಲಯಗಳ ಜೀರ್ಣೋದ್ಧಾರದ ಕೆಲಸದಲ್ಲಿ ತುಂಬ ಪರಿಶ್ರಮವುಳ್ಳವರಾಗಿದ್ದು ಶೃಂಗೇರಿಯ ಗುಡಿಯ ಕೆಲಸವನ್ನು ಒಪ್ಪಿಕೊಂಡು ಅದರಲ್ಲಿ ತೊಡಗಿದ್ದರು. ನಾನಾ ತೊಂದರೆಗಳಿಂದ ಕೆಲಸ ಅಷ್ಟು ವೇಗವಾಗಿ ನಡೆಯಲಿಲ್ಲ. ಸ್ವಾಮಿಗಳು ತಮ್ಮ ನಾಲ್ಕನೆಯ ಸಂಚಾರದಿಂದ ಹಿಂದಿರುಗುವಾಗ ಶೃಂಗೇರಿಯ ಗುಡಿಯ ಕಟ್ಟಡದಲ್ಲಿ ಬೆಂಕಿ-ಅನಾಹುತವೂ ಆಗಿ ಕೆಲಸ ನಿಂತಿತು. ಇವೆಲ್ಲ ಆಗುವಾಗ ನರಸಿಂಹ ಇನ್ನೂ ಶೃಂಗೇರಿಯಲ್ಲಿ ಓದುತ್ತಿದ್ದನು. ಸ್ವಾಮಿಗಳು ಶೃಂಗೇರಿಗೆ ಹಿಂದಿರುಗಿದ ಒಂದೆರಡು ವರ್ಷಗಳಲ್ಲೇ ತೀರಿಕೊಂಡರು. ಶಾರದೆಯ ಆಲಯ ಪೂರ್ಣವಾದುದನ್ನು ನೋಡಲಿಲ್ಲ.

ಈಗ (ಎಂದರೆ ೧೯೧೬ರ ಸುಮಾರಿಗೆ, ಸ್ವಾಮಿಗಳು ಪಟ್ಟವೇರಿ ನಾಲ್ಕು ವರ್ಷಗಳು ಕಳೆದಾಗ) ಸರ್ವಾಧಿಕಾರಿಗಳ ಸತತಪ್ರಯತ್ನದಿಂದ ಕೆಲಸ ಒಂದು ಘಟ್ಟವನ್ನು ಮುಟ್ಟಿದ್ದು, ಅದರ ಕುಂಭಾಭಿಷೇಕ ನಡೆಯಬೇಕಾಗಿದ್ದಿತು; ಮತ್ತು ಸರ್ವಾಧಿಕಾರಿಗಳೂ ಇತರ ಭಕ್ತರೂ ಸೇರಿ ಹಿಂದಿನ ಸ್ವಾಮಿಗಳ ಅಧಿಷ್ಠಾನದಲ್ಲಿ (ಅವರ ತಪೋಭೂಮಿಯಾಗಿದ್ದ ನರಸಿಂಹವನದಲ್ಲಿ) ಇಡಲು ಅವರ

ಹಾಲುಗಲ್ಲಿನ ಮೂರ್ತಿಯನ್ನು ಮುಂಬಯಿಯ ಗಣಪತಿ ಕೃಷ್ಣರಾವ್ ಮಾತ್ರೆ ಎಂಬ ಶಿಲ್ಪಿಗಳಿಂದ ಮಾಡಿಸಿದ್ದರು; ಹಿಂದೆ ಹೇಳಿದ ಕಾನಾಡುಕುತ್ತಾನ್ ಚಿದಂಬರಚೆಟ್ಟಿ ಅಧಿಷ್ಠಾನದ ಆಲಯನಿರ್ಮಾಣದ ಕೆಲಸವನ್ನೂ ಮುಗಿಸಿದ್ದರು. ಅದರ ಕುಂಭಾಭಿಷೇಕವೂ ಆಗಬೇಕಾಗಿದ್ದಿತು. ಮೈಸೂರು ಮಹಾರಾಜಗಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಈ ಸಂಧರ್ಭದಲ್ಲಿ ಶೃಂಗೇರಿಗೆ ಬಂದರು. ಸ್ವಾಮಿಗಳು ೧೯೧೬ರ ವೈಶಾಖ ಕೃಷ್ಣ ಪಾಡ್ಯ ಗುರುವಾರ (ನಳ ಸಂವತ್ಸರ) ಅವರ ಸಮ್ಮುಖದಲ್ಲಿ ಎರಡೂ ಆಲಯಗಳ ಕುಂಭಾಭಿಷೇಕವನ್ನು ನೆರವೇರಿಸಿದರು.

ಇದಕ್ಕೆ ಸಂಬಂಧಪಟ್ಟ ಉತ್ಸವಗಳು ಹಲವು ದಿನಗಳವರೆಗೆ ತುಂಬ ವಿಜೃಂಭಣೆಯಿಂದ ನಡೆದುವು. ನಾಡಿನ ಹಲವು ಭಾಗಗಳಿಂದ ಬಹುಸಂಖ್ಯೆಯಲ್ಲಿ ಭಕ್ತರು ಬಂದು ನೆರೆದಿದ್ದರು. ಮೈಸೂರು ಅರಸರೂ ಅವರ ಪರಿವಾರವೂ ಬಂದಿದ್ದುದು ಉತ್ಸವಕ್ಕೆ ಇನ್ನಷ್ಟು ಕಳೆಯೇರಿಸಿತು.

ಗುಜುಗುಜು ಜನಸಂದಣಿ, ಎಡೆಬಿಡದೆ ಸಂಭ್ರಮ, ಸಂದರ್ಶನಕ್ಕೆಂದು ಬಂದ ಗಣ್ಯರ ಮುಗಿಯದ ಸಾಲು, ಮಠದಲ್ಲೂ ಗುಡಿಯಲ್ಲೂ ನರಸಿಂಹವನದ ಅಧಿಷ್ಠಾನದಲ್ಲೂ ತೆರವಿಲ್ಲದ ಕಾರ್ಯಕ್ರಮ — ಇಷ್ಟೊಂದು ಗೊಂದಲದ ನಡುವೆ ಸ್ವಾಮಿಗಳು ಎಲ್ಲೆಲ್ಲೂ ಇರಬೇಕು, ಎಲ್ಲರೊಡನೆ ಬೆರೆಯಬೇಕು, ಎಲ್ಲದರಲ್ಲೂ ಆಸಕ್ತಿ ವಹಿಸಬೇಕು. ಸರ್ವಾಧಿಕಾರಿಗಳೂ ಇತರ ಅಧಿಕಾರಿಗಳೂ ಆಪ್ತರೂ ಎಲ್ಲ ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ಮಾಡಿದ್ದರು; ಏನೊಂದು ಲೋಪವೂ ಬಾರದಂತೆ ಎಚ್ಚರಿಕೆ ವಹಿಸಿದ್ದರು. ಆದರೆ ಸ್ವಾಮಿಗಳನ್ನು ಮುಂದಿರಿಸಿಕೊಂಡು ತಾನೆ ಎಲ್ಲ ಕೆಲಸಗಳು ನಡೆಯಬೇಕು? ಇಂಥ ಸಂಭ್ರಮದ ಸುಳಿಯಲ್ಲಿ ಸ್ವಾಮಿಗಳು ಎಂದೂ ಸಿಕ್ಕಿರಲಿಲ್ಲ. ಹತ್ತು ಜನ ಇದ್ದಲ್ಲಿ ಎಂದೂ ಅವರು ಹೋದುದೇ ಇಲ್ಲ! ಹಿಂದೆ, ಮನೆಯಲ್ಲಿ ತಂದೆತಾಯಿಯರನ್ನು ಬಿಟ್ಟರೆ ಜನರಿಲ್ಲ; ಶಾಲೆಯಲ್ಲಿ ಎಂಟು ಜನ ಸಂಗಡಿಗರಷ್ಟೇ; ತಾನಾಯಿತು ತನ್ನ ವ್ಯಾಸಂಗವಾಯಿತು; ಮಠದ ಸ್ವಾಮಿಯಾದ-ಮೇಲೂ ಎರಡು ವರ್ಷಗಳು ವಿರೂಪಾಕ್ಷ ಶಾಸ್ತ್ರಿಗಳೊಬ್ಬರೇ ಅವರ ಪ್ರಪಂಚದಲ್ಲಿದ್ದವರು; ಅಲ್ಲದೆ, ವಿರಕ್ತಿಯ ತಾತ್ಪರ್ಯವನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದರು! ಈಗ ಇದ್ದಕ್ಕಿದ್ದಂತೆ ಈ

ಜನಸ್ತೋಮದ ನಡುವೆ, ಹೊಣೆಗಾರಿಕೆಯ ಹರವಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಯಿತು.

ಸರ್ವಾಧಿಕಾರಿಗಳು ಹೇಳಿದಂತೆ, ಅವರಿಗೆ ಕಿರಿಕಿರಿಯಾಗದಂತೆ, ಎಲ್ಲವನ್ನೂ ಸ್ವಾಮಿಗಳು ಮಾಡಿದರು; ಯಾರಿಗೂ ತಮ್ಮಿಂದ ತೊಂದರೆಯಾಗದಂತೆ ನೋಡಿಕೊಂಡರು; ಉತ್ಸವದಲ್ಲಿ ಯಾವ ಆಭಾಸವೂ ನಡೆಯದಂತೆ ಎಚ್ಚರ ವಹಿಸಿದರು. ಆದರೆ ಎಲ್ಲವೂ ಯಾಂತ್ರಿಕವಾಗಿ; ಅವರ ಮನಸ್ಸಾಗಲೀ ಹೃದಯವಾಗಲೀ ಅಲ್ಲಿರಲಿಲ್ಲ.

ಈ ಕೋಲಾಹಲದ ಕಾವು ಆರಿದೊಡನೆ, ಶೃಂಗೇರಿ ಮತ್ತೆ ತನ್ನ ಎಂದಿನ ಶಾಂತಸ್ಥಿತಿಗೆ ಮರಳಿದೊಡನೆ, ಇನ್ನು ತಮಗೂ ಮಠದ ವ್ಯವಹಾರಕ್ಕೂ ಸಂಬಂಧವಿಲ್ಲವೆಂಬಂತೆ ವಿವಿಕ್ತವಾಸದಲ್ಲಿ ಸೇರಿಕೊಂಡುಬಿಟ್ಟರು. ತುಂಗಾನದಿಯಲ್ಲಿ ಸ್ನಾನ, ನರಸಿಂಹವನದ ಅಧಿಷ್ಠಾನದಲ್ಲಿ ಗುರುವಂದನೆ, ಕೆಲವು ಶಿಷ್ಯರಿಗೆ ಸೂತ್ರಭಾಷ್ಯ ಪ್ರವಚನ, ಮಠದಲ್ಲಿ ಸನ್ನಿಧಿಯ ದೇವರಿಗೆ ದಿನದ ಆರಾಧನೆ — ಇಷ್ಟು ಕಾಲವನ್ನು ಬಿಟ್ಟರೆ ಉಳಿದಂತೆ ಅವರು ಯಾರ ಕಣ್ಣಿಗೂ ಬೀಳುತ್ತಿರಲಿಲ್ಲ. ವಿರೂಪಾಕ್ಷಶಾಸ್ತ್ರಿಗಳು ಆಗಲೇ ಶೃಂಗೇರಿಯನ್ನು ಬಿಟ್ಟಿದ್ದರು; ಅಷ್ಟು ನಿಸ್ಸೀಮರಾದ ನಿಃಸ್ಪೃಹರಾದ ಪಂಡಿತರು ಆಗ ಶೃಂಗೇರಿಯಲ್ಲಿ ಯಾರೂ ಇರಲಿಲ್ಲ; ಇದ್ದ ಪಂಡಿತರು ಸ್ವಾಮಿಗಳ ಮೆಚ್ಚುಗೆಗೆ ಪಾತ್ರರಾಗಲಿಲ್ಲ. ಇನ್ನು ಅಧಿಕಾರಿಗಳಿಗೂ ಸ್ವಾಮಿಗಳಿಗೂ ಒಂದೆರಡು ನಿಮಿಷಗಳ ಸಂಬಂಧ ಅಷ್ಟೆ.

ವರ್ಷದಲ್ಲಿ ದೊಡ್ಡ ಉತ್ಸವವೆಂದರೆ ಶರನ್ನವರಾತ್ರಿ. ಆಗ ಒಂಬತ್ತು-ಹತ್ತು ದಿನಗಳು ಮಠದಲ್ಲಿ ತುಂಬ ಸಡಗರ; ಗುಡಿಯಲ್ಲಿ ದೇವಿಗೆ ಅಲಂಕಾರಗಳು, ಆರಾಧನೆಗಳು, ವಿಶೇಷ ಉತ್ಸವಗಳು. ಈ ಸಂಧರ್ಭದಲ್ಲಿ ಮಠದ ಸ್ವಾಮಿಗಳು ನವರತ್ನಖಚಿತವಾದ ಕಿರೀಟವನ್ನು ಧರಿಸಿ, ಕಣ್ಣನ್ನು ಕೋರೈಸುವ ಜರತಾರಿ ಬಹಿರ್ವಾಸವನ್ನು ಹೊದೆದು, ಬೆಲೆಬಾಳುವ ರತ್ನಪದಕಗಳುಳ್ಳ ಬಂಗಾರದ ಕಂಠೀಹಾರಗಳನ್ನು ತೊಟ್ಟು, ಬೆಳ್ಳಿಯ ಸಿಂಹಾಸನದ ಮೇಲೆ ಠೀವಿಯಿಂದ ಕುಳಿತು, ಮಠದ ಅಧಿಕಾರಿಗಳೆಲ್ಲ ವಂದಿಮಾಗಧರಂತೆ ಸುತ್ತ ನೆರೆದು ಓಲೈಸುತ್ತಿರಲು, ಒಡ್ಡೋಲಗ ನಡೆಸುವರು; ಇದಕ್ಕೆ 'ದರ್ಬಾರ್' ಎಂಬ ಹೆಸರೂ ಇದೆ. ಸಂನ್ಯಾಸಿಗೆ ಹೀಗೆ ವೇಷಹಾಕಿ, ಮಠವನ್ನು ಅರಮನೆಯಂತೆ

ಮಾರ್ಪಡಿಸುವ ಈ ವಿಚಿತ್ರಪದ್ಧತಿ ಯಾವ ಕಾಲದಿಂದ ಆರಂಭವಾಯಿತೋ ತಿಳಿಯದು.

ವಿಜಯನಗರದ ಅರಸರು ಅಧಿಕಾರದಲ್ಲಿದ್ದುಕೊಂಡು ಸಾರ್ವಭೌಮರಾಗಿ ಮೆರೆದ ಕಾಲದಲ್ಲಿ ಮಾನವಮಿ ದಿಬ್ಬದ ಮೇಲೆ ವೈಭವದಿಂದ ಕುಳಿತು ಹೀಗೆ ಒಡ್ಡೋಲಗ ನಡೆಸುತ್ತಿದ್ದರು; ಅದು ಸರಿಯೇ. ನವರಾತ್ರಿ ಮುಖ್ಯವಾಗಿ ಕ್ಷತ್ರಿಯರ ಸಮಾರಂಭ; ಸಮರಪ್ರಸಕ್ತಿ (ವಾಹನಪೂಜೆ, ಆಯುಧಪೂಜೆ, ವಿಜಯೋತ್ಸವ, ಸೀಮೋಲ್ಲಂಘನ, ಇತ್ಯಾದಿ) ಅಲ್ಲಿ ವಿಶೇಷವಾಗಿದೆ. ವಿಜಯನಗರದ ಅರಸರನ್ನು ಅನುಕರಿಸಿ ಮತ್ತೆ ಕೆಲವು ಅರಸೊತ್ತಿಗೆಗಳಲ್ಲೂ ಈ ನವರಾತ್ರೋಡ್ಡೋಲಗದ ಪದ್ಧತಿ ಕಾಣಿಸಿಕೊಂಡುದು ಸಹಜವೇ.

ಆದರೆ ಮಠದಲ್ಲೇನು ಈ ಮಕ್ಕಳಾಟ? ಸಂನ್ಯಾಸಿಯು ಮಠಾಧಿಪತಿಯಾದ ಮಾತ್ರಕ್ಕೆ, ಮಠಕ್ಕೆ ಧರ್ಮರಾಜ್ಯವೆಂಬ ವರ್ಣನೆ ಇದ್ದ ಮಾತ್ರಕ್ಕೆ, ತನ್ನ ಆಶ್ರಮಧರ್ಮವನ್ನೂ ಗಾಂಭೀರ್ಯವನ್ನೂ ಉದ್ದೇಶವನ್ನೂ ಬದಿಗೊತ್ತಿ ಅರ್ಥವಿಲ್ಲದ ಈ ಆಡಂಬರಕ್ಕೆ ಬಲಿಯಾಗುವುದೆ? ಸಂಸ್ಕಾರವಿಲ್ಲದ ಪಾಮರ ಜನರನ್ನು ರಂಜಿಸಲೆಂದೋ? ಹಣವಂತರಾದ ಭಕ್ತರನ್ನು ಬರಮಾಡಿಕೊಂಡು ಕಾಣಿಕೆ ಪಡೆಯಲೆಂದೋ? ವಿರಕ್ತಸಂನ್ಯಾಸಿಗಳಿಗೆ, ಪರಿವ್ರಾಜಕಾಚಾರ್ಯರಿಗೆ ಎಂಥ ಒಡ್ಡೋಲಗ?

ಚಂದ್ರಶೇಖರಭಾರತೀಸ್ವಾಮಿಗಳಿಗೇನೋ ಇದು ತುಂಬ ಸೋಜಿಗ-ವೆನಿಸಿತು, ತೀರ ಅನುಚಿತವೆನಿಸಿತು. ಸಂನ್ಯಾಸಧರ್ಮವನ್ನು ನಿಷ್ಠೆಯಿಂದ ಪಾಲಿಸಲು ತೊಡಗಿದ್ದು, ವಿರಕ್ತಿಯನ್ನು ಮೈಗೂಡಿಸಿಕೊಳ್ಳುವ ಸನ್ನಾಹದಲ್ಲಿ ಅವರಿಗೆ ಈ ಆಡಂಬರ, ಸಡಗರ ಬೇಡವೆನಿಸಿತು. ಆದರೆ ಅಧಿಕಾರಿಗಳು ಇದು ಮಠದ ಸಂಪ್ರದಾಯ, ಬಿಡುವ ಹಾಗಿಲ್ಲ ಎಂದರು. ಅವರೊಂದಿಗೆ ಹಗರಣವನ್ನು ಹೂಡುವ ಮನೋಧರ್ಮವಿಲ್ಲದೆ ಆಗಲೆಂದು ಒಪ್ಪಿದರು. ಇವರು ಸಂನ್ಯಾಸಿಗಳಾಗಿ ಮರುದಿನ ಪಟ್ಟವೇರಿದಾಗಲೇ ಕಿರೀಟವೇ ಮೊದಲಾದ 'ರಾಜಕೀಯ ಉಡುಪ'ನ್ನು (ಇದು ಶ್ರೀಕಂಠಶಾಸ್ತ್ರಿಗಳು ಬಳಸಿರುವ ಮಾತು) ಧರಿಸಿ, ಗದ್ದುಗೆಯ ಮೇಲಿರಿಸಿದ ರಜತಸಿಂಹಾಸನವನ್ನೇರಬೇಕಾಗಿದ್ದಿತು. ಆಗಲೇ ಅವರಿಗೆ ಇದು ಒಲ್ಲದ ಪದ್ಧತಿಯೆನ್ನಿಸಿದ್ದಿತು. ಆದರೇನು ಮಾಡುವುದು?

ಮಠದ ಪದ್ಧತಿಯೆಂದಮೇಲೆ ಅದು ತನಗೇನು ತಿಳಿಯುವುದು? ಸರ್ವಾಧಿಕಾರಿಗಳೇ ಎಲ್ಲವನ್ನೂ ಬಲ್ಲರು, ಅವರು ಹೇಳಿದಂತೆ ನಡೆಯಲಿ, ಅಷ್ಟೆ ತಮ್ಮ ಅಭಿಪ್ರಾಯವನ್ನು ಒಂದು ಪದ್ಯದಲ್ಲಿ ಹೇಳಿ ಈ ಆಡಂಬರ ವ್ಯರ್ಥವಾದುದೆಂದು ಬಣ್ಣಿಸಿದರು. ಅವರು ರಚಿಸಿರುವ 'ಸಾಂಬಾಷ್ಟಕ'ದಲ್ಲಿ ಇದೊಂದು ಚರಣ-

**ಧತ್ತಾಂ ಮೊರ್ಧ್ನಿ ಪ್ರವರಮಣಿಭಿರ್ಜುಷ್ಟದೀವ್ಯತ್‌ಕಿರೀಟಂ**
**ವಸ್ತಾಂ ದೇಹೇ ವಿವಿಧವಸನೈರ್ಹೇಮಸೂತ್ರಾವಬದ್ಧೈಃ ।**
**ಆರುಹ್ಯಾಸೌ ವಿಚರತು ಭುವಂ ತಿರ್ಯಗಾಂದೋಲಿಕಾಂ ವಾ**
**ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥**

ಇದು 'ರಾಜಕೀಯ-ಉಡುಪ'ನ್ನು ಧರಿಸಿ ಮೆರವಣಿಗೆಗೆ ಸಿದ್ಧರಾದ ತಮ್ಮನ್ನೇ ತಾವು ಬಣ್ಣಿಕೊಂಡಿರುವ ರೀತಿ. ಮುಂದಿನ ಚರಣದ ಪೂರ್ವಾರ್ಧ ಒಡ್ಡೋಲಗದ ಸಡಗರವನ್ನು ಸೂಚಿಸುತ್ತದೆ-

**ಸರ್ವಾಶಾಂತಪ್ರಕಟಿತರವೈರ್ಬಂದಿಭಿಃ ಸ್ತೂಯತಾಂ ವಾ ।**
**ಭೇರೀಢಕ್ಕಾಪ್ರಮುಖಬಿರುದಂ ದಿಕ್ಷು ದಂಧ್ವನ್ಯತಾಂ ವಾ ॥**

ಇವರು ಸಂನ್ಯಾಸಿಯಾಗಿ ಪಟ್ಟವೇರಿದುದು ಚೈತ್ರಮಾಸದಲ್ಲಿ. ಮುಂದೆ ಒಂದೆರಡು ತಿಂಗಳುಗಳಲ್ಲಿ ವಿರಾಪಾಕ್ಷಶಾಸ್ತ್ರಿಗಳ ಬಳಿ ಶಾಸ್ತ್ರಪಾಠ ಮೊದಲಾಯಿತು. ಅಷ್ಟಿಷ್ಟೆನ್ನುವುದರಲ್ಲಿ ವ್ಯಾಸಪೂಜೆ, ಚಾತುರ್ಮಾಸ್ಯದ ಸಂಭ್ರಮ. ಈ ಸಡಗರ ಮುಗಿಯಿತೆನ್ನುವಾಗ ಗಣಪತಿ ಸದಸ್ಸು; ಮುಂದೆ ನವರಾತ್ರಿ. ನವರಾತ್ರಿ ಬಂದಿತೆಂದರೆ ಪಾಠಕ್ಕೆ ಕುತ್ತು; ಏಕಾಂತಕ್ಕೆ ತೊಡಕು; ಧ್ಯಾನಕ್ಕಂತೂ ಏನೇನೂ ಅವಕಾಶವಿಲ್ಲ. ಅದರ ಮೇಲೆ ಈ ಆಡಂಬರದ ವಿಡಂಬನೆ ಬೇರೆ! ಸ್ವಾಮಿಗಳಿಗೆ ನವರಾತ್ರಿ ಬಂದಿತೆಂದರೆ ಎಂದೂ ಮುಜಗರವೇ.

ಕುಂಭಾಭಿಷೇಕಗಳ ಸಡಗರ ಮುಗಿದು, ಬಂದ ಭಕ್ತರು ಹಿಂದಿರುಗಿದ ಮೇಲೆ ಸ್ವಾಮಿಗಳು ನೆಮ್ಮದಿಯಿಂದ ತಮ್ಮ ಅಧ್ಯಯನ, ಅಧ್ಯಾಪನ, ಧ್ಯಾನ, ಪೂಜೆ, ತಪಸ್ಸು ಇವುಗಳಲ್ಲಿ ತೊಡಗಿದರು. ಈಗ ಮಂತ್ರಶಾಸ್ತ್ರದ ಕಡೆ ಗಮನವನ್ನು ಹರಿಸಿ ಅದರ ಮರ್ಮವನ್ನು ಗ್ರಹಿಸಿದರು. ಸಂನ್ಯಾಸಿಯಾದಮೇಲೆ

ಸಾಧನಚತುಷ್ಟಯವನ್ನು (ಎಂದರೆ ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರ-ಫಲಭೋಗವಿರಾಗ, ಶಮಾದಿಷಟ್ಕ, ಮುಮುಕ್ಷುತ್ವ) ಪಡೆದುಕೊಳ್ಳಬೇಕೆಂದು ತಮ್ಮ ಗುರುಗಳು ಹಿಂದೆಯೇ (ಶೃಂಗೇರಿಯಿಂದ ಬೆಂಗಳೂರಿಗೆ ವೇದಾಂತಪಾಠಕ್ಕೆಂದು ಕಳುಹಿಸುವ ಸಂದರ್ಭದಲ್ಲಿ) ಅಪ್ಪಣೆ ಮಾಡಿದ್ದು ಇನ್ನೂ ಕೈಗೂಡಿರಲಿಲ್ಲ.

ಆಗ ಗುರುಗಳು ರಚಿಸಿದ್ದ ಶ್ಲೋಕದಲ್ಲಿ 'ಸ್ಥಿರತರಸಾಧನಚತುಷ್ಟಯೋಪೇತಃ' ಎಂಬ ಮಾತನ್ನು ಹೇಳುವ ಮೊದಲು 'ಸ್ವೀಕೃತಪಾರಮಹಂಸ್ಯಃ' ಎಂಬ ವಿಧಿಯನ್ನೂ ಸೂಚಿಸಿದ್ದರು. ಸಂನ್ಯಾಸಿಯಾಗುವುದು ಒಂದು ಘಟ್ಟ, ಪರಮಹಂಸನಾಗುವುದು ಇನ್ನೊಂದು ಘಟ್ಟ. ಒಂದಾದೊಡನೆ ಇನ್ನೊಂದು ಅಗತ್ಯವಾಗಿ ಬಂದೊದಗುವುದೆಂದು ಹೇಳುವಹಾಗಿಲ್ಲ. ಪಾರಮಹಂಸ್ಯವನ್ನು ಪಡೆದುಕೊಳ್ಳಲು ಪ್ರಯತ್ನಪಡಬೇಕು. ವಿರೂಪಾಕ್ಷಶಾಸ್ತ್ರಿಗಳಲ್ಲಿ ನಡೆಸಿದ ಪಾಠ ಪಾರಮಹಂಸ್ಯದ ದಾರಿಯನ್ನು ಎಷ್ಟೋ ಸುಗಮವಾಗಿಸಿದ್ದಿತು; ದಾರಿಯ ಮೇಲೆ ಸಾಕಷ್ಟು ಬೆಳಕನ್ನೂ ಬೀರಿದ್ದಿತು. ಆದರೆ ಆ ದಾರಿಯ ಮೇಲೆ ನಡೆಯುವ ಹೊಣೆ ಇವರದ್ದೇ ತಾನೆ? ಈಗ ಸ್ವಾಮಿಗಳು ಇದನ್ನು ಕೈಗೂಡಿಸಿಕೊಳ್ಳಲು ಮನಸ್ಸುಮಾಡಿ, ಪಟ್ಟುಹಿಡಿದು ಕೂತರು.

ಹಿಂದಿನ ಸ್ವಾಮಿಗಳೂ ಬರುಬರುತ್ತ (ಎಂದರೆ ೧೯೦೧ರಿಂದ) ತೀರ ವಿರಕ್ತರಾಗಿ ಮಠದ ಸಂಪರ್ಕದಿಂದ ಆದಷ್ಟು ದೂರವಾಗಿ, ನರಸಿಂಹಪರ್ವತದಲ್ಲೋ ನರಸಿಂಹವನದಲ್ಲೋ ತಪಸ್ಸಿಗೆ ನಿಲ್ಲುತ್ತಿದ್ದರು. ಪದ್ಧತಿಯ ಬಹಿರಂಗಪೂಜೆ ಮೊದಲಾದುವನ್ನೂ ಮಾಡುತ್ತಿರಲಿಲ್ಲ. ಶ್ರೀಕಂಠಶಾಸ್ತ್ರಿಗಳೇ ಅವರ ಪರವಾಗಿ ಪೂಜೆಯನ್ನು ಮಾಡಬೇಕಾಗಿದ್ದಿತು. ಶಿಷ್ಯರಿಗೆ ಪಾಠ ಹೇಳುವುದನ್ನು ನಿಲ್ಲಿಸಿದ್ದರು. ಯಾರೊಡನೆಯೂ ಮಾತನಾಡುವುದನ್ನು ಕೂಡ ಬಿಟ್ಟಿದ್ದರು. ಸದಾಶಿವ ಬ್ರಹ್ಮೇಂದ್ರರ 'ಆತ್ಮವಿದ್ಯಾವಿಲಾಸ'ವನ್ನು ಅನುಸಂಧಾನ ಮಾಡಿಕೊಳ್ಳುವುದರಲ್ಲಿ ತೊಡಗಿದ್ದರು. ಈ ಎಲ್ಲ ವಿಚಾರಗಳನ್ನೂ ಶ್ರೀಕಂಠಶಾಸ್ತ್ರಿಗಳೇ ಹಿಂದಿನ ಸ್ವಾಮಿಗಳ 'ದಿವ್ಯಚರಿತ್ರೆ'ಯಲ್ಲಿ ಬರೆದಿದ್ದಾರೆ. ಆದುದರಿಂದ ಈ ಸ್ವಾಮಿಗಳೂ ಅದೇ ದಾರಿಯನ್ನು ಹಿಡಿದಿದ್ದಲ್ಲಿ ಸೋಜಿಗವೇನಿಲ್ಲ. ಗುರುಭಕ್ತಿಯ ಅಭಿವ್ಯಕ್ತಿ ಗುರುಗಳು ತೋರಿಸಿದ ದಾರಿಯಲ್ಲಿ ನಡೆಯುವುದೇ ಅಲ್ಲವೇ?

ಈ ಸಂದರ್ಭದಲ್ಲಿ ಸದಾಶಿವ ಬ್ರಹ್ಮೇಂದ್ರರ ವಿಚಾರ ಸ್ವಲ್ಪ ಹೇಳಬೇಕು. ಇವರು ತಮಿಳುನಾಡಿನಲ್ಲಿ ಸುಮಾರು ಇನ್ನೂರು ವರ್ಷಗಳ ಹಿಂದೆ ಬದುಕಿದ್ದ ಮಹಾಯೋಗಿಗಳು, ಜೀವನ್ಮುಕ್ತರು. ಕಂಚಿಯ ಕಾಮಕೋಟಿಪೀಠದ ಪರಮಶಿವೇಂದ್ರಸರಸ್ವತಿಗಳೆಂಬ ಸ್ವಾಮಿಗಳ ಬಳಿ ಶಿಷ್ಯರಾಗಿದ್ದು, ಅವರಿಂದ ದೀಕ್ಷೆಯನ್ನು ಪಡೆದುಕೊಂಡು, ಕಾವೇರಿತೀರದಲ್ಲಿ ಅವಧೂತರಾಗಿ ಮೌನಿಗಳಾಗಿ ಕಾಲಕಳೆದವರು; ಸುಮಾರು ನೂರು ವರ್ಷಗಳವರೆಗೆ ಬದುಕಿದ್ದು ಕಾವೇರಿನದಿಯ ದಡದ ಮೇಲೆ ನೆರೂರು (ಕರೂರಿನ ಹತ್ತಿರ) ಎಂಬಲ್ಲಿ ತೀರಿಕೊಂಡರು. ಅಲ್ಲಿಯೇ ಅವರ ಅಧಿಷ್ಠಾನವಿದೆ. ಇವರು ದೊಡ್ಡ ಪಂಡಿತರಾಗಿದ್ದರೂ ವಾದವಿವಾದಗಳನ್ನು ದೂರವಿರಿಸಿ, ಆತ್ಮಾನುಚಿಂತನದಲ್ಲೇ ಬಾಳನ್ನು ಕಳೆದವರು. ವೇದಾಂತದಲ್ಲಿ ನಿಷ್ಣಾತರಾಗಿದ್ದರೂ ಅಷ್ಟಾಂಗಯೋಗವನ್ನು ನಿಷ್ಠೆಯಿಂದ ಅಭ್ಯಾಸ ಮಾಡಿದ್ದವರು. 'ಯೋಗಸುಧಾಕರ'ವೆಂಬ ಗ್ರಂಥವನ್ನು ಪಾತಂಜಲಯೋಗಸೂತ್ರಗಳಿಗೆ ವ್ಯಾಖ್ಯಾನವಾಗಿ ರಚಿಸಿದ್ದಾರೆ.

ಇದಲ್ಲದೆ ಕೆಲವು ಶಾಸ್ತ್ರಗ್ರಂಥಗಳನ್ನೂ, ಗೇಯಭಾಗಕ್ಕೆ ಸೇರುವ ಹಲವು ಕೀರ್ತನೆಗಳನ್ನೂ ಪದಗಳನ್ನೂ ಸಂಸ್ಕೃತದಲ್ಲಿಯೇ ರಚಿಸಿದ್ದಾರೆ. ಅವುಗಳಲ್ಲೆಲ್ಲ ಭಕ್ತಿಯೇ ಮುಖ್ಯರಸ. ಅವರ 'ಗುರುರತ್ನಮಾಲಿಕೆ', 'ದಕ್ಷಿಣಾಮೂರ್ತಿಧ್ಯಾನ' ಮತ್ತು 'ನವಮಣಿಮಾಲೆ' ಇವು ಅವರ ಗುರುಭಕ್ತಿಯನ್ನು ಎತ್ತಿತೋರಿಸುವ ಕೃತಿಗಳು. ಅವರ ಕೀರ್ತನೆಗಳಲ್ಲಿ ಸುಮಾರು ಇಪ್ಪತ್ತೈದು ಇಂದಿಗೆ ಉಪಲಬ್ಧವಿವೆ; ಶ್ರೀರಾಮನು ಅವರ ಇಷ್ಟದೈವವೆಂಬುದು ಕೆಲವು ಕೀರ್ತನೆಗಳಿಂದ ಸ್ಪಷ್ಟವಾಗುತ್ತದೆ. ಅವರ 'ಮಾನಸ ಸಂಚರರೇ' ಎಂಬ ಕೀರ್ತನೆ ಎಷ್ಟು ಸೊಗಸಾಗಿದೆಯೆಂಬುದನ್ನು ಎಲ್ಲರೂ ಬಲ್ಲರು; 'ಸರ್ವಂ ಬ್ರಹ್ಮಮಯಂ' ಮತ್ತು 'ಚಿಂತಾ ನಾಸ್ತಿ ಕಿಲ' ಎಂಬ ಕೀರ್ತನೆಗಳು ಈಗೀಗ ಜನಪ್ರಿಯವಾಗಿವೆ.

ಅವರ ರಚನೆಗಳಲ್ಲೆಲ್ಲ ಮುಖ್ಯವಾದುದು 'ಆತ್ಮ ವಿದ್ಯಾವಿಲಾಸ' ವೆಂಬುದು. ಆರ್ಯಾವೃತ್ತದ ಅರವತ್ತೆರಡು ಶ್ಲೋಕಗಳಿರುವ ಈ ಕೃತಿ ಜೀವನ್ಮುಕ್ತನ ಚರ್ಯೆಯನ್ನು ಚೆನ್ನಾಗಿ ಬಣ್ಣಿಸುತ್ತದೆ; ಕೃತಕೃತ್ಯನಾದ ಜ್ಞಾನಿಯು ಆತ್ಮಾನುಸಂಧಾನದಲ್ಲೇ ತೊಡಗಿ ಆತ್ಮಾನುಭವದಲ್ಲೇ ಮುಳುಗಿರುವುದನ್ನು ತಮ್ಮ ಅನುಭವದಿಂದಲೇ ಎತ್ತಿತೋರಿಸಿದ್ದಾರೆ. ಇವರ ಈ ಕೃತಿಯನ್ನು ಹಿಂದಿನ

ಸ್ವಾಮಿಗಳು (ಸಚ್ಚಿದಾನಂದ-ಶಿವಾಭಿನವ — ನೃಸಿಂಹಭಾರತಿಗಳು) ತುಂಬ ಮೆಚ್ಚಿಕೊಂಡು ಅಡಿಗಡಿಗೆ ಅದನ್ನು ಓದುತ್ತಿದ್ದರು, ಓದಿಸಿ ಕೇಳುತ್ತಿದ್ದರು. ಪ್ರಾಣ ಬಿಡುವ ಗಳಿಗೆಯಲ್ಲೂ ಈ ಕೃತಿಯ ಶ್ಲೋಕಗಳನ್ನೇ ಓದುವಂತೆ ಅಪ್ಪಣೆ ಮಾಡಿದ್ದರು. ಸ್ವಾಮಿಗಳಿಗೆ ಈ ಅವಧೂತರೇ ಆದರ್ಶವಾಗಿದ್ದುದರಿಂದ ತಮ್ಮ ಪೀಠಾಧಿಪತ್ಯದ ಕಡೆಗಾಲದಲ್ಲಿ ತಾವೂ ಹಾಗೆಯೇ ಇರಲಾರಂಭಿಸಿದ್ದರು. ಅವರ ಬಳಿ ಸ್ವಲ್ಪಕಾಲ ಶಿಷ್ಯರಾಗಿದ್ದ ವಿರೂಪಾಕ್ಷಶಾಸ್ತ್ರಿಗಳಿಗೂ 'ಆತ್ಮವಿದ್ಯಾ ವಿಲಾಸ'ದ ಹೆಗ್ಗಳಿಕೆಯನ್ನು ತಿಳಿಸಿದ್ದರು. ವಿರೂಪಾಕ್ಷಶಾಸ್ತ್ರಿಗಳು ಸದಾಶಿವ ಬ್ರಹ್ಮೇಂದ್ರರ ವಿಚಾರವಾಗಿ ಆಸಕ್ತಿ ತಳೆದು ಈ ಕೃತಿಯನ್ನು ಮಾತ್ರವಲ್ಲದೆ ಅವರ ಉಳಿದೆಲ್ಲ ರಚನೆಗಳನ್ನೂ ಆದರದಿಂದ ಅಧ್ಯಯನ ಮಾಡಿದ್ದರು. ಈ ಆದರ, ಆಸಕ್ತಿಗಳು ಅವರ ಬಳಿ ವೇದಾಂತವನ್ನು ಕಲಿತ ಚಂದ್ರಶೇಖರಭಾರತೀ ಸ್ವಾಮಿಗಳಿಗೂ ಒದಗಿಬಂದುದು ಆಶ್ಚರ್ಯವಲ್ಲ.

ಸದಾಶಿವಬ್ರಹ್ಮೇಂದ್ರರ ಹಿರಿಮೆಯನ್ನು ಶೃಂಗೇರಿಯ ಜಗದ್ಗುರುಗಳಾಗಿದ್ದ ಉಗ್ರನರಸಿಂಹಭಾರತಿಗಳೇ ಅರಿತುಕೊಂಡು, ನೆರೂರಿನಲ್ಲಿ ಅವರ ಸಮಾಧಿಯ ದರ್ಶನ ಮಾಡಿದ್ದರು; ಅವರ ಉತ್ತರಾಧಿಕಾರಿಗಳಾದ ಸಚ್ಚಿದಾನಂದ-ಶಿವಾಭಿನವ — ನೃಸಿಂಹಭಾರತಿಗಳು ತಮ್ಮ ಪ್ರವಾಸಕಾಲದಲ್ಲಿ ನೆರೂರಿಗೆ ಬಂದು ಸದಾಶಿವಬ್ರಹ್ಮೇಂದ್ರರ ಸಮಾಧಿಯಲ್ಲಿ ಪೂಜೆ ನಡೆಸಿ, ಅವರ ಮೇಲೆ ಎರಡು ಸ್ತುತಿಪರವಾದ ಶ್ಲೋಕಗಳನ್ನೂ ರಚಿಸಿದ್ದರು. ಅವರ ಉತ್ತರಾಧಿಕಾರಿಗಳಾದ ಚಂದ್ರಶೇಖರಭಾರತೀಸ್ವಾಮಿಗಳೂ ಮುಂದೆ ತಮ್ಮ ತಮಿಳು ನಾಡು ಸಂಚಾರಕಾಲದಲ್ಲಿ ನೆರೂರಿಗೆ ದಯಮಾಡಿಸಿ ಸದಾಶಿವಬ್ರಹ್ಮೇಂದ್ರರ ಸಮಾಧಿಯನ್ನು ಸಂದರ್ಶಿಸಿ, ಪೂಜೆ ಮಾಡಿದರು. ಅಂತೂ ಹೀಗೆ ಎರಡು ಮೂರು ತಲೆಮಾರುಗಳಿಂದ ಸದಾಶಿವಬ್ರಹ್ಮೇಂದ್ರರ ಸಂಬಂಧ ಶೃಂಗೇರಿಮಠಕ್ಕೆ ಇದ್ದಿತು.

ಶೃಂಗೇರಿಯಲ್ಲಿ ಕುಂಭಾಭಿಷೇಕದ ಗದ್ದಲ ಅಡಗಿದಮೇಲೆ ಸ್ವಾಮಿಗಳು ಸದಾಶಿವಬ್ರಹ್ಮೇಂದ್ರರ 'ಆತ್ಮ ವಿದ್ಯಾವಿಲಾಸ'ವನ್ನು ತಮ್ಮ ಅನುಭವಕ್ಕೆ ತಂದುಕೊಳ್ಳಬೇಕೆಂಬ ಕಾತುರದಲ್ಲಿದ್ದರು. ಹಗಲಿರುಳೂ ಈ ಗ್ರಂಥದ ಅಧ್ಯಯನವೇ, ಆಲೋಚನೆಯೇ, ಅನುಸಂಧಾನವೇ. ಇದೇ ಗುಂಗಿನಲ್ಲಿಯೇ ಇದ್ದುಕೊಂಡು ಮಠಾಧಿಪತಿಗಳಾಗಿ ತಾವು ಮಾಡಬೇಕಾದುದನ್ನು

ಮಾಡಲೇಬೇಕಾದುದನ್ನು ಯಾಂತ್ರಿಕವಾಗಿ ಮಾಡುವರು. ಸ್ನಾನ, ಆಹ್ನಿಕ, ಪೂಜೆ, ಸೂತ್ರ ಭಾಷ್ಯಪಾಠ ಇಷ್ಟನ್ನು ಬಿಟ್ಟು ಉಳಿದಂತೆ ಹೊರಗಣ ಯಾವ ವಿಚಾರದಲ್ಲೂ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ.

ಇದು ಮಠದ ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳಿಗೆ ಸರಿ ಕಾಣಲಿಲ್ಲ. ಆದರೆ ಈ ವರ್ತನೆಯೇನು ಅವರಿಗೆ ಹೊಸದಲ್ಲ. ಹಿರಿಯ ಸ್ವಾಮಿಗಳು ಹೀಗೆಯೇ ಇರುತ್ತಿದ್ದ ಕಾಲವಿದ್ದಿತಲ್ಲವೇ? ಹಿಂದೆ ಹೇಳಿದಂತೆ, ತಮ್ಮ ಐವತ್ತನೆಯ ವಯಸ್ಸು ಮುಟ್ಟುವ ವೇಳೆಗೆ ಅವರು ಇದೇ ಮನಃಸ್ಥಿತಿಯನ್ನೇ ಪಡೆದಿದ್ದರು. ಬಹುಕಾಲ ನರಸಿಂಹವನದಲ್ಲೇ ಇದ್ದುಬಿಡುವರು. ಮಠದ ಲೌಕಿಕ, ವೈದಿಕ ಹೊಣೆಗಾರಿಕೆಯನ್ನೆಲ್ಲ ಶ್ರೀಕಂಠಶಾಸ್ತ್ರಿಗಳೇ ಹೊರ ಬೇಕಾಗಿದ್ದಿತು. ಹೀಗಿದ್ದರೂ ಆ ಸ್ವಾಮಿಗಳು ಮಠದಿಂದ ದೂರವಾಗಿರಲಿಲ್ಲ, ಮಠಾಧಿಪತಿಯ ಕರ್ತವ್ಯವನ್ನು ಕಡೆಗಾಣಿಸಲಿಲ್ಲ. ಇಂಥ ಸ್ಥಿತಿಯಲ್ಲಿದ್ದಾಗಲೇ ಅವರು ಕಾಲಡಿಯಿಂದ ಕರೆ ಬಂದೊಡನೆ ದಕ್ಷಿಣಯಾತ್ರೆಯನ್ನು ಕೈಗೊಂಡು ದಿಗ್ವಿಜಯಮಾಡಿ ಬಂದರಷ್ಟೆ? ಮತ್ತು, ಪಟ್ಟಕ್ಕೆ ಬಂದ ಎಷ್ಟೋ ವರ್ಷಗಳ ಮೇಲೆ ತಾನೆ ಅವರಿಗೆ ಈ ತೀವ್ರ ವಿರಕ್ತಿ ಬಂದುದು? ಈ ಸ್ವಾಮಿಗಳಾದರೋ ಪಟ್ಟಕ್ಕೆ ಬಂದ ಕ್ಷಣದಿಂದಲೇ ವಿರಕ್ತಿಯನ್ನು ಮೈದುಂಬಿಸಿಕೊಂಡುಬಿಟ್ಟಿದ್ದಾರೆ! ಮಠದ ಪಾಡು ಏನು? ಮಠದ ಹಿತಕ್ಕಾಗಿ ಸಂಚಾರಕ್ಕೆ ಹೊರಡಬೇಕೆಂದು ಶಾಸ್ತ್ರಿಗಳು ಸ್ವಾಮಿಗಳಿಗೆ ಮತ್ತೆ ಮತ್ತೆ ಹೇಳಿದರೂ ಸ್ವಾಮಿಗಳು ಕಿವಿಗೆ ಹಾಕಿಕೊಳ್ಳಲಿಲ್ಲ, ಬೇಡವೆಂದೂ ಹೇಳಲಿಲ್ಲ. ಸ್ವಾಮಿಗಳ ಚರ್ಯೆ ಬದಲಾದೀತೆಂದು ಕಾದು ನೋಡಿದರು, ಬಲವಂತವಾಗಿ ಬದಲಿಸಲು ಪ್ರಯತ್ನವನ್ನೂ ಪಟ್ಟರು. ಸ್ವಾಮಿಗಳೇನೂ ಜಗ್ಗಲಿಲ್ಲ.

# ೯. ಅವಧೂತಪ್ರವೃತ್ತಿ

ಈ ನಡುವೆ ೧೯೧೯ರ ಏಪ್ರಿಲ್ ತಿಂಗಳಲ್ಲಿ ಸ್ವಾಮಿಗಳ ಪೂರ್ವಾಶ್ರಮದ ತಂದೆ ಗೋಪಶಾಸ್ತ್ರಿಗಳು ತೀರಿಕೊಂಡರು. ಹೆಂಡತಿ ಲಕ್ಷ್ಮಮ್ಮನವರ ಸಂಕಟ ಹೇಳತೀರದು. ವಿರಕ್ತಿಯನ್ನು ಸಾಧಿಸಿಕೊಳ್ಳುವುದರಲ್ಲಿ ತೊಡಗಿದ್ದ ಸ್ವಾಮಿಗಳಿಗೂ ಇದರ ಬಿಸಿ ಮುಟ್ಟಿತು. ಮಗ ಜಗದ್ಗುರುವಾದನೆಂದು ಗೋಪಶಾಸ್ತ್ರಿಗಳು ಮಠದ ಕಾರುಬಾರಿನಲ್ಲಿ ಕೈಹಾಕಲಿಲ್ಲ; ಅವರು ಮೊದಲಿಗಿಂತ ಹೆಚ್ಚಾಗಿ ಮಠಕ್ಕೆ ಬಂದು ಹೋಗುತ್ತಲೂ ಇರಲಿಲ್ಲ; ತಮ್ಮ ಪಾಡಿಗೆ ತಾವು ಇರುತ್ತಿದ್ದರು. ಬೆಂಗಳೂರಿನಲ್ಲಿರುತ್ತಿದ್ದ ಅವರನ್ನು ಈಗ ಶೃಂಗೇರಿಗೇ ಕರೆಸಿಕೊಂಡು, ಮಠದ ಆಡಳಿತವೇ ಅನುಕೂಲಗಳನ್ನು ಮಾಡಿಕೊಟ್ಟಿದ್ದಿತು; ಬಡತನವೇನೋ ಹರಿದಿದ್ದಿತು. ಆದರೆ ಮಗ ಮನೆಯಲ್ಲಿಲ್ಲವೆಂಬ ಕೊರಗು ಹೇಗೆ ಹರಿದೀತು? ತಂದೆತಾಯಿಯರು ಮಗನನ್ನು ನೋಡುವುದೂ ಕಷ್ಟವೇ ಆಗಿತ್ತು; ಮಠದ ನಿರ್ಬಂಧ ಒಂದು ಕಡೆಯಾದರೆ, ಸ್ವಾಮಿಗಳ ಅವಧೂತಪ್ರವೃತ್ತಿ ಇನ್ನೊಂದು ಕಡೆ. ಪ್ರತಿವರ್ಷ ನವರಾತ್ರಿಯ ಸಂದರ್ಭದಲ್ಲಿ ಒಂಭತ್ತನೆಯ ದಿನದಂದು ಮಠದ ಕಡೆಯಿಂದ ಸುವಾಸಿನೀಪೂಜೆ ನಡೆಯುವ ವಾಡಿಕೆ. ಆಗ ಕೆಲವರು ಮುತ್ತೈದೆಯರಿಗೆ ಸ್ವಾಮಿಗಳು ಸೀರೆಗಳನ್ನು ದಾನ ಮಾಡುವರು. ಸ್ವಾಮಿಗಳ ತಾಯಿ ಸುಮಂಗಲಿಯಾಗಿರುವಾಗ ಈ ದಾನಕ್ಕೆ ಅವರನ್ನೂ ಕರೆಸಿ ಕೊಳ್ಳುತ್ತಿದ್ದರು. ಆಗ ನೆರೆದವರೆದುರು ತಾಯಿ ಮಕ್ಕಳ ಭೇಟಿ; ಎಂದರೆ ಪರಸ್ಪರದರ್ಶನ, ಔಪಚಾರಿಕವಾಗಿ ಕುಶಲಪ್ರಶ್ನೆ. ಈಗ ಗೋಪಶಾಸ್ತ್ರಿಗಳು ತೀರಿಕೊಂಡರಾಗಿ, ತಾಯಿಗೆ ಈ ಅವಕಾಶವೂ ತಪ್ಪಿತು!

ಸಂನ್ಯಾಸಿಯಾದರೂ ತಂದೆ ತಂದೆಯೇ, ಮಠಾಧಿಪತಿಯಾದರೂ ತಾಯಿ ತಾಯಿಯೇ. ತಂದೆತಾಯಿಯರಿಗೆ ಕಳೆದುಳಿದ ಒಬ್ಬನೇ ಮಗನಾಗಿ, ಅವರ ಆಸೆಗಳನ್ನು ಪೂರೈಸದೆ ಸಂನ್ಯಾಸಿಯಾದೆನೆಂಬ ಕೊರಗು ಸ್ವಾಮಿಗಳನ್ನೂ

ಬಾಧಿಸುತ್ತಿತ್ತು. ಅವರು '**ಶ್ರೀಶಾರದಾಭುಜಂಗ**' ವೆಂಬ ಇಪ್ಪತ್ತುಮೂರು ಚರಣಗಳ ಕೃತಿಯೊಂದನ್ನು ರಚಿಸಿದ್ದಾರೆ; ಅದು ಇದೇ ಸಮಯದಲ್ಲಿ ರಚಿತವಾಯಿತೆಂದು ಹೇಳುತ್ತಾರೆ. ಅದರಲ್ಲಿ ತಮ್ಮ ಒಡಲದುಃಖವನ್ನೆಲ್ಲ ಮಹಾತಾಯಿಯಾದ ಶಾರದೆಯ ಮುಂದೆ ತೋಡಿಕೊಂಡಿದ್ದಾರೆ.

ಈ ಸ್ತೋತ್ರವನ್ನು ರಚಿಸುವಾಗ ತಮ್ಮ ತಾಯಿಯೇ ಅವರ ಮನಸ್ಸಿನಲ್ಲಿ ಮೇಲೆದ್ದು ನಿಂತಿದ್ದರೆ ಆಶ್ಚರ್ಯವಲ್ಲ. ಒಂದು ಕಡೆ '**ನ ಪುತ್ರೇ ಮನಾಗಪ್ಯುಪೇಕ್ಷಾ ಜನನ್ಯಾಃ**' (ತಾಯಿಯಾದವಳು ಮಗನ ಬಗ್ಗೆ ಸ್ವಲ್ಪವಾದರೂ ಉದಾಸೀನ ಮಾಡುವುದಿಲ್ಲ) ಎಂದು ಹೇಳಿ, ತಾನು ತನ್ನ ದುಃಖವನ್ನು ಹೇಳಿಕೊಳ್ಳಲೂ ಬಾರದವನೆಂದೂ ('**ನ ವಿಜಾನೇಂಬ ವಕ್ತುಂ ಚ ಮದ್ದುಃಖರೀತಿಮ್**'), ದುಃಖದ ಬೆಂಕಿಯು ತನ್ನ ಒಡಲನ್ನು ಸುಡುತ್ತಿದೆಯೆಂದೂ ('ದುಃಖವಹ್ನಿ ಪ್ರತಪ್ತೇಂಽತರಂಗೇ ಮದೀಯೇ') ಬಣ್ಣಿಸಿಕೊಂಡಿದ್ದಾರೆ; ಮತ್ತೆ ಮತ್ತೆ ತಮ್ಮನ್ನು 'ಮಹಾಪಾಪಿ'ಯೆಂದು ಕರೆದುಕೊಂಡಿದ್ದಾರೆ.

ವಿರಕ್ತಿಯ ಸಾಧನೆಯಲ್ಲಿ ಸ್ವಾಮಿಗಳಿಗೆ ಅಡ್ಡವಾಗಿದ್ದುದು ತಮ್ಮ ತಾಯಿಯನ್ನು ಕುರಿತ ಚಿಂತೆ ಎಂದು ತೋರುತ್ತದೆ. ಅಮಾಯಕಳಾದ ಆ ತಾಯಿ ಎಷ್ಟು ದುಃಖಪಡುತ್ತಿದ್ದಾಳೋ, ತಾನೇ ಆಕೆಯ ತೀರದ ದುಃಖಕ್ಕೆ ಕಾರಣನಾದೆನಲ್ಲಾ ಎನ್ನುವ ಅನುಕಂಪ. ತಾವು ಸ್ವಾಮಿಗಳಾಗುವ ಮೊದಲು ಇಬ್ಬರು ತಂಗಿಯರು ತೀರಿಕೊಂಡಿದ್ದರು; ಈ ತಂಗಿಯರ ಮೇಲೆ ತುಂಬ ಪ್ರೀತಿಯಿದ್ದಿತಂತೇ. ಸ್ವಾಮಿಗಳಾದಮೇಲೂ ಅವರನ್ನು ನೆನೆಸಿಕೊಂಡು ಕಣ್ಣೀರಿಡುತ್ತಿದ್ದರೆಂದು ಅವರ ಎಡಬಲಸೇವಕರಾಗಿದ್ದ ವಿಶ್ವೇಶ್ವರಭಟ್ಟರು ನನಗೆ ತಿಳಿಸಿದರು. ಒಂದೊಂದು ವೇಳೆ, ಸಂನ್ಯಾಸದ ಮೇಲೂ ಮಠದ ಮೇಲೂ ಜುಗುಪ್ಸೆ ಮೂಡಿಬಿಡುತ್ತಿದ್ದುದುಂಟು. ತಾನಾಗಿ ಸಂನ್ಯಾಸವನ್ನು ಬಯಸಲಿಲ್ಲ, ಮಠದ ಆಧಿಪತ್ಯವನ್ನಂತೂ ಆಶಿಸಲೇ ಇಲ್ಲ; ಪೂರ್ವಕರ್ಮದ ಫಲ ಇದು, ಎಂದು ಮರುಗಿದ್ದುದುಂಟು. ಶಾರದೆಯ ಮುಂದೆ ಹೀಗೆ ಅಂಗಲಾಚಿದ್ದಾರೆ-

**ಯದಿ ತ್ವಂ ವದಸ್ಯಂಬ ತೇ ಪೂರ್ವಕರ್ಮ**
**ತ್ವಯೈವ ಪ್ರಯತ್ನೇನ ಜೇತವ್ಯಮೇವಮ್ ।**
**ತದಾ ಮಯ್ಯಜಸ್ರಂ ಕೃಪಾ ಸಂವಿಧೇಯಾ**
**ಪ್ರಯತ್ನಂ ಕರೋಮ್ಯೇವ ತತ್ರಾಪಿ ಸಮ್ಯಕ್ ॥**

'ನಿನ್ನ ಪೂರ್ವಕರ್ಮ, ನೀನೇ ಗೆಲ್ಲಬೇಕು ಎಂದು ಹೇಳುವೆಯೋ ತಾಯಿ? ಹಾಗಾದರೆ, ನಿನ್ನ ದಯೆಯನ್ನಾದರೂ ನನ್ನ ಮೇಲೆ ಮಾಡು, ಅದರ ಬಲದಿಂದ ನಾನೇ ಗೆದ್ದುಕೊಳ್ಳಲು ಪ್ರಯತ್ನಿಸುತ್ತೇನೆ' ಎಂದಿದ್ದಾರೆ.

ತಮ್ಮ ತಾಯಿಯನ್ನು ಕುರಿತ ಚಿಂತೆ ಅವರನ್ನು ಕಾಡುತ್ತಿದ್ದಿತೆನ್ನುವುದು ಒಂದು ಊಹೆಯಷ್ಟೆ. ಹಾಗೆಂದು ಅವರು ಯಾರ ಮುಂದೂ ಹೇಳಿದಂತೆ ಉಲ್ಲೇಖವಿಲ್ಲ. ಈ ಅವಧಿಯಲ್ಲಿ ಅವರ ಮನಸ್ಸು ಉದ್ವಿಗ್ನವಾಗಿದ್ದಿತೆನ್ನುವುದು ನಿಜ; ಬುದ್ಧಿಭ್ರಮಣವೆನ್ನುವಷ್ಟು ನೆಮ್ಮದಿ ತಪ್ಪಿದ್ದುದು ದಿಟ. ನರಸಿಂಹವನದಲ್ಲೇ ವಾಸ; ನದಿಯನ್ನು ದಾಟಿ ಮಠಕ್ಕೆ ಹೋಗುವುದೇ ನಿಂತಿತು. ದಿನಗಳು ಕಳೆದರೂ ಸ್ನಾನವಿಲ್ಲ, ಊಟವಿಲ್ಲ, ನಿದ್ರೆಯಿಲ್ಲ; ಒಂದೆಡೆ ಕೂರಲು ಸಾಧ್ಯವಿಲ್ಲದೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ನಡೆದಾಡುತ್ತಲೇ ಇರುವರು. ಉಡುಗೆಯ ಮೇಲೆ ಎಚ್ಚರವಿಲ್ಲ, ಮಾತಿನಲ್ಲಿ ಅರ್ಥದ ಕಡೆ ಗಮನವಿಲ್ಲ.

ತಂದೆ ಗೋಪಶಾಸ್ತ್ರಿಗಳು ತೀರಿಕೊಂಡ ಮೂರು ವರ್ಷಗಳಲ್ಲಿ (೧೯೨೨ರ ಡಿಸೆಂಬರ್ ತಿಂಗಳಲ್ಲಿ) ತಾಯಿ ಲಕ್ಷ್ಮಮ್ಮನವರೂ ತೀರಿಕೊಂಡರು. ಇದಕ್ಕೆ ಮುಂಚೆ ಎರಡು ವರ್ಷಗಳು ತಾಯಿ ದಿನವೂ ಮಠಕ್ಕೆ ಬಂದು ಮಗನನ್ನು ನೋಡಿಕೊಂಡು ಹೋಗುತ್ತಿದ್ದರು. ಇದರಿಂದ ಇಬ್ಬರಿಗೂ ಕೊಂಚಮಟ್ಟಿಗೆ ನೆಮ್ಮದಿಯಿದ್ದಿತು. ಅವರ ಕಡೆಗಾಲ ಹೇಗಿದ್ದಿತೋ ತಿಳಿದುಬರುವುದಿಲ್ಲ; ಮೊದಲೇ ಉದ್ವಿಗ್ನವಾಗಿದ್ದ ಸ್ವಾಮಿಗಳ ಮನಸ್ಸಿನ ಮೇಲೆ ಯಾವ ರೀತಿಯ ಆಘಾತವಾಯಿತೋ ಗೊತ್ತಾಗುವುದಿಲ್ಲ.

ತಮ್ಮ ತಾಯಿ ತೀರಿಕೊಂಡ ಒಂದೂವರೆ ತಿಂಗಳುಗಳಲ್ಲಿಯೇ ಅವರಿಗೆ ಮೊಟ್ಟಮೊದಲ ಬಾರಿ 'ಬುದ್ಧಿವಿಕಲ್ಪ'ವಾದುದು ಎಲ್ಲರಿಗೂ ತಿಳಿದುಬಂದಿತು. ೧೯೨೨ರ ಮಾಘ ಶುದ್ಧ ಪಂಚಮಿಯಂದು ಶಾರದೆಗೆ ಲಲಿತಾಸಹಸ್ರನಾಮ-ದೊಂದಿಗೆ ದಕ್ಷಿಣಾಮೂರ್ತಿಕಲ್ಪದಿಂದ ಪೂಜೆಯನ್ನು ಸ್ವಾಮಿಗಳೇ ಮಾಡಬೇಕಾಗಿದ್ದಿತು. ಆ ಹೊತ್ತು ಲಲಿತಾಪಂಚಮಿಯೆಂಬ ವ್ರತ. ಶಾರದೆಯ ಗುಡಿಗೆ ಬಂದ ಸ್ವಾಮಿಗಳು ಗಣೇಶನ ದರ್ಶನವಾದೊಡನೆ ಹಿಂದಿರುಗಿ ನದಿಗೆ ಬಂದುಬಿಟ್ಟರು. ಸ್ನಾನಮಾಡಿ ಮತ್ತೆ ಗುಡಿಗೆ ಬಂದರಾದರೂ ತಾವೇ ಪೂಜೆ ಮಾಡಲಾರದೆ, ಪುರೋಹಿತರ ಕೈಯಿಂದಲೇ ಪೂಜೆ ಮಾಡಿಸಿ ತಾವು ಸುಮ್ಮನೆ

ಎದುರಿಗೆ ಕುಳಿತಿದ್ದರು. ಆ ರಾತ್ರಿ ನಿದ್ದೆಬಾರದೆ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಶಳಾಯಿಸುತ್ತಲೆ ಇದ್ದರು. ಮರುದಿನ ಬೆಳಗ್ಗೆ ತಮ್ಮ ಸುತ್ತ ಇರುವುದೆಲ್ಲ ತಿರುಗುತ್ತಿದೆ ಎಂದು ಪರಿಚಾರಕರಿಗೆ ತಿಳಿಸಿದರು. ಅವರು ಮಠದ ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳಿಗೆ ಇದನ್ನು ತಿಳಿಸಿದರು. ಅವರು ಒಡನೆಯೇ ಸ್ವಾಮಿಗಳನ್ನು ನರಸಿಂಹವನದಲ್ಲಿ ಇರಿಸುವ ವ್ಯವಸ್ಥೆ ಮಾಡಿದರು.

ಈ ಅಸ್ವಾಸ್ಥ್ಯ ತೋರಿಕೊಂಡ ಒಂದು ತಿಂಗಳಲ್ಲಿ ಮೂಲ್ಕಿಯಿಂದ ಕೊಂಕಣಿ ವೈದ್ಯನೊಬ್ಬನನ್ನು ಕರೆಯಿಸಿದರು. ಅವನು ಲೇಹ್ಯವೊಂದನ್ನೂ ತೈಲವೊಂದನ್ನೂ ಸಿದ್ಧಮಾಡಿಕೊಟ್ಟ. ಲೇಹ್ಯವನ್ನು ತೆಗೆದುಕೊಳ್ಳಲು ಸ್ವಾಮಿಗಳು ನಿರಾಕರಿಸಿಬಿಟ್ಟರು. ತೈಲವನ್ನೇನೋ ಧಾರಾಕ್ರಮದಿಂದ ಸ್ವಾಮಿಗಳಿಗೆ ಬಲವಂತವಾಗಿ ಕೊಡಲಾಯಿತು. ಐದಾರು ಜನರು ಸ್ವಾಮಿಗಳನ್ನು ಹಿಡಿದುಕೊಂಡು ತೈಲವನ್ನು ತಿಕ್ಕಿ ತಣ್ಣೀರು ಸ್ನಾನ ಮಾಡಿಸುತ್ತಿದ್ದರು.

ಪರಿಸ್ಥಿತಿ ಕೊಂಚಮಟ್ಟಿಗೆ ಸುಧಾರಿಸಿದಂತೆ ತೋರಿತು. ಕೆಲವು ದಿನಗಳು ಸಾಮಾನ್ಯ ಸ್ಥಿತಿಯಲ್ಲೇ ಇರುವರು; ಸ್ನಾನ, ಆಹ್ನಿಕ, ಪೂಜೆ, ಪಾಠ ಎಲ್ಲವನ್ನೂ ಮತ್ತೆ ಎಂದಿನಂತೆ ಮೊದಲುಮಾಡಿದರು. ಮೊದಲಿದ್ದ ಉದ್ವೇಗ, ಕಾತರ ಕಾಣುತ್ತಿರಲಿಲ್ಲ.

ಆದರೆ ಒಮ್ಮೊಮ್ಮೆ ಸ್ನಾನ ಮಾಡಲು ತುಂಗಾನದಿಗೆ ಇಳಿದವರು ಬಹುಹೊತ್ತು ಅಲ್ಲಿಯೆ ನೀರಲ್ಲಿಯೇ ನಿಲ್ಲುವರು; ಅಥವಾ ನೀರು ಆಳವಾಗಿರದೆಡೆ ಗಂಟೆಯಾದರೂ ಕೂತುಬಿಡುವರು. ದಡದ ಮೇಲಿದ್ದ ಸರ್ವಾಧಿಕಾರಿಗಳು ಎಡಬಲಸೇವಕರನ್ನು ಕಳುಹಿಸಿ ಅವರನ್ನು ಬಲವಂತವಾಗಿ ದಡಕ್ಕೆ ಕರೆತರಬೇಕಾಗುತ್ತಿತ್ತು. ಪೂಜೆಮಾಡಲು ತೊಡಗಿದರೆ ಒಂದೊಂದು ದಿನ ನಡುವೆ ಮೈಮರೆಯುವರು; ಪೂಜೆ ಅರ್ಧಕ್ಕೆ ನಿಲ್ಲುವುದು. ವಿದ್ಯಾರ್ಥಿಗಳಿಗೆ ಪಾಠಹೇಳಲು ಮೊದಲುಮಾಡಿ ಮಧ್ಯದಲ್ಲಿ ಸುಮ್ಮನೆ ಕೂತುಬಿಡುವರು, ಇಲ್ಲವೇ ಇದ್ದಕ್ಕಿದ್ದಂತೆ ಎದ್ದು ಹೊರಟುಬಿಡುವರು. ಮತ್ತೆ ಹಲವಾರು ದಿನಗಳು ಮೊದಲಿನ ಸ್ಥಿತಿ–ಸ್ನಾನವಿಲ್ಲ, ಊಟವಿಲ್ಲ, ನಿದ್ರೆಯಿಲ್ಲ; ನಿಂತಲ್ಲಿ ನಿಲ್ಲದೆ ಕೂತಲ್ಲಿ ಕೂಡದೆ ತಿರುಗಾಡುತ್ತಲೇ ಇರುವರು. ಯಾವುದೋ ಆತಂಕ, ಏನೋ ಉದ್ವೇಗ.

# ೧೦. ಸಂಚಾರ

ಇದ್ದಕ್ಕಿದ್ದಂತೆ ಸ್ವಾಮಿಗಳ ಈ 'ಅಂತರ್ಮುಖ' ಪರಿಸ್ಥಿತಿ ಸುಧಾರಿಸಿತು. ತಮ್ಮ ನಿತ್ಯದ ಕೆಲಸಗಳನ್ನು ಎಂದಿನಂತೆ ನಿರ್ವಹಿಸತೊಡಗಿದರು. ಆಗ ಅವರ ಬಳಿ ಕೆಲವರು ಶಿಷ್ಯರಾಗಿ ನಿಂತರು. ಅವರಲ್ಲಿ ಒಬ್ಬರು ಕೃಷ್ಣಸ್ವಾಮಿ ಅಯ್ಯರ ತಂದೆ ರಾಮಚಂದ್ರ ಅಯ್ಯರೆಂಬುವ ಗೃಹಸ್ಥರು; ಹಿಂದಿನ ಸ್ವಾಮಿಗಳ ಕಾಲದಿಂದಲೂ ಶೃಂಗೇರಿಮಠಕ್ಕೆ ನಡೆದುಕೊಂಡವರು. ಈ ಸ್ವಾಮಿಗಳ ಸಂನ್ಯಾಸದೀಕ್ಷೆ, ಪಟ್ಟಾಭಿಷೇಕ ಮೊದಲಾದುವುಗಳಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದವರು. ಅವರು ಸಂನ್ಯಾಸಾಶ್ರಮವನ್ನು ಬಯಸಿ ಶೃಂಗೇರಿಗೆ ಬಂದು ನರಸಿಂಹವನದಲ್ಲೇ ನೆಲೆಸಿದ್ದರು. ಈ ಸಮಯದಲ್ಲಿ ನಂಜನಗೂಡಿನಲ್ಲಿ ಶ್ರೀಕಂಠಶಾಸ್ತ್ರಿಗಳ ಮಗಳ ಮದುವೆ ಇದ್ದಿತು. ಶ್ರೀಕಂಠಶಾಸ್ತ್ರಿಗಳಿಗೆ ತುಂಬ ಆಪ್ತರಾದ ರಾಮಚಂದ್ರ ಅಯ್ಯರು ಮದುವೆಗೆ ಬರಬೇಕೆಂದು ಶಾಸ್ತ್ರಿಗಳು ಒತ್ತಾಯಮಾಡಿದರು. ಆದರೆ ಸಂನ್ಯಾಸಿಯಾಗಬೇಕೆಂದು ನಿಶ್ಚಯಿಸಿರುವವನು ಮದುವೆಗೆ ಹೋಗುವುದು ಸರಿಯಲ್ಲವೆಂದರು ಅಯ್ಯರು.

ಆ ಸಂಜೆ ಸ್ವಾಮಿಗಳು ಮಾತಿನ ನಡುವೆ ಅಯ್ಯರನ್ನು ಕುರಿತು 'ಸರ್ವಾಧಿಕಾರಿಗಳ ಮನೆಯಲ್ಲಿ ಮದುವೆಯಂತಲ್ಲ; ನೀವು ಹೋಗೋಣ ವಾಗುತ್ತದೆ ತಾನೆ ?' ಎಂದು ಕೇಳಿದರು. ಅಯ್ಯರು 'ಇಲ್ಲ ಮಹಾಸ್ವಾಮಿ, ನಾನು ಇಲ್ಲಿಗೆ ಬಂದಿರುವ ಉದ್ದೇಶ ಸರ್ವಸಂಗಪರಿತ್ಯಾಗ ಮಾಡಿ ಸಂನ್ಯಾಸಿಯಾಗುವುದು. ಮದುವೆಗೆ ಹೋಗುವುದೆ ?' ಎಂದರು. ಸ್ವಾಮಿಗಳು, 'ನಿಮ್ಮ ಉದ್ದೇಶವೇನೋ ಅದೇ ಸರಿ. ಆದರೆ ಮದುವೆಗೆ ಹೋದರೇನು ತಪ್ಪು ? ನೀವು ಹೋದರೆ ಶಾಸ್ತ್ರಿಗಳಿಗೆ ಸಂತೋಷವಾಗುತ್ತದೆ' ಎಂದರು. ಅಯ್ಯರು ತಮ್ಮ ಪಟ್ಟುಬಿಡದೆ 'ದಿನವೂ ನನಗೆ ಇಲ್ಲಿ ತುಂಗಾಸ್ನಾನ, ಆಹ್ನಿಕ, ಸನ್ನಿಧಾನದಲ್ಲಿ ವೇದಾಂತಶ್ರವಣ ಆಗುತ್ತಿದೆ; ಸಾಧ್ಯವಾದಷ್ಟು ಏಕಾಗ್ರಚಿತ್ತನಾಗಿರಲು

ಯತ್ನಿಸುತ್ತಿದ್ದೇನೆ. ಇವೆಲ್ಲವನ್ನೂ ಬಿಟ್ಟು ದೂರದ ನಂಜನಗೂಡಿಗೆ ಪ್ರಯಾಣ ಮಾಡಿ, ಮದುವೆ ಸಮಾರಂಭದಲ್ಲಿ ಪಾಲ್ಗೊಂಡು, ಜನರಲ್ಲಿ ಬೆರೆಯುವುದು ನನಗೆ ಇಷ್ಟವಿಲ್ಲ' ಎಂದರು. ಅದಕ್ಕೆ ಸ್ವಾಮಿಗಳು ನಸುನಕ್ಕು 'ಏಕೆ, ಸಂಸಾರದ ಆಕರ್ಷಣೆಗೆ ಸಿಕ್ಕಿಬೀಳುತ್ತೀರೆಂದು ಭಯವೇ?' ಎಂದು ಕೇಳಿದರು. ಅಯ್ಯರು 'ಅಂತಹ ಭಯವೇನಿಲ್ಲ' ಎನ್ನಲು, 'ಅಷ್ಟು ಗಟ್ಟಿಮನಸ್ಸಿದ್ದರೆ ಹೋಗಿಬನ್ನಿ; ನಿಮ್ಮ ಚಿತ್ತಸ್ಥೈರ್ಯವನ್ನು ಪರೀಕ್ಷಿಸಿಕೊಂಡಂತಾದರೂ ಆಗುತ್ತದೆ. ಸಂಸಾರದಲ್ಲಿ ಆಸಕ್ತಿ ಮರಳದೆ ನೀವು ಶೃಂಗೇರಿಗೆ ಮರಳಿದರೆ ಆಗ ನಿಮಗೆ ಸಂನ್ಯಾಸ ಕೊಡುವ ಯೋಚನೆ ಮಾಡೋಣ!' ಎಂದರು ಸ್ವಾಮಿಗಳು.

ಅಯ್ಯರು ನಂಜನಗೂಡಿಗೆ ಹೋಗಿ ಶಾಸ್ತ್ರಿಗಳ ಮಗಳ ಮದುವೆಯನ್ನು ಮುಗಿಸಿಕೊಂಡು ಶೃಂಗೇರಿಗೆ ಹಿಂದಿರುಗಿದ ಕೆಲವು ದಿನಗಳಲ್ಲೇ ಸ್ವಾಮಿಗಳು ತಮ್ಮ ಶಿಷ್ಯರಾಗಿದ್ದ ನೆಲಮಾವು ಮಠದ ಕಮಲಾನಂದ-ನರಸಿಂಹಭಾರತೀ ಸ್ವಾಮಿಗಳಿಂದ ಅಯ್ಯರಿಗೆ ಸಂನ್ಯಾಸದೀಕ್ಷೆ ಕೊಡಿಸಿದರು. ಅವರು ಮುಂದೆ ರಾಮಾನಂದಭಾರತಿಗಳೆಂದು ಹೆಸರಾದರು.

ಆರು ತಿಂಗಳಾದರೂ ಸ್ವಾಮಿಗಳು ಅಂತರ್ಮುಖರಾಗದೆ ಇದ್ದಾಗ, ಸರ್ವಾಧಿಕಾರಿಗಳಿಗೆ ಸ್ವಾಮಿಗಳು ಈಗ ಸಂಚಾರ ಹೊರಟರೆ ಆದೀತೇನೋ ಎನಿಸಿತು. ಹಲವಾರು ಕಡೆಗಳಿಂದ ಸ್ವಾಮಿಗಳಿಗೆ ಕರೆಯೂ ಬರುತ್ತಿತ್ತು. ಶೃಂಗೇರಿಮಠದ ಸ್ವಾಮಿಗಳು ದಕ್ಷಿಣದೇಶಕ್ಕೆ ಬಿಜಯಮಾಡಿಸಿ ಹತ್ತು- ಹನ್ನೆರಡು ವರ್ಷಗಳಾಗಿದ್ದುವು. ಸಂಚಾರದಲ್ಲಿ ತಾನೆ ಮಠದ ಆರ್ಥಿಕಸ್ಥಿತಿ ಉತ್ತಮಗೊಳ್ಳುವುದು? ಭಕ್ತಕೋಟಿಯಿಂದ ಮಠಕ್ಕೆ ಅನುಕೂಲವಾದ ಕಟ್ಟಳೆ ಸಲ್ಲುವುದು? ಮಹಾರಾಜರೂ ಸ್ವಾಮಿಗಳು ಮೈಸೂರಿಗೆ ದಯಮಾಡಿಸಿ, ಅರಮನೆಯಲ್ಲಿ ಮಠದ ಪೂಜೆ ನಡೆಸಬೇಕೆಂದು ಬಿನ್ನವಿಸಿಕೊಂಡಿದ್ದರು. ಸ್ವಾಮಿಗಳು ಒತ್ತಾಯಕ್ಕೆ ಮಣಿದು ರಾಮೇಶ್ವರದವರೆಗೆ ಸಂಚಾರಮಾಡಿ ಬರಲು ಒಪ್ಪಿ ಹೊರಟರು.

ಸ್ವಾಮಿಗಳ ಸಂಚಾರ ೧೯೨೪ರ ಜನವರಿ ೧೮ರಂದು (ಪುಷ್ಯ ಶುದ್ಧ ದ್ವಾದಶಿಯಂದು) ಶುರುವಾಗಲೆಂದು ಮಠದ ಶಂಕರನಾರಾಯಣ ಜೋಯಿಸರು ಮುಹೂರ್ತ ಇಟ್ಟುಕೊಟ್ಟರು. ಆ ದಿನ ಸರಿಯಾಗಿ ನಡು ಹಗಲು

ಹನ್ನೆರಡು ಗಂಟೆಗೆ ಸ್ವಾಮಿಗಳೂ ಪರಿವಾರದವರೂ ಪಾರಣೆ ಮುಗಿಸಿ ಊರ ನಾಲ್ಕು ಬೀದಿಯಲ್ಲಿ ಮೆರವಣಿಗೆಯಿಂದ ಹೊರಟರು. ಸ್ವಾಮಿಗಳಿಗೆ ಕಿರೀಟ, ಕಂಠೀಸರಗಳು, ಕಲಾಪತ್ತಿನ ಛಾದರ ತೊಡಿಸಿ ಬಂಗಾರದ ಪಲ್ಲಕ್ಕಿಯಲ್ಲಿ ಕೂರಿಸಿ, ಬೆಟ್ಟದ ಮಲ್ಲಿಕಾರ್ಜುನಸ್ವಾಮಿ ಗುಡಿಗೆ ಪ್ರದಕ್ಷಿಣೆಯಾಗಿ ಊರನ್ನು ಸುತ್ತಿಸಿ ಊರ ಬಾಗಿಲಿಗೆ ಬಂದರು. ಈ ನಡುವೆ ಅನೇಕರ ಮನೆಗಳಲ್ಲಿ ಸ್ವಾಮಿಗಳಿಗೆ ಪಾದಪೂಜೆ ನಡೆಯಿತು. ಊರ ಬಾಗಿಲಲ್ಲಿ ಸ್ವಾಮಿಗಳು ಕಿರೀಟ, ಕಂಠೀಹಾರಗಳು, ಕಲಾಪತ್ತಿನ ಛಾದರ ಎಲ್ಲವನ್ನೂ ತೆಗೆದು, ಸಾಮಾನ್ಯ ಕಾವಿಯ ಬಟ್ಟೆಯಿಂದಲೇ ಮೇನೆಯಲ್ಲಿ ಕುಳಿತು ಹೊರಟರು. ಮೇನೆಯ ಜೊತೆಗೆ ಸ್ವಾಮಿಗಳ ದಂಡವನ್ನೂ ಕಮಂಡಲವನ್ನೂ ಹಿಡಿದವರು ನಡೆಯುತ್ತಲೇ ಮುಂದೆ ಸಾಗಿದರು. ಉಳಿದ ಪರಿವಾರ ಗಾಡಿಗಳಲ್ಲಿ ಹಿಂದೆ ಹೊರಟಿತು. ಶೃಂಗೇರಿ ಬಿಡುವಾಗ ಸಂಜೆ ಐದು ಗಂಟೆಯಾಗಿದ್ದಿತು.

ಶೃಂಗೇರಿಯಿಂದ ಹೊರಟವರು ಹುಲಗಾರು ಎಂಬಲ್ಲಿಗೆ ಬಂದು, ಅಲ್ಲಿ ಚೆನ್ನಕೇಶವರಾಯರೆಂಬ ಗೃಹಸ್ಥರ ಮನೆಯಲ್ಲಿ ರಾತ್ರಿ ತಂಗಿದರು. ಮರುದಿನ ಮಧ್ಯಾಹ್ನ ಅಲ್ಲಿಂದ ಹೊರಟು ಸಂಜೆ ಕಿಗ್ಗಕ್ಕೆ ಬಂದರು. ಅಂದು ಅಲ್ಲಿಯೇ ವಸತಿ. ಮರುದಿನ ಬೆಳಗ್ಗೆ ಕಾವಡಿಯೆಂಬ ಅಗ್ರಹಾರಕ್ಕೆ ಬಂದರು; ಅಂದು ಪೌರ್ಣಮಿಯಾದುದರಿಂದ ಸ್ವಾಮಿಗಳಿಗೆ ದೀಕ್ಷಾವಿಸರ್ಜನೆಯಾಯಿತು. ಮರುದಿನ ಶೃಂಗೇರಿಯ ಶಾಖಾಮಠವಾದ ಹರಿಹರಪುರದ ಮಠದಲ್ಲಿ ವಾಸ್ತವ್ಯ. ಮರುದಿನ ಬೆಟಗೆರೆಗೆ ಬಂದು ಸಾಹುಕಾರ ಕೃಷ್ಣಭಟ್ಟರ ಮನೆಯಲ್ಲಿ ಭಿಕ್ಷೆ ಸ್ವೀಕರಿಸಿ, ರಾತ್ರಿಯನ್ನು ಅವರ ಮನೆಯಲ್ಲೇ ಕಳೆದು, ಮುಂಜಾನೆ ಅಲ್ಲಿಂದ ಹೊರಟು ನಾರುವೆ ಅಗ್ರಹಾರಕ್ಕೆ ಬಂದರು. ತುಂಗಾನದಿಯ ದಡದಲ್ಲಿರುವ ಈ ಊರಲ್ಲಿ ಒಂದು ದಿನ ಇದ್ದರು.

ಅಲ್ಲಿಂದ ಮುಂದೆ ಕೊಪ್ಪ, ತಡಸ, ತರೀಕೆರೆ, ಬೀರೂರು, ಸಕ್ಕರೆ ಪಟ್ಟಣ ಮಾರ್ಗವಾಗಿ ಚಿಕ್ಕಮಗಳೂರಿಗೆ ಬಂದು ಅಲ್ಲಿ ಎಂಟು ದಿನಗಳ ಕಾಲ ತಂಗಿದರು. ಮುಂದೆ ಬೇಲೂರು, ಬೆಳವಾಡಿ (ಶೃಂಗೇರಿಮಠದ ಗ್ರಾಮವಾಗಿದ್ದ ಕಾರಣ ಎರಡು ದಿನಗಳ ವಾಸ್ತವ್ಯ), ಜಾವಗಲ್ಲು, ಬಾಣಾವರ (ಇಲ್ಲಿ ಗ್ರಹಣದ ಸ್ನಾನ) ಅರಸೀಕೆರೆ, ದುದ್ದ ಮಾರ್ಗವಾಗಿ ಹಾಸನವನ್ನು ತಲಪಿದರು, ಆಗ ಹಾಸನಜಿಲ್ಲೆಯ ಮುಖ್ಯಾಧಿಕಾರಿಗಳಾಗಿದ್ದ ಮೈಲಾರರಾಯರ ಬಂಗಲೆಯಲ್ಲೇ ಎಂಟು ದಿನಗಳನ್ನು ಕಳೆದರು.

ಹಾಸನದಿಂದ ಹೊರಟವರು ಹೊಳೆನರಸೀಪುರ, ಅರಕಲಗೂಡು, ರಾಮನಾಥಪುರ (ಇಲ್ಲಿ ಶಿವರಾತ್ರಿಪೂಜೆ), ಕೊಣನೂರು, ಕಿಕ್ಕೇರಿ, ಚನ್ನರಾಯನಪಟ್ಟಣ, ಹೊನ್ನು ಹುಣಸೇಗ್ರಾಮ, ಹಿರೋಡೆಗಳನ್ನು ದಾಟಿ ಮಾಘ ಶುದ್ಧ ಪೂರ್ಣಿಮೆಯಂದು ಮೈಸೂರಿಗೆ ಬಂದರು. ಮಹಾರಾಜರು (ನಾಲ್ವಡಿ ಕೃಷ್ಣರಾಜ ಒಡೆಯರು) ಸ್ವಾಮಿಗಳನ್ನು ವೈಭವದಿಂದ ಎದುರುಗೊಂಡು ಅರಮನೆಯ ಬಂಗಾರುತೊಟ್ಟಿಯಲ್ಲಿ ಅವರಿಗೆ ಪೂಜೆ, ನಜರು ಒಪ್ಪಿಸಿದರು. ಅಂದು ಅಲ್ಲಿಯೇ ಸ್ವಾಮಿಗಳು ಮಠದ ದೇವರುಗಳ ಪೂಜೆ ಮಾಡಿ, ನೆರೆದವರಿಗೆಲ್ಲ ಫಲಮಂತ್ರಾಕ್ಷತೆಗಳನ್ನು ಕೊಟ್ಟರು.

ಹಿಂದಿನ ಸ್ವಾಮಿಗಳು ಮೈಸೂರಿನಲ್ಲೇ ಹುಟ್ಟಿ ಬೆಳೆದವರು. ಅಗ್ರಹಾರದಲ್ಲಿ ಅವರು ಹುಟ್ಟಿದ ಮನೆಯನ್ನು ಅದರ ಒಡೆಯರಾಗಿದ್ದ ಧರ್ಮಾಧಿಕಾರಿ ಕುಣಿಗಲ್ಲು ರಾಮಶಾಸ್ತ್ರಿಗಳ, ಮತ್ತು ಸರ್ವಾಧಿಕಾರಿ ಶ್ರೀಕಂಠ ಶಾಸ್ತ್ರಿಗಳ ನೆರವಿನಿಂದ ಮಠಕ್ಕೆ ಪಡೆದುಕೊಂಡು ಅಲ್ಲಿ ಹಿಂದಿನ ಸ್ವಾಮಿಗಳ ಸ್ಮಾರಕಕ್ಕೆಂದು ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಶಿಲಾಮಯವಾದ ಶಂಕರಾಲಯವೊಂದನ್ನು ಕಟ್ಟಿಸುವ ಏರ್ಪಾಟು ಆಗಲೇ ನಡೆದಿದ್ದಿತು; ಈ ನಿವೇಶನಕ್ಕೆ ಸೇರಿದಂತೆ ಸುತ್ತ ಇದ್ದ ಭೂಮಿಯನ್ನೂ ಸರಕಾರದಿಂದ ಪಡೆದುಕೊಂಡಾಗಿದ್ದಿತು. ಸ್ವಾಮಿಗಳು ಮೈಸೂರಿಗೆ ಬಂದಾಗ ಈ ಆಲಯದ ಕುಂಭಾಭಿಷೇಕ ನೆರವೇರಿತು. ಅಲ್ಲಿ ಗುರುಗಳ ಹಾಲುಗಲ್ಲಿನ ಮೂರ್ತಿಯೊಂದನ್ನೂ ಪ್ರತಿಷ್ಠೆ ಮಾಡಲಾಯಿತು.

ಮೈಸೂರಿನಿಂದ ಹೊರಟು ನಂಜನಗೂಡಿಗೆ ಬಂದು ಅದರ ನೆರೆಯಲ್ಲಿರುವ ಕಲ್ಲಹಳ್ಳಿಯಲ್ಲಿ ಹದಿನೈದು ದಿನಗಳು ತಂಗಿದರು. ಮಠದ ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳ ಊರು ಇದು; ಅಲ್ಲಿ ಅವರ ಬಂಗಲೆಯೂ ಇದ್ದಿತು. ಸ್ವಾಮಿಗಳ ಆರೋಗ್ಯವೂ ಕೆಟ್ಟಿದ್ದಿತು; ಹೀಗಾಗಿ ಸ್ವಾಮಿಗಳು ಅಲ್ಲೇ ಇರಬೇಕಾಯಿತು.

ಆರೋಗ್ಯ ಸ್ವಲ್ಪ ಸುಧಾರಿಸಿದಮೇಲೆ ಅಲ್ಲಿಂದ ಹೊರಟು ಚಾಮರಾಜ ನಗರ, ಕೌಲಂದೆ, ಅಟ್ಟಗಳ್ಳಿಪುರಗಳನ್ನು ದಾಟಿ ಹಾಸನೂರು ಘಾಟಿಗೆ ಬಂದರು. ಅಲ್ಲಿ ಅರಣ್ಯ ಇಲಾಖೆಯ ಬಂಗಲೆಯಲ್ಲಿದ್ದು ವಿಶ್ರಮಿಸಿಕೊಂಡು ಬಣ್ಣೇರಿ ಚತ್ರದ ಮೂಲಕ ಸತ್ಯಮಂಗಲಕ್ಕೆ ಬಂದರು. ಭವಾನೀ ನದಿಯ ದಡದ ಮೇಲಿರುವ ಈ ಊರಿನಲ್ಲಿ ಶೃಂಗೇರಿಯ ಮಠವೊಂದಿದೆ. ಅಲ್ಲಿ ಮೂರು ದಿನಗಳು ತಂಗಿದರು.

ಮುಂದೆ ಗೋಬಿಚೆಟ್ಟಿಪಾಳ್ಯಕ್ಕೆ ಬಂದು ಅಲ್ಲಿ ಚಾತುರ್ಮಾಸ್ಯವ್ರತವನ್ನು ಕೈಕೊಂಡು ಭಾದ್ರಪದ ಬಹುಳ ಅಮಾವಾಸ್ಯೆಯವರೆಗೆ (ಎರಡು ತಿಂಗಳುಗಳು) ಅಲ್ಲಿದ್ದರು. ಅಲ್ಲಿಂದ ಶ್ರೀರಂಗ, ತಿರುಚಿರಪಳ್ಳಿ, ಪುದುಕ್ಕೋಟೆ, ಚೆಟ್ಟಿನಾಡು ಮುಂತಾದ ಊರುಗಳಲ್ಲಿ ಭಕ್ತರನ್ನು ಸಂತೋಷಪಡಿಸಿದರು. ಕುನ್ನಕ್ಕುಡಿಯಲ್ಲಿ ವ್ಯಾಸಪೂಜೆ ಮತ್ತು ಚಾತುರ್ಮಾಸ್ಯವ್ರತಗಳನ್ನು ಮುಗಿಸಿಕೊಂಡು ರಾಮನಾಥಪುರವನ್ನು ದಾಟಿ ರಾಮೇಶ್ವರವನ್ನು ಮುಟ್ಟಿದರು.

ಸತ್ಯಮಂಗಲದಿಂದ ತಮಿಳುನಾಡು ಮೊದಲಾಗುತ್ತದೆ. ಎಲ್ಲೆಲ್ಲಿಯೂ ನೆರೆದ ಭಕ್ತಸಮುದಾಯಕ್ಕೆ ಸ್ವಾಮಿಗಳ ಆಶೀರ್ವಚನ, ಅನುಗ್ರಹಭಾಷಣಗಳು ನಡೆಯಬೇಕು ತಾನೆ? ಇದು ತಮಿಳಲ್ಲೇ ನಡೆಯಬೇಕೆಂದು ಜನ ಬಯಸುವುದು ಸಹಜವೇ. ಸ್ವಾಮಿಗಳೂ ಒಪ್ಪಿದರು.

ಆದರೆ ಸ್ವಾಮಿಗಳಿಗೆ ತಮಿಳು ಬಾರದೆಂದು ಸರ್ವಾಧಿಕಾರಿಗಳ ನಂಬಿಕೆ. ಸ್ವಾಮಿಗಳ ಮನೆಮಾತು ತೆಲುಗು, ದೇಶಭಾಷೆ ಕನ್ನಡ, ಕಲಿತದ್ದು ಸಂಸ್ಕೃತ. ಕನ್ನಡದಲ್ಲಿ ಚೆನ್ನಾಗಿ ಮಾತನಾಡುವರು, ಸರಳ ಸಂಸ್ಕೃತದಲ್ಲೂ ಉಪನ್ಯಾಸಗಳನ್ನು ಕೊಡುವರು. ಆದರೆ ತಮಿಳು ಭಾಷೆಯ ಪರಿಚಯ ಅವರಿಗೆಲ್ಲಿಯದು? ಇದೇ ಮೊಟ್ಟಮೊದಲ ಬಾರಿ ಈ ಪ್ರಾಂತಕ್ಕೆ ಬರುತ್ತಿರುವುದು. ತಿಳಿಯದ ಭಾಷೆಯಲ್ಲಿ ಸಭೆಯ ಮುಂದೆ ಮಾತನಾಡಲು ತೊಡಗಿ ನಗೆಪಾಟಲಾದರೆ ಮಠದ ಮರ್ಯಾದೆ ಏನು ಉಳಿದೀತು? ಸಂಸ್ಕೃತದಲ್ಲೇ ಮಾತನಾಡಲಿ ಎಂದು ಸರ್ವಾಧಿಕಾರಿಗಳ ಆಗ್ರಹ.

ಸ್ವಾಮಿಗಳು ನಸುನಗುತ್ತ ''ತಮಿಳಲ್ಲಿ ಮಾತನಾಡಿದರೆ ಜನಕ್ಕೆ ಅರ್ಥವಾದೀತು. ಅವರಿಗೆ ತಿಳಿಯಲೆಂದೇ ತಾನೆ ನಮ್ಮ ಮಾತು?'' ಎಂದರು. ಸರ್ವಾಧಿಕಾರಿಗಳು ದುಮ್ಮಾನದಿಂದ, ''ನಾನಂತೂ ಸಭೆಗೆ ಬರುವುದಿಲ್ಲ, ನಿಮ್ಮ ಪಾಡು!'' ಎಂದು ಬಿಟ್ಟರು. ಆದರೆ ಅಂದಿನ ಸಭೆಯಲ್ಲಿ ಸ್ವಾಮಿಗಳು ನಿರರ್ಗಳವಾಗಿ ಒಳ್ಳೆಯ ತಮಿಳಿನಲ್ಲೇ ಮಾತನಾಡಿ, ನೆರೆದವರೆಲ್ಲ ತಲೆದೂಗುವಂತೆ ಮಾಡಿದರು ಎಂಬುದನ್ನು ಕೇಳಿ ಸರ್ವಾಧಿಕಾರಿಗಳು ಆಶ್ಚರ್ಯಪಟ್ಟರು. ಮುಂದೆ ತಮಿಳುನಾಡಿನ ಪ್ರವಾಸದಲ್ಲಿ ಎಲ್ಲ ಕಡೆಯೂ ಸ್ವಾಮಿಗಳ ಉಪನ್ಯಾಸ ತಮಿಳಿನಲ್ಲೇ; ವಿದ್ವತ್ಸಭೆಗಳಲ್ಲಿ ಮಾತ್ರ ಸಂಸ್ಕೃತದಲ್ಲಿ.

ರಾಮೇಶ್ವರದಿಂದ ಮಧುರೆಗೆ ಬಂದರು. ಅಲ್ಲಿ ಮೀನಾಕ್ಷಿಯ ಸನ್ನಿಧಾನದಲ್ಲಿ ಪುಳಕಿತರಾದರು. 'ಮೀನಾಕ್ಷೀ ಸ್ತುತಿ' ಮತ್ತು 'ಮೀನಾಕ್ಷೀ ಸ್ತೋತ್ರ' ಎಂಬ ಎರಡು ಸ್ತೋತ್ರಕೃತಿಗಳನ್ನು ರಚಿಸಿದರು. ಮೊದಲನೆಯದರಲ್ಲಿ ಮೀನಾಕ್ಷೀ ದೇವಾಲಯದ ಸೌಂದರ್ಯವನ್ನೂ ಮೆಚ್ಚಿಕೊಂಡಿದ್ದಾರೆ. ಅವರ ಪಾಲಿಗೆ ಮೀನಾಕ್ಷಿ ಬ್ರಹ್ಮವಿದ್ಯಾದೇವತೆ—

ದಿವ್ಯಂ ರೂಪಂ ದಧಾನಾ ಲಲಿತತರವೈರ್ವೇಣುವೀಣಾದಿಜಾತೈಃ
ಪ್ರಾಪಯ್ಯಾಂತರ್ಮುಖತ್ವಂ ನಿಖಿಲಜನಮನಾಂಸ್ಯಾತ್ಮರೂಪಂ ವಿವೇಕ್ತುಮ್ ।
ವೃತ್ತೀರ್ಮೋದಾದಿರೂಪಾ ಅಪಿ ಪರಿಗಲಿತಾಃ ಕುರ್ವತೀ ಬ್ರಹ್ಮವಿದ್ಯಾ
ಮೀನಾಕ್ಷೀ ಜೀವನೀಡಂ ಸುಖಮಮೃತಮಹೋಬೋಧಯಂತೀ ವಿಭಾತಿ ॥

'ದೇವಿಯದು ದಿವ್ಯರೂಪ; ಅಪ್ರಾಕೃತವಾದುದು. ಕೊಳಲು, ವೀಣೆ ಮುಂತಾಗಿ ಇಂಪಾದ ವಾದ್ಯಗಳಿಂದ ಜನರು ತಮ್ಮೊಳಗೇ ಸರಿಯುವಂತೆ ಮಾಡುವಳು. ಸಂಗೀತದ ಸ್ವಾರಸ್ಯವಿರುವುದು ಅಂತರ್ಮುಖವಾಗುವ ಸೌಕರ್ಯದಲ್ಲಿ. ಎಲ್ಲ ಜನರ ಮನಸ್ಸಿನಲ್ಲೇ ಪರಮಾತ್ಮ ಸ್ವರೂಪವನ್ನು ಕಂಡುಕೊಳ್ಳುವ ಹದನ ಇದು. ಹಾಗೆಂದೇ ಸಂತೋಷ ಮೊದಲಾದ ಚಿತ್ತವೃತ್ತಿಗಳನ್ನೂ ಮಾಗಿಸಿ ಬ್ರಹ್ಮವಿದ್ಯೆಗೆ ಅವಕಾಶ ಮಾಡಿಕೊಡುವಳು. ಜೀವವೆಂಬ ಗೂಡಿನೊಳಗೆ ಅಡಗಿಕೊಂಡು ಎಂದೂ ಮಾಸದ ಮರೆಯಾಗದ ಆನಂದವನ್ನು ತಿಳಿಯಹೇಳುತ್ತ ಬೆಳಗುವಳು'.

ಸ್ವಾಮಿಗಳಿಗೆ ಸಂಗೀತವು ಅಧ್ಯಾತ್ಮಸಾಧನೆಗೆ ಅನುಕೂಲವೆಂಬ ಕಲ್ಪನೆ ಬಂದದ್ದು ಇಲ್ಲಿಯೇ ಎಂದು ತೋರುತ್ತದೆ. ಮುಂದೆ ಅವರಿಗೆ ಶಾಸ್ತ್ರೀಯಸಂಗೀತದ ಮೇಲೆ ಹೆಚ್ಚಿನ ಒಲವು ಬೆಳೆಯಿತು. ಮಧುರವಾದ ಶಾರೀರವೂ ಇದ್ದಿತಾಗಿ, ಮುಂದೆ ಅವರು ಅವಧೂತರಾಗಿ ಅಂತರ್ಮುಖ-ರಾಗಿದ್ದಾಗ ಹಾಡಿಕೊಳ್ಳುತ್ತಿದ್ದುದೂ ಉಂಟು. ಅವರ ರಚನೆಗಳು ಬಹುಮಟ್ಟಿಗೆ ಗಾಯನಕ್ಕೆ ಹೊಂದಿಕೊಳ್ಳುವಂತೆ ಇರುವುದೊಂದು ವೈಶಿಷ್ಟ್ಯ.

ಪ್ರಕೃತ, ಮಧುರೆಯಲ್ಲಿ ಮೀನಾಕ್ಷಿಯ ಮುಂದೆ ನಿಂತು ದೇವಿಯನ್ನು ಕಂಡೊಡನೆ ಭಾವಪರವಶರಾದರು. ಭಾವಸಮಾಧಿಯಿಂದ ಎಚ್ಚೆತ್ತಮೇಲೆ ತಾನೇತಾನಾಗಿ ಸಂಸ್ಕೃತ ಗೀತವೊಂದು ಹೊರಹೊಮ್ಮಿತು—

ಅದ್ರಾಕ್ಷಂ ಬಹುಭಾಗ್ಯತೋ ಗುರುವರೈಃ ಸಂಪೂಜ್ಯಮಾನಾಂ ಮುದಾ
ಫುಲ್ಲನ್ಮಲ್ಲಿನವಪ್ರಸೂನನಿವಹೈರ್ಹಾಲಾಸ್ಯನಾಥಪ್ರಿಯಾಮ್ ।
ವೀಣಾವೇಣುಮೃದಂಗನಾದಮುದಿತಾಮೇಣಾಂಕಬಿಂಬಾನನಾಂ
ಕಾಣಾದಾದಿ ಸಮಸ್ತಶಾಸ್ತ್ರಮತಿದಾಂ ಶೋಣಾಧರಾಂ ಶ್ಯಾಮಲಾಮ್ ॥

'ಎಷ್ಟು ಭಾಗ್ಯವೋ ನನ್ನದು, ನಾನಿಂದು ದೇವಿಯನ್ನು ಕಂಡೆ! ನನ್ನ ಗುರುಗಳೂ ಈ ದೇವಿಯನ್ನು ಸಂತೋಷದಿಂದ ಪೂಜಿಸಿದ್ದರು. ಅರಳುವ ಮಲ್ಲಿಗೆಹೂಗಳಿಂದ ಅಲಂಕರಿಸಲ್ಪಟ್ಟ ಈ ದೇವಿ ಹಾಲಾಸ್ಯನಾಥನ ಪ್ರೇಯಸಿ! ವೀಣೆ, ಕೊಳಲು, ಮೃದಂಗ ಮೊದಲಾದ ವಾದ್ಯಗಳ ಸಂಗೀತದಿಂದ ಸಂತೋಷಗೊಂಡ ದೇವಿಯ ಮುಖ ಪೂರ್ಣಚಂದ್ರಮಂಡಲದಂತೆ ಚೆಲುವಾದುದು. ಕೆಂದುಟಿ, ನೀಲವರ್ಣದ ಮೈ. ವೈಶೇಷಿಕವೇ ಮೊದಲಾದ ಎಲ್ಲ ಶಾಸ್ತ್ರಗಳ ತಿಳಿವಳಿಕೆಯನ್ನು ನೀಡುವವಳು ಇವಳೇ!'

ಒಡಲಲ್ಲಿರುವ ಮರುಳುತನದ ಕತ್ತಲೆಯನ್ನು ಈ ದೇವಿ ನೀಗಿಸುವವಳು ('ಮೋಹಾಂಧಕಾರಹರಣಾಂ ಭಜ ಮೀನನೇತ್ರಾಂ') ಎಂದು ಕಂಡುಕೊಂಡು ಅವರು "ನಿನ್ನ ರೂಪವೇ ನನ್ನ ಒಡಲ ತಾವರೆಯಲ್ಲಿ ಬೆಳಗಲಿ" ('ತ್ವದ್ರೂಪಮೇವ ಮಮ ಹೃತ್ಕಮಲೇ ವಿಭಾತು') ಎಂದು ಬೇಡಿಕೊಂಡರು. ಆಗ ಅವರು ತೋಡಿಕೊಂಡ ಅಳಲು ಇದು —

**ಶ್ರುತ್ಯುಕ್ತಕರ್ಮನಿವಹಾಕರಣಾದ್ವಿಶುದ್ಧಿಃ**
**ಚಿತ್ತಸ್ಯ ನಾಸ್ತಿ ಮಮ ಚಂಚಲತಾನಿವೃತ್ತ್ಯೈ ।**
**ಕುರ್ಯಾಂ ಕಿಮಂಬ ಮನಸಾ ಸಕಲಾಘಶಾಂತ್ಯೈ**
**ಮಾತಸ್ತವಾಂಘ್ರಿಭಜನಂ ಸತತಂ ದಯಸ್ವ ॥**

'ವೇದವು ವಿಧಿಸುವ ಕರ್ಮಗಳನ್ನೆಲ್ಲ ಮಾಡದಿದ್ದರೆ ಚಿತ್ತಶುದ್ಧಿಯಾಗುವುದು ಸಾಧ್ಯವಿಲ್ಲ. ಆದರೆ ಚಿತ್ತದ ಚಾಂಚಲ್ಯವನ್ನು ತೊಲಗಿಸಲು ನಾನೇನು ಮಾಡಲಿ? ಮಾಡಿದ ಪಾಪಗಳು ಅಡಗದೆ ಚಿತ್ತಚಾಂಚಲ್ಯ ಹೇಗೆ ಹೋದೀತು? ಪಾಪಗಳನ್ನು ಅಡಗಿಸಲು ನಾನೇನು ಮಾಡಲಿ? ಕರುಣೆಯಿಂದ ನಿನ್ನ ಪಾದಗಳಲ್ಲಿ ಭಕ್ತಿ ಬೇರೂರುವಂತೆ ಅನುಗ್ರಹಿಸು !'

ಸ್ವಾಮಿಗಳ ಸವಾರಿಯು ಮಧುರೆಯಿಂದ ಹೊರಟು ಪಾಪನಾಶಕ್ಕೆ ಬಂದು, ಬನತೀರ್ಥವನ್ನು ನೋಡಿಕೊಂಡು ತಿರುಚ್ಚೆಂದೂರಿಗೆ ಬಂದಿತು. ಇದೊಂದು ಸುಪ್ರಸಿದ್ಧ ಸುಬ್ರಹ್ಮಣ್ಯಕ್ಷೇತ್ರ. ಇಲ್ಲಿಯೂ ಸ್ವಾಮಿಗಳು ಭಾವಪರವಶವಾದರು. ಅವರು ಅಲ್ಲಿನ ದೇವತೆಯಲ್ಲಿ ಕಂಡದ್ದು ಪರಬ್ರಹ್ಮವಸ್ತುವಾದ ಬೆಳಕನ್ನೇ—

**ಬ್ರಹ್ಮಪರಾತ್ಪರಮಮಲಂ ಸುಬ್ರಹ್ಮಣ್ಯಾಭಿದಂ ಪರಂಜ್ಯೋತಿಃ ।**

ಈ ಕ್ಷೇತ್ರದೇವತೆಯನ್ನು ಕುರಿತು ಎರಡು ಸ್ತೋತ್ರಕೃತಿಗಳನ್ನು ರಚಿಸಿದರು. ಅದರಲ್ಲಿ ಒಂದು ಭುಜಂಗಪ್ರಯಾತವೃತ್ತದಲ್ಲಿದೆ.

ಇಲ್ಲಿ ಸುಬ್ರಹ್ಮಣ್ಯನ ಹೆಸರಾದ 'ಗುಹ' ಎಂಬ ಮಾತಿಗೆ ಅವರು ಅರ್ಥವನ್ನು ತಿಳಿಯಹೇಳಿದ್ದಾರೆ. 'ಗು' ಎಂದರೆ ಕತ್ತಲೆ, ಹೊರಗಿನದು, ಒಳಗಿನದು; ಕತ್ತಲೆಯೆಂದರೆ ಅಜ್ಞಾನ. 'ಹ' ಎಂದರೆ ನಾಶ ಮಾಡುವುದು (ಹಂತಿ). ಅದು ಜ್ಞಾನ. ಎಂದರೆ ಗುಹನ ಸ್ವರೂಪವೇ ಜ್ಞಾನ; ಉಪನಿಷತ್ತುಗಳು ತಿಳಿಸುವ ಆತ್ಮಜ್ಞಾನ.

**ಗುಕಾರೇಣ ವಾಚ್ಯಂ ತಮೋ ಬಾಹ್ಯಮಂತಃ**
**ಸ್ವದೇಹಾಭಯಾಜ್ಞಾನದಾನೇನ ಹಂತಿ ।**
**ಯ ಏನಂ ಗುಹಂ ವೇದಶೀರ್ಷೈಕಮೇಯಮ್**
**ಸದಾ ಷಣ್ಮುಖಂ ಭಾವಯೇ ಹೃತ್ಸರೋಜೇ ॥**

ತಿರುಚ್ಚೆಂದೂರಿನಿಂದ ಕನ್ಯಾಕುಮಾರಿ ಮೊದಲಾದ ಕ್ಷೇತ್ರಗಳನ್ನು ನೋಡಿಕೊಂಡು ತಿರುವಹೀಂದ್ರಪುರವನ್ನು (ತಿರುವಾಂಕೂರು) ಸೇರಿದರು. ಅಲ್ಲಿ ಮಹಾರಾಜರ ಆತಿಥ್ಯವನ್ನು ಪಡೆದುಕೊಂಡು, ಅನಂತರ ಕಾಲಡಿಯನ್ನು ಮುಟ್ಟಿದರು. ಕಾಲಡಿಯಲ್ಲಿ ಹಿಂದಿನ ಸ್ವಾಮಿಗಳು ನಡೆಸಿದ್ದ ಕೆಲಸವನ್ನು ಆಗಲೇ ಪ್ರಸ್ತಾಪಿಸಿದೆ. ಶಂಕರಾಚಾರ್ಯರ ಜನ್ಮಸ್ಥಳವನ್ನು ಮಠದ ವಶಕ್ಕೆ ತೆಗೆದುಕೊಂಡು, ಅಲ್ಲಿ ಶಾರದಾದೇವಿಗೂ ಆಚಾರ್ಯರಿಗೂ ಆಲಯಗಳನ್ನು ಕಟ್ಟಿಸಿ

ಮೂರ್ತಿಪ್ರತಿಷ್ಠೆಯನ್ನು ಮಾಡಿಸಿದ್ದರು; ವೇದಪಾಠಶಾಲೆಯೊಂದನ್ನು ಏರ್ಪಡಿಸಿದ್ದರು. ಈಗ ಈ ಸ್ವಾಮಿಗಳು ಬಂದು ಅಲ್ಲಿ ವೇದಾಂತ ಪಾಠಶಾಲೆ, ಬ್ರಾಹ್ಮಣ ಅಗ್ರಹಾರಗಳನ್ನು ವ್ಯವಸ್ಥೆ ಮಾಡಿದರು. ಈ ವರ್ಷದ ಶಂಕರ ಜಯಂತೀ ಉತ್ಸವವನ್ನು (೧೯೨೭ರ ಏಪ್ರಿಲ್‌ನಲ್ಲಿ) ಅಲ್ಲೇ ನಡೆಸಿದರು.

ಕಾಲಡಿಯಿಂದ ಮುಂದೆ ಕೊಚ್ಚಿನ್, ತಿರುಚ್ಚೂರು, ಪಾಲಕ್ಕಾಡು, ಕೊಯಂಬತ್ತೂರು ಮಾರ್ಗವಾಗಿ ನಂಜನಗೂಡಿಗೆ ಬಂದು ಅಲ್ಲಿ ಚಾತುರ್ಮಾಸ್ಯವನ್ನು ಮುಗಿಸಿ, ಅಲ್ಲೊಂದು ಶಂಕರಮಠವನ್ನು ಏರ್ಪಡಿಸಿ ಅದರಲ್ಲಿ ಸೀತಾರಾಮಲಕ್ಷ್ಮಣರ ಮೂರ್ತಿಗಳನ್ನೂ ಶಂಕರಾಚಾರ್ಯರ ಮೂರ್ತಿಯನ್ನೂ ಪ್ರತಿಷ್ಠೆಮಾಡಿ, ವೇದಪಾಠಶಾಲೆಯೊಂದನ್ನೂ ಮೊದಲು ಮಾಡಿ ಶೃಂಗೇರಿಗೆ ಹಿಂದಿರುಗಿದರು. ಶೃಂಗೇರಿಯಿಂದ ಹೊರಟಿದ್ದು ೧೯೨೪ರ ಜನವರಿ ತಿಂಗಳಲ್ಲಿ; ಸಂಚಾರ ಮುಗಿಸಿ ಶೃಂಗೇರಿಗೆ ಹಿಂದಿರುಗಿದ್ದು ೧೯೨೭ರ ಕಡೆಯ ತಿಂಗಳಲ್ಲಿ. ಈ ನಾಲ್ಕು ವರ್ಷಗಳ ಯಾತ್ರೆಯಲ್ಲಿ ಕುಣಿಗಲ್ಲು ರಾಮಶಾಸ್ತ್ರಿಗಳು ಅವರೊಂದಿಗೆ ಇರುತ್ತಿದ್ದರು; ಸರ್ವಾಧಿಕಾರಿಗಳಂತೂ ಸರಿಯೇ ಸರಿ. ಈ ಅವಧಿಯಲ್ಲಿ ಅವರು ಒಂದು ಬಾರಿಯಾದರೂ ಅಂತರ್ಮುಖರಾಗಲಿಲ್ಲ; ಹಿಂದಿನ 'ಬುದ್ಧಿಭ್ರಮಣೆ'ಯ ಒಂದು ಸಣ್ಣ ಕುರುಹು ಕೂಡ ಕಾಣಿಸಿಕೊಳ್ಳಲಿಲ್ಲ.

ಆದರೆ ಬಿಡುವಿಲ್ಲದ ಓಡಾಟ, ಎಡೆಬಿಡದ ಸಂಭಾಷಣೆ, ಮೇಲೆ ಮೇಲೆ ಪ್ರವಚನ, ಲೆಕ್ಕವಿಲ್ಲದಷ್ಟು ಪಾದಪೂಜೆ, ಭಿಕ್ಷೆ, ತೀರ್ಥಪ್ರಸಾದ ವಿನಿಯೋಗ, ಶಿಷ್ಯಕೋಟಿಯ ಕುಶಲವಿಚಾರಣೆ, ಎಲ್ಲೆಲ್ಲೂ ಜನಸಂದಣಿ, ಎಲ್ಲಕ್ಕಿಂತ ಹೆಚ್ಚಾಗಿ ಪ್ರವಾಸ ಕಾಲದಲ್ಲಿ 'ರಾಜಕೀಯ ಉಡುಪಿ'ನ ಮೇಲಾಟ ಈ ಜಂಜಡದಿಂದ ಸ್ವಾಮಿಗಳು ಸೊರಗಿದ್ದರು. 'ರಾಜಕೀಯ — ಉಡುಪಿ'ನ (ಎಂದರೆ ನವರತ್ನಖಚಿತ ಕಿರೀಟ, ಕಲಾಪತ್ತಿನ ಬಹಿರ್ವಾಸ ಇತ್ಯಾದಿ) ಪ್ರಸ್ತಾಪ ಆಗಲೇ ಬಂದಿದೆ. ಸರ್ವಾಧಿಕಾರಿಗಳ ನಿಯಮದಂತೆ, ಹಳ್ಳಿಯಿಂದ ಹಳ್ಳಿಗೆ ಮೇನೆಯಲ್ಲಿ ಪ್ರಯಾಣ ಮಾಡುವಾಗ ದಾರಿಯಲ್ಲಿ ಮಾತ್ರ ಸಂನ್ಯಾಸಿಗೆ ಸಹಜವಾದ ಕಾಷಾಯ ವಸ್ತ್ರ, ರುದ್ರಾಕ್ಷಿ ಮಾಲೆ;, ಊರೋ ನಗರವೋ ಬಂದಿತೆಂದರೆ 'ರಾಜಕೀಯ-ಉಡುಪ'ನ್ನು ಏರಿಸಿಕೊಳ್ಳಬೇಕು; ಜನರ ಮೇಲೆ ಪ್ರಭಾವ ಬೀರಲು, ಮಠದ ಹೆಗ್ಗಳಿಕೆಯನ್ನು ಎತ್ತಿಹಿಡಿಯಲು ಈ ವೈಭವದ ದಿರಿಸಿನಲ್ಲೇ

ಸ್ವಾಮಿಗಳು ಕಾಣಿಸಿಕೊಳ್ಳಬೇಕು! ಮೆರವಣಿಗೆಯಲ್ಲಿ ಪಾಲ್ಗೊಳ್ಳ ಬೇಕಾದರೆ ಇದು ಅಗತ್ಯವಂತೆ.

ನಡುವೆ ನಡೆದ ಒಂದು ಪ್ರಸಂಗ ಸ್ವಾರಸ್ಯವಾಗಿದೆ. ಸಂಚಾರದಲ್ಲಿ ಎಲ್ಲಿಯೋ ದೊಡ್ಡ ಊರು ಒಂದು ಬಂದಿತು. ಊರಬಾಗಿಲಲ್ಲಿ ಸ್ವಾಮಿಗಳನ್ನು ಎದುರುಗೊಳ್ಳಲು ಜನಸಂದಣಿ ನೆರೆದಿದ್ದಿತು. ಸ್ವಲ್ಪ ದೂರವಿರುವಾಗಲೇ ಸ್ವಾಮಿಗಳು ಕುಳಿತಿದ್ದ ಮೇನೆಯನ್ನು ಕೆಳಗಿರಿಸಿ, ಸ್ವಾಮಿಗಳ ಪರಿಚಾರಕ ಬಂದು ಅವರ ತಲೆಗೆ ಪಚ್ಚೆರತ್ನವಜ್ರಗಳ ಕಿರೀಟವನ್ನು ತೊಡಿಸಿದ, ಮೈಮೇಲೆ ಕಲಾಪತ್ತಿನ ಬಹಿರ್ವಾಸ ಹೊದಿಸಿದ, ಕೊರಳಲ್ಲಿ ವಜ್ರದ ಕಂಠೀಹಾರಗಳನ್ನು ತೂಗಿಸಿದ. ಆದರೆ ಗಡಿಬಿಡಿಯಲ್ಲಿ ಬಹಿರ್ವಾಸವನ್ನು ಹೊದಿಸುವಾಗ ಹೊಳೆಯುವ ಸೊಗಸಾದ ಜರತಾರಿ ಭಾಗವನ್ನು ಒಳಗೆ ಮಾಡಿ, ಅದರ ದಾರಗಳು ಗೋಜುಗೋಜಾಗಿ ಕಾಣಿಸುವ ಭಾಗವನ್ನು ಹೊರಗೆ ಮಾಡಿಬಿಟ್ಟ! ಸ್ವಾಮಿಗಳನ್ನು ಜನ ಸ್ವಾಗತಿಸಿದ್ದಾಯಿತು, ಅವರು ತಂಗಲೆಂದು ಸಿದ್ಧಪಡಿಸಿದ ಸ್ಥಳಕ್ಕೆ ಅದ್ಧೂರಿಯಿಂದ ಮೆರವಣಿಗೆಯೂ ಸಾಗಿತು.

ಸ್ವಾಮಿಗಳು ನಿತ್ಯಕರ್ಮಗಳಿಗೆಂದು ತೊಡಗುವಾಗ ಪರಿಚಾರಕ ಬಂದು ತಲೆಯಿಂದ ಕಿರೀಟವನ್ನು ತೆಗೆದ, ಕೊರಳಿನಿಂದ ಕಂಠೀಹಾರಗಳನ್ನು ತೆಗೆದ. ಬಹಿರ್ವಾಸವನ್ನು ತೆಗೆಯಬೇಕೆಂದು ನೋಡಿದಾಗ ತಾನು ಮಾಡಿದ ತಪ್ಪು ಅವನಿಗೆ ತಿಳಿಯಿತು; ಮುಚ್ಚಬೇಕಾದ ಭಾಗವೇ ಕಾಣುತ್ತಿದೆ! ಅವನ ಮೈ ಬೆವರಿತು; ಸ್ವಾಮಿಗಳು ಏನನ್ನುವರೋ ಎಂದು ಬೆದರಿದ. ಸ್ವಾಮಿಗಳ ಕಾಲಿಗೆ ಬಿದ್ದು 'ತಪ್ಪಾಯಿತು, ದಯೆಯಿಂದ ಸನ್ನಿಧಾನ ಮನ್ನಿಸಬೇಕು'' ಎಂದು ಅಂಗಲಾಚಿದ. ಸ್ವಾಮಿಗಳು ''ಏಕೆ? ಏನಾಯಿತು?'' ಎಂದು ಕೇಳಲು ಅವನು ಬಹಿರ್ವಾಸದ ವೈಪರೀತ್ಯವನ್ನು ತಿಳಿಸಿದ. ಸ್ವಾಮಿಗಳು ''ನೀನು ಅದನ್ನು ಹೊದಿಸಿದಾಗಲೇ ಅದು ನನಗೆ ತಿಳಿಯಿತು!'' ಎಂದು ನಸುನಗುತ್ತ ಹೇಳಿದಾಗ, ಪರಿಚಾರಕನಿಗೆ ಸೋಜಿಗವೆನಿಸಿತು. ''ಸನ್ನಿಧಾನ ಆಗಲೇ ಹೇಳಬಾರದಾಗಿತ್ತೇ? ತಪ್ಪನ್ನು ಒಡನೆಯೇ ತಿದ್ದಿಬಿಡುತ್ತಿದ್ದೆನಲ್ಲ?'' ಎಂದ. ಅದಕ್ಕೆ ಸ್ವಾಮಿಗಳು ''ಏನಾಯಿತೀಗ? ಈ ದಿನ ಇದೊಂದು ವೇಷ! ಹೀಗೆಯೇ ಇರಲಿ, ಎಂದುಕೊಂಡೆ'' ಎಂದುತ್ತರಕೊಟ್ಟರು!

# ೧೧. ಅಸ್ವಾಸ್ಥ್ಯದ ಸುಳಿಯಲ್ಲಿ

ಕಾಲಡಿಯಾತ್ರೆಯಿಂದ ಹಿಂದಿರುಗಿದಮೇಲೆ ಸ್ವಾಮಿಗಳ ಚರ್ಯೆಯಲ್ಲಿ ಮತ್ತೆ ಬದಲಾವಣೆ ಕಂಡಿತು. ಶೃಂಗೇರಿಗೆ ಬಂದ ಕೆಲವು ದಿನಗಳು ಎಂದಿನಂತೆ ಬಹಿರ್ಮುಖರಾಗಿಯೇ ಇರುತ್ತ ಮಠದ ಧಾರ್ಮಿಕ ಕ್ರಿಯೆಗಳನ್ನು ನೋಡಿಕೊಳ್ಳುತ್ತಿದ್ದರು. ಮಠದಲ್ಲಿ ಭಕ್ತರಿಗೆ ಮುಖ್ಯವಾದ ಆಕರ್ಷಣೆಯೆಂದರೆ ಸ್ವಾಮಿಗಳು ಎಲ್ಲರೆದುರು ಮಠದ ಪಟ್ಟದ ದೇವರಿಗೆ (ಚಂದ್ರಮೌಳೀಶ್ವರ ಲಿಂಗ, ರತ್ನಗರ್ಭಗಣಪತಿ, ಶಾರದೆಯ ಉತ್ಸವಮೂರ್ತಿ, ಆಚಾರ್ಯರ ಬಿಂಬ) ಮಾಡುವ ವಿಸ್ತಾರವಾದ ಪೂಜೆ. ಇದನ್ನು ನೋಡಲು ಭಕ್ತರು ನೆರೆಯುತ್ತಾರೆ. ಇದನ್ನು ಸ್ವಾಮಿಗಳೇ ನಡೆಸುವುದು ವಾಡಿಕೆ; ಮಠದ ಪರಿಚಾರಕರು ಅವರ ನೆರವಿಗಿರುತ್ತಾರೆ, ಪಂಡಿತರು ವೇದಘೋಷ, ಸ್ತೋತ್ರಪಾಠ ಮೊದಲಾದುವನ್ನು ಮಾಡುತ್ತಾರೆ. ಪೂಜೆಯಲ್ಲಿ ವೈಭವದ ಪಾಲು ಮರೆಯುವಂತಿಲ್ಲ.

ಕಾಲಡಿಯಿಂದ ಹಿಂದಿರುಗಿದಮೇಲೆ ಸ್ವಾಮಿಗಳು ಇದನ್ನು ದಿನವೂ ನಡೆಸುತ್ತಿದ್ದರು. ಆದರೆ ಅವರ ಮನಸ್ಸು ಅದರಲ್ಲಿರಲಿಲ್ಲವೆಂದು ಯಾರಿಗಾದರೂ ಸ್ಪಷ್ಟವಾಗುತ್ತಿತ್ತು. ಪೂಜೆಯ ನಡುವೆ ಹೂವನ್ನು ಕೈಗೆತ್ತಿಕೊಂಡು ಹಾಗೆಯೇ ಕೂತುಬಿಡುವರು; ನಂದಾದೀಪದ ಬತ್ತಿ ಸಣ್ಣದಾಗುತ್ತಿದ್ದರೆ, ಅದನ್ನು ಹೂವಿಂದಲೇ ಮೇಲೆತ್ತುತ್ತ ಅದನ್ನೇ ನೋಡುತ್ತ ಇದ್ದುಬಿಡುವರು; ಅಭಿಷೇಕಮಾಡುತ್ತ ಮಂತ್ರಗಳು ಮುಗಿದರೂ ಅಭಿಷೇಕ- ಮಾಡುತ್ತಲೇ ಇರುವರು; ಅಭಿಷೇಕವಾದ ಮೇಲೆ ಮೂರ್ತಿಗಳನ್ನೂ ಸಾಲಿಗ್ರಾಮಗಳನ್ನೂ ಬಟ್ಟೆಯಲ್ಲಿ ಒರೆಸುತ್ತ ಅವನ್ನೇ ದಿಟ್ಟಿಸಿ ನೋಡುತ್ತ, ಮುಂದಿನ ವಿಧಿಗಳನ್ನೆಲ್ಲ ಮರೆತುಬಿಡುವರು. ಪೂಜೆಯ ನಡುವೆಯೇ ಎದ್ದು ಹೊರಟುಬಿಡುವರು. ಹಲವು ವೇಳೆ ಶ್ರೀಕಂಠಶಾಸ್ತ್ರಿಗಳೋ ಮತ್ತಾರೋ ಪೂಜೆಯನ್ನು ಮುಗಿಸಬೇಕಾಗುತ್ತಿತ್ತು.

ಈ ಸ್ಥಿತಿಯಲ್ಲಿ ನದಿಗೆ ಸ್ನಾನಕ್ಕೆ ಹೋಗುವುದು ಕೂಡದೆಂದು ಸರ್ವಾಧಿಕಾರಿಗಳು ನಿಷೇಧಿಸಿ, ಮಠದಲ್ಲೇ ಅವರ ಸ್ನಾನಕ್ಕೆ ಅಣಿಮಾಡಿದ್ದರು. ಕಡಾಯಿಯಲ್ಲಿ ನೀರು ತುಂಬಿರಲು, ಸ್ವಾಮಿಗಳು ಪಕ್ಕದಲ್ಲಿ ಕೂತು ತಂಬಿಗೆಯಿಂದ ನೀರನ್ನು ತುಂಬಿಕೊಂಡು ತಲೆಯ ಮೇಲೆ ಸುರಿದು ಕೊಳ್ಳುವರು. ಕಡಾಯಿಯಲ್ಲಿ ನೀರು ಮುಗಿದರೂ, ತಂಬಿಗೆ ಕಡಾಯಿಗೆ ಹೋಗುವುದಾಗಲೀ ತಮ್ಮ ತಲೆಯ ಮೇಲೆ ಅದನ್ನು ಎತ್ತಿ ಬಗ್ಗಿಸಿಕೊಳ್ಳುವುದಾಗಲೀ ನಿಲ್ಲುತ್ತಿರಲಿಲ್ಲ. ಹತ್ತಿರವೇ ನಿಂತ ಪರಿಚಾರಕ, ''ಇನ್ನಷ್ಟು ನೀರನ್ನು ತಂದು ಸ್ನಾನಮಾಡಿಸಲೇ?'' ಎಂದು ಕೇಳಿದರೆ ಆಗಲೆಂದು ಹೇಳಿ ತಂಬಿಗೆಯನ್ನು ಕೆಳಗಿಟ್ಟುಬಿಡುವರು. ಪರಿಚಾರಕ ಇನ್ನಷ್ಟು ನೀರನ್ನು ತಂದು ಅವರ ತಲೆಯ ಮೇಲೆ ಸುರಿಯುವನು. ಅದು ಮುಗಿದಾಗ 'ಇನ್ನು ನಿಲ್ಲಿಸಲೇ?'' ಎಂದು ಕೇಳಿದರೆ, ಸರಿ ಎಂದು ಎದ್ದು ಹೊರಡುವರು.

ಎಂದರೆ, ಎಲ್ಲವೂ ಯಾಂತ್ರಿಕವಾಗಿ ನಡೆಯುವುದು. ಅವರ ಮನಸ್ಸೆಲ್ಲ ಬೇರೆಲ್ಲೋ ಇದ್ದಂತೆ ತೋರುವುದು. ಅವರು ಕಣ್ಣು ತೆರೆದು ನೋಡುತ್ತಿದ್ದರೂ ದೃಷ್ಟಿ ಎಲ್ಲೋ; ಬಂದವರು ಹೇಳುವುದನ್ನು ಕಿವಿದೆರೆದು ಕೇಳುತ್ತಿದ್ದರೂ ಗಮನವೆಲ್ಲ ಎಲ್ಲೋ. ಹೊರಗಣ ಪ್ರಪಂಚದೊಂದಿಗೆ ಏನೊಂದು ನಂಟೂ ಇಲ್ಲದವರಂತೆ ಇರತೊಡಗಿದರು. ತೀರ ಅವಶ್ಯವೆಂದರೆ ಮಾತ್ರ ಒಂದಿಷ್ಟು ಆಹಾರವನ್ನು ತಿನ್ನುವರು; ಒಂದೆರಡು ಮಾತನಾಡುವರು. ಬರುಬರುತ್ತ ಮಠದ ಪೂಜೆಯನ್ನೂ ಬಿಟ್ಟುಬಿಟ್ಟರು; ಸೂತ್ರಭಾಷ್ಯಪಾಠವನ್ನು ನಿಲ್ಲಿಸಿಬಿಟ್ಟರು. ಬಂದವರನ್ನು ನೋಡುವುದನ್ನೂ, ನೋಡಿದವರೊಂದಿಗೆ ಮಾತನಾಡುವುದನ್ನೂ ಬಿಟ್ಟರು. ಉಡುಗೆಯಲ್ಲಾಗಲೀ ಓರಣದಲ್ಲಾಗಲೀ ಎಚ್ಚರವೇ ಇರುತ್ತಿರಲಿಲ್ಲ. ತುಂಗಾನದಿಯ ಆಚೆದಡದ ಮೇಲೆ ನರಸಿಂಹವನದಲ್ಲೇ ಇರತೊಡಗಿದರು; ಮಠದ ಕಡೆ ಬರುತ್ತಲೂ ಇರಲಿಲ್ಲ. ಆದರೆ ಈ ಬಾರಿಯ ಅಂತರ್ಮುಖಾವಸ್ಥೆಯಲ್ಲಿ ಮೊದಲಿದ್ದ ಉದ್ವೇಗವಾಗಲೀ ಕಾತುರವಾಗಲೀ ಇರಲಿಲ್ಲ. ಮುಖದ ಮೇಲೆ ಮಂದಹಾಸ ಸದಾ ಮಿನುಗುತ್ತಿತ್ತು. ಏನೋ ಅಲೌಕಿಕವಾದ ಸುಖವನ್ನು ಪಡೆದವರಂತೆ ಕಾಣುತ್ತಿದ್ದರು.

ಅವರು ನರಸಿಂಹವನದಲ್ಲಿ ತಿರುಗಾಡುತ್ತಿರುವಾಗ ಸದಾಶಿವ ಬ್ರಹ್ಮೇಂದ್ರರ 'ಆತ್ಮ ವಿದ್ಯಾವಿಲಾಸ'ದ ಶ್ಲೋಕಗಳನ್ನು ಗಟ್ಟಿಯಾಗಿ ಹೇಳಿ ಕೊಳ್ಳುತ್ತಿದ್ದರು. ನೋಡಿದವರಿಗೆ, ಅಲ್ಲಿನ ಕೆಲವು ಶ್ಲೋಕಗಳಿಗೆ ನಿದರ್ಶನವೇ ಇವರೆಂದೂ ಭಾಸವಾಗುತ್ತಿದ್ದಿತು.

**ಅವಧೂತಕರ್ಮಜಾಲೋ ಜಡಬಧಿರಾಂಧೋಪಮಃ ಕೋऽಪಿ ।**
**ಆತ್ಮಾರಾಮೋ ಯತಿರಾಡಟವೀಕೋಣೇಷ್ವಟನ್ನಾಸ್ತೇ ॥**

'ಎಲ್ಲ ಕರ್ಮಗಳ ಕಟ್ಟನ್ನು ಕಳಚಿ ಬಿಸುಟು, ಜಡನಂತೆ ಕಿವುಡನಂತೆ ಕುರುಡನಂತೆ, ಕಾಡಿನ ಮೂಲೆಮೂಲೆಗಳಲ್ಲಿ ಓಡಿಯಾಡುತ್ತ ಈ ಯತಿಯು ತನ್ನಲ್ಲಿ ತಾನು ತೃಪ್ತನಾಗಿರುವನು'.

**ತಿಷ್ಠನ್ ಪರತ್ರ ಧಾಮ್ನಿ ಸ್ವೀಯಸುಖಾಸ್ವಾದಪರವಶಃ ಕಶ್ಚಿತ್ ।**
**ಕ್ವಾऽಪಿ ಧ್ಯಾಯತಿ ಕುಹಚಿದ್ ಗಾಯತಿ ಕುತ್ರಾಪಿ ನೃತ್ಯತಿ ಸ್ವೈರಮ್ ॥**

'ಪರಬ್ರಹ್ಮನಲ್ಲೇ ನೆಲೆಗೊಂಡು ಇವನು ತನ್ನ ಒಡಳೊಳಗಣ ಆನಂದವನ್ನೇ ಅನುಭವಿಸುತ್ತ ಒಮ್ಮೊಮ್ಮೆ ಧ್ಯಾನಮಗ್ನನಾಗುವನು, ಒಮ್ಮೊಮ್ಮೆ ಹಾಡ ತೊಡಗುವನು, ಒಮ್ಮೊಮ್ಮೆ ಮನಬಂದಂತೆ ಕುಣಿದಾಡುವನು'.

**ಪಶ್ಯತಿ ಕಿಮಪಿ ನ ರೂಪಂ .**
**ನ ವದತಿ ಶೃಣೋತಿ ಕಿಂಚಿದಪಿ ವಚನಮ್ ।**
**ತಿಷ್ಠತಿ ನಿರುಪಮಭೂಮನಿ**
**ನಿಷ್ಕಾಮವಲಂಬ್ಯ ಕಾಷ್ಠವದ್ಯೋಗೀ ॥**

'ಅವನು ಏನನ್ನೂ ನೋಡುವುದಿಲ್ಲ, ಯಾರೊಂದಿಗೂ ಮಾತನಾಡುವುದಿಲ್ಲ, ಏನನ್ನೂ ಕೇಳಿಸಿಕೊಳ್ಳುವುದಿಲ್ಲ. ಎಣೆಯಿಲ್ಲದ ಪರಬ್ರಹ್ಮವಸ್ತುವಿನಲ್ಲೇ ನೆಲೆಗೊಂಡು ಅದೇ ಗುಂಗಿನಲ್ಲಿ ಕಟ್ಟಿಗೆಯ ತುಂಡಿನಂತೆ ಇರುತ್ತಾನೆ.'

– ಇವೇ ಮೊದಲಾದ ವರ್ಣನೆಗಳಿಗೆ ಸ್ವಾಮಿಗಳ ಚರ್ಯೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತಿತ್ತು. ಯೋಗಪರಿಭಾಷೆಯಲ್ಲಿ ಇದೇ 'ಅಂತರ್ಮುಖಾವಸ್ಥೆ'; ಆತ್ಮಜ್ಞಾನಿಗಳೂ, ಅವಧೂತರೂ, ಮೌನಿಗಳೂ

ಇರುವುದು ಹೀಗೆಯೇ ಎಂದು ತಿಳಿದುಬರುತ್ತದೆ. ಹಿಂದಿನ ಕಾಲದಲ್ಲಿ ಜಡಭರತನೋ ವಾಮದೇವಋಷಿಯೋ ಇರುತ್ತಿದ್ದುದು ಹೀಗೆಯೇ ಎಂದು ಪ್ರತೀತಿ. ನಮ್ಮ ಕಾಲದಲ್ಲೂ ನೆರೂರಿನಲ್ಲಿ ಸದಾಶಿವ ಬ್ರಹ್ಮೇಂದ್ರರು ಇರುತ್ತಿದ್ದುದು ಹೀಗೆಯೇ ಎಂದು ಕೇಳಿದ್ದೇವೆ.

ಅಂತರ್ಮುಖವಾಗುವುದೆಂದರೆ ಹೊರಗಣ ಹವ್ಯಾಸಗಳನ್ನು ಹಚ್ಚಿಕೊಳ್ಳದೆ ತಮ್ಮಷ್ಟಕ್ಕೆ ತಾವು ಇರುವುದೆಂದೇ ಅರ್ಥ. ಸ್ವಾಮಿಗಳಿಗೆ ಪಾಠ ಹೇಳುವ, ಪ್ರವಚನ ಮಾಡುವ ಉದ್ದೇಶ ಇಂಗಿಹೋದುದು ಅವರು ಪರ್ಯಟನೆಮಾಡಿ ಜನಗಳ ಸ್ವಭಾವವನ್ನು ಅರಿತುಕೊಂಡಾಗ. ಇದರ ಹಿನ್ನೆಲೆಯಾಗಿ ಸ್ವಾಮಿಗಳ ಒಂದು ಸಂಭಾಷಣೆಯನ್ನು ನೋಡಿ-

ಲೋಕವನ್ನು ಉದ್ಧಾರಮಾಡಬೇಕೆಂಬ ಗೀಳನ್ನು ಕಟ್ಟಿಕೊಂಡಿದ್ದ ಹಿರಿಯ ಗೃಹಸ್ಥರೊಬ್ಬರು ಸ್ವಾಮಿಗಳ ಬಳಿ ಬಂದು, ಲೋಕವನ್ನು ಉದ್ಧಾರಮಾಡಲು ತಾವು ಕೈಗೊಳ್ಳಬೇಕೆಂದಿರುವ ಹಲವಾರು ಯೋಜನೆಗಳನ್ನೆಲ್ಲ ವಿವರಿಸಿದರು.

ಸ್ವಾಮಿಗಳು ಅವರು ಹೇಳುವುದನ್ನೆಲ್ಲ ಸಾವಧಾನವಾಗಿ ಕೇಳಿ, ''ನೀವು ಹೇಳುವುದೆಲ್ಲ ಸರಿಯೆ, ಆದರೆ ಅದು ನಿಮಗೆ ತೊಂದರೆಯಲ್ಲವೆ? ಹೇಳುವುದನ್ನೆಲ್ಲ ಮಾಡಬೇಕೆಂದರೆ, ಹಣ ವೆಚ್ಚವಾಗುವುದಿರಲಿ, ಸಮರ್ಥರಾದ ಜನ ದೊರಕಬೇಕಲ್ಲ? ಅವರಿಗೆ ಧರ್ಮದಲ್ಲಿ ಶ್ರದ್ಧೆಯಿರಬೇಕು, ತಿಳಿವಳಿಕೆಯಿರಬೇಕು, ಶೀಲವಿರಬೇಕು, ನಿಮ್ಮ ಯೋಜನೆಗಳನ್ನು ಅವರು ಒಪ್ಪಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ, ಬೇರೆಯವರ ಮೇಲೆ ಪ್ರಭಾವ ಬೀರುವಂಥವರಾಗಿರಬೇಕು. ಅಂಥವರು ಸಿಗುತ್ತಾರೆಯೇ?'' ಎಂದರು.

ಆತ: ''ಅಂಥವರಲ್ಲಿ ನಾನೇ ಮೊದಲಿಗನಾಗುತ್ತೇನೆ!''

ಸ್ವಾಮಿಗಳು: 'ಒಳ್ಳೆಯದು, ತುಂಬ ಸಂತೋಷದ ಮಾತು. ಆದರೆ ನಿಮಗೆ ಈಗ ಅಂಥ ಕೆಲಸಗಳಲ್ಲಿ ತೊಡಗಲು ಅವಕಾಶವಿದೆಯೋ?''

ಆತ: ''ದೇವರ ದಯೆಯಿಂದ ನನಗೆ ಹೊಟ್ಟೆಬಟ್ಟೆಗೇನೂ ತೊಂದರೆಯಿಲ್ಲ, ಕೆಲಸದಿಂದ ನಿವೃತ್ತನಾಗಿದ್ದೇನೆ. ಮನೆ, ಭೂಮಿ, ಆಸ್ತಿಗಳನ್ನು

ನೋಡಿಕೊಳ್ಳಲು ನನ್ನ ಮಗನಿದ್ದಾನೆ. ನನ್ನ ಉಳಿದ ಬಾಳನ್ನೆಲ್ಲ ಇದರಲ್ಲಿ ಸವೆಸಲು ಸಿದ್ಧನಾಗಿದ್ದೇನೆ.''

**ಸ್ವಾಮಿಗಳು :** ''ನಿಮಗೆ ಸಂಸ್ಕೃತ ತಿಳಿಯುವುದೋ?''

**ಆತ :** ''ತಿಳಿಯುತ್ತದೆ.''

**ಸ್ವಾಮಿಗಳು :** ''ಎಷ್ಟು ಓದಿದ್ದೀರಿ?''

**ಆತ :** ''ಕಾವ್ಯಗಳ ಅಧ್ಯಯನ ಮುಗಿದಿದೆ.''

**ಸ್ವಾಮಿಗಳು :** ''ತರ್ಕವನ್ನಾಗಲೀ ವ್ಯಾಕರಣವನ್ನಾಗಲೀ ಓದಿದ್ದೀರೋ?''

**ಆತ :** ''ಇಲ್ಲ''.

**ಸ್ವಾಮಿಗಳು :** ''ವೇದಾಂತ ಗ್ರಂಥಗಳನ್ನು ಓದಿದ್ದೀರೋ?''

**ಆತ :** ''ಕೊಂಚಮಟ್ಟಿಗೆ 'ವಿವೇಕಚೂಡಾಮಣಿ' ಯನ್ನೂ 'ವಾಸುದೇವ-ಮನನ'ವನ್ನೂ ಓದಿದ್ದೇನೆ.''

**ಸ್ವಾಮಿಗಳು :** ''ಇಲ್ಲಿ ನೋಡೋಣವಾಗಲಿ, ನಿಮಗೆ ಸಂಸಾರದ ತಾಪತ್ರಯವಿಲ್ಲವೆಂದು ಹೇಳುತ್ತೀರಿ, ಬೇಕಾದಷ್ಟು ಅವಕಾಶವುಂಟೆಂದು ಹೇಳುತ್ತೀರಿ. ನಮ್ಮ ಧರ್ಮದಲ್ಲಿ ನಿಮಗೆ ಶ್ರದ್ಧೆಯೂ ಉಂಟೆಂದು ತೋರುತ್ತದೆ. ಇಷ್ಟು ಸೌಲಭ್ಯವಿರುವಾಗ, ನೀವು ಇನ್ನಷ್ಟು ಅಧ್ಯಯನವನ್ನೇಕೆ ಮಾಡಬಾರದು? ಇನ್ನಷ್ಟು ಅನುಸಂಧಾನವನ್ನೇಕೆ ಮಾಡಬಾರದು? ಬೇರೆಯವರನ್ನು ಉದ್ಧಾರ ಮಾಡುವುದಕ್ಕಿಂತ ಹೆಚ್ಚು ಅಗತ್ಯವಾದುದು ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳುವುದಲ್ಲವೆ? ನೀವು ಬೇರೆಯವರಿಗೆ ಉದ್ಧಾರದ ಮಾರ್ಗವನ್ನು ಹೇಳಲು ಹೊರಟರೆ ಅವರು 'ನೀವೆಷ್ಟರಮಟ್ಟಿಗೆ ಉದ್ಧಾರವಾಗಿದ್ದೀರ?' ಎಂದು ಕೇಳಲಾರರೆ? ನೀವು ಧರ್ಮವನ್ನು ಚೆನ್ನಾಗಿ ನಡೆಸಿದಮೇಲೆ ತಾನೆ ಇತರರಿಗೆ ಧರ್ಮವನ್ನು ಹೇಳುವ ಅಧಿಕಾರ ನಿಮಗೆ ಬರುವುದು? ತನಗೇ ಈಜು ಬರದವನು ನೀರಿನಲ್ಲಿ ಮುಳುಗುತ್ತಿರುವ ಬೇರೆಯವನನ್ನು ದಡಕಾಣಿಸುವುದು ಹೇಗೆ? ಮೊದಲು ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳುವ ಮಾರ್ಗವನ್ನು ಹುಡುಕೋಣವಾಗಲಿ. ಅದು ಪ್ರತಿಯೊಬ್ಬರ ಆದ್ಯಕರ್ತವ್ಯ. ತನ್ನ ಉದ್ಧಾರವನ್ನೇ ಮರೆತು ಬೇರೆಯವರ ಉದ್ಧಾರವನ್ನು ಯೋಚಿಸುವವನು ಹೆಡ್ಡನೆಂದು ಆಚಾರ್ಯರು ಹೇಳಿದ್ದಾರೆ.

ನಮ್ಮ ಬದುಕೇ ಅಲ್ಪಕಾಲದ್ದು; ನಮ್ಮ ಉದ್ಧಾರವನ್ನು ಮಾಡಿಕೊಳ್ಳಲೇ ಹಲವಾರು ಜನ್ಮಗಳನ್ನು ಎತ್ತಬೇಕಾಗುತ್ತದೆ ಎಂದು ಹೇಳುತ್ತಾರೆ. ಹೀಗಿರುವಾಗ ಬೇರೆಯವರ ಉದ್ಧಾರವನ್ನು ಕುರಿತು ಕಾಲಹರಣ ಮಾಡುವುದೇಕೆ?

''ಅಷ್ಟಲ್ಲದೆ, ನೀವು ಹೇಳಿದರೆ ಬೇರೆಯವರು ಕೇಳುತ್ತಾರೆ ಎನ್ನುವ ನಂಬಿಕೆಯೇನು? ಅವರವರಿಗೆ ಅವರವರ ವಾಸನಾಬಲವಿರುತ್ತದೆ! ಜನರನ್ನೆಲ್ಲ ಕೂಡಿಸಿ ಒಂದು ಕೆಲಸವನ್ನು ಮಾಡುವಂತೆ ಪ್ರೇರಿಸುವುದು ರಾಜಕಾರಣ ದಲ್ಲೋ ವ್ಯವಹಾರದಲ್ಲೋ ಸಾಧ್ಯವಿರಬಹುದು; ನಿಮ್ಮ ವಾಕ್ಚಾತುರ್ಯದಿಂದ, ತರ್ಕದ ಬಲದಿಂದ ಅವರನ್ನು ಒಪ್ಪಿಸಿ ಒಂದು ಕೆಲಸದಲ್ಲಿ ಉಜ್ಜುಗಿಸಬಹುದು. ಆದರೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಇದು ಸಾಧ್ಯವಿಲ್ಲ. ಒಂದು ತೇರನ್ನು ಎಳೆಯಲು ಸಾವಿರಾರು ಮಂದಿ ಜನರನ್ನು ಸೇರಿಸಬಹುದು. ಆದರೆ ನೀವೂ ಹಸಿದಿರುವಾಗ ಹತ್ತಾರು ಮಂದಿಯನ್ನು ಸೇರಿಸಿಕೊಂಡು ಏನು ಮಾಡಬಲ್ಲಿರಿ? ನೀವೂ ಹಸಿದಿರುತ್ತೀರ, ನಿಮ್ಮ ಜೊತೆ ಸೇರಿ ಅವರೂ ಹಸಿದಿರುತ್ತಾರೆ ಅಷ್ಟೆ! ಒಬ್ಬರ ಹಸಿವೆಯಿಂದ ಇನ್ನೊಬ್ಬರ ಹಸಿವಂತೂ ಹರಿಯಲಾರದಲ್ಲವೆ? ಆಧ್ಯಾತ್ಮಿಕತೆಯ ಹಸಿವಿದ್ದಾಗ ನೀವು ನಿಮ್ಮ ಹಸಿವನ್ನು ಹೋಗಲಾಡಿಸಿಕೊಳ್ಳುವ ಉಪಾಯ ಹುಡುಕಬೇಕು.

''ಅದೂ ಅಲ್ಲದೆ, ಹಸಿವೇ ಇಲ್ಲದಿರುವ ಸಾವಿರ ಮಂದಿಯನ್ನು ಸೇರಿಸಿ ಅವರಿಗೆ ಹಸಿವನ್ನು ಹೋಗಲಾಡಿಸಿಕೊಳ್ಳುವ ಮಾರ್ಗವನ್ನು ಕುರಿತು ಉಪದೇಶಮಾಡಿದರೆ ಏನು ಪ್ರಯೋಜನ? ಅದಕ್ಕಾಗಿಯೇ ನಮ್ಮ ಶಾಸ್ತ್ರ 'ದಿಟವಾಗಿ ವಿದ್ಯೆಯನ್ನು ಬಯಸದೆ ಇರುವವನಿಗೆ ವಿದ್ಯೆಯನ್ನು ನೀಡಬಾರದು' ಎನ್ನುತ್ತದೆ. ದಿಟವಾದ ಬಯಕೆಯೋ ತೋರಿಕೆಯ ಬಯಕೆಯೋ ಎಂಬುದು ಬೇಗನೆ ತಿಳಿದುಹೋಗುತ್ತದೆ!''

ಇಂಥ ಉಪದೇಶಗಳನ್ನು ಪಡೆದುಕೊಂಡವರು ನೂರಾರು ಮಂದಿ. ಸ್ವಾಮಿಗಳು ಸಾವಧಾನವಾಗಿ ಮಾತನಾಡುವರು, ನಗುಮೊಗದಿಂದಲೇ ಇರುವರು. ಹೀಗಾಗಿ ಅವರನ್ನು ಕಾಣಲೆಂದು ಶೃಂಗೇರಿಗೆ ಬರುವವರ ಸಂಖ್ಯೆ ಹೆಚ್ಚಿತು. ಆದರೆ ಈಗ ಅವರು ಅಂತರ್ಮುಖರಾಗಿದ್ದು ಅವಧೂತರಾಗಿರುತ್ತಿದ್ದುದೇ ಹೆಚ್ಚು.

ಈ ಸ್ಥಿತಿಯಲ್ಲಿ ಅವರನ್ನು ನರಸಿಂಹವನದಲ್ಲೇ ನಿರ್ಬಂಧದಲ್ಲಿಟ್ಟಿರಬೇಕಾಗುತ್ತಿತ್ತು. ನಡುಹಗಲಿನ ವೇಳೆಗೆ ಸೇವಕರು ನಿರ್ಬಂಧದ ಕೋಣೆಯಲ್ಲಿ ಅವರಿಗೆ ಆಹಾರವನ್ನಿಟ್ಟು ಬಾಗಿಲು ಭದ್ರಮಾಡಿ ಹೊರಗೆ ಬಂದುಬಿಡುವರು. ಸಂಜೆ ಹೋಗಿ ನೋಡಿದರೆ, ಎಷ್ಟೋ ದಿನಗಳು ಆಹಾರ ಇಟ್ಟಹಾಗೇ ಇರುತ್ತಿದ್ದಿತು, ಇಲ್ಲವೇ ಕೋಣೆಯಲ್ಲೆಲ್ಲ ಚೆಲ್ಲಾಡಿರುತ್ತಿದ್ದಿತು. ರಾತ್ರಿ ಹಾಗೆಯೇ ಒಂದು ಬಟ್ಟಲು ಹಾಲು ಇಟ್ಟು ಬರುವರು; ಬೆಳಗಿನವರೆಗೂ ಅದು ಇಟ್ಟಲ್ಲಿಯೇ ಇದ್ದರೂ ಆಯಿತು! ನಿರ್ಬಂಧದಲ್ಲಿರುವಾಗ ಯಾರಿಗೂ ಅವರನ್ನು ನೋಡುವ ಅವಕಾಶವಿರುತ್ತಿರಲಿಲ್ಲ. ಯಾವಾಗಲೋ ಇದ್ದಕ್ಕಿದ್ದಂತೆ ಮತ್ತೆ ಸಾಮಾನ್ಯಸ್ಥಿತಿಗೆ ಬಂದುಬಿಡುವರು; ಎಂದಿನಂತೆ ಮಾತುಕತೆ, ಉಡುಗೆತೊಡುಗೆ, ಆಚಾರವ್ಯವಹಾರ, ಪೂಜೆ, ಪಾಠ ಎಲ್ಲವೂ. ಆದರೆ ಯಾವಾಗ 'ಅಂತರ್ಮುಖ'ವಾಗುವರು, ಯಾವಾಗ 'ಬಹಿರ್ಮುಖ'ವಾಗುವರು ಎಂದು ನಿರ್ದಿಷ್ಟವಾಗಿ ಹೇಳಲಾಗುತ್ತಿರಲಿಲ್ಲ. ಹಾಗಾಗಿ, ಮಠದ ಅಧಿಕಾರಿಗಳಿಗೆ, ಸ್ವಾಮಿಗಳ ಸರತಿಯ ಸೇವಕರಿಗೆ ಪರದಾಟವಾಯಿತು.

ಮಠದ ಆಡಳಿತವನ್ನೇನೋ ಎಂದಿನಂತೆ ಶ್ರೀಕಂಠಶಾಸ್ತ್ರಿಗಳೇ ನಡೆಸುವರು; ಮಠದಿಂದ ನಡೆಯಬೇಕಾದ ಪೂಜೆಯನ್ನೂ ಅವರೇ ಮಾಡಿಬಿಡುವರು. ಸ್ವಾಮಿಗಳ 'ಅಂತರ್ಮುಖ-ಬಹಿರ್ಮುಖ'ಸಂಚಾರಗಳಿಂದ ಮಠದ ದಿನನಿತ್ಯದ ವ್ಯವಹಾರಕ್ಕೇನೂ ತೊಂದರೆಯಾಗಲಿಲ್ಲ. ಆದರೆ ಮಠಕ್ಕೆ ಬರುವ ಭಕ್ತರೂ, ಆಢ್ಯರೂ, ಯಾತ್ರಿಕರೂ ಸ್ವಾಮಿಗಳನ್ನು ನೋಡಲೆಂದೇ ಬರುವರು ತಾನೆ? ಸ್ವಾಮಿಗಳು ಸುಮುಖರಾಗಿದ್ದು ಆಶೀರ್ವಾದ ಮಾಡಿದರೆ ತಾನೆ ಭಕ್ತರಿಗೆ, ಬಂದವರಿಗೆ ಸಮಾಧಾನ? ಶೃಂಗೇರಿಯಲ್ಲಿನ ಗುಡಿಗೂ ಸ್ವತಂತ್ರವಾದ ಆಕರ್ಷಣೆಯಿರದು; ಮಠಕ್ಕೆ ಹೊಂದಿಕೊಂಡಂತೆಯೇ ಗುಡಿ; ಸ್ವಾಮಿಗಳಿಗೆ ಹೊಂದಿಕೊಂಡಂತೆಯೇ ಮಠ. ಸ್ವಾಮಿಗಳು 'ಅಂತರ್ಮುಖ' ವಾಗಿಬಿಟ್ಟರೆ ಮಠದ ಆರ್ಥಿಕ ವ್ಯವಸ್ಥೆಗೆ ಪೆಟ್ಟು!

ಸರ್ವಾಧಿಕಾರಿಗಳು ಈ ಸಂದರ್ಭದಲ್ಲಿ ಗ್ರಹವೆಂದೋ ಗಾಳಿಯೆಂದೋ ಭೂತಬಾಧೆಯೆಂದೋ ತಿಳಿದು ತಮಗೆ ತೋರಿದ ಚಿಕಿತ್ಸೆಗಳನ್ನು ನಡೆಸುವ ಏರ್ಪಾಟು ಮಾಡಿದರು; ಸ್ವಾಮಿಗಳನ್ನು ಒಂದು ಹಿಡಿತದಲ್ಲಿ ಇರಿಸುವ ಉಪಾಯಗಳನ್ನು ಆಲೋಚಿಸಿದರು. ಕಡೆಗೆ, ಬೇರೆ ದಾರಿ ಕಾಣದೆ, ಸ್ವಾಮಿಗಳ

ಪರಿಸ್ಥಿತಿಯನ್ನು ಮೈಸೂರು ಮಹಾರಾಜರಿಗೆ ತಿಳಿಸಿದರು. ಆಗ ಮಹಾರಾಜರು ನಾಲ್ವಡಿ ಕೃಷ್ಣರಾಜ ಒಡೆಯರು. ಅವರೇ ತಾನೆ ಹಿಂದಿನ ಸ್ವಾಮಿಗಳ ಆಶಯದಂತೆ ಈ ಸ್ವಾಮಿಗಳ ಆಯ್ಕೆಯನ್ನು ಎತ್ತಿಹಿಡಿದು, ಅವರ ಪಟ್ಟಾಭಿಷೇಕಕ್ಕೆ ಅಪ್ಪಣೆ ಮಾಡಿದವರು? ಮಹಾರಾಜರು ದಿವಾನರಿಗೆ ಸುದ್ದಿ ಮುಟ್ಟಿಸಿ, ಈ ವಿಚಾರವಾಗಿ ಅಗತ್ಯವಾದುದನ್ನೆಲ್ಲ ಮಾಡಬೇಕೆಂದು ಸೂಚಿಸಿದರು. ದಿವಾನರು ಸರ್ ಮಿರ್ಜಾ ಇಸ್ಮಾಯಿಲರು; ಹಿಂದೂ ಗುರು ಪೀಠಗಳಲ್ಲೂ ದೇವಾಲಯಗಳಲ್ಲೂ ವಿಶ್ವಾಸವನ್ನಿರಿಸಿಕೊಂಡಿದ್ದವರು. ತಾವೇ ಶೃಂಗೇರಿಗೆ ಹೋಗಿ ಸ್ವಾಮಿಗಳನ್ನು ನೋಡಿ, ಸುತ್ತಲವರನ್ನು ವಿಚಾರಿಸಿ ಬಂದರು. ಅನಂತರ ಅವರು ಬೆಂಗಳೂರಿನಲ್ಲಿದ್ದ ಸರಕಾರಿ ಮಾನಸ ಆಸ್ಪತ್ರೆಯ ಮುಖ್ಯಾಧಿಕಾರಿಗಳಿಗೆ ನಿರೂಪವೊಂದನ್ನು ಕಳುಹಿಸಿ, ಒಡನೆಯೇ ಶೃಂಗೇರಿಗೆ ಹೋಗಿ ಸ್ವಾಮಿಗಳ ಆರೋಗ್ಯವನ್ನು ಪರೀಕ್ಷೆಮಾಡಿ ತಮಗೆ ವರದಿ ಸಲ್ಲಿಸುವಂತೆ ಅಪ್ಪಣೆ ಮಾಡಿದರು.

ಆಗ ಆಸ್ಪತ್ರೆಯ ಮುಖ್ಯಾಧಿಕಾರಿಯಾಗಿದ್ದವರು ಡಾ. ಎಂ. ವಿ. ಗೋವಿಂದಸ್ವಾಮಿಯವರು. ಮುಂದೆ (ಎಂದರೆ ಇಪ್ಪತ್ತು ವರ್ಷಗಳಷ್ಟು ಕಾಲವಾದಮೇಲೆ) ಈ ಆಸ್ಪತ್ರೆ ಅಖಿಲಭಾರತ ಮಾನಸ ಆರೋಗ್ಯಸಂಸ್ಥೆಯಾಗಿ ಮಾರ್ಪಟ್ಟಾಗ ನನ್ನ ಮೇಲಧಿಕಾರಿಯಾದವರು. ಇವರು ತಮ್ಮ ಆಸ್ಪತ್ರೆಯ ಮನಃಶಾಸ್ತ್ರವಿಭಾಗದ ಮುಖ್ಯಸ್ಥರಾಗಿದ್ದ ಡಾ. ಸಿ. ಕೆ. ವಾಸುದೇವ ರಾಯರೊಂದಿಗೆ (ಇವರು ಮೊದಲು ನನ್ನ ಅಧ್ಯಾಪಕರಾಗಿದ್ದು ಅನಂತರ ನನ್ನ ಸಹೋದ್ಯೋಗಿಯಾದವರು) ಶೃಂಗೇರಿಗೆ ಹಲವಾರು ಬಾರಿ ಹೋಗಿ ಸ್ವಾಮಿಗಳ ಪರಿಸ್ಥಿತಿಯ ಬಗ್ಗೆ ದಿವಾನರ ಕಚೇರಿಗೆ ಆಗಾಗ ವರದಿಗಳನ್ನು ಸಲ್ಲಿಸಿದರು. ಈ ವರದಿಗಳನ್ನು ಮುಂದೆ (ಎಂದರೆ ನಾನು ಹದಿನೈದು ವರ್ಷಗಳ ನಂತರ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿದ್ದುಕೊಂಡು ವಾಸುದೇವರಾಯರೊಂದಿಗೆ ಮತ್ತು ಗೋವಿಂದಸ್ವಾಮಿಯವರೊಂದಿಗೆ ಸಂಪರ್ಕವನ್ನು ಬೆಳಸಿಕೊಂಡಮೇಲೆ, ಮತ್ತು ಆಮೇಲೆ ಅಖಿಲಭಾರತ ಮಾನಸ ಆರೋಗ್ಯಸಂಸ್ಥೆಯಲ್ಲಿ ಮನಃಶಾಸ್ತ್ರವಿಭಾಗದ ಮುಖ್ಯಸ್ಥನಾಗಿ ಅಧಿಕಾರವನ್ನು ವಹಿಸಿಕೊಂಡಮೇಲೆ) ನನಗೆ ನೋಡುವ ಅವಕಾಶವಾಯಿತು; ವರದಿಗಳಲ್ಲಿ ಕಾಣಿಸದೆ ಇದ್ದ ವಿವರಗಳನ್ನು ಗೋವಿಂದಸ್ವಾಮಿಯವರೂ ವಾಸುದೇವ ರಾಯರೂ ನನಗೆ ತಿಳಿಯ ಹೇಳಿದುದೂ ಉಂಟು.

ವೈದ್ಯರು ಸ್ವಾಮಿಗಳನ್ನು ನೇರವಾಗಿ ಪರೀಕ್ಷೆಮಾಡುವ ಸಾಧ್ಯತೆಯಿರಲಿಲ್ಲ; ಹತ್ತಿರದಿಂದ ಕಂಡು, ಅವರನ್ನು ಮಾತನಾಡಿಸಿ ಅಗತ್ಯವಾದ ವಿವರಗಳನ್ನು ಸಂಗ್ರಹಿಸುವಂತಿಲ್ಲ. ದೂರದಿಂದಲೇ ಪರಾಂಬರಿಸಿ, ಮಠದ ಅಧಿಕಾರಿಗಳನ್ನೂ ಸ್ವಾಮಿಗಳ ಸೇವಕರನ್ನೂ ವಿಚಾರಿಸಿ 'ವ್ಯಾಧಿ'ಯ ಸ್ವರೂಪವನ್ನೂ ನಿದಾನವನ್ನೂ ಗೊತ್ತುಪಡಿಸಿಕೊಳ್ಳಬೇಕಾಗಿತ್ತು. ಚಿಕಿತ್ಸೆಗಾಗಿ ಮದ್ದನ್ನು ಕೊಡುವುದೂ ಕಷ್ಟವೇ. ಆಹಾರದಲ್ಲಿ ಬೆರಸಿಕೊಟ್ಟರೆ, ಹಲವು ದಿನ ಅವರು ಆಹಾರವನ್ನೇ ಮುಟ್ಟುತ್ತಿರಲಿಲ್ಲ! ವ್ಯಾಧಿಯ ಸ್ವರೂಪವೇನೆಂದು ವೈದ್ಯರು ತಿಳಿಯದಾದರು; ಚಿಕಿತ್ಸೆಯನ್ನೂ ನಡೆಸಲಾರದೆ ಹೋದರು. ಆದರೆ ವೈದ್ಯರ ಅದೃಷ್ಟಕ್ಕೆ, ಸ್ವಾಮಿಗಳು ಇದ್ದಕ್ಕಿದ್ದಂತೆ ಸಾಮಾನ್ಯಸ್ಥಿತಿಗೆ ಮರಳಿದರು. ಈ ಸಂದರ್ಭದಲ್ಲಿ ಗೋವಿಂದಸ್ವಾಮಿಯವರು ಹೇಳಿದ ಕಥೆ ನೆನಪಿಗೆ ಬರುತ್ತದೆ.

ಡಾ. ಗೋವಿಂದಸ್ವಾಮಿಯವರು ಶೃಂಗೇರಿಯಲ್ಲಿ ಒಂದು ವಾರ ಕಾಲ ಉಳಿದುಕೊಂಡಿದ್ದರೂ 'ಅಂತರ್ಮುಖ'ರಾಗಿದ್ದ ಸ್ವಾಮಿಗಳ ಜೊತೆ ಮಾತನಾಡುವ ಅವಕಾಶವೇ ಒದಗಿರಲಿಲ್ಲ. ಇವರು ಬೆಂಗಳೂರಿಗೆ ಹಿಂದಿರುಗುವ ಹಿಂದಿನ ದಿನ ಇದ್ದಕ್ಕಿದ್ದಂತೆ ಸ್ವಾಮಿಗಳು 'ಬಹಿರ್ಮುಖ'ರಾದರು. ಗೋವಿಂದಸ್ವಾಮಿಯವರು ವೈದ್ಯರೆಂದು ಕಾಣಿಸಿಕೊಳ್ಳದೆ ವೈದಿಕರ ಉಡುಪನ್ನೇ ಧರಿಸಿ ಹತ್ತಾರು ಮಂದಿ ಇತರರೊಂದಿಗೆ ಸ್ವಾಮಿಗಳನ್ನು ಕಾಣಲು ಹೋದರು; ಅವರೆದುರು ಎಲ್ಲರ ನಡುವೆ ಕೂತರು. ಇವರು ವೈದ್ಯರೆಂಬುದಾಗಲೀ, ತಮ್ಮನ್ನು ಪರೀಕ್ಷೆ ಮಾಡಲು ಶೃಂಗೇರಿಗೆ ಬಂದಿದ್ದಾರೆಂಬುದಾಗಲೀ ಸ್ವಾಮಿಗಳಿಗೆ ಯಾರೂ ತಿಳಿಸಿಲ್ಲ. ಗೋವಿಂದಸ್ವಾಮಿಯವರು 'ನಾಳೆ ಊರಿಗೆ ಹೋಗುತ್ತೇನೆ, ಅಪ್ಪಣೆಯಾಗಬೇಕು' ಎಂದು ಹೇಳಿ ನಮಸ್ಕಾರ ಮಾಡಿದರು. ಸ್ವಾಮಿಗಳು ಅವರನ್ನು ನೋಡಿ ನಸುನಗುತ್ತ ''ಏಕೆ ಹೊರಟುಬಿಟ್ಟಿರಿ? ಬಂದ ಕೆಲಸವಾಯಿತೋ?'' ಎಂದು ಕೇಳಿದರು. ಗೋವಿಂದಸ್ವಾಮಿಯವರು ಕಕ್ಕಾಬಿಕ್ಕಿಯಾದರು. ತಾವು ಬಂದ ಉದ್ದೇಶ ಸ್ವಾಮಿಗಳಿಗೆ ತಿಳಿದಿದೆಯೆಂಬ ಅರಿವಾಯಿತು. 'ಕೆಲಸವಾಯಿತು' ಎಂದರೆ ರೋಗದ ನಿದಾನ ತಿಳಿಯುವುದಾಯಿತು ಎಂದಾಗುತ್ತದೆ; 'ಕೆಲಸವಾಗಲಿಲ್ಲ' ಎಂದರೆ ಬಂದ ಕೆಲಸ ಮುಗಿಯದೆ ಹೊರಡುವುದು ಏನು? ಏನನ್ನು ಹೇಳಲೂ ಹಿಂದೆಗೆದು ಗೋವಿಂದಸ್ವಾಮಿಯವರು ಸುಮ್ಮನೆ ನಿಂತರಂತೆ. ಆಗ ಸ್ವಾಮಿಗಳೇ ''ನಮ್ಮನ್ನು

ಪರೀಕ್ಷೆ ಮಾಡಿಯಾಯಿತೋ? ನಿಮ್ಮ ಚಿಕಿತ್ಸೆಗೆ ಒಳಪಡುವ ರೋಗವೇ ಇದು?'' ಎಂದು ಪ್ರಶ್ನೆಮಾಡಿ, ತಾವೇ ಉತ್ತರವಾಗಿ ''ಇದು ನಮ್ಮ ಪ್ರಾರಬ್ಧ; ಇದನ್ನು ಅನುಭವಿಸಿಯೇ ತೀರಬೇಕು. ನೀವು ಏನನ್ನು ತಾನೆ ಮಾಡಬಲ್ಲಿರಿ? ಹೋಗಿ ಬನ್ನಿ, ನಿಮಗೆ ದೇವರು ಒಳ್ಳೆಯದು ಮಾಡುತ್ತಾನೆ'' ಎಂದು ಫಲಮಂತ್ರಾಕ್ಷತೆಗಳನ್ನು ಕೊಟ್ಟರು.

ಫಲಮಂತ್ರಾಕ್ಷತೆಗಳನ್ನು ಕೊಡುವಾಗ ಡಾ. ಗೋವಿಂದಸ್ವಾಮಿಗಳ ಮುಖವನ್ನು ಸ್ವಾಮಿಗಳು ನೋಡಿದರಂತೆ. ಶೃಂಗೇರಿ ಮಠವೆಂಬ ಕಾರಣದಿಂದ ಗೋವಿಂದಸ್ವಾಮಿಗಳು ಸ್ವಾಮಿಗಳಿಗೆ ಸಂತೋಷವಾದೀತೆಂದು ಹಣೆಗೆ ವಿಭೂತಿ ಇಟ್ಟುಕೊಂಡಿದ್ದರು. ಸ್ವಾಮಿಗಳು ನಸುನಗುತ್ತ 'ಇದೇನು ವಿಭೂತಿ ಧರಿಸಿದ್ದೀರಿ? ನೀವು ಮಾಧ್ವರಲ್ಲವೆ?'' ಎಂದು ಕೇಳಿದರಂತೆ. ಗೋವಿಂದಸ್ವಾಮಿಗಳು ಏನು ಹೇಳಲೂ ತಿಳಿಯದೆ ಸುಮ್ಮನೆ ನಿಂತಾಗ ಸ್ವಾಮಿಗಳು ''ಬೇರೆಯವರನ್ನು ಮೆಚ್ಚಿಸಲು ನಿಮ್ಮ ಆಚಾರವನ್ನು ಬಿಡಬಾರದು. ನಿಮ್ಮ ಆಚಾರದಲ್ಲಿ ನೀವಿದ್ದಾಗಲೇ ನಮಗೆ ಸಂತೋಷ'' ಎಂದು ಹೇಳಿದರಂತೆ.

ಡಾ. ಗೋವಿಂದಸ್ವಾಮಿಯವರು ''ನಾನು ಸ್ವಾಮಿಗಳ ವ್ಯಾಧಿಯನ್ನು ಗುಣಪಡಿಸಲೆಂದು ಹೋದದ್ದು ನಿಜ; ಆದರೆ ನಡೆದದ್ದು, ನನ್ನ ವ್ಯಾಧಿ ಗುಣವಾಯಿತು!'' ಎಂದು ಹೇಳುತ್ತಿದ್ದರು. ಶೃಂಗೇರಿಗೆ ಹೋಗಿ ಸ್ವಾಮಿಗಳನ್ನು ಕಂಡಾಗಿನಿಂದ ಅವರು ಆಸ್ತಿಕರಾದರು; ವೇದಾಂತದಲ್ಲಿ ಆಸಕ್ತಿಯನ್ನು ತಳೆದರು, ಸಂಸ್ಕೃತವನ್ನು ಕಲಿಯಲು ಮೊದಲು ಮಾಡಿದರು. ಹಿಂದಿನ ಸ್ವಾಮಿಗಳ ಬಳಿ ಪಾಠಮಾಡಿ ಈ ಸ್ವಾಮಿಗಳಿಗೆ ಬೆಂಗಳೂರಲ್ಲೇ ವೇದಾಂತಪಾಠ ಹೇಳಿದ ವೆಳ್ಳೂರು ಸುಬ್ರಹ್ಮಣ್ಯಶಾಸ್ತ್ರಿಗಳ ಮಕ್ಕಳೂ, ಈ ಸ್ವಾಮಿಗಳ ಬಳಿ ಪಾಠಮಾಡಿ ಬೆಂಗಳೂರಲ್ಲೇ ನೆಲೆಸಿದ್ದವರೂ ಆದ ಪಂಡಿತರಾಜ ವಿ. ಎಸ್. ರಾಮಚಂದ್ರ ಶಾಸ್ತ್ರಿಗಳನ್ನು ಮನೆಗೆ ಕರೆಯಿಸಿಕೊಂಡು ಕೆಲವು ವೇದಾಂತ ಪ್ರಕರಣ ಗ್ರಂಥಗಳನ್ನು ಓದತೊಡಗಿದರು. ರಾಮಚಂದ್ರಶಾಸ್ತ್ರಿಗಳ ಪರಿಚಯ ನನಗಾದದ್ದು ಗೋವಿಂದಸ್ವಾಮಿಯವರ ಮನೆಯಲ್ಲೇ.

ಸ್ವಾಮಿಗಳಿಗೆ ಚಿಕಿತ್ಸೆಯೆಂಬುದೇನೂ ನಡೆಯಲಿಲ್ಲ. 'ಅಂತರ್ಮುಖ' ವಾದಾಗ ನಿರ್ಬಂಧದಲ್ಲಿಟ್ಟಿರುತ್ತಿದ್ದರು; ಬಹಿರ್ಮುಖವಾದಾಗ ಸಾಮಾನ್ಯ

ಸ್ಥಿತಿಯಲ್ಲೇ ಇರುವರು. ಬಹಿರ್ಮುಖವಾದರೂ ಮಠದ ವ್ಯವಹಾರದ ಕಡೆ ಯಾವ ಗಮನವೂ ಇರುತ್ತಿರಲಿಲ್ಲ. ಪೂಜೆಯಾಗಲೀ ಪಾಠವಾಗಲೀ ಅವರಿಂದ ನಡೆಯುವಂತಿರಲಿಲ್ಲ. ಇನ್ನು ಈ ಸ್ಥಿತಿ ಸುಧಾರಿಸುವುದೆಂದಾಗಲೀ, ಈ ಸ್ವಾಮಿಗಳಿಂದ ಮಠದ ಪ್ರತಿಷ್ಠೆ ಉಳಿದೀತೆಂದಾಗಲೀ ಸರ್ವಾಧಿಕಾರಿಗಳಿಗೆ ನಂಬಿಕೆಯಿರಲಿಲ್ಲ. ಆದುದರಿಂದ ಬೇರೊಬ್ಬರನ್ನು ಸ್ವಾಮಿಗಳಾಗಿ ಮಾಡಿಕೊಂಡು ಮಠದ ಆಡಳಿತವನ್ನು ವಹಿಸಿದರೆ ಒಳ್ಳೆಯದೆಂದು ಅವರಿಗೆ ಮನವರಿಕೆಯಾಯಿತು. ಒಮ್ಮೆ ಸ್ವಾಮಿಗಳು ಬಹಿರ್ಮುಖವಾಗಿದ್ದಾಗ ಅವರೊಂದಿಗೆ ಈ ವಿಚಾರವನ್ನು ಪ್ರಸ್ತಾಪಿಸಿದರು. ಸ್ವಾಮಿಗಳು ಬೇಡ ವೆಂದೇನೂ ಹೇಳಲಿಲ್ಲ. ''ನಿಮಗೆ ಹೇಗೆ ತೋಚುವುದೋ ಹಾಗೆ ಮಾಡೋಣವಾಗಲಿ!'' ಎಂದುಬಿಟ್ಟರು.

ಇಂಥ ಸಂದರ್ಭಗಳಲ್ಲಿ ಸ್ವಾಮಿಗಳ ಪ್ರತಿಕ್ರಿಯೆಯನ್ನು ಸೂಚಿಸುವ ಪ್ರಸಂಗವೊಂದನ್ನು ಆರ್. ಕೃಷ್ಣಸ್ವಾಮಿ ಅಯ್ಯರು ತಮ್ಮ ಗ್ರಂಥವೊಂದರಲ್ಲಿ ಉಲ್ಲೇಖಿಸಿದ್ದಾರೆ. ಆ ಕಾಲದಲ್ಲಿ ಕೃಷ್ಣಸ್ವಾಮಿ ಅಯ್ಯರು ತುಂಗಾನದಿಯ ಆಚೆಯ ದಂಡೆಯ ಮೇಲೆ (ನರಸಿಂಹವನದ ಕಡೆ) ಕೋಣೆಯೊಂದರಲ್ಲಿ ತಂಗಿದ್ದರು; ಸ್ವಾಮಿಗಳೂ ಆ ಕಡೆಯೇ ಇರುತ್ತಿದ್ದರು. ಒಂದು ದಿನ ಮಠದ ಪರಿಚಾರಕರು ಸ್ವಾಮಿಗಳ ಬೀಡಿನಿಂದ ಸಾಮಾನುಗಳನ್ನು ನದಿಯ ಈಚೆ ದಂಡೆಗೆ (ಗುಡಿ, ಮಠ ಇರುವ ಕಡೆ) ಸಾಗಿಸುತ್ತಿದ್ದುದನ್ನು ಅಯ್ಯರು ನೋಡಿದರು. ವಿಚಾರಿಸಿದಾಗ ಸ್ವಾಮಿಗಳು ನದಿಯನ್ನು ದಾಟಿ ಮಠಕ್ಕೆ ಹೊರಡುವರೆಂದು ತಿಳಿಯಿತು. ಹೊರಡುವ ಮುನ್ನ ಸ್ವಾಮಿಗಳಿಗೆ ನಮಸ್ಕಾರ ಮಾಡಿಬರೋಣವೆಂದು ಅಯ್ಯರು ಸ್ವಾಮಿಗಳ ಬಳಿ ಹೋಗಿ ''ಸನ್ನಿಧಾನ ಆಚೆ ದಡಕ್ಕೆ ಹೊರಡುವುದಂತೆ?'' ಎಂದು ಪೀಠಿಕೆ ಹಾಕಿದರು. ಸ್ವಾಮಿಗಳು ನಸುನಗುತ್ತ ''ಹೌದು, ಈ ಹೊತ್ತು ಮಳೆ ಬರಲಿದೆಯಂತೆ, ನದಿಯಲ್ಲಿ ಪ್ರವಾಹ ಇರುವುದಂತೆ. ಆಗ ಪೂಜೆಗೆ ಸಾಮಾನುಗಳನ್ನು ಆ ದಡದಿಂದ ಈ ದಡಕ್ಕೆ ತರುವುದು ಕಷ್ಟವೆಂದೂ, ನಾವೇ ಅಲ್ಲಿಗೆ ಹೋಗಿಬಿಟ್ಟರೆ ಒಳ್ಳೆಯದೆಂದೂ ಅಧಿಕಾರಿಗಳು ಹೇಳಿದ್ದಾರೆ. ನಾನು ಎಲ್ಲಿದ್ದರೇನು?'' ಎಂದು ಹೇಳಿ ಮುಂದುವರೆದು ''ನೀವು ಇಲ್ಲಿಯೇ ಇರಿ, ನೀವೇನೂ ಆ ಕಡೆ ಬರಬೇಕಾಗಿಲ್ಲ. ಈ ಹೊತ್ತೇನು ಮಳೆಯೂ ಬರುವುದಿಲ್ಲ, ಪ್ರವಾಹವೂ ಇರುವುದಿಲ್ಲ!'' ಎಂದು

ಮುಗಿಸಿದರು. ಮಳೆ ಬರಲಾರದೆಂಬ ತಮ್ಮ ಅಭಿಪ್ರಾಯವನ್ನು ಅಧಿಕಾರಿಗಳಿಗೆ ಹೇಳಬಹುದಾಗಿತ್ತಲ್ಲ? ಮಠದಲ್ಲಿ ನಡೆಯ ಬೇಕಾದುದು ಸ್ವಾಮಿಗಳ ಮಾತೋ, ಅಧಿಕಾರಿಗಳ ಮಾತೋ? ಆದರೆ ಯಾವ ವಿಚಾರದಲ್ಲೂ ಯಾರೊಂದಿಗೂ ಚರ್ಚೆ ಬೆಳೆಸುವುದು ಸ್ವಾಮಿಗಳ ಸ್ವಭಾವ ಅಲ್ಲ. 'ಅವರೆಂದಂತೆಯೇ ಆಗಲಿ', ಎಂದು ಬಿಡುವರು.

ಮೇಲಾಗಿ, ಮಠದ ವಿಚಾರವಾಗಿ ತಾವಂತೂ ನಿರ್ಲಿಪ್ತರು, ಅನುತ್ಸುಕರು. ಇನ್ನು ಮಠದ ವ್ಯವಹಾರದಲ್ಲಿ ಆಸಕ್ತಿಯನ್ನು ತಳೆದು ಆಡಳಿತವನ್ನು ನಡೆಸುವುದು ತಮ್ಮಿಂದ ಸಾಧ್ಯವಿಲ್ಲ. ಇದರಲ್ಲಿ ನುರಿತವರೂ ಸಮರ್ಥರೂ ಅನುಭವವುಳ್ಳವರೂ ತಮಗೆ ಗುರುಗಳಂತೆ ಇರುವ ಹಿರಿಯರೂ ಆದ ಸರ್ವಾಧಿಕಾರಿಗಳು ಈವರೆಗೆ ಮಠದ ಆಡಳಿತವನ್ನು ಎಲ್ಲರೂ ಮೆಚ್ಚುವಂತೆ ನಡೆಸಿಕೊಂಡು ಬರುತ್ತಿದ್ದಾರೆ. ಅವರಿರದಿದ್ದರೆ ಮಠದ ಪಾಡೇನು? ಅವರಿಗೂ ಈಗ ವಯಸ್ಸು ಅರವತ್ತಾಯಿತು; ಅಧಿಕಾರದಿಂದ ತಮ್ಮನ್ನು ಬಿಟ್ಟುಕೊಡಬೇಕೆಂದು ಮತ್ತೆ ಮತ್ತೆ ಕೇಳುತ್ತಿದ್ದಾರೆ. ಮಠದ ಆಗುಹೋಗುಗಳ ವಿಚಾರವಾಗಿ, ಮುಂದಿನ ವ್ಯವಸ್ಥೆಯ ವಿಚಾರವಾಗಿ ಅವರ ನಿರ್ಧಾರವೇ ಸರಿಯಾದುದು. ಅವರು ಇರದಿದ್ದರೂ ಮಠದ ವ್ಯವಹಾರ ಎಂದಿನಂತೆ ನಡೆಯುವ ವ್ಯವಸ್ಥೆಯನ್ನು ಮಾಡಿ ಹೋಗಬೇಕೆಂಬ ಅವರ ಕಾತುರವೂ ಸರಿಯಾದದ್ದೇ. ಹೀಗೆಂದು ಸ್ವಾಮಿಗಳು ವಿಚಾರಮಾಡಿ ಸರ್ವಾಧಿಕಾರಿಗಳ ಮಾತಿಗೆ ಪ್ರತಿ ಹೇಳಲಿಲ್ಲ.

ಮುಂದೆ ೧೯೩೧ರ ಮೇ ೨೨ರಂದು ಶಿಷ್ಯಪರಿಗ್ರಹವೂ ಆಯಿತು. ಬೆಂಗಳೂರಿನ ಕೈವು ರಾಮಶಾಸ್ತ್ರಿಯೆಂಬುವರ ಮಗ ಶ್ರೀನಿವಾಸನೆಂಬ ವಟುವಿಗೆ ಸಂನ್ಯಾಸ ಕೊಡಿಸಿ ಅಭಿನವ ವಿದ್ಯಾತೀರ್ಥರೆಂಬ ಹೆಸರಿನಿಂದ ಕಿರಿಯಪಟ್ಟ ಕೊಡಲಾಯಿತು. ಇವರೇ ಮುಂದಿನ ಹಿರಿಯ ಜಗದ್ಗುರುಗಳಾದವರು. ಶಿಷ್ಯಪರಿಗ್ರಹದ ಸಂದರ್ಭದಲ್ಲಿ ನಡೆದ ಘಟನೆಯೊಂದು ಸ್ವಾರಸ್ಯವಾಗಿದೆ. ಅಂದು ಸಂಜೆ ಕಿರಿಯ ಜಗದ್ಗುರುಗಳೊಂದಿಗೆ ಸ್ವಾಮಿಗಳು ಶೃಂಗೇರಿಯ ಮುಖ್ಯಬೀದಿಗಳಲ್ಲಿ ಮೆರವಣಿಗೆ ಬರಬೇಕೆಂದು ವ್ಯವಸ್ಥೆಯಾಗಿದ್ದಿತು. ಮಠದಲ್ಲಿ ಎರಡು ಪಾಲಕಿಗಳು; ಒಂದು ದೊಡ್ಡದು ಬಂಗಾರದ ಕವಚವುಳ್ಳದ್ದು, ಇನ್ನೊಂದು ಸಣ್ಣದು ಬೆಳ್ಳಿಯದು. ಹಿರಿಯ- ಸ್ವಾಮಿಗಳಿಗೆ ಬಂಗಾರದ ಪಾಲಕಿಯೆಂದೂ ಕಿರಿಯರಿಗೆ ಬೆಳ್ಳಿಯದೆಂದೂ ಗೊತ್ತಾಗಿದ್ದಿತು. ಇಬ್ಬರೂ

ಸ್ವಾಮಿಗಳು ಶಾರದಾದೇವಾಲಯವನ್ನು ಸುತ್ತುವರಿದು ಬಂದು, ಹೊರಗೆ ಬರುವಾಗ ಪಾಲಕಿಗಳನ್ನೇರಬೇಕಾಗಿದ್ದಿತು. ಹಾಗೆ ಬಂದಾಗ ಹಿರಿಯಸ್ವಾಮಿಗಳು ತಟ್ಟನೆ ಬೆಳ್ಳಿಯ ಪಾಲಕಿಯಲ್ಲಿ ಕೂತುಬಿಟ್ಟರು; ಬಂಗಾರದ ದೊಡ್ಡ ಪಾಲಕಿಯಲ್ಲಿ ಕಿರಿಯಸ್ವಾಮಿಗಳು ಕೂಡುವಂತೆ ತಿಳಿಸಿದರು. ಇದು ಜನರಲ್ಲಿ ಕೋಲಾಹಲಕ್ಕೆ ಕಾರಣವಾಯಿತು. ಕಿರಿಯಸ್ವಾಮಿಗಳು ಏನು ಮಾಡಬೇಕೆಂದು ತೋರದೆ ಸುಮ್ಮನೆ ನಿಂತರು. ಅಧಿಕಾರಿಗಳು ಒಬ್ಬೊಬ್ಬರಾಗಿ ಬಂದು ಹಿರಿಯಸ್ವಾಮಿಗಳನ್ನು ಬಂಗಾರದ ಪಾಲಕಿಗೆ ದಯಮಾಡಿಸಬೇಕೆಂದು ಕೇಳಿಕೊಂಡರು. ಹಿರಿಯಸ್ವಾಮಿಗಳು ಜಗ್ಗಲಿಲ್ಲ. ಕಡೆಗೆ ಸರ್ವಾಧಿಕಾರಿ ಶ್ರೀಕಂಠಶಾಸ್ತ್ರಿಗಳೇ ಬಂದು ಕೇಳಿದರು. ಅವರಿಗೆ ಹಿರಿಯಸ್ವಾಮಿಗಳು ''ಈ ಸಂದರ್ಭದ ಹಿನ್ನೆಲೆಯನ್ನು ಉದ್ದೇಶವನ್ನು ಮರೆಯೋಣವಾಯಿತೇ? ಇನ್ನು ಮುಂದೆ ಅವರೇ ಜಗದ್ಗುರುಗಳು, ನಾನಲ್ಲ ಎನ್ನುವುದನ್ನು ನೆನಪಿಡೋಣ-ವಾಗಲಿ!'' ಎಂದು ಖಂಡಿತವಾಗಿ ತಿಳಿಸಿದರು. ಶಾಸ್ತ್ರಿಗಳು ಸುಮ್ಮನಾದರು. ಹಿರಿಯ ಸ್ವಾಮಿಗಳ ಇಷ್ಟದಂತೆಯೇ ಉತ್ಸವ ನಡೆಯಿತು.

ಅಂದಿನಿಂದ ಕಡೆಯವರೆಗೂ ಸ್ವಾಮಿಗಳು 'ಈಗ ಪಟ್ಟವಾದವರೇ ಜಗದ್ಗುರುಗಳು, ತಾವಲ್ಲ' ಎಂದು ಎಲ್ಲ ಸಂದರ್ಭಗಳಲ್ಲಿಯೂ ಸ್ಪಷ್ಟಪಡಿಸುತ್ತಿದ್ದರು. ಯಾರಾದರೂ ''ಈ ಮಠದಲ್ಲಿ ತಮ್ಮ ಸ್ಥಾನವೇನು?'' ಎಂದು ಕೇಳಿದರೆ ''ಪ್ರಪಂಚವೇ ನಮ್ಮದು, ನಮಗೆ ಪ್ರತ್ಯೇಕ ಸ್ಥಾನವೇಕೆ?'' ಎಂದುಬಿಡುತ್ತಿದ್ದರು. ಹಿರಿಯ ಅಧಿಕಾರಿಗಳಿಗೊಬ್ಬರಿಗೆ ಸ್ವಾಮಿಗಳು ''ಕಿರಿಯ-ಸ್ವಾಮಿಗಳಿಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ಯೋಗಪಟ್ಟದಲ್ಲಿ ಕೂರಿಸಿದ ದಿನವೇ ಅವರು ಜಗದ್ಗುರುಗಳಾಗಿಬಿಟ್ಟರು. ಅವರದ್ದೇ ಈಗ ಈ ಸಂಸ್ಥಾನದ ಸರ್ವಾಧಿಕಾರ. ನಾವು ಕರ್ಮಾಯತ್ತವಾಗಿ ಪ್ರಾಪ್ತವಾಗಿರುವ ಈ ಶರೀರದ ಅವಸಾನಕಾಲವನ್ನು ನಿರೀಕ್ಷಿಸುತ್ತಿದ್ದೇವೆ, ಅಷ್ಟೆ!'' ಎಂದು ಹೇಳಿದರು.

ಆಗ ಹಿರಿಯ ಸ್ವಾಮಿಗಳು ಮೂವತ್ತೊಂಭತ್ತು ವರ್ಷ ವಯಸ್ಸಿನವರು; ಕಿರಿಯ ಸ್ವಾಮಿಗಳಿಗೆ ಹದಿನಾಲ್ಕು ವರ್ಷ ವಯಸ್ಸು. ಸರ್ವಾಧಿಕಾರಿಗಳು ಕಿರಿಯಸ್ವಾಮಿಗಳ ವಿದ್ಯಾಭ್ಯಾಸ ಮೊದಲಾದುವನ್ನೆಲ್ಲ ವ್ಯವಸ್ಥೆ ಮಾಡಿ, ತಾವು ಮಠದ ಅಧಿಕಾರದಿಂದ ನಿವೃತ್ತರಾದರು. ಆಗ ಅವರಿಗೆ ಅರವತ್ತೆರಡು

ವರ್ಷಗಳು ಸಂದಿದ್ದವು. ಹಿಂದಿನ ಸ್ವಾಮಿಗಳ ಕಾಲದಲ್ಲಿ ಇಪ್ಪತ್ತುನಾಲ್ಕು ವರ್ಷಗಳು, ಈ ಸ್ವಾಮಿಗಳ ಕಾಲದಲ್ಲಿ ಹದಿನೆಂಟು ವರ್ಷಗಳು ಮಠದ ಆಡಳಿತವನ್ನು ನಡೆಸಿ ಅದರಲ್ಲೇ ಮುಪ್ಪಾಗಿದ್ದರು. ಅವರು ನಿವೃತ್ತರಾಗುವ ಸಮಯದಲ್ಲಿ ಅವರ ಸಲಹೆಯಂತೆ ಸ್ವಾಮಿಗಳು ಮೈಸೂರು ಸರ್ಕಾರಕ್ಕೆ ಪತ್ರ ಬರೆದು ಒಬ್ಬ ನುರಿತ ಅಧಿಕಾರಿಯನ್ನು ಮಠದ ಲೆಕ್ಕಗಳನ್ನು ನೋಡಿಕೊಳ್ಳುವುದಕ್ಕೆಂದು ನೇಮಿಸಬೇಕೆಂದು ಕೇಳಿದರು.

ಹೀಗೆ ಮಠದ ಆಡಳಿತವನ್ನು ಬಿಟ್ಟಮೇಲೆ ಶ್ರೀಕಂಠಶಾಸ್ತ್ರಿಗಳು ನಂಜನಗೂಡಿಗೆ ಹಿಂದಿರುಗಿ, ಮೂರು ಮೈಲಿ ದೂರದ ಕಲ್ಲಹಳ್ಳಿ ಎಂಬ ತಮ್ಮ ಸ್ಥಳದಲ್ಲಿ ನೆಲೆಗೊಂಡರು. ನಿವೃತ್ತರಾದರೂ ಮಠದ ಆಡಳಿತದಲ್ಲಿ ಅವರ ಸಲಹೆ, ಸೂಚನೆ, ಮಾರ್ಗದರ್ಶನಗಳು ಆಗಾಗ ಇದ್ದೇ ಇರುತ್ತಿದ್ದುವು. ೧೯೩೬ರಲ್ಲಿ ಸ್ವಾಮಿಗಳು ಕಾಲಡಿಯಲ್ಲಿ ದೀರ್ಘಕಾಲ ತಂಗಿದ್ದಾಗ, ಶ್ರೀಕಂಠಶಾಸ್ತ್ರಿಗಳೇ ಅಲ್ಲಿನ ವ್ಯವಸ್ಥೆಯನ್ನೆಲ್ಲ ನೋಡಿಕೊಂಡು ಸ್ವಾಮಿಗಳ ಜೊತೆಯಲ್ಲೇ ಇದ್ದರು. ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ (೧೯೫೦ರಲ್ಲಿ) ಇವರು ಮೈಸೂರಿನಲ್ಲಿ ತೀರಿಕೊಂಡರು. ತೀರಿಕೊಳ್ಳುವ ಹಿಂದಿನ ವರ್ಷ ಆಪತ್ ಸಂನ್ಯಾಸವನ್ನೂ ಸ್ವೀಕರಿಸಿದ್ದರು. ಸಾವು ಸನ್ನಿಹಿತವಾಯಿತೆಂದು ಪ್ರೇಷೋಚ್ಚಾರಣೆಮಾಡಿ ಸಂನ್ಯಾಸಿಗಳಾದ ಇವರಿಗೆ ಆರೋಗ್ಯ ಸ್ವಲ್ಪ ಸುಧಾರಿಸಿದಮೇಲೆ ಸ್ವಾಮಿಗಳಿಂದ ಕ್ರಮಸಂನ್ಯಾಸವನ್ನು ಪಡೆಯಬೇಕೆಂಬ ಬಯಕೆಯೂ ಇದ್ದಿತಂತೆ; ಆದರೆ ಅದು ಕೈಗೂಡಲಿಲ್ಲವಂತೆ.

ಶಿಷ್ಯಪರಿಗ್ರಹ ಮಾಡಿದಮೇಲೆ, ಸ್ವಾಮಿಗಳು ಮಠದೊಂದಿಗೆ ಇರಿಸಿ ಕೊಂಡಿದ್ದ ಅಲ್ಪಸ್ವಲ್ಪ ಸಂಬಂಧವನ್ನೂ ಕಡಿದುಕೊಂಡುಬಿಟ್ಟರು. ಮಠದ ಯಾವುದಾದರೊಂದು ಸಮಸ್ಯೆಯನ್ನು ಯಾರಾದರೂ ಸ್ವಾಮಿಗಳ ಮುಂದೆ ಎತ್ತಿದರೆ, ಮೊದಲು ಸ್ವಾಮಿಗಳು ''ಶ್ರೀಕಂಠಶಾಸ್ತ್ರಿಗಳನ್ನು ಕೇಳಿ'' ಎನ್ನುತ್ತಿದ್ದರು; ಈಗ ''ಜಗದ್ಗುರುಗಳನ್ನು ಕೇಳಿ'' ಎನ್ನತೊಡಗಿದರು. ಶಿಷ್ಯಪರಿಗ್ರಹವಾದ ಮೇಲೆ ಸ್ವಾಮಿಗಳು ಇಪ್ಪತ್ತುಮೂರು ವರ್ಷಗಳ ಕಾಲ ಬದುಕಿದ್ದರು. ಇಷ್ಟೂ ಕಾಲವನ್ನು ಅವರು ಜೀವನ್ಮುಕ್ತರಂತೆ ನಿಃಸಂಗರಾಗಿ, ನಿರುತ್ಸುಕರಾಗಿ, ನಿರುದ್ವಿಗ್ನರಾಗಿ ಕಳೆದರು. ಹೊರಗಣ ಯಾವ ವ್ಯವಹಾರದಲ್ಲೂ ಆಸಕ್ತಿ ತೋರಿಸಲಿಲ್ಲ. ಹೆಚ್ಚುಹೆಚ್ಚು ಕಾಲ

ಏಕಾಂತದಲ್ಲೇ ಕಳೆಯತೊಡಗಿದರು. 'ಅಂತರ್ಮುಖ'ವೆಂದು ಹೆಸರಾದ ಸ್ಥಿತಿ ಇರದಿದ್ದಾಗಲೂ ಅವರು ಬಹಿರ್ಮುಖರಾಗಿರಲೇ ಇಲ್ಲ. ಭಕ್ತರು ದರ್ಶನಕ್ಕೆಂದು ಬಂದು ನೆರೆದಿದ್ದರೂ ಅವರನ್ನು ಕಾಣಬೇಕೆಂಬ ಉತ್ಸುಕತೆ ಸ್ವಾಮಿಗಳಿಗಿರಲಿಲ್ಲ; ಮಠದ ಪೂಜೆ, ಉತ್ಸವಗಳಲ್ಲಿ ಪಾಲ್ಗೊಳ್ಳಬೇಕೆಂಬ ಬಯಕೆಯೂ ಇರಲಿಲ್ಲ. ನರಸಿಂಹವನದಲ್ಲೇ ಇರುತ್ತ 'ಆಧ್ಯಾನ'ವೆಂಬ ಅಭ್ಯಾಸವನ್ನು ಮಾಡುತ್ತಿದ್ದರು. ಇದನ್ನೇ 'ಆಧ್ಯಾತ್ಮ ಯೋಗ' ವೆಂದೂ ಕರೆಯುತ್ತಾರೆ.

ಬ್ರಹ್ಮದರ್ಶನಕ್ಕೆ ಸಾಧನವನ್ನು ಹೇಳುತ್ತ ಆಚಾರ್ಯರು ಶ್ರವಣ, ಮನನ, ನಿದಿಧ್ಯಾಸನಗಳನ್ನು ಹೇಳಿದ್ದಾರಷ್ಟೆ? ಸ್ವಾಮಿಗಳು ವಿರೂಪಾಕ್ಷಶಾಸ್ತ್ರಿಗಳಲ್ಲಿ ಶ್ರವಣವನ್ನು ಪೂರೈಸಿದರು; ಅನಂತರ ತಮ್ಮ ಅಧ್ಯಯನ-ಅಧ್ಯಾಪನದ ವೇಳೆಯಲ್ಲಿ ಶ್ರುತ್ಯನುಕೂಲವಾದ ತರ್ಕವನ್ನೂ ಸ್ವಂತ ಅನುಭವವನ್ನೂ



ಹೊಂದಿಸಿಕೊಂಡು ಮನನವನ್ನು ಮುಗಿಸಿದರು. ನಿದಿಧ್ಯಾಸನವೆಂಬ ಉಪಾಸನಾಕ್ರಿಯೆಗೆ ಮೊದಲು ಅವಕಾಶವಿರಲಿಲ್ಲ. ಮಠದ ವ್ಯವಹಾರದ ಅಷ್ಟಿಷ್ಟು ಚಿಂತೆಯಿದ್ದಿತು. ತಮ್ಮ ಪ್ರಾರಬ್ಧಕರ್ಮವನ್ನು ಸವೆಯಿಸುವ ಅಗತ್ಯವೂ ಇದ್ದಿತು; ವಾಸನಾಕ್ಷಯವಾಗಬೇಕಾದುದೂ ಇದ್ದಿತು. ಶಿಷ್ಯಪರಿಗ್ರಹವಾಗಿ ಮಠದ

ಆಡಳಿತಕ್ಕೆ ಸರಕಾರದ ಕಡೆಯಿಂದ ನೆರವನ್ನು ಒದಗಿಸಿದಮೇಲೆ ಮುಂದಿನ ನಿದಿಧ್ಯಾಸನವೆಂಬ ಸಾಧನವನ್ನು ಕೈಗೊಳ್ಳುವ ಅವಕಾಶವಾಯಿತು. ಈಗ ಅದಕ್ಕೆ ಬೇಕಾದ ತಪಶ್ಚರ್ಯೆಯನ್ನು ಕೈಗೊಂಡರು. ಸ್ವಾಮಿಗಳಿಗೆ ಬುದ್ಧಿಭ್ರಮಣೆ-ಯಾಗಿದೆಯೆಂಬ ಅಭಿಪ್ರಾಯದಲ್ಲೇ ಇದ್ದ ಅಧಿಕಾರಿಗಳಿಗೆ ಈ ನಿದಿಧ್ಯಾಸನದ ಪ್ರಕ್ರಿಯೆಯ ಅರಿವಿರದೆ ಇದೂ ಬುದ್ಧಿಭ್ರಮಣೆಯೆಂದೇ ಬಗೆದು ಅವರನ್ನು ಹೆಚ್ಚುಹೆಚ್ಚು ನಿರ್ಬಂಧದಲ್ಲಿಡತೊಡಗಿದರು. ಒಂದು ದೃಷ್ಟಿಯಿಂದ ಸ್ವಾಮಿಗಳ ಸಾಧನೆಗೆ ಇದು ಅನುಕೂಲವೇ ಆಯಿತೆನ್ನಿ!

# ೧೨. ಮತ್ತೆ ಸಂಚಾರ

ಹೀಗೆ ಏಳು ವರ್ಷಗಳು ಕಳೆದನಂತರ ಸ್ವಾಮಿಗಳು ತಮ್ಮ ಅಲೌಕಿಕ ಸ್ಥಿತಿಯಿಂದ ಹೊರಬಂದರು. ಕೈಗೊಂಡಿದ್ದ ಸಾಧನೆಯು ಒಂದು ಘಟ್ಟವನ್ನು ಮುಟ್ಟಿತೋ ಎನ್ನುವಂತೆ 'ಬಹಿರ್ಮುಖ'ರಾಗಿ ಸಾಮಾನ್ಯ ಸ್ಥಿತಿಯಲ್ಲೇ ಇರತೊಡಗಿದರು. ಬಂದವರೊಂದಿಗೆ ಒಂದೆರಡು ಮಾತನಾಡುವರು. ಆಗ ಅವರ ಮುಖದಲ್ಲಿ ಉಜ್ವಲವಾದ ತೇಜಸ್ಸು ಕಾಣಿಸುತ್ತಿತ್ತು. ಮುಖದ ಮೇಲೆ ಮಂದಹಾಸ ನಿರಂತರವಾಗಿ ಮಿನುಗುತ್ತಿತ್ತು. ಅವರ ನಡೆಯಲ್ಲಿ ನುಡಿಯಲ್ಲಿ ನೋಟದಲ್ಲಿ ಅಗಾಧವಾದ ಶಾಂತಿಯ ಅನುಭವವಿದ್ದಿತು. ನೋಡಿದೊಡನೆ 'ಇವರು ಸಿದ್ಧಪುರುಷರೇ' ಎಂದು ಯಾರಾದರೂ ಗುರುತಿಸುವುದು ಸಾಧ್ಯವಾಗುತ್ತಿತ್ತು. ಅವರೆದುರು ನಿಂತವರು ಅಪೂರ್ವವಾದ ಅದ್ಭುತವಾದ ಅನುಭವವನ್ನು ಪಡೆಯುತ್ತಿದ್ದರು. ಅದೊಂದು ಅಲೌಕಿಕವಾದ ಕಾಂತಿಯೇ ಮೈವೆತ್ತುಬಂದಂತೆ, ಸಮೃದ್ಧವಾದ ಶಾಂತಿಯೇ ಸ್ಫುಟಗೊಂಡು ನಿಂತಂತೆ ಕಾಣುತ್ತಿತ್ತು. ಹಿಂದೆ, ತಮ್ಮ ಗುರುಗಳ ಬಳಿ 'ಮುಕ್ತಿಯ ದಾರಿಯಲ್ಲಿ ನಡೆಯುವಂತೆ ಮಾಡಿ'' ('ಮುಕ್ತ ಧ್ವನಿ ಪಥಿಕಮಾತನುಷ್ವ') ಎಂದು ಪ್ರಾರ್ಥಿಸಿಕೊಂಡು ಸ್ತೋತ್ರವೊಂದನ್ನು ರಚಿಸಿದ್ದರು. ಈಗ ಆ ಪ್ರಾರ್ಥನೆ ಕೈಗೂಡಿತೋ ಎನ್ನುವಂತಿದ್ದರು.

ಶೃಂಗೇರಿಯ ಆಕರ್ಷಣೆಗಳಲ್ಲಿ ಮಠ, ಗುಡಿ, ಉತ್ಸವ ಇವು ಪ್ರಧಾನವಾದುವು; ಮಠದಲ್ಲಿ ಜಗದ್ಗುರುಗಳು, ಗುಡಿಯಲ್ಲಿ ಶಾರದೆ, ಉತ್ಸವದಲ್ಲಿ ವಿಜೃಂಭಣೆ. ಇವೆಲ್ಲ ನದಿಯ ಈಚೆಯ ದಂಡೆಯ ಮೇಲೆ; ಊರಿಗೆ ಒತ್ತಿಕೊಂಡಂತೆ. ನದಿಯ ಆಚೆಯ ದಡದಲ್ಲಿನ ನರಸಿಂಹವನದ ಹಿರಿಮೆ ಹಲವು ಭಕ್ತರ ಪಾಲಿಗೆ, ಯಾತ್ರಿಕರ ಪಾಲಿಗೆ ಅಷ್ಟಕ್ಕಷ್ಟೆ. ಹಿಂದಿನ ಸ್ವಾಮಿಗಳ ಸುಂದರ ಅಧಿಷ್ಠಾನವೊಂದೇನೋ ಕೆಲವರಿಗೆ ಆಕರ್ಷಕವಾಗಿಯೇ ಇದ್ದಿತು.

ನರಸಿಂಹವನದಲ್ಲಿ ಅಡಗಿರುವ, ಬುದ್ಧಿವಿಕಲ್ಪವೆಂಬ ವರ್ಣನೆಗೆ ತುತ್ತಾದ ಸ್ವಾಮಿಗಳ ಆಕರ್ಷಣೆ ಜನರಿಗೆ ಇರುವುದು ಹೇಗೆ? ಆದರೆ ಜೀವನ್ಮುಕ್ತರನ್ನು ಕಾಣಲು, ಈ ಸಿದ್ಧಪುರುಷರೊಂದಿಗೆ ಮಾತನಾಡಲು, ಈ ಅವಧೂತರ ಅನುಗ್ರಹವನ್ನು ಪಡೆದುಕೊಳ್ಳಲು ದೂರದೂರದೇಶಗಳಿಂದ ಭಕ್ತರೂ ಭಾವುಕರೂ ಉತ್ಸುಕರೂ ಬರತೊಡಗಿದರು. ಶೃಂಗೇರಿಯ ಪಾವಿತ್ರ್ಯವು ಇವರ ಸನ್ನಿಧಾನದಿಂದಾಗಿ ನೂರ್ಮಡಿ ಹಿಗ್ಗಿತು.

ಆದರೆ ಸ್ವಾಮಿಗಳಿಗೆ ಈ ಜನಸಂದಣಿ ಅಷ್ಟಾಗಿ ಹಿಡಿಸಲಿಲ್ಲ. ತಮ್ಮನ್ನು ನೋಡಲು ಭಕ್ತರು ಬರುವರೆಂಬುದು ಅವರಿಗೆ ಆತಂಕವೇ ಆಯಿತು. ಜನರು ತಮ್ಮ ದರ್ಶನಕ್ಕೆ ಕಾದಿದ್ದರೂ ಸ್ವಾಮಿಗಳು ಎಷ್ಟೋ ಸಾರಿ ಹೊರಗೆ ಬರುತ್ತಲೇ ಇರಲಿಲ್ಲ. ಆಗ ಒಂದು ಬಾರಿ ಸಮಯವನ್ನು ಸಾಧಿಸಿ ಕೃಷ್ಣಸ್ವಾಮಿ ಅಯ್ಯರು ಸ್ವಾಮಿಗಳನ್ನು ''ಸನ್ನಿಧಾನವನ್ನು ಕಾಣಲು, ಅವರ ಅನುಗ್ರಹವನ್ನು ಪಡೆಯಲು ಭಕ್ತರು ಕಾತುರರಾಗಿರುತ್ತಾರೆ. ಸನ್ನಿಧಾನ ಒಂದೆರಡು ನಿಮಿಷವಾದರೂ ಅವರಿಗೆ ದರ್ಶನಕೊಟ್ಟು, ಒಂದೆರಡು ಮಾತನಾಡಿ ಕಳುಹಿಸಿದರೆ ಅವರಿಗೆ ಎಷ್ಟೋ ಸಮಾಧಾನವಾಗುತ್ತದೆ. ಇಲ್ಲವಾದರೆ ನಿರಾಶೆಯಿಂದ ಹೋಗಬೇಕಾಗುತ್ತದೆ'' ಎಂದು ಬಿನ್ನವಿಸಿಕೊಂಡರು.

ಅದಕ್ಕೆ ಸ್ವಾಮಿಗಳು ''ನಿಮ್ಮ ಅಭಿಪ್ರಾಯ ಸರಿಯಲ್ಲ. ನಮ್ಮನ್ನು ನೋಡಲು, ನಮ್ಮೊಂದಿಗೆ ಮಾತನಾಡಲು ಬರುವವರಿಗೆ ಇರುವ ಆಸಕ್ತಿ ನಮಗಿಲ್ಲ. ನಮಗೆ ಇರುವ ಆಸಕ್ತಿ ಅವರಿಗಿಲ್ಲ. ಅವರು ಯಾವುದನ್ನು ಬಯಸುತ್ತಾರೋ ಅದನ್ನು ಸಲ್ಲಿಸುವ ಸಾಮರ್ಥ್ಯ ನಮಗೆಲ್ಲಿದೆ? ಅವರವರ ರೋಗವನ್ನೋ ಚಿಂತೆಯನ್ನೋ ಮತ್ತೊಂದನ್ನೋ ಪರಿಹರಿಸಬೇಕೆಂದು ತಾನೆ ಹಲವರು ಬರುವುದು? ನಾವೇನು ವೈದ್ಯರೇ? ಮಾಂತ್ರಿಕರೇ? ಆಚಾರ್ಯರು ಈ ಪೀಠವನ್ನು ಸ್ಥಾಪಿಸಿದ್ದು ಇದಕ್ಕಾಗಿಯೇ?'' ಎಂದು ಉತ್ತರಕೊಟ್ಟರು.

ಅಷ್ಟಕ್ಕೆ ಬಿಡದೆ ಅಯ್ಯರು ''ಆದರೆ ಕೆಲವರು ಆಧ್ಯಾತ್ಮಿಕ ಪ್ರಯೋಜನವನ್ನು ಬಯಸಿ ಬರುವವರಲ್ಲವೆ?'' ಎಂದು ಕೇಳಲು ಸ್ವಾಮಿಗಳು ''ಅಂಥವರಿಗೆ ಹೇಗೋ ನನ್ನಿಂದ ನೆರವು ಸಿಕ್ಕೇಸಿಗುತ್ತದೆ; ಎಷ್ಟೇ ಅಡ್ಡಿಯಿದ್ದರೂ ನನ್ನನ್ನು ಕಂಡೇ ಕಾಣುತ್ತಾರೆ'' ಎಂದು ಭರವಸೆ ಕೊಟ್ಟರು. ಒಡನೆಯೇ ನಸುನಗುತ್ತ, ''ಈಗ ನೀವು ಬಂದಿಲ್ಲವೇ, ಹಾಗೆ!'' ಎಂದು ಸೇರಿಸಿದರು.

ಸ್ವಾಮಿಗಳ ಆಗಿನ ಮನಃಸ್ಥಿತಿಯನ್ನು ಸೂಚಿಸುವ ಪ್ರಸಂಗವೊಂದನ್ನು ಇದೇ ಅಯ್ಯರು ಪ್ರಸ್ತಾಪಿಸಿದ್ದಾರೆ. ಒಂದು ಬಾರಿ ಅಯ್ಯರು ಸ್ವಾಮಿಗಳಿದ್ದ ಕೋಣೆಗೆ ಹೋದರು. ಸ್ವಾಮಿಗಳು ಒಬ್ಬರೇ ಸುಮ್ಮನೆ ಕುಳಿತುಕೊಂಡಿದ್ದರು. ಅಯ್ಯರು ಒಳಗೆ ಬಂದುದನ್ನು ಕಂಡು, ಕುಳಿತುಕೊಳ್ಳುವಂತೆ ಸನ್ನೆ ಮಾಡಿದರು. ಯಾವ ಮಾತನ್ನೂ ಆಡದೆ ಸುಮ್ಮನೆ ಕುಳಿತಿದ್ದರು. ಸುಮಾರು ಇಪ್ಪತ್ತು ನಿಮಿಷಗಳು ಕಳೆದುವು. ಕೋಣೆಯಲ್ಲಿ ಅಪೂರ್ವವಾದ ಶಾಂತಿ ಆವರಿಸಿದ್ದಿತು. ಆಗ ಸ್ವಾಮಿಗಳ ಮುಖದಲ್ಲಿ ಕಿರುನಗೆಯೊಂದು ಮೂಡಿದುದನ್ನು ಅಯ್ಯರು ಕಂಡರು. ಒಡನೆಯೇ ಸ್ವಾಮಿಗಳು ಅಯ್ಯರನ್ನು ಕುರಿತು, ''ಹೇಳಲೇ'' ಎಂದು ಕೇಳಿದರು.

ಅಯ್ಯರು ''ಸನ್ನಿಧಾನದ ಚಿತ್ತಕ್ಕೆ ಬಂದರೆ ಆಗಬಹುದು'' ಎನ್ನಲು ಸ್ವಾಮಿಗಳು ಹೀಗೆ ವಿವರಿಸಿದರು: ''ಮನಸ್ಸಿನಲ್ಲಿ ಶಾಂತಿಯಿದ್ದಿತು. ಆಗ ಶಾಂತಿಯನ್ನು ಕದಡುವಂತೆ ಒಂದು ಆಲೋಚನೆ ಬಂದಿತು. ನೀವು ಇಲ್ಲೇ ಹತ್ತಿರ ಕುಳಿತಿರುವುದು ಗಮನಕ್ಕೆ ಬಂದು, ನಾನು ಮಾತನಾಡಬೇಕೆಂದು ನೀವು ಕಾಯುತ್ತಿದ್ದೀರಿ ಎನಿಸಿತು. ನಿಮ್ಮ ನಿರೀಕ್ಷೆಯನ್ನು ಸಫಲಗೊಳಿಸಬೇಕಾದರೆ ನಾನು ಮಾತನಾಡಬೇಕೆಂಬ ಇನ್ನೊಂದು ಆಲೋಚನೆ ಬಂದಿತು. ಅದು ಬಂದೊಡನೆ ಮಾತನಾಡುವುದು ಎನ್ನುವುದು ಕ್ರಿಯಾಪದ, ಅದಕ್ಕೆ ಏನಾದರೂ ಕರ್ಮವಿರಬೇಕು ಎನ್ನುವುದು ನೆನಪಿಗೆ ಬಂದಿತು. ಮಾತನಾಡಲು ಏನಾದರೊಂದು ವಿಷಯವನ್ನು ಹುಡುಕಬೇಕು ಎನಿಸಿತು. ಒಡನೆಯೇ, ವಿಷಯಗಳೆಲ್ಲ ಇಬ್ಬಗೆಯಾದುವು — ದಿಟವಾದುದು, ಸಟೆಯಾದುದು, ಎಂದು ನೆನಪಿಗೆ ಬಂದಿತು. ದಿಟವಾಗಿರುವುದು ಒಂದೇ, ಅದು ಬ್ರಹ್ಮ, ಅದೇನು ಮಾತಿಗೆ ನಿಲುಕುವುದಿಲ್ಲ ಎಂದು ವೇದಾಂತ ಹೇಳುವುದನ್ನು ನೆನೆಸಿಕೊಂಡೆ. ಎಂದಮೇಲೆ ಮಾತನಾಡಲು ಒಂದೇ ವಿಷಯ ಉಳಿದಿರುವುದು, ಸಟೆಯಾದ ಈ ಪ್ರಪಂಚ; ಇದು ನಾಮರೂಪಾತ್ಮಕವಾಗಿ, ಇದೂ ಅನಿರ್ವಚನೀಯವೇ ಎಂದು ವೇದಾಂತ ಹೇಳಿರುವುದು ನೆನಪಿಗೆ ಬಂದಿತು. ಆದುದರಿಂದ ಅದನ್ನು ಕುರಿತು ಮಾತನಾಡುವ ಹಾಗಿಲ್ಲ, ಎಂದು ಎನಿಸಿತು. ಮೂರನೆಯದೇನೂ ಉಳಿದಿಲ್ಲವಲ್ಲ! ಆದುದರಿಂದ ಯಾವ ವಿಷಯವನ್ನೂ ಕುರಿತು ಮಾತನಾಡುವ ಹಾಗಿಲ್ಲ ಎಂಬ ಯೋಚನೆ ಬಂದಿತು. ಎಂದರೆ ಮೊದಲಿನ ಸ್ಥಿತಿಗೇ ಬಂದೆನಲ್ಲ?

ಇಷ್ಟೊಂದು ಆಲೋಚನೆಗಳನ್ನು ಕಟ್ಟಿಕೊಂಡುದೇಕೆ? ಎಂದುಕೊಂಡೆ. ಹೊರೆಯವನು ಸುಂಕದ ಕಟ್ಟೆಯನ್ನು ಮುಟ್ಟಬಾರದೆಂದು ತಪ್ಪಿಸಿಕೊಂಡು ಇರುಳೆಲ್ಲ ಎಲ್ಲೆಲ್ಲೋ ಅಲೆದಾಡಿ, ಬೆಳಗು ಹರಿಯುತ್ತಲೇ ಎದುರಿಗೇ ಸುಂಕದ ಕಟ್ಟೆಯನ್ನು ಕಂಡ ಕಥೆ ನೆನಪಿಗೆ ಬಂದಿತು. ಆಗ ನನ್ನ ಬೆಪ್ಪುತನಕ್ಕೆ, ಇಷ್ಟೆಲ್ಲ ಆಲೋಚನೆಗಳನ್ನು ಬರಿದೆ ವೆಚ್ಚ ಮಾಡಿದುದಕ್ಕೆ ನಗುಬಂದಿತು.''

ಶೃಂಗೇರಿಯಲ್ಲೇ ಇದ್ದರೆ ತಮಗೆ ಏಕಾಂತ ದೊರೆಯದೆಂದು ಬಗೆದು, ಬೆಂಗಳೂರಿಗೋ, ಕಾಲಡಿಗೋ ಹೋಗಿ ಕೆಲವು ಕಾಲ ಅಲ್ಲಿ ನೆಲೆಸುವುದೆಂದು ಭಾವಿಸಿದರು. ಆ ವೇಳೆಗೆ ಸರಿಯಾಗಿ, ದಕ್ಷಿಣದೇಶದ ಹಲವಾರು ಕಡೆಗಳಿಂದ ಈಗ ಬಹಿರ್ಮುಖವಾಗಿರುವ ಸ್ವಾಮಿಗಳು ಸಂಚಾರ ಹೊರಟುಬರಬೇಕೆಂಬ ಕರೆ ಬರತೊಡಗಿತು. ಸ್ವಾಮಿಗಳು ೧೯೩೮ರಲ್ಲಿ ಎರಡನೆಯ ಬಾರಿ ಶೃಂಗೇರಿಯಿಂದ ಹೊರಹೊರಟರು. ಆದರೆ ಮಠದ ಯಾವ ವೈಭವವನ್ನೂ ಆಡಂಬರವನ್ನೂ ತಮ್ಮೊಂದಿಗೆ ಒಯ್ಯಲು ನಿರಾಕರಿಸಿಬಿಟ್ಟರು; ತಾನೀಗ ಜಗದ್ಗುರುವಲ್ಲವೆಂದೂ, ಮಠದ ಕಡೆಯಿಂದ ದಿಗ್ವಿಜಯಕ್ಕೆಂದು ಹೊರಡುತ್ತಿಲ್ಲವೆಂದೂ ಸ್ಪಷ್ಟಪಡಿಸಿ, ಮಿತಪರಿವಾರದೊಂದಿಗೆ ಖಾಸಗಿಯಾಗಿ ಬೆಂಗಳೂರಿಗೆ ಬಂದರು. ಬೆಂಗಳೂರಿನ ಶಂಕರಮಠದಲ್ಲಿ ಹಿಂದಿನ ಸ್ವಾಮಿಗಳು ೧೯೦೭ರಲ್ಲಿ ಶಂಕರಾಚಾರ್ಯರ ಆಲಯವೊಂದನ್ನು ಕಟ್ಟಿಸಿ, ಅದರಲ್ಲಿ ಮೂರ್ತಿಪ್ರತಿಷ್ಠೆಯನ್ನು ಮಾಡಿದರು. ಈಗ ಅದರ ಎದುರಿಗೆ ಶಾರದೆಗೆಂದು ಇನ್ನೊಂದು ಆಲಯವನ್ನು ಕಟ್ಟಿಸಿದ್ದರು. ಸ್ವಾಮಿಗಳು ಬೆಂಗಳೂರಿಗೆ ಬಂದಾಗ ಈ ಆಲಯದಲ್ಲಿ ಮೂರ್ತಿಪ್ರತಿಷ್ಠೆಯನ್ನೂ ಕುಂಭಾಭಿಷೇಕವನ್ನೂ ನೆರವೇರಿಸಿದರು. ಬೆಂಗಳೂರಿನಲ್ಲೇ ಎಂಟು ತಿಂಗಳ ಕಾಲ ತಂಗಿದ್ದರು.

ಬೆಂಗಳೂರನ್ನು ಬಿಡುವ ಸಂದರ್ಭದಲ್ಲಿ ನಡೆದ ಸ್ವಾರಸ್ಯವಾದ ಒಂದು ಸಂಭಾಷಣೆ ಅಲ್ಲಿದ್ದವರ ನೆನಪಿನಲ್ಲಿದೆ. ಸ್ವಾಮಿಗಳು ಬೆಂಗಳೂರಿನಿಂದ ಹೊರಡುವ ದಿನ ಬೆಳಗ್ಗೆ ಅವರಿಂದ ಫಲಮಂತ್ರಾಕ್ಷತೆಗಳನ್ನು ಪಡೆಯಲು ಹೋಗಿದ್ದ ನೂರಾರು ಜನರಲ್ಲಿ ಒಬ್ಬಾತ, ಅವರ ಬಳಿಗೆ ಬಂದೊಡನೆ ಬಿಕ್ಕಿ ಬಿಕ್ಕಿ ಅಳತೊಡಗಿದನು. ಸ್ವಾಮಿಗಳು ಏನಾಯಿತೆಂದು ಕೇಳಲು, ಆತ ''ಗುರುಗಳ ದರ್ಶನವನ್ನು ಆರೇಳು ತಿಂಗಳುಗಳಿಂದ ಪಡೆದು ಆನಂದಿಸುತ್ತಿದ್ದೆ. ಇನ್ನು ಮುಂದೆ ಆ ದರ್ಶನವೆಲ್ಲಿ?'' ಎಂದು ಹೇಳಿದನು.

ಸ್ವಾಮಿಗಳು ನಸುನಕ್ಕು "ನಿಮಗೆ ಅಷ್ಟು ಆನಂದವನ್ನು ಕೊಟ್ಟ ಅಂಥ ಗುರುಗಳು ಯಾರು?" ಎಂದು ಕೇಳಿದರು. ಆತ "ತಾವೇ, ಮಹಾಸ್ವಾಮಿ!" ಎನ್ನಲು, ಸ್ವಾಮಿಗಳು, "ಹಾಗಾದರೆ ನಾನು ಗುರುವಾಗಿರಲು ಯೋಗ್ಯನಲ್ಲ. ಆರೇಳು ತಿಂಗಳುಗಳಿಂದ ನಾನು ಕಲಿಸಿದ್ದು ಇಷ್ಟೇ ಆದರೆ ನನ್ನಂಥವನಿಂದ ಉಪಯೋಗವಿಲ್ಲ! ನೀವು ನನ್ನನ್ನು ಕಾಣದಿರುವುದೇ ಒಳ್ಳೆಯದು" ಎಂದರು. ಆತ ಅವಾಕ್ಕಾಗಿ ಹಾಗೇಕೆಂದು ಕೇಳಲು, ಸ್ವಾಮಿಗಳು "ನನ್ನ ದೇಹವನ್ನೇ ಗುರುವೆಂದು ಭಾವಿಸಿದಿರಾ? ನಿಜವಾದ ಗುರು ಎಂದರೆ ಆತ್ಮವೇ. ಅದಕ್ಕೆ ದೇಶ-ಕಾಲಗಳು, ಹೋಗುವುದು ಬರುವುದು ಯಾವುದರ ಸಂಬಂಧವೂ ಇಲ್ಲವಷ್ಟೆ? ನಾನು ನಿಮಗೆ ಈ ದೇಹವೇ ಗುರು ಎಂದು ಕಲಿಸಿದ್ದರೆ ನಾನು ಸರಿಯಾದ ಗುರು ಅಲ್ಲ, ಅಲ್ಲವೆ? ನನ್ನಿಂದ ಉಪಯೋಗವೇನು?" ಎಂದು ಸಮಾಧಾನ ಹೇಳಿದರು. ಮುಂದುವರಿದು ಅವರು, "ಗುರುವಿನ ಕೆಲಸ ಇನ್ನು ಗುರುವಿನ ಅಗತ್ಯ ಶಿಷ್ಯನಿಗಿಲ್ಲದಿರುವಂತೆ ಮಾಡುವುದು. ತನ್ನನ್ನೇ ಎಂದೆಂದಿಗೂ ಶಿಷ್ಯ ಅವಲಂಬಿಸಿರಲಿ ಎಂದರೆ ಅವನು ದಿಟವಾದ ಗುರುವಲ್ಲ" ಎಂದು ವಿವರಿಸಿದರು.

ಬೆಂಗಳೂರಲ್ಲೂ ಜನ ಬಂದು ನೆರೆಯತೊಡಗಿದ್ದರಿಂದ ಸ್ವಾಮಿಗಳಿಗೆ ಬೇಕಾದ ಏಕಾಂತ ದೊರೆಯಲಿಲ್ಲ. ಮುಂದೆ ನಂಜನಗೂಡಿಗೆ ಹೋಗಿ ಅಲ್ಲಿ ಕೆಲವು ದಿನಗಳಿದ್ದು ಕೊಯಮತ್ತೂರು ಮಾರ್ಗವಾಗಿ, ನಡುವೆ ಎಲ್ಲೂ ತಂಗದೆ, ನೇರವಾಗಿ ಕಾಲಡಿಗೆ ಹೋದರು. ಕಾಲಡಿಯಲ್ಲಿ ಅವರ ಸುಖವಸತಿಗೆ ಎಲ್ಲ ಅನುಕೂಲಗಳನ್ನು ತಿರುವಾಂಕೂರು-ಮಹಾರಾಜರೂ, ಸಂಸ್ಥಾನದ ಮಹಾಸಚಿವರಾಗಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರೂ ಮಾಡಿಕೊಟ್ಟರು. ರಾಮಸ್ವಾಮಿ ಅಯ್ಯರಂತೂ ಸ್ವಾಮಿಗಳನ್ನು ತುಂಬ ಭಕ್ತಿಯಿಂದ ಕಂಡುಕೊಂಡರು. ಕೆಲವು ತಿಂಗಳುಗಳು ಏಕಾಂತದಲ್ಲಿ ತಪಶ್ಚರ್ಯೆ ನಡೆಸುವುದಾಯಿತು. ಆದರೆ ಅವರ ಮಹಿಮೆ ಬಾಯಿಂದ ಬಾಯಿಗೆ ಹರಡಿ, ಸುತ್ತಮುತ್ತಲಿಂದ ಜನರು ದರ್ಶನಕ್ಕೆಂದು ಬಂದು ನೆರೆಯಲಾರಂಭಿಸಿದರು. ಸ್ವಾಮಿಗಳಿಗೆ ಮತ್ತೆ ಅಲ್ಲಿಂದ ಕಾಲು ತೆಗೆಯಬೇಕೆಂಬ ಮನಸ್ಸಾಯಿತು.

ಈ ಬಾರಿ ಕಾಲಡಿಯಲ್ಲಿ ಸ್ವಾಮಿಗಳು ಒಟ್ಟು ಹತ್ತು ತಿಂಗಳುಗಳಿದ್ದರು. ಅವರ ವಸತಿಗಾಗಿ ಏರ್ಪಟ್ಟಿದ್ದ ಶಿಬಿರದ ಮೇಲ್ವಿಚಾರಣೆಯನ್ನು

ನೋಡಿಕೊಳ್ಳಲು, ಈಗ ಮಠದಿಂದ ನಿವೃತ್ತರಾಗಿ ತಮ್ಮ ಹಳ್ಳಿಯಲ್ಲಿ ಇರುತ್ತಿದ್ದ ಶ್ರೀಕಂಠಶಾಸ್ತ್ರಿಗಳೇ ಬಂದಿದ್ದರು. ಕಾಲಡಿಯಲ್ಲಿ ಇರುವಷ್ಟು ಕಾಲವೂ ಸ್ವಾಮಿಗಳು 'ಬಹಿರ್ಮುಖ'ವಾಗಿಯೇ ಇದ್ದರು. ಈ ಅವಧಿಯಲ್ಲಿ 'ವಿವೇಕಚೂಡಾಮಣಿ'ಗೆ ಸಂಸ್ಕೃತದಲ್ಲಿ ವ್ಯಾಖ್ಯಾನವೊಂದನ್ನು ಬರೆಯ ತೊಡಗಿದರು. 'ವಿವೇಕಚೂಡಾಮಣಿ' ಶಂಕರಾಚಾರ್ಯರದ್ದೆಂದು ಹೇಳುವ ವೇದಾಂತ ಪ್ರಕರಣಗ್ರಂಥ; ಅದ್ವೈತದರ್ಶನದಲ್ಲಿ ಜನಪ್ರಿಯವಾದುದು. ಇದಕ್ಕೆ ಹಿಂದಿನ ಸ್ವಾಮಿಗಳೇ ವ್ಯಾಖ್ಯಾನವೊಂದನ್ನು ಬರೆಯಬೇಕೆಂದು ಸಂಕಲ್ಪಿಸಿದ್ದರಂತೆ; ಕಾರಣಾಂತರಗಳಿಂದ ಅದು ಆಗಲಿಲ್ಲ, ಈ ಕೆಲಸವನ್ನು ಅವರ ಉತ್ತರಾಧಿಕಾರಿಗಳು ಕೈಗೊಳ್ಳಬೇಕೆಂದು ಶ್ರೀಕಂಠಶಾಸ್ತ್ರಿಗಳ ಅಪೇಕ್ಷೆ. ಆದರೆ ಸ್ವಾಮಿಗಳಿಗೆ ಗ್ರಂಥರಚನೆಯಲ್ಲಿ ಅಷ್ಟೇನೂ ಆಸಕ್ತಿಯಿರದು. ಆದರೂ ಈ ಪ್ರಕರಣಗ್ರಂಥಕ್ಕೆ ಸರಳವಾದ ವ್ಯಾಖ್ಯಾನವೊಂದನ್ನು ಆರಂಭಿಸಿದರು. ಕಾಲಡಿಯಿಂದ ಶೃಂಗೇರಿಗೆ ಹಿಂದಿರುಗಿದಮೇಲೂ ಬರವಣಿಗೆ ಮುಂದುವರಿಯಿತು; ಆದರೆ ಮುಗಿಯಲಿಲ್ಲ. ಈ ಗ್ರಂಥದ ವಿಚಾರ ಮುಂದೆ ಬರುತ್ತದೆ.

ಶೃಂಗೇರಿಗೆ ೧೯೪೦ರ ಸುಮಾರಿಗೆ ಹಿಂದಿರುಗಿದರು. ಕೆಲವು ಕಾಲ ಶಿಷ್ಯರಿಗೆ ವೇದಾಂತಪಾಠ ಹೇಳುತ್ತಿದ್ದರು. ಮಠದ ಕಡೆಯಿಂದ 'ಆಸ್ತಿಕ- ಮತೋಜ್ಜೀವಿನೀ' ಎಂಬ ಪತ್ರಿಕೆಯು ಹೊರಡುತ್ತಿದ್ದು ಅದರಲ್ಲಿ ಸ್ವಾಮಿಗಳ ಲೇಖನಗಳು ಪ್ರಕಟವಾಗುತ್ತಿದ್ದುವು. ಆದರೆ ಬರುಬರುತ್ತ ಈ ಎಲ್ಲ ಹವ್ಯಾಸಗಳನ್ನೂ ಬದಿಗೊತ್ತಿ ಮತ್ತೆ ಹಕ್ಕಿಯು ತನ್ನ ಗೂಡನ್ನು ಸೇರುವಂತೆ ತಮ್ಮ ಏಕಾಂತವಾಸಕ್ಕೆ ಮರಳಿದರು. ಹೊರಲೋಕದೊಡನೆ ಸಂಬಂಧವು ಪೂರಾ ತಪ್ಪಿದಂತೆ ತೋರಿತು. ಹೊರಗೆ ಕಾಣಿಸಿಕೊಳ್ಳುವುದೇ ದುರ್ಲಭವಾಯಿತು. ಹೀಗಿದ್ದರೂ ಅವರ ಮಹತಿಯು ದಿಗಂತವಿಶ್ರುತವಾಯಿತು. ಸ್ವಾಮಿಗಳು ಬಹಿರ್ಮುಖರಾಗಿದ್ದಾರೆಂದು ತಿಳಿದರೆ ಸಾಕು, ನಾಲ್ಕೂ ಕಡೆಯಿಂದ ನೂರಾರು ಜನರು ಶೃಂಗೇರಿಯನ್ನು ಮುತ್ತಿಬಿಡುತ್ತಿದ್ದರು. ಅವರ ದರ್ಶನವನ್ನು ಪಡೆಯಲು, ಇದ್ದ ಕೆಲಸಗಳನ್ನೆಲ್ಲ ಬಿಟ್ಟು ಹತ್ತಾರು ದಿನಗಳೂ ನಾಲ್ಕಾರು ವಾರಗಳೂ ಕಾದು ಕೂತಿರುತ್ತಿದ್ದವರು ಹಲವರು. ಅವರನ್ನು ದೂರದಿಂದಾದರೂ ನೋಡಿದರೆ ಸಾಕು, ಒಮ್ಮೆಯಾದರೂ ಅವರನ್ನು ಕಂಡರೆ ಸಾಕು, ಅವರ ಮಂದಹಾಸದ ಭಾಗ್ಯವನ್ನು

ಪಡೆದರಂತೂ ಬದುಕಿದ್ದು ಸಾರ್ಥಕವಾಯಿತು, ಅವರ ಬಾಯಿಂದ ಒಂದೆರಡು ಮಾತುಗಳನ್ನಾದರೂ ಕೇಳಿದರೆ ಜನ್ಮ ಪವಿತ್ರವಾಯಿತು -ಹೀಗೆಂದುಕೊಳ್ಳುವವರು ಹೆಚ್ಚಾದರು.

ಬಹಿರ್ಮುಖವಾಗಿದ್ದಾಗಲೂ ಅವರೇನು ವಾಡಿಕೆಯ ಪೂಜೆ ಮಾಡುತ್ತಿರಲಿಲ್ಲ, ಪ್ರವಚನ ಮಾಡುತ್ತಿರಲಿಲ್ಲ; ಜನರೊಂದಿಗೆ ಮಾತನಾಡುತ್ತಿದ್ದುದೂ ತುಂಬ ವಿರಳವೇ. ದರ್ಶನಕ್ಕೆಂದು ಬಂದವರಿಗೆ ತಪ್ಪದೆ ದೊರಕುತ್ತಿದ್ದುದು ಅವರ ಕಿರುನಗೆ; ಒಮ್ಮೊಮ್ಮೆ ತಲೆತೂಗುವರು; ಪರಿಚಿತರಾದರೆ ಲಘುವಾಗಿ ಕುಶಲವನ್ನು ಕೇಳುವರು. ಎಲ್ಲರನ್ನೂ ಅವರು ಕಾಣುತ್ತಿದ್ದ ಬಗೆ ಒಂದೇ; ಬಡವರು, ಧನಿಕರು, ಮಠದ ಶಿಷ್ಯರು, ಇತರರು, ಪಂಡಿತರು, ಪಾಮರರು ಎನ್ನುವ ಯಾವ ಭೇದವನ್ನೂ ಎಣಿಸುತ್ತಿರಲಿಲ್ಲ.

# ೧೩. ನಿರ್ಯಾಣ

ಸ್ವಾಮಿಗಳಿಗೆ ೧೯೫೨ರ ಅಕ್ಟೋಬರ್ ತಿಂಗಳಿನಲ್ಲಿ (ನಂದನ ಸಂವತ್ಸರ ಆಶ್ವಯುಜ ಬಹುಳ ಏಕಾದಶಿ) ಅರವತ್ತು ವರ್ಷಗಳು ತುಂಬಿದುವು. ಆ ಸಮಯದಲ್ಲಿ ಅವರ ಭಕ್ತರೂ, ಮಠದ ಶಿಷ್ಯರೂ, ಅಭಿಮಾನಿಗಳೂ, ಅವರ ಅನುಗ್ರಹವನ್ನು ಪಡೆದವರೂ ಎಲ್ಲರೂ ಸೇರಿ ಅವರಿಗೆ ಷಷ್ಠಿಪೂರ್ತಿ ಶಾಂತಿಯನ್ನು ವೈಭವದಿಂದ ನೆರವೇರಿಸಬೇಕೆಂದು ಬಯಸಿದರು. ಸ್ವಾಮಿಗಳನ್ನು ಕೇಳದೆ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡರು; ಹಣವನ್ನು ಕೂಡಿಸಿದರು. ಸಂದರ್ಭ ಹತ್ತಿರ ಬಂದು ಇದನ್ನು ಸ್ವಾಮಿಗಳೆದುರು ಪ್ರಸ್ತಾಪ ಮಾಡಿದಾಗ, ಸ್ವಾಮಿಗಳು ಇವೆಲ್ಲ ಬೇಡವೆಂದರು. ''ಸಂನ್ಯಾಸಿಯ ದೇಹಕ್ಕೆ ಯಾವ ಶಾಂತಿಯೂ ಬೇಕಾಗಿಲ್ಲ. ಅವನಿಗೆ ಹುಟ್ಟುಹಬ್ಬ ಮಾಡುವುದೂ ಸರಿಯಾದುದಲ್ಲ'' ಎಂದು ಹೇಳಿ ಅವರ ಮನದಾಶೆಯನ್ನು ಗಾಳಿಗೆ ಅಟ್ಟಿಬಿಟ್ಟರು.

ಸಂನ್ಯಾಸಿಯೆಂದರೆ ದೇಹಕ್ಕೆ ಸಂಬಂಧಪಟ್ಟ ಸಂಸ್ಕಾರಗಳನ್ನೆಲ್ಲ ಬಿಟ್ಟವನು. ಸಂನ್ಯಾಸಿಯ ವಯೋಮಾನವನ್ನು ಎಣಿಸುವುದು ಹುಟ್ಟಿನಿಂದ ಅಲ್ಲ, ಆಶ್ರಮ ಸ್ವೀಕಾರದ ಗಳಿಗೆಯಿಂದ. ಆದುದರಿಂದ ಸಂನ್ಯಾಸಿಯ ಹುಟ್ಟುಹಬ್ಬವೆಂದರೆ ಅರ್ಥವಿಲ್ಲದ್ದು. ಮಠಾಧಿಪತಿಯಾದ ಮಾತ್ರಕ್ಕೆ ಸಂನ್ಯಾಸಧರ್ಮ ಹೋಗಿಬಿಡಬೇಕೆ? ಭಕ್ತರು ಹಲವು ವೇಳೆ ಯುಕ್ತಾಯುಕ್ತವಿವೇಚನೆಯಿಲ್ಲದೆ, ತಮ್ಮ ಉತ್ಸಾಹದ ಭರದಲ್ಲಿ ಸ್ವಾಮಿಗಳನ್ನು ಗೊಂಬೆಯಂತೆ ಆಡಿಸಬೇಕೆಂದು ಬಯಸುವುದುಂಟು. ಆದರೆ ಸ್ವಾಮಿಗಳಿಗೂ ಯುಕ್ತಾಯುಕ್ತವಿವೇಚನೆಯಿರದೆ ಅವರ ಆಲೋಚನೆಗಳಿಗೆಲ್ಲ ಹ್ಞೂಗುಟ್ಟುವುದೆ? ತಾನು ಮೊದಲು ಸಂನ್ಯಾಸಿ, ಅನಂತರ ಮಠಾಧಿಪತಿಯೆನ್ನುವುದನ್ನು ಮರೆಯಬಹುದೆ? ಮಠಾಧಿಪತಿಯೆನಿಸಿಕೊಂಡ ಮಾತ್ರಕ್ಕೆ ಆಡಂಬರ ಇರಬೇಕು, ವೈಭವ ಇರಬೇಕು,

ಅರಸನಿಗೆ ಸಲ್ಲುವ ಮರ್ಯಾದೆಯನ್ನೆಲ್ಲ ಪಡೆದುಕೊಳ್ಳಬೇಕು, ಗೃಹಸ್ಥರಂತೆ ವ್ಯವಹಾರಗಳನ್ನು ಕೈಗೊಳ್ಳಬೇಕು ಎಂದು ಶಾಸ್ತ್ರ ಹೇಳಿದೆಯೆ?

ಸ್ವಾಮಿಗಳೇನೋ ಈ ವಿಷಯವನ್ನು ಪ್ರಸ್ತಾಪಿಸಿದವರ ಮುಂದೆ ಖಂಡಿತವಾಗಿ ಬೇಡವೆಂದು ಹೇಳಿ ಎದ್ದು ಹೊರಟುಹೋದರು. ಆದರೆ ಭಕ್ತರು ಬಿಡಬೇಕಲ್ಲ? ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ, ಹಣವನ್ನು ಕೂಡಿಸಿದ್ದಾರೆ, ಮಠದ ಅಧಿಕಾರಿಗಳನ್ನು ಒಪ್ಪಿಸಿದ್ದಾರೆ; ಈಗ ತಾವು ಮಾಡಹೊರಟದ್ದು ಆಗದೆಂದರೆ ಮುಖಭಂಗವಲ್ಲವೆ? ಸ್ವಾಮಿಗಳ ಷಷ್ಠಿಪೂರ್ತಿಯೆಂಬ ಸಂದರ್ಭದಲ್ಲಿ ಅದರ ಅಂಗವಾಗಿ ಅತಿರುದ್ರಸ್ವಾಹಾಕಾರ ಮಹಾಯಾಗವನ್ನೂ ಸಹಸ್ರಚಂಡಿಹೋಮವನ್ನೂ ನಡೆಸಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ತಮ್ಮ ಷಷ್ಠಿಪೂರ್ತಿ-ಉತ್ಸವವನ್ನು ಸ್ವಾಮಿಗಳು ನಿರಾಕರಿಸಿಬಿಟ್ಟಮೇಲೆ ಈ ಯಾಗಹೋಮಗಳನ್ನಾದರೂ ನಡೆಸೋಣವೆಂದು ಅವನ್ನು ಮುಂದೆಮಾಡಿಕೊಂಡು ಮತ್ತೆ ಸ್ವಾಮಿಗಳ ಮುಂದೆ ಬಂದರು. ಸ್ವಾಮಿಗಳು ಅವರ ಮಾತನ್ನು ಸಾವಧಾನವಾಗಿ ಕೇಳಿ ''ಈ ಯಾಗ, ಹೋಮಗಳು ಲೋಕಕಲ್ಯಾಣಕ್ಕಾಗಿ ನಡೆಯಬೇಕಾದುವು. ಅವು ನಡೆಯಲಿ, ಅವಕ್ಕೆ ನನ್ನದೇನು ಅಡ್ಡಿಯಿಲ್ಲ. ಆದರೆ ಷಷ್ಠಿಪೂರ್ತಿಗೂ ಅವಕ್ಕೂ ಯಾವ ಸಂಬಂಧವೂ ಇರಬಾರದು. ನಾನು ಆ ಯಾಗ-ಹೋಮಗಳು ನಡೆಯುವಾಗ ಅಲ್ಲಿ ಬರಬೇಕೆಂದು ನಿರೀಕ್ಷಿಸಲೂ ಬಾರದು'' ಎಂದು ಸ್ಪಷ್ಟಪಡಿಸಿದರು.

ಅತಿರುದ್ರಮಂತ್ರಗಳು ಯಜುರ್ವೇದದ ತೈತ್ತಿರೀಯಶಾಖೆಗೆ ಸೇರಿದವು. ಅವಕ್ಕೆ 'ಪಾಪಕ್ಷಯಾರ್ಥಂ', 'ವ್ಯಾಧಿವಿಮೋಚನಾರ್ಥಂ', 'ಶ್ರೀಕಾಮಃ ಶಾಂತಿಕಾಮಃ ಆಯುಷ್ಕಾಮಃ ಆರೋಗ್ಯಕಾಮಃ ಕುರ್ಯಾದೇತಾನ್ ಸರ್ವಮಾಪ್ನೋತಿ' ಎಂಬ ವರ್ಣನೆಗಳಿವೆ. ಮಾರ್ಕಂಡೇಯ ಪುರಾಣದ ಸಪ್ತಶತಿಯ ಪುರಶ್ಚರಣವನ್ನೊಳಗೊಂಡ ಸಹಸ್ರಚಂಡಿಕಾ ಹೋಮವು ಕ್ಷಾಮ, ದುರ್ಭಿಕ್ಷಗಳ ಪರಿಹಾರಕ್ಕೆಂದಾದರೂ, ಅದರಲ್ಲೂ ಧನ-ಧಾನ್ಯ-ಆಯುಸ್ಸು-ಆರೋಗ್ಯ ಮೊದಲಾದ ಬಯಕೆಗಳೇ ಇವೆ. ಸರ್ವಸಂಗಪರಿತ್ಯಾಗ ಮಾಡಿ, ಇಂಥ ಕಾಮನೆಗಳನ್ನೆಲ್ಲ ಬಿಟ್ಟ ಸಂನ್ಯಾಸಿಗಳನ್ನು ಈ ಬಗೆಯ

ಕಾಮ್ಯಕರ್ಮಗಳ ಸುಳಿಯಲ್ಲಿ ಸಿಲುಕಿಸಬಹುದೆ? ಅದೂ ಜೀವನ್ಮುಕ್ತರಂತೆ ಇರುವವರನ್ನು ಈ ಗೊಂದಲಕ್ಕೆ ಈಡುಮಾಡಬಹುದೆ?

ಈ ಯಾಗ ಮತ್ತು ಹೋಮದ ಕಾರ್ಯಕ್ರಮಗಳು ಶೃಂಗೇರಿಯಲ್ಲಿ ತುಂಬ ವಿಜೃಂಭಣೆಯಿಂದ, ಅವರ ಜನ್ಮದಿನ ಕಳೆದು ಬಹುಕಾಲದ ಮೇಲೆ, ೧೯೫೪ರ ಏಪ್ರಿಲ್ ಎರಡನೆಯ ದಿನದಿಂದ ಒಂಭತ್ತನೆಯ ದಿನದವರೆಗೆ ನಡೆದುವು. ಜನರು ಹೇಗೂ ಉತ್ಸವಪ್ರಿಯರಷ್ಟೆ? ಹೊರಗಿನಿಂದ ಲಕ್ಷಾಂತರ ಜನರು ಬಂದು ನೆರೆದಿದ್ದರು. ಆದರೆ ಈ ಸಮಯದಲ್ಲಿ ಸ್ವಾಮಿಗಳು ಕೋಣೆಯಿಂದ ಹೊರಗೇ ಬರದೆ, ಅಂತರ್ಮುಖರಾಗಿಯೇ ಇದ್ದುಬಿಟ್ಟರು. ಅವರ ದರ್ಶನವನ್ನು ಪಡೆಯಲೆಂದೇ ಅಸಾಧ್ಯ ಜನಸಂದಣಿ ಶೃಂಗೇರಿಯಲ್ಲಿ ನೆರಿದಿದ್ದಿತು. ಅವರು ಮಾತ್ರ ಕಾಣಿಸಿಕೊಳ್ಳಲಿಲ್ಲ!

ಯಾರೋ ಕಾರಣವನ್ನು ಕೇಳಿದಾಗ ಸ್ವಾಮಿಗಳು,''ಯಾಗವು ದೇವತಾಕಾರ್ಯ, ಶ್ರದ್ಧೆಯಿಂದ ಮಾಡಬೇಕಾದುದು. ನಮ್ಮನ್ನು ನೋಡುವ ಬಯಕೆ ಜನಗಳಲ್ಲಿ ಉಂಟಾದರೆ ಅವರ ಶ್ರದ್ಧೆಗೆ ಅಡ್ಡಿಬರುತ್ತದೆ. ಅಧಿಕಾರಿಗಳಿಂದ ಭಕ್ತರಿಗೆ ತೊಂದರೆಯಾಗಬಹುದು. ಅದು ಮಾತ್ರವಲ್ಲದೆ, ಬಂದವರೊಡನೆ ನಾವು ಮಾತನಾಡಬೇಕಾಗುತ್ತದೆ. ಇಲ್ಲವಾದರೆ ಅವರಿಗೆ ಅಸಮಾಧಾನ. ಅವರು ನಮ್ಮನ್ನು ನೋಡಬರುವುದು ಯಾವುದೋ ರೋಗದ ನಿವಾರಣೆಗೆ, ಬಡತನದ ಪರಿಹಾರಕ್ಕೆ, ಬಯಕೆಯ ಪೂರೈಕೆಗೆ. ಅವರೆಲ್ಲರ ಅಪೇಕ್ಷೆಗಳನ್ನು ಪೂರೈಸುವ ಶಕ್ತಿ ನಮಗೆಲ್ಲಿದೆ? ಅವರಿಗೆ ನಿರಾಶೆಯಾದರೆ ನಮಗೂ ದುಃಖವೇ! ಇದು ಉಭಯಸಂಕಟ. ಇದಕ್ಕೆ ಅವಕಾಶವಿಲ್ಲದಂತೆ ನಾವೇ ಏಕಾಂತದಲ್ಲಿದ್ದುಬಿಟ್ಟರೆ ಒಳ್ಳೆಯದಲ್ಲವೆ?'' ಎಂದರಂತೆ.

ಶೃಂಗೇರಿಯಲ್ಲಿ ಈ ಸಂಭ್ರಮ ಮುಗಿದ ಕೆಲವು ವಾರಗಳಲ್ಲಿ ಸ್ವಾಮಿಗಳು ಮತ್ತೆ ಬಹಿರ್ಮುಖರಾಗಿ, ಸಾಮಾನ್ಯಸ್ಥಿತಿಯಲ್ಲಿ ಇದ್ದುಕೊಂಡು ಭಕ್ತರಿಗೆ ದರ್ಶನ ಕೊಡತೊಡಗಿದರು. ೧೯೫೪ರ ಜುಲೈ ಹದಿನಾಲ್ಕರಂದು ಪದ್ಧತಿಯಂತೆ ವ್ಯಾಸಪೂಜೆಯನ್ನೂ ಮಾಡಿದರು; ಚಾತುರ್ಮಾಸ್ಯವ್ರತವನ್ನು ಕೈಗೊಂಡರು.



ಅಂದಿನಿಂದ ಮುಂದೆ ಅವರು ಏಕಾಂತವನ್ನು ಸೇರಲಿಲ್ಲ; ಅಲೌಕಿಕಸ್ಥಿತಿಗೆ ಮರಳಲಿಲ್ಲ.

ಈ ನಡುವೆ ಅದೇ ವರ್ಷ (೧೯೫೪) ಆಗಸ್ಟ್ ೨೪ರಂದು ಬೆಳಗ್ಗೆ ಭಾರತದ ರಾಷ್ಟ್ರಪತಿಗಳಾಗಿದ್ದ ರಾಜೇಂದ್ರ ಪ್ರಸಾದರು ಪರಿವಾರದೊಡನೆ ಶೃಂಗೇರಿಗೆ ದಯಮಾಡಿಸಿದರು. ರಾಜೇಂದ್ರ ಪ್ರಸಾದರು ದೈವಭಕ್ತರು, ಗುರುಭಕ್ತಿಯುಳ್ಳವರು, ಸರಳಸ್ವಭಾವದವರು, ಪರಮ ಸಾಧುಗಳು. ಇವರು ಸ್ವಾಮಿಗಳ ದರ್ಶನವನ್ನು ಬಯಸಿ ಬಂದಿದ್ದರು; ಸ್ವಾಮಿಗಳೂ ಇವರನ್ನು ನೋಡಲೊಪ್ಪಿದರು. ಶಾರದಾದೇವಾಲಯದ ಎದುರು, ಚೌಕಿಯ ಮೇಲೆ ಸ್ವಾಮಿಗಳು ರಾಜೇಂದ್ರ ಪ್ರಸಾದರಿಗೆ ದರ್ಶನಕೊಟ್ಟು ಅವರೊಂದಿಗೆ ಸಂಸ್ಕೃತದಲ್ಲೇ ಮಾತನಾಡಿ ಆಶೀರ್ವದಿಸಿದರು. ಮಧ್ಯಾಹ್ನ ಮತ್ತೆ ರಾಜೇಂದ್ರ ಪ್ರಸಾದರು ಸ್ವಾಮಿಗಳನ್ನು ನೋಡಿ ಮಾತುಕತೆಯಾಡಿ ಅವರ ಅಪ್ಪಣೆಯನ್ನು ಪಡೆದು ಶೃಂಗೇರಿಯಿಂದ ಹೊರಟರು.

ರಾಜೇಂದ್ರಪ್ರಸಾದರು ಬರುವ ಹಿಂದಿನ ದಿನ ಚಂದ್ರಮೌಳೀಶ್ವರ ತೊಟ್ಟಿಯಲ್ಲಿ, ಆಗ ಮಠದ ಅಧಿಕಾರಿಗಳಾಗಿದ್ದ ಎಸ್. ಜಿ. ನರಸಿಂಹಯ್ಯನವರು, ರಾಷ್ಟ್ರಾಧ್ಯಕ್ಷರನ್ನು ಕರೆತರಲೆಂದು ಬೆಳ್ಳಿಯ ಪಾಲಕಿಯನ್ನು ಸಿದ್ಧಗೊಳಿಸುತ್ತಿದ್ದರು. ಆ ಸಮಯದಲ್ಲಿ ಬಹಿರ್ಮುಖವಾಗಿಯೇ ಇದ್ದ ಸ್ವಾಮಿಗಳು ಮಧ್ಯಾಹ್ನದ ಭಿಕ್ಷೆಯನ್ನು ಮುಗಿಸಿಕೊಂಡು ಬರುವಾಗ, ನರಸಿಂಹಯ್ಯನವರನ್ನು ಕಂಡು, ನಿಂತು ಮಾತನಾಡಿಸಿದರು. ನರಸಿಂಹಯ್ಯನವರು ರಾಷ್ಟ್ರಾಧ್ಯಕ್ಷರಿಗೆಂದು ಬೆಳ್ಳಿಯ ಪಾಲಕಿಯನ್ನು ಸಿದ್ಧಪಡಿಸುತ್ತಿರುವುದಾಗಿ ಹೇಳಿದಾಗ, ರಾಷ್ಟ್ರಾಧ್ಯಕ್ಷರ ವಿಚಾರವಾಗಿ ಹಲವಾರು ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡರು. ಅವರು ಸಾತ್ವಿಕರೆಂದೂ ದೈವಭಕ್ತರೆಂದೂ ಸರಳಸ್ವಭಾವದವರೆಂದೂ ನಿಃಸ್ಪೃಹರೆಂದೂ ನರಸಿಂಹಯ್ಯನವರು ತಿಳಿಸಿದಾಗ, ಸ್ವಾಮಿಗಳು ''ಅಂಥ ಮನುಷ್ಯನಾದರೆ, ಬೆಳ್ಳಿಯ ಪಾಲಕಿಯೇಕೆ? ಬಂಗಾರದ ಪಾಲಕಿಯನ್ನೇ ಸಿದ್ಧಪಡಿಸಿ!'' ಎಂದು ಅಪ್ಪಣೆಮಾಡಿದರಂತೆ. ಅದರಂತೆ ಪ್ರಸಾದರನ್ನು ಕರೆತರಲು ಬಂಗಾರದ ಪಾಲಕಿಯೇ ಹೋಯಿತು. ಆದರೆ ಅದರಲ್ಲಿ ಗುರುಗಳು ಕುಳಿತುಕೊಳ್ಳುವರೆಂದು ತಿಳಿದು ಪ್ರಸಾದರು, ಪಾಲಕಿಯನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು, ಅದರಲ್ಲಿ ಕೂರಲೊಪ್ಪದೆ ನಡೆದೇ ಬಂದರು.

ಈ ಸಂದರ್ಭದಲ್ಲಿ ಮಠದ ಜಹಗೀರಿಯಾದ ಭೂಮಿಕಾಣಿಯನ್ನು ಸರಕಾರ ತನ್ನ ಶಾಸನದ ಪ್ರಕಾರ ವಶಮಾಡಿಕೊಳ್ಳುವ ಪ್ರಸಂಗವೊದಗಿತ್ತು. ಆ ವಿಚಾರವಾಗಿ ಸ್ವಾಮಿಗಳು ರಾಷ್ಟ್ರಪತಿಗಳಿಗೆ ಒಂದು ಮಾತು ಹೇಳಿದರೆ ಮಠಕ್ಕೆ ಈ ಶಾಸನದಿಂದ ವಿನಾಯಿತಿ ದೊರೆಯುಬಹುದೆಂದು ಬಗೆದು ಮಠದ ಅಧಿಕಾರಿಗಳು ಸ್ವಾಮಿಗಳನ್ನು ಪ್ರಾರ್ಥಿಸಿಕೊಂಡಿದ್ದರು. ಆದರೆ ಎಂದೂ ವ್ಯವಹಾರದಲ್ಲಿ ಆಸಕ್ತಿ ತೋರದ ಸ್ವಾಮಿಗಳು ಈಗ ಆಸಕ್ತಿ ತಳೆಯುವುದುಂಟೆ? ತಮಗೆ ಹೇಳಲು ಬಂದವರಿಗೆ ''ಆಚಾರ್ಯರು ಈ ಪೀಠವನ್ನು ಸ್ಥಾಪಿಸುವಾಗ ಯಾವ ಜಹಗೀರಿ ಇದ್ದಿತು? ಎಷ್ಟು ಭೂಮಿಕಾಣಿ ಇದ್ದಿತು? ಇವುಗಳನ್ನು ನೋಡಿಕೊಂಡು ಆಚಾರ್ಯರು ಮಠವನ್ನು ಸ್ಥಾಪಿಸಲಿಲ್ಲವಲ್ಲ? ಮಠಕ್ಕೆ ಆಸ್ತಿಯೆಂದರೆ ಧರ್ಮ, ದೈವ, ಆಸ್ತಿಕರಾದ ಶಿಷ್ಯರು, ಅಷ್ಟೆ!'' ಎಂದು ಹೇಳಿ ಕಳುಹಿಸಿದ್ದರು. ಸ್ವಾಮಿಗಳು ರಾಷ್ಟ್ರಪತಿಗಳೊಂದಿಗೆ ನಡೆಸಿದ ಮಾತುಕತೆಯಲ್ಲಿ ಈ ವಿಚಾರವನ್ನು ಸೂಚ್ಯವಾಗಿಯಾದರೂ ಎತ್ತಲೇ ಇಲ್ಲ; ಮಾತುಕತೆ ಕೇವಲ

ಧಾರ್ಮಿಕ ವಿಚಾರವಾಗಿ ಇದ್ದಿತಷ್ಟೆ. ಅಧಿಕಾರಿಗಳಿಗೂ ಆಸಕ್ತರಿಗೂ ಅಸಮಾಧಾನವಾದುದು ಸಹಜವೇ!

ಇದಾದ ಕೆಲವು ವಾರಗಳಲ್ಲಿ ವಿನಾಯಕಚತುರ್ಥಿ (ಭಾದ್ರಪದ-ಶುಕ್ಲ ಚೌತಿ) ಬಂದಿತು. ಹಿಂದಿನ ಸ್ವಾಮಿಗಳು ಪ್ರತಿವರ್ಷವೂ ಈ ಸಂದರ್ಭದಲ್ಲಿ ವಿದ್ವತ್ಸಭೆಯನ್ನು ನೆರೆಯಿಸುವ ಪದ್ಧತಿಯನ್ನು ಬಳಕೆಗೆ ತಂದಿದ್ದರು. ಚಾತುರ್ಮಾಸ್ಯದೀಕ್ಷೆಯಿರುವಾಗ ಮಠದಲ್ಲಿ ಚೌತಿಯಂದು ಸಭಾಗಣಪತಿ-ಯನ್ನಿಟ್ಟು ಪ್ರತಿದಿನ ಸಂಜೆ ಶ್ರೀಗಳವರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಂದಲೂ ವಿದ್ವಾಂಸರಿಂದಲೂ ಹಲವು ಶಾಸ್ತ್ರಭಾಗಗಳಲ್ಲಿ ವಾಕ್ಯಾರ್ಥ, ಪ್ರವಚನಗಳನ್ನು ನಡೆಸುವುದು ವಾಡಿಕೆ; ಶ್ರೀಗಳವರೂ ಚರ್ಚೆಯಲ್ಲಿ ಪಾಲ್ಗೊಂಡು ಸಭೆಗೆ ಕಳೆಕಟ್ಟಿಸುವರು. ನಮ್ಮ ಸ್ವಾಮಿಗಳು ಹಿಂದೆ ಸಾಮಾನ್ಯಸ್ಥಿತಿಯಲ್ಲಿರುವಾಗ, ಈ ಸಭೆಗಳಲ್ಲಿ ಮುಖ್ಯ ಆಕರ್ಷಣೆಯೆಂದರೆ ಅವರ ಮಾತು; ಅವರು ಸಮಸ್ಯೆಯನ್ನೊಡ್ಡುವ ರೀತಿ, ತೊಡಕನ್ನು ಬಿಡಿಸುವ ಬಗೆ, ಆಕ್ಷೇಪಗಳಿಗೆ ಸಮಾಧಾನಗಳನ್ನು ಹೇಳುವ ವೈಖರಿ ಇವೆಲ್ಲ ಅವರ ಪ್ರತಿಭೆಯನ್ನೂ, ಸಮಯ ಸ್ಫೂರ್ತಿಯನ್ನೂ, ಶಾಸ್ತ್ರಜ್ಞಾನವನ್ನೂ ಎತ್ತಿತೋರಿಸುತ್ತಿದ್ದುವು. ಪ್ರಕಾಂಡ ಪಂಡಿತರೂ ಅವರ ಜಾಣ್ಮೆಗೆ ಬೆರಗಾಗಿ ಕೂಡುವರು. ಆದರೆ ಬಹುವರ್ಷಗಳು ಅವರು ಈ ಸಭೆಯಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಆ ವರ್ಷ ಮಾತ್ರ (೧೯೫೪) ವಿನಾಯಕಸಭೆಯಲ್ಲಿ ಸ್ವಾಮಿಗಳು ದಿನವೂ ಬಂದು ಕೂಡುತ್ತಿದ್ದರು; ತಾವು ಏನೂ ಮಾತನಾಡದಿದ್ದರೂ ನಡೆಯುತ್ತಿದ್ದ ಚರ್ಚೆಗಳನ್ನು ಆದರದಿಂದ ಅವಧಾನದಿಂದ ಆಲಿಸುತ್ತಿದ್ದರು. ಗಣಪತಿ ವಿಸರ್ಜನೆಯ ಸಂದರ್ಭದಲ್ಲೂ ಬಂದು ಅರ್ಧಗಂಟೆಯ ಹೊತ್ತು ಎದುರೇ ನಿಂತಿದ್ದು ನಗುನಗುತ್ತ ಹಿಂದಿರುಗಿದರು.

ಅಂತೂ ಈ ವರ್ಷ ಸ್ವಾಮಿಗಳ ಚರ್ಯೆಯಲ್ಲಿ ಒದಗಿದ ಮಾರ್ಪಾಟು ಎಲ್ಲರ ಗಮನವನ್ನೂ ಸೆಳೆಯಿತು. ಬಹಿರ್ಮುಖವಾಗಿರುವಾಗಲೂ ಹಿಂದೆ ಹೀಗೆ ಸರಸವಾಗಿ, ನಗುನಗುತ್ತ, ಎಲ್ಲರೊಂದಿಗೆ ಮಾತನಾಡಿಕೊಂಡು ಇರುತ್ತಿರಲಿಲ್ಲ. ಈಗ ತಮ್ಮ ಪರಿಚಾರಕರಲ್ಲಿ ಒಬ್ಬೊಬ್ಬರನ್ನೂ ಕರೆಸಿಕೊಂಡು ಅವರ, ಅವರ ಮನೆಯವರ ಯೋಗಕ್ಷೇಮವನ್ನು ವಿಚಾರಿಸುವರು;

ತಮ್ಮ ದರ್ಶನಕ್ಕೆ ಬಂದವರನ್ನೆಲ್ಲಾ ಸಾವಧಾನವಾಗಿ ಮಾತನಾಡಿಸಿ, ಸಂತೋಷಪಡಿಸಿ, ಸಮಾಧಾನಪಡಿಸಿ ಕಳುಹಿಸುವರು. ಆಗಸ್ಟ್ ತಿಂಗಳಿಂದಂತೂ ಸ್ವಾಮಿಗಳು ತುಂಬ ಸುಲಭರಾದರು. ತಾವೇ ಅವರಿವರನ್ನು ಕರೆಸಿಕೊಂಡು ಮಾತನಾಡಿಸುವರು; ಬೇರೆ ಊರಲ್ಲಿರುವ ಭಕ್ತರಿಗೂ ಬಂದು ತಮ್ಮನ್ನು ಕಾಣುವಂತೆ ಪತ್ರ ಬರೆಸುವರು.

ಮುಂದಿನ ತಿಂಗಳು ಸೆಪ್ಟೆಂಬರ್ ೨೫ರಂದು ಚತುರ್ದಶಿಯ ದಿನ, ಮಠದ ಗ್ರಂಥಾಲಯದ ಅಧಿಕಾರಿಯನ್ನು ಕರೆಸಿಕೊಂಡು, ತಮ್ಮ ಕೋಣೆಯಲ್ಲಿ ಓದಿಗೆಂದು ಇರಿಸಿಕೊಂಡಿದ್ದ ಗ್ರಂಥಾಲಯದ ಪುಸ್ತಕಗಳನ್ನೆಲ್ಲಾ ಒಂದೊಂದಾಗಿ ನೋಡಿ, ''ಇವನ್ನೆಲ್ಲ ಜೋಪಾನವಾಗಿಟ್ಟುಕೊಳ್ಳಿ, ಅಪೂರ್ವವಾದ ಪುಸ್ತಕಗಳು'' ಎಂದು ಹೇಳುತ್ತ ಹಿಂದಿರುಗಿಸಿದರು; ಒಂದು ಪುಸ್ತಕವನ್ನು ನೋಡಿ ''ಇದು ನಿಮ್ಮದಲ್ಲ ನಮ್ಮದೇ !'' ಎಂದು ಕೂಡ ಹೇಳಿ ನಕ್ಕರು. ಅಧಿಕಾರಿಯು ಪುಸ್ತಕಗಳನ್ನು ತೆಗೆದುಕೊಂಡು ಹೋಗುವಾಗ, ''ಒಳ್ಳೆಯದು, ಹೋಗಿಬನ್ನಿ!'' ಎಂದು ಬೀಳ್ಕೊಟ್ಟರು. ಅದೇ ದಿನ, ತಮ್ಮ ಸರತಿಯವರಾದ ಮಹಾಬಲಭಟ್ಟ-ರೆಂಬುವರನ್ನು ಕರೆಸಿಕೊಂಡು ಅವರ ಮನೆಯವರನ್ನೆಲ್ಲ ನೆನೆಸಿಕೊಂಡು ಅವರೆಲ್ಲರ ಕುಶಲವನ್ನು ಕೇಳಿದರು. ದರ್ಶನಕ್ಕೆಂದು ಬಂದವರನ್ನೆಲ್ಲ ನೋಡಿ, ಸಂತೈಸಿ, ಆಶೀರ್ವದಿಸಿ ಕಳುಹಿಸಿದರು. ಅನಂತರ ಸಂಜೆ ಆರೂವರೆಯಿಂದ ಎಂಟು ಗಂಟೆಯವರೆಗೂ ತಮ್ಮ ಗುರುಗಳ (ಹಿಂದಿನ ಸ್ವಾಮಿಗಳ) ಅಧಿಷ್ಠಾನದ ಮುಂದೆ ಮೌನವಾಗಿ ನಿಂತಿದ್ದರಂತೆ.

ಆ ದಿನ ಅವರು ಉಂಡ ಆಹಾರ ತೀರ ಸ್ವಲ್ಪವೇ. ರಾತ್ರಿಯಲ್ಲಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿದರು; ವಾಡಿಕೆಯ ಫಲಾಹಾರವನ್ನಾಗಲೀ ಹಾಲನ್ನಾಗಲೀ ಮುಟ್ಟಲಿಲ್ಲ. ಆ ರಾತ್ರಿ ನಿಯಮಿತ ಸರತಿಯವರ (ಭೀಮಭಟ್ಟರೆಂಬುವರ) ಅನಿವಾರ್ಯದಿಂದಾಗಿ ಮಹಾಬಲಭಟ್ಟರು ಸ್ವಾಮಿಗಳೊಂದಿಗೆ ಇದ್ದರು. ಭಟ್ಟರು ತುಂಬ ಸರಳ ಸ್ವಭಾವದವರು; ಲೌಕಿಕ ಅಷ್ಟಾಗಿ ತಿಳಿಯದು; ಮುಗ್ಧವಾದ ಗುರುಭಕ್ತಿಯಂತೂ ಇದ್ದಿತು. ಸ್ವಾಮಿಗಳಿಗೆ ಅವರಲ್ಲಿ ಆದರ, ವಾತ್ಸಲ್ಯ. ಅವರು ಆ ರಾತ್ರಿ ಸ್ವಾಮಿಗಳ ಸೇವೆಗೆ ಬಂದುದು ವಿಶೇಷವೇ.

ಆ ರಾತ್ರಿ ಸ್ವಾಮಿಗಳು ಮಲಗಲಿಲ್ಲ. ತಾವು ನೆಲೆಗೊಂಡಿದ್ದ 'ಸಚ್ಚಿದಾನಂದ ವಿಲಾಸ'ವೆಂಬ ಬೀಡಿನಿಂದ ಹೊರಗಾಗಿ ಪಕ್ಕದಲ್ಲಿದ್ದ ತಮ್ಮ ಗುರುಗಳ ಅಧಿಷ್ಠಾನಕ್ಕೆ ಮತ್ತೆ ಮತ್ತೆ ಹೋಗಿ ಪ್ರದಕ್ಷಿಣೆ-ನಮಸ್ಕಾರಗಳನ್ನು ಮಾಡಿಬರುತ್ತಿದ್ದರು. ನಡುವೆ ಒಮ್ಮೆ ಕಾಲಭೈರವನ ಗುಡ್ಡಕ್ಕೂ ಹೋಗಿ ಬಂದರು. ಶ್ಲೋಕಗಳನ್ನು ಗಟ್ಟಿಯಾಗಿಯೇ ಹೇಳಿಕೊಳ್ಳುತ್ತ ತಿರುಗಾಡುತ್ತಿದ್ದರು. (ಅವರಿಗೆ ತುಂಬ ಮೆಚ್ಚಿನ ಶ್ಲೋಕಗಳೆಂದರೆ ಸದಾಶಿವ ಬ್ರಹ್ಮೇಂದ್ರರ 'ಆತ್ಮವಿದ್ಯಾವಿಲಾಸ'ವೆಂಬ ಗ್ರಂಥದವು; ಅವನ್ನು ಮತ್ತೆ ಮತ್ತೆ ಹೇಳಿಕೊಳ್ಳುತ್ತಿದ್ದುದು ವಾಡಿಕೆ. ಇವಲ್ಲದೆ 'ವಿಷ್ಣುಸಹಸ್ರನಾಮ', 'ಲಲಿತಾಸಹಸ್ರನಾಮ'ಗಳನ್ನು ದಿನವೂ ಪಾರಾಯಣ ಮಾಡಿಕೊಳ್ಳುತ್ತಿದ್ದರು. ಮಾರ್ಕಂಡೇಯಕೃತ 'ಶಿವಸ್ತೋತ್ರ', ಶಂಕರಕೃತ 'ಹನುಮತ್ ಸ್ತೋತ್ರ' ಇವೂ ಅವರಿಗೆ ಪ್ರಿಯವಾಗಿದ್ದವು.)

ಮರುದಿನ ಭಾನುವಾರ, ಸೆಪ್ಟೆಂಬರ್ ೨೬ರಂದು ಭಾದ್ರಪದ ಬಹುಳ-ಅಮಾವಾಸ್ಯೆ; ನವರಾತ್ರಿಗೆ ಹಿಂದಿನ ದಿನವಾದ ಮಹಾಲಯ-ಅಮಾವಾಸ್ಯೆ. ಮರುದಿನದಿಂದ ನವರಾತ್ರಿ ಉತ್ಸವ, ಮಠದಲ್ಲಿ ವಿಶೇಷವಾದ ಸಂದರ್ಭ. ಇನ್ನು ಹತ್ತು ದಿನಗಳು ವಿಜೃಂಭಣೆಯಿಂದ ಉತ್ಸವಗಳು ನಡೆಯಬೇಕಾದುದರಿಂದಲೂ, ಈ ವರ್ಷ ಹಿರಿಯ ಸ್ವಾಮಿಗಳು ಬಹಿರ್ಮುಖರಾಗಿದ್ದು ಸಮಾರಂಭದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದುದರಿಂದಲೂ ನದಿಯ ಆಚೆ ದಡದ ಮೇಲೆ, ಊರೊಳಗೆ ಸಿದ್ಧತೆಗಳು ಸಾಗಿದ್ದುವು.

ಆ ರಾತ್ರಿ ಕಳೆದು ಮುಂಜಾನೆ ಬೆಳಕು ಹರಿಯುವ ಮೊದಲೇ ನಾಲ್ಕು ಗಂಟೆಯ ಸುಮಾರಿಗೆ ಕೈಚಪ್ಪಾಳೆ ಸದ್ದುಮಾಡಿ ಅಲ್ಲಿಯೇ ಮಲಗಿದ್ದ ಮಹಾಬಲಭಟ್ಟರನ್ನು ಎಬ್ಬಿಸಿ ''ಸ್ನಾನಕ್ಕೆ ಹೋಗೋಣ'' ಎಂದರು. ಮಹಾಬಲಭಟ್ಟರು ಎದ್ದುನಿಲ್ಲುವಷ್ಟರಲ್ಲಿ ಸ್ವಾಮಿಗಳು ತಮ್ಮ ಬೀಡಾದ 'ಸಚ್ಚಿದಾನಂದ ವಿಲಾಸ'ದ ಮೆಟ್ಟಿಲುಗಳನ್ನಿಳಿದು ನಿಂತಿದ್ದರು. ಚಳಿಗಾಲ, ಮಳೆ ಸುರಿಯುತ್ತಿದ್ದಿತಾಗಿ ನದಿಯ ಸ್ನಾನ ಸ್ವಾಮಿಗಳಿಗೆ ಬೇಡವೆಂದು,ಬೀಡಿನಲ್ಲೆ ಮಜ್ಜನಕ್ಕೆ ಬಿಸಿನೀರನ್ನು ಅಣಿಮಾಡಿದ್ದರು. ಇದನ್ನು ಭಟ್ಟರು ಸ್ವಾಮಿಗಳಿಗೆ ಅರಿಕೆಮಾಡಿಕೊಂಡರು. ಆದರೆ ಸ್ವಾಮಿಗಳು ''ಇವತ್ತು ಪುಣ್ಯದಿನವಲ್ಲವೆ?

ಬಿಸಿನೀರು ಬೇಡ, ತುಂಗಾಸ್ನಾನವಾಗಲಿ ಬಾ'' ಎಂದು ಹೇಳುತ್ತ ನದಿಯ ಕಡೆ ನಡೆಯತೊಡಗಿದರು. ಭಟ್ಟರು ಬೇಗಬೇಗನೆ ಸಿದ್ಧರಾಗಿ, ಮಳೆ ಬೀಳುತ್ತಿದ್ದುದರಿಂದ ಒಲೆಗರಿ ಛತ್ರಿಯನ್ನೂ, ಇನ್ನೂ ಕತ್ತಲಾಗಿದ್ದುದರಿಂದ ಲಾಟೀನನ್ನೂ ಹಿಡಿದು ಪರಿಚಾರಕನಾದ ರಾಮಸ್ವಾಮಿಯನ್ನೂ ಎಬ್ಬಿಸಿ, ಮಡಿಬಟ್ಟೆಗಳನ್ನು ತರುವಂತೆ ಹೇಳಿ, ತಾವು ಸ್ವಾಮಿಗಳ ಹಿಂದೆ ಓಡಿದರು. ರಾಮಸ್ವಾಮಿಯೂ ಸಿದ್ಧರಾಗಿ, ಮಡಿಬಟ್ಟೆಯನ್ನು ತೆಗೆದುಕೊಂಡು ಹೊರಟರು.

ನದಿಯ ದಡದ ಮೇಲೆ ಸಂಧ್ಯಾವಂದನಮಂಟಪವಿದೆ. ಅಲ್ಲಿಗೆ ರಾಮಸ್ವಾಮಿ ಬರುವ ವೇಳೆಗೆ ಸ್ವಾಮಿಗಳೂ ಭಟ್ಟರೂ ಅಲ್ಲಿಯೇ ಇದ್ದರು. ಸ್ವಾಮಿಗಳು ರಾಮಸ್ವಾಮಿಯನ್ನು ಕುರಿತು ''ನೀನಿಲ್ಲೇ ನಿಲ್ಲು'' ಎಂದು ಹೇಳಿ ಸ್ನಾನಘಟ್ಟಕ್ಕೆ ಇಳಿದರು. ಒಗೆಯಬೇಕಾಗಿದ್ದ ಬಟ್ಟೆಯನ್ನು ಹಿಡಿದುಕೊಂಡು ಭಟ್ಟರೂ ಅವರೊಂದಿಗೆ, ಅವರ ಮೇಲೆ ಕೊಡೆಯನ್ನು ಹಿಡಿದು, ಸೋಪಾನದ ಮೆಟ್ಟಿಲುಗಳನ್ನಿಳಿದು ಹೋದರು. ಸ್ವಾಮಿಗಳು ನೀರಿನಲ್ಲಿಳಿದು ಒಂದು ಮುಳುಗುಹಾಕಿ, ಎದ್ದು, ಪಕ್ಕದ ಕಟ್ಟೆಯ ಮೇಲೆ ಪ್ರಾಣಾಯಾಮ ಮಾಡಲು ಪದ್ಮಾಸನದಲ್ಲಿ ಕುಳಿತರು. ಮಳೆ ಆ ವೇಳೆಗೆ ನಿಂತಿದ್ದಿತು. ಭಟ್ಟರು ಕೊಡೆಯನ್ನೂ ಲಾಟೀನನ್ನೂ ಮೆಟ್ಟಿಲಮೇಲೆ ಒಂದು ಕಡೆ ಇರಿಸಿ, ಸ್ವಾಮಿಗಳ ಬಟ್ಟೆಯನ್ನು ಒಗೆಯಲೆಂದು, ಸ್ವಾಮಿಗಳಿಗೆ ಬೆನ್ನು ತಿರುಗಿಸಿ ನೀರಿಗಿಳಿದರು.

ಅಷ್ಟರಲ್ಲಿ ನೀರಿನಲ್ಲಿ ಏನೋ ಬಿದ್ದ ಸದ್ದಾಗಿ ಭಟ್ಟರು ಹಿಂದಿರುಗಿ ನೋಡಲು, ಸ್ವಾಮಿಗಳು ಪದ್ಮಾಸನದಲ್ಲಿಯೇ ನೀರಿನಲ್ಲಿ ತೇಲಿಹೋಗುತ್ತಿದ್ದಾರೆ! ಒಡನೆಯೇ ಭಟ್ಟರು ನೀರಿಗೆ ಧುಮುಕಿ, ಈಜುತ್ತ ಹೋಗಿ, ಆಗಲೇ ಪ್ರವಾಹದಲ್ಲಿ ದೂರ ಸಾಗಿದ್ದ ಸ್ವಾಮಿಗಳ ಶರೀರವನ್ನು ಹಿಡಿದು, ಪ್ರವಾಹವನ್ನು ಎದುರಿಸಿ ಹಿಂದಿರುಗುವಾಗ, ಸಹಾಯಕ್ಕೆ ಯಾರಾದರೂ ಬನ್ನಿರೆಂದು ಕೂಗಿದರು. ಬೆನ್ನಮೇಲೆ ಇರಿಸಿಕೊಂಡಿದ್ದ ಸ್ವಾಮಿಗಳ ಮೈಯನ್ನು ಕಾಪಾಡಿಕೊಂಡು ಈಜುತ್ತ ದಡ ಸೇರುವುದು ಕಷ್ಟವೆಂದು ಭಟ್ಟರಿಗೆ ಅರಿವಾಯಿತು! ಆಯತಪ್ಪಿ ಮುಳುಗುವುದರಲ್ಲಿದ್ದರು. ಅಕಸ್ಮಾತ್ತಾಗಿ ಆ ಕಡೆ ಬಂದಿದ್ದ ಕೇಶವಾಚಾರಿ ಎಂಬ ಗೃಹಸ್ಥರು ಭಟ್ಟರ ಕೂಗನ್ನು ಕೇಳಿ, ನದಿಗೆ ಧುಮುಕಿ ಭಟ್ಟರನ್ನೂ ಅವರ ಹೊರೆಯನ್ನೂ ಎಳೆತಂದು ದಡ ಮುಟ್ಟಿಸಿದರು.

ಸ್ವಾಮಿಗಳ ನಿಶ್ಚೇಷ್ಟಶರೀರವನ್ನು ನೋಡಿ ಭಟ್ಟರು ಕಂಗಾಲಾಗಿ ಗಳಗಳನೆ ಅಳತೊಡಗಿದರು. ಕಟ್ಟೆಯ ಮೇಲೆ ತೊಟ್ಟಿದ್ದ ಪದ್ಮಾಸನ ಹಾಗೆಯೇ ಇದೆ; ಮುಖದಲ್ಲಿ ಶಾಂತಿ ಕದಡಿಲ್ಲ; ಶರೀರದೊಳಗೆ ನೀರು ಇಷ್ಟೂ ಹೋಗಿಲ್ಲ, ಪ್ರಾಣವನ್ನು ಬಂಧನ ಮಾಡಿಕೊಂಡು ಸತ್ತದ್ದು ಸ್ಪಷ್ಟವಾಗಿದೆ. ಮುಂಜಾನೆ ನಾಲ್ಕು ಗಂಟೆ ಇಪ್ಪತ್ತು ನಿಮಿಷಗಳ ಸಮಯ; ಬೆಳಕು ಆಗತಾನೆ ಹರಿಯುತ್ತಲಿತ್ತು. ಸುದ್ದಿ ಗಾಳಿಯಂತೆ ಹರಡಿತು. ಮಠದಿಂದ ಕಿರಿಯ ಸ್ವಾಮಿಗಳೂ, ಅಧಿಕಾರಿಗಳೂ, ಪರಿಚಾರಕರೂ, ಊರಿಂದ ನೂರಾರು ಮಂದಿ ಹಿರಿಯರೂ ಒಡನೆಯೇ ಬಂದು ನೆರೆದರು. ನದಿಯ ದಡದಿಂದ ಕಳೇಬರವನ್ನು ಆಚೆದಡದ 'ಚಂದ್ರಮೌಳೀಶ್ವರ ತೊಟ್ಟಿ'ಯೆಂಬ ಕಟ್ಟಡಕ್ಕೆ ತಂದು, ಸಂಪ್ರದಾಯದಂತೆ ಮಾಡಬೇಕಾದ ಸಂಸ್ಕಾರಗಳನ್ನೆಲ್ಲ ನೆರವೇರಿಸಿ, ಬದುಕಿದ್ದಾಗ ಏರಲು ಒಪ್ಪದಿದ್ದ ಬಂಗಾರದ ಪಾಲಕಿಯ ಮೇಲೆ ಇರಿಸಿಕೊಂಡು, ವಿಜೃಂಭಣೆಯಿಂದ ಊರಿನ ನಾಲ್ಕು ಬೀದಿಗಳಲ್ಲಿ ಮೆರವಣಿಗೆಯಲ್ಲಿ ಒಯ್ದು, ಕಡೆಗೆ ನರಸಿಂಹವನದಲ್ಲಿ ಹಿಂದಿನ ಸ್ವಾಮಿಗಳ ಅಧಿಷ್ಠಾನದ ಪಕ್ಕದಲ್ಲೇ ಸಮಾಧಿಮಾಡಲಾಯಿತು. ಮುಂದೆ ಆ ಸಮಾಧಿಯ ಮೇಲೂ ಒಂದು ಅಧಿಷ್ಠಾನ ಸಿದ್ಧವಾಗಿ, ಅಲ್ಲಿ ಸ್ವಾಮಿಗಳ ಹಾಲುಗಲ್ಲಿನ ಮೂರ್ತಿಯೊಂದನ್ನು ಮಾಡಿಸಿಟ್ಟರು.

ಅವರ ಸಮಾಧಿಯ ಮೇಲೆ ಸ್ಥಾಪಿಸಲಾದ ಲಿಂಗವನ್ನು ಯಾದವಲ್ಲೀ ರಾಮಯ್ಯನೆಂಬ ಭಕ್ತರು ವಾರಣಾಸಿಯಿಂದ ತಂದರು. ಅವರು ಜಯಸಂವತ್ಸರದ ಕಾರ್ತೀಕಮಾಸದಲ್ಲಿ ವಾರಣಾಸಿಗೆ ಬಂದು ನರ್ಮದಾನದಿಯಿಂದ ತಂದ ದೊಡ್ಡ ಲಿಂಗವೊಂದನ್ನು ಆಗ ಅಲ್ಲಿಯೇ ಇರುತ್ತಿದ್ದ ಕಾಶೀ ಸಚ್ಚಿದಾನಂದಸರಸ್ವತೀಸ್ವಾಮಿಗಳ (ಇದು ಶ್ರೀಚಂದ್ರಶೇಖರಭಾರತೀಸ್ವಾಮಿಗಳ ಶಿಷ್ಯರು) ಕುಟೀರಕ್ಕೆ ತಂದರು. (ಮಹಾಪ್ರದೋಷವಿದ್ದ ಒಂದು ಸೋಮವಾರ). ಅಲ್ಲಿ ಅವರು ಇದನ್ನು ಚಂದ್ರಶೇಖರಭಾರತೀಶ್ವರರೆಂದೇ ಭಾವಿಸಿ ('ಅಸ್ಮದ್ಗುರುಚರಣಾಃ') ಅದಕ್ಕೆ ರುದ್ರಾಕ್ಷಿಮಾಲಿಕೆ, ಕಾಷಾಯವಸ್ತ್ರಗಳನ್ನು ತೊಡಿಸಿ ನಾಲ್ಕೈದು ದಿನಗಳು

ಬಿಲ್ವದಳಗಳಿಂದ ಪೂಜೆಯನ್ನು ಸಲ್ಲಿಸಿ, ಅನಂತರ ಶೃಂಗೇರಿಗೆ ಕಳುಹಿಸಿಕೊಟ್ಟರು. ಶೃಂಗೇರಿಯಲ್ಲಿ ಅವರ ಸಮಾಧಿಯ ಮೇಲೆ ಲಿಂಗ ಪ್ರತಿಷ್ಠೆಯಾದದ್ದು ಶುಭಕೃತ್ ಸಂವತ್ಸರದ ಫಾಲ್ಗುಣ ಶುಕ್ಲ ಅಷ್ಟಮೀ ಭಾನುವಾರದಂದು (೧೯೬೩ರ ಮಾರ್ಚ್ ಮೂರನೆಯ ದಿನ).

ಶ್ರೀ ಚಂದ್ರಶೇಖರಭಾರತೀಸ್ವಾಮಿಗಳ ಜನನ, ಉಪನಯನ, ಪಾರಿವ್ರಾಜ್ಯ (ಸಂನ್ಯಾಸ ಸ್ವೀಕಾರ), ವಿದೇಹಕೈವಲ್ಯ (ಎಂದರೆ ದೇಹ ಬಿಟ್ಟದ್ದು) ಮತ್ತು ಅವರ ಸಮಾಧಿಯ ಮೇಲೆ ಲಿಂಗಪ್ರತಿಷ್ಠೆ — ಎಲ್ಲವೂ ನಡೆದದ್ದು ಭಾನುವಾರವೇ !

ಲಿಂಗಪ್ರತಿಷ್ಠೆಮಾಡಿದಂದೇ ಶಾರದಾದೇವಾಲಯದ ಹೊಸಗೋಪುರಕ್ಕೆ ಮಹಾಕಲಶಾಭಿಷೇಕವೂ ಶೃಂಗೇರಿಯಲ್ಲಿ ಸಹಸ್ರಚಂಡೀಮಹಾಯಾಗವೂ ಜರುಗಿದವು.

# ೧೪. ವ್ಯಕ್ತಿತ್ವ

ಸ್ವಾಮಿಗಳ ವ್ಯಕ್ತಿತ್ವವನ್ನು ಅರಿತುಕೊಳ್ಳುವುದಾಗಲೀ ವಿವರಿಸುವುದಾಗಲೀ ಕಷ್ಟದ ಕೆಲಸ. ಅದು ಯಾವೊಂದು ನಿರ್ದಿಷ್ಟ ನೆಲೆಗೂ ನಿಲ್ಲುವುದಲ್ಲ; ನಮ್ಮ ಸಾಮಾನ್ಯ ಸ್ಥಿತಿಗೆ ಅವರ ಅಸಾಧಾರಣವಾದ ವ್ಯಕ್ತಿತ್ವ ತುಂಬ ದೂರದ್ದು, ತುಂಬ ಎತ್ತರವಾದದ್ದು. ಅವರಿಗೆ 'ಬುದ್ಧಿಭ್ರಮಣೆ'ಯೆಂದು ಸೂಚಿಸುವ ಹಲವಾರು ಪ್ರಸಂಗಗಳನ್ನು ಕೇಳಿದ್ದೇನೆ, ಹಾಗೆ ಹೇಳುವ ವೈದ್ಯರ ವರದಿಗಳನ್ನು ನೋಡಿದ್ದೇನೆ. ಆದರೆ ಈ ಬಗೆಯ 'ಬುದ್ಧಿಭ್ರಮಣೆ' ಲೋಕೋತ್ತರರಾದ ವ್ಯಕ್ತಿಗಳಲ್ಲಿದ್ದುದನ್ನು ಹಲವಾರು ಸಂತರ, ಮಹಿಮಾನ್ವಿತರ ಚರಿತ್ರೆಗಳಿಂದ ಅರಿತುಕೊಂಡಿದ್ದೇನೆ. ಅಷ್ಟಲ್ಲದೆ, ಅವರ 'ಬುದ್ಧಿವಿಕಲ್ಪ'ದ ಸ್ಥಿತಿಗೂ (ಅಂತರ್ಮುಖವೆಂದು ಕರೆಯುತ್ತಿದ್ದುದು) ಸಾಮಾನ್ಯ ಸ್ಥಿತಿಗೂ ಇರುತ್ತಿದ್ದ ಅಂತರ ಎಷ್ಟೆಂಬುದನ್ನು, ಎಂಥದೆಂಬುದನ್ನು, ಆ ಎರಡು ಸ್ಥಿತಿಗಳ ನಡುವೆ ಅವರ ಸಂಕ್ರಮಣ ಯಾವ ರೀತಿ ಇರುತ್ತಿದ್ದಿತೆಂಬುದನ್ನೂ ಗಮನಿಸಿದರೆ ಈ 'ಬುದ್ಧಿವಿಕಲ್ಪ'ದ ವಿಲಕ್ಷಣತೆಯೂ ಎದ್ದುಕಾಣದೆ ಇರದು. ಯಾವ ನಿಖರವಾದ ಪ್ರಕಾರದಲ್ಲೂ ಅವರ ಚರ್ಯೆಯನ್ನು ಸೇರಿಸುವುದು ವೈದ್ಯರಿಗೂ ಆಗಲಿಲ್ಲ. ವೈದ್ಯರು ಯಾವ ಚಿಕಿತ್ಸೆಯನ್ನೂ ನಡೆಸಲಿಲ್ಲ, ನಡೆಸಲಾಗಲಿಲ್ಲ ಎನ್ನುವುದಂತೂ ದಿಟ; ಚಿಕಿತ್ಸೆಯಿಲ್ಲದೆ ಅವರ ಸಾಮಾನ್ಯಸ್ಥಿತಿಗೆ ಮರಳುತ್ತಿದ್ದರೆನ್ನುವುದೂ ದಿಟವೇ!

ಅಷ್ಟು ಮಾತ್ರವಲ್ಲ, ಅವರು ಸಾಮಾನ್ಯಸ್ಥಿತಿಯಲ್ಲಿರಲಿ, ಅಂತರ್ಮುಖವಾಗಿರಲಿ, ಅವರು ಇದ್ದಲ್ಲಿ ಒಂದು ಅಪೂರ್ವವಾದ, ಅದ್ಭುತವಾದ, ಅನನ್ಯವಾದ ವಾತಾವರಣ ಇರುತ್ತಿದ್ದಿತೆಂದು ಅವರನ್ನು ನೋಡಿದವರೆಲ್ಲರೂ ಬಲ್ಲರು. ಅವರ ನಿಲುವಿನಲ್ಲಿ ಒಂದು ಗಾಂಭೀರ್ಯ, ಅವರ ಮುಖದ ಮೇಲೆ ಅಲೌಕಿಕವಾದ ಒಂದು ತೇಜಸ್ಸು, ಅವರು ಮಾತನಾಡಿದರೆ ಅದರಲ್ಲೊಂದು ಬಗೆಯ ತಂಪು; ಮಾತನಾಡದೆ ಸುಮ್ಮನೆ

ನೋಡಿದರೂ ಆ ನೋಟದಲ್ಲೊಂದು ವಿಚಿತ್ರವಾದ ಆಕರ್ಷಣೆ, ಇವನ್ನು ಯಾರಾದರೂ ಗಮನಿಸಬಹುದಾಗಿತ್ತು. ಅವರಿದ್ದಲ್ಲಿ ಶಾಂತಿಯು ಸಮೃದ್ಧವಾಗಿರುವಂತೆ, ಅವರೆದುರು ನಿಂತವರು ನೆಮ್ಮದಿಯ ಆಳದಲ್ಲಿರುವಂತೆ ಭಾಸವಾಗುತ್ತಿದ್ದುದನ್ನು ಹಲವರು ಬಣ್ಣಿಸಿದ್ದಾರೆ; ನಾನೂ ಅನುಭವಿಸಿದ್ದೇನೆ. 'ಬುದ್ಧಿವಿಕಲ್ಪ' ವಾದರೆ ಹೀಗಿರುವುದುಂಟೆ? ಸಾಮಾನ್ಯಸ್ಥಿತಿಯಲ್ಲಿರುವ ಮನುಷ್ಯರಿಗಾದರೂ ಇದು ಸಾಮಾನ್ಯವಾದುದೇ?

ಯಾವ ದೃಷ್ಟಿಯಿಂದ ನೋಡಿದರೂ ಸ್ವಾಮಿಗಳ ವ್ಯಕ್ತಿತ್ವ ಅಸಾಧಾರಣ-ವಾದುದು. ಅದರ ವರ್ಣನೆಯೇ ಕಷ್ಟವೆಂದಮೇಲೆ ಅದರ ವಿಶ್ಲೇಷಣೆಯ ವಿಚಾರ ಹೇಳುವುದೇನು? ಯಾವ ಗಜಕಡ್ಡಿಯಿಂದ ಆ ವ್ಯಕ್ತಿತ್ವವನ್ನು ಅಳೆಯುವುದು? ಯಾವ ಮೂಸೆಯಲ್ಲಿ ಆ ಚಿನ್ನವನ್ನು ಇರಿಸುವುದು? ಯಾವ ತ್ರಾಸಿನಲ್ಲಿ ಅವರ ವರ್ತನೆಯನ್ನು ತೂಗುವುದು? ಯಾವ ತಂತ್ರದಿಂದ ಅವರ ಅಂತರಂಗವನ್ನು ಅರಿತುಕೊಳ್ಳುವುದು? ಹುಚ್ಚೆಂದರೆ ಹುಚ್ಚೇ ಇರಲಿ. ಆದರೆ ಅವರ ಹೆಸರು ಹೇಳಿದೊಡನೆ ತಲೆಬಾಗಿಸಿ ಕೈಜೋಡಿಸುವ ಹಲವರು ಹಿರಿಯರನ್ನು ನೋಡಿದ್ದೇನೆ. ಅವರ ನೋಟದಿಂದ ಒಳಿತನ್ನು ಪಡೆದುಕೊಂಡ, ಅವರ ಮಾತಿನಿಂದ ಬಾಳನ್ನು ಹಸನಾಗಿ ಮಾಡಿಕೊಂಡ, ಅವರ ನೆನಪಿನಿಂದ ಹುರುಪುಗೊಂಡ ಹಲವರನ್ನು ನಾನು ಹತ್ತಿರದಿಂದಲೇ ಬಲ್ಲೆ. ಇವರನ್ನೆಲ್ಲ ಮರುಳರೆಂದು ಕಡೆಗಣಿಸಲಾರೆ! ಅವರನ್ನು ಕುರಿತು ಹರಡಿಕೊಂಡಿರುವ ಪವಾಡಗಳಂಥ ಪ್ರಸಂಗಗಳ ಮಾತಿರಲಿ; ಅವರ ಸಾಮಾನ್ಯವಾದ ವ್ಯಕ್ತಿತ್ವವೇ ಪ್ರಭಾವಶಾಲಿಯಾಗಿದ್ದಿತು. ಅವರ ಅಸಾಮಾನ್ಯಸ್ಥಿತಿಯಲ್ಲೇ ವೈಶಿಷ್ಟ್ಯವಿದ್ದಿತು.

ಅವರ ಅಸಾಮಾನ್ಯಸ್ಥಿತಿಯ ವರ್ಣನೆಯಾಗಲೀ ವಿಶ್ಲೇಷಣೆಯಾಗಲೀ ನನಗೆ ಎಟಕುವಂಥದಲ್ಲ. ಅದಕ್ಕೆ ಪ್ರಯತ್ನಿಸುವುದೂ ಅನುಚಿತವಾದೀತು. 'ಪ್ರಾಂಶುಲಭ್ಯೇ ಫಲೇ ಲೋಭಾತ್' ಎನ್ನುವಂತೆ, ಅವರ ಸಾಮಾನ್ಯವಾದ ವ್ಯಕ್ತಿತ್ವವನ್ನು ಕೆಲವಾರು ಪ್ರಕಾರಗಳಲ್ಲಿ ನೋಡಿದರೂ ಸಾಕು, ಅವರ ಹಿರಿಮೆಯನ್ನು ಅರಿತುಕೊಳ್ಳುವುದಾದೀತು. ವ್ಯಕ್ತಿಯೆಂದಮೇಲೆ ಪರಿಸರದ ಪ್ರಭಾವ ಇಲ್ಲದೆ ಹೋದೀತೆ? ತಂದೆತಾಯಿಯರಿಂದ ಕೆಲವು ಗುಣಗಳನ್ನು ಪಡೆದುಕೊಳ್ಳದೆ ಇರಲು ಸಾಧ್ಯವೆ? ಎಳೆತನದ ಬದುಕಿನ ಬಗೆ ತನ್ನ ಪ್ರಭಾವವನ್ನು

ಮೂಡಿಸದೆ ಇರುವುದು ಹೇಗೆ? ಹೊಸ ಹರಯದಲ್ಲಿ ಇದ್ದಕ್ಕಿದ್ದಂತೆ ಮೇಲೆರಗಿ ಬಂದ ಹೊಣೆ, ಹಾಗಾಗಿ ಎದುರಿಸಬೇಕಾಗಿ ಬಂದ ಹಿರಿಯರ ಒಲವುಗಳು, ತಾಳಿಕೊಳ್ಳಬೇಕಾಗಿ ಬಂದ ಅಬ್ಬರ — ಎಳೆದಾಟಗಳು ಇವೆಲ್ಲ ತಂತಮ್ಮ ಕಾವನ್ನು ಪೆಟ್ಟನ್ನು ಒದಗಿಸದೆ ಇರುವುವೆ?

ಬಡತನದ ಹಿನ್ನೆಲೆಯೋ, ಮುಗ್ಧರಾದ ತಾಯಿತಂದೆಯರ ಪ್ರಭಾವವೋ, ವಿರೂಪಾಕ್ಷ ಶಾಸ್ತ್ರಿಗಳಂತಹವರ ಸಂಪರ್ಕವೋ, ಸ್ವಭಾವಸಿದ್ಧವಾದ ಸೌಜನ್ಯವೋ, ಏನು ಕಾರಣವೋ, ಅಂತೂ ಅವರಲ್ಲಿ ದಿಟ್ಟತನ, ತನ್ನ ಮಾತು ನಡೆಯಬೇಕೆಂಬ ಹಟ, ಇತರರು ತನ್ನಂಕೆಯಲ್ಲಿರಬೇಕೆಂಬ ಜೋರು, ಸಂದರ್ಭ ಒದಗಿದಾಗ ಮೆರೆಯಬೇಕೆಂಬ ಚಪಲ ಇವು ಯಾವುವೂ ಎಂದೂ ಕಾಣಬರಲಿಲ್ಲ. ವಿದ್ವಾಂಸರಾದರೂ ವಿನಯಶಾಲಿಗಳು; ಜಗದ್ಗುರುಗಳಾದರೂ ಗರ್ವವಿಲ್ಲ; ಶ್ರೀಮಂತರು ಓಲೈಸಿದರೂ ಭಾಗ್ಯವಂತರು ಬಡವರೆಂಬ ಭೇದವಿಲ್ಲ. ಬಹಿರ್ಮುಖವಾಗಿರುವಾಗ, ಯಾರಾದರೂ ನೋಡಲು ಬಂದರೆ ಅದೇ ಆದರ, ಅದೇ ನಿಧಾನ, ಅದೇ ಮಂದಹಾಸ. ಬೆಂಗಳೂರಿನಲ್ಲಿ ಶಂಕರಾಲಯದ ಕಟ್ಟೆಯ ಮೇಲೆ ಕೂತು, ಸಾಲಾಗಿ ಬರುತ್ತಿದ್ದ ನೂರಾರು ಮಂದಿಗೆ, ಅಧಿಕಾರಿಗಳು ಅವಸರಪಡಿಸುತ್ತಿದ್ದರೂ ಅವರ ಕಡೆಗೆ ಗಮನ ಹರಿಸದೆ, ಸಾವಧಾನವಾಗಿ ತೀರ್ಥ ಕೊಡುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೇನೆ; ಸಣ್ಣ ಹುಡುಗ ಬಂದು ಕೈಯೊಡ್ಡಿದರೂ ಅದೇ ಸಾವಧಾನ, ಅದೇ ತದೇಕಧ್ಯಾನ. ಯಾವುದರಲ್ಲೂ ಅವಸರವಿಲ್ಲ. ಸಹನೆಯೇ ಮೂರ್ತಿವೆತ್ತು ಬಂದಂಥ ವರ್ತನೆ ಅವರದ್ದು.

ಹೀಗೆ ಒಮ್ಮೆ ಅವರು ನೆರೆದವರಿಗೆ ತೀರ್ಥಕೊಡುತ್ತಿರುವಾಗ, ಅದೇ ಅಂಗಳದಲ್ಲಿಯೇ ಕಂಬಕ್ಕೆ ಒರಗಿಕೊಂಡು ಒಬ್ಬಾಕೆ ಅಳುತ್ತಿದ್ದರು. ಸ್ವಾಮಿಗಳು ತಲೆಯೆತ್ತಿ ನೋಡಿದಾಗ ಆಕೆಯನ್ನು ಕಂಡರು. ಒಡನೆಯೆ ಪಕ್ಕದಲ್ಲಿದ್ದ ಪರಿಚಾರಕನಿಗೆ ಅದೇಕೆ ಆಕೆ ಅಳುತ್ತಿದ್ದಾರೆ ತಿಳಿದು ಬಾ ಎಂದು ಹೇಳಿಕಳುಹಿಸಿದರು. ಪರಿಚಾರಕನು ಆಕೆಯಲ್ಲಿಗೆ ಹೋಗಿ ವಿಚಾರಿಸಿ, ಹಿಂದಕ್ಕೆ ಬಂದು "ಆಕೆ ಸಕೇಶಿಯಂತೆ (ಎಂದರೆ ವಿಧವೆಯಾದರೂ ತಲೆಗೂದಲನ್ನು ತೆಗೆಸದೆ ಇರಿಸಿಕೊಂಡಾಕೆ). ಅಂಥವರಿಗೆ ಸ್ವಾಮಿಗಳು ತೀರ್ಥ ಕೊಡಲಾರರೆಂದು ಆಕೆಯ ದುಗುಡ" ಎಂದು ವರದಿ ಒಪ್ಪಿಸಿದ. ಸ್ವಾಮಿಗಳು ಆಕೆಯನ್ನು ಕರೆದುಕೊಂಡು ಬರುವಂತೆ ಹೇಳಿ, ಆಕೆಗೆ ತೀರ್ಥವನ್ನು ಕೊಟ್ಟು ಕಳುಹಿಸಿದರು.

ಇನ್ನೊಮ್ಮೆ ನಡೆದ ಪ್ರಸಂಗ. ಸ್ವಾಮಿಗಳು ತೀರ್ಥ ಕೊಡುವಾಗ ಮಠದ ಕಡೆಯಿಂದ ಅವರ ಎದುರಾಗಿ ದೊಡ್ಡ ಹರಿವಾಣವೊಂದನ್ನು ಇರಿಸಿ, ಭಕ್ತರು ಅದರಲ್ಲಿ ತಮ್ಮ ಕಾಣಿಕೆಯನ್ನು ಹಾಕುವ ವಾಡಿಕೆ. ಸ್ವಾಮಿಗಳ ಮೇಲೂ ಭಕ್ತಿ ಅಷ್ಟಿರುವಾಗ ಹರಿವಾಣ ಬೆಳ್ಳಿನಾಣ್ಯಗಳಿಂದ ತುಂಬಿ ತುಳುಕುತ್ತಿದ್ದುದು ಸಹಜವೇ. ಹೀಗಿದ್ದಾಗ ಒಬ್ಬರು ಮುದುಕರು ಬಂದು ತೀರ್ಥಕ್ಕೆ ಕೈಯೊಡ್ಡಿ ತೀರ್ಥ ತೆಗೆದುಕೊಂಡಮೇಲೆ ಮುಖ ಮುಚ್ಚಿಕೊಂಡು ಕಣ್ಣೀರಿಟ್ಟರು. ಸ್ವಾಮಿಗಳು ತೀರ್ಥ ಕೊಡುವುದನ್ನು ನಿಲ್ಲಿಸಿ ''ಏಕೆ? ಏನಾಯಿತು?'' ಎಂದು ವಿಚಾರಿಸಿದರು. ಮುದುಕರು ಬಡವರು, ತಮ್ಮ ಮಗಳಿಗೆ ನಿಶ್ಚಯವಾಗಿದ್ದು, ಮುದುವೆ ಮಾಡಿಕೊಡಲು ಹಣವಿಲ್ಲದೆ ಏನೇನೋ ಯತ್ನಮಾಡಿ ಸೋತಿದ್ದರು. ದಿಕ್ಕು ತೋಚದೆ ಸ್ವಾಮಿಗಳ ಆಶೀರ್ವಾದಕ್ಕಾಗಿ ಬಂದಿದ್ದರು. ಇದನ್ನೆಲ್ಲಾ ಹೇಳಿಕೊಂಡು ''ಸ್ವಾಮಿಗಳು ಕರುಣೆಮಾಡಿ 'ಮದುವೆಯಾಗುತ್ತದೆ ಹೋಗು' ಎಂದು ಹೇಳಿದರೆ ಸಾಕು. ಅದೇ ನನಗೆ ಧೈರ್ಯವನ್ನು ತರುತ್ತದೆ; ಹೇಗೋ ಅನುಕೂಲವಾಗುತ್ತದೆ'' ಎಂದು ಕೈಯೊಡ್ಡಿ ಬೇಡಿಕೊಂಡರು. ಸ್ವಾಮಿಗಳು ಮರುಮಾತನ್ನಾಡದೆ, ಪರಿಚಾರಕನಿಗೆ ಕೈಸನ್ನೆಮಾಡಿ, ಎದುರಿಗಿದ್ದ ಹರಿವಾಣದಲ್ಲಿ ರಾಶಿಯಾಗಿ ಬಿದ್ದಿದ್ದ ಹಣವನ್ನೆಲ್ಲ ಆ ಮುದುಕರ ಮಡಿಲಿಗೆ ಸುರಿಯುವಂತೆ ಸೂಚಿಸಿದರು. ಮುದುಕರು ಕಕ್ಕಾಬಿಕ್ಕಿಯಾದರು, ಮಠದ ಅಧಿಕಾರಿಗಳಂತೂ ಹೌಹಾರಿದರು. ಸ್ವಾಮಿಗಳ ಮುಖದಲ್ಲಿ ಮಾತ್ರ ಮಂದಹಾಸ. ಬೆರಗಾಗಿ ನೋಡುತ್ತ ನಿಂತವರಲ್ಲಿ ನಾನೊಬ್ಬ.

ನಡೆಯುವಾಗ ಅವರದ್ದು ಧೀರ ಗಂಭೀರ ಗತಿ. ನೆಲದ ಮೇಲೆ ದೃಷ್ಟಿಯಿಟ್ಟು, ಆತುರಪಡದೆ, ಹೆಜ್ಜೆಗಳಿಂದ ಸದ್ದುಮಾಡದೆ ನಿಧಾನವಾಗಿ ನಡೆಯುತ್ತಿದ್ದರು. ನೆಲದ ಮೇಲೆ ಏನಾದರೂ ಹುಳುವೋ, ಹುಪ್ಪಟೆಯೋ ಇದ್ದೀತು, ತನ್ನಿಂದ ಅದಕ್ಕೆ ತೊಂದರೆಯಾಗಬಾರದು ಎನ್ನುವ ಕಲ್ಪನೆ. ಮನುಷ್ಯರ ನೆರಳು ನೆಲದ ಮೇಲೆ ಬಿದ್ದಿತೆಂದರೆ, ಅದರ ಮೇಲೆ ಅವರು ಕಾಲಿರಿಸದೆ ಅದನ್ನು ಬಳಸಿಕೊಂಡು ಹೋಗುವರು, ಗುಡಿಯ ನೆರಳು ನೆಲದ ಮೇಲೆ ಬಿದ್ದಾಗಲೂ ಅದನ್ನು ಅವರು ತುಳಿಯರು. ಸಾಮಾನ್ಯವಾಗಿ ಕೈಗಳನ್ನು ಮುಂಭಾಗದಲ್ಲಿ ಒಂದನ್ನೊಂದು ಹಿಡಿದಂತೆ ಇರಿಸಿಕೊಳ್ಳುವುದು ವಾಡಿಕೆ. ಕೂತಿರುವಾಗ ಯಾವೊಂದು ಅಂಗಚಲನೆಯೂ ಇಲ್ಲದೆ, ದೃಢವಾದ ಆಸನದಲ್ಲಿ

ಪ್ರತಿಮೆಯಂತೆ ಕಾಣುವರು. ಸಭೆಯಲ್ಲಿರುವಾಗ ನಡೆಯುತ್ತಿರುವ ವಾಕ್ಯಾರ್ಥವನ್ನೋ ಪ್ರವಚನವನ್ನೋ ಆದರದಿಂದ ಕಿವಿಯಾಲಿಸಿ ಕೇಳುವರು ; ಉದಾಸೀನದಿಂದ ಕೂತಿರುವುದು, ಅತ್ತಿತ್ತ ನೋಡುತ್ತಿರುವುದು ಅವರ ಪದ್ಧತಿಯಲ್ಲ.

ಮಾತನಾಡುವಾಗ ಮಿತವಾಗಿ, ಮೆದುವಾಗಿ, ಖಚಿತವಾಗಿ ಹೊರಬರುವ ಮಾತುಗಳು. ಬಹುಮಟ್ಟಿಗೆ ಅವರು ಮಿತಭಾಷಿಗಳು; ಎಷ್ಟು ಪ್ರಸಕ್ತವೋ, ಎಷ್ಟು ಅಗತ್ಯವೋ ಅಷ್ಟೇ ಮಾತು. ನಸುನಗುತ್ತ ಕುಶಲಪ್ರಶ್ನೆ, ಸಮಯೋಚಿತವಾದ ಒಂದೆರಡು ಮಾತನಾಡಿದರೆ ಮುಗಿಯಿತು. ಮಾತಿನಲ್ಲಿ ಉದ್ವೇಗವೆನ್ನುವ ಸುಳಿವೂ ಕಾಣದು. ಮೊದಲಿಗೆ ಅವರು ಸಭೆಗಳಲ್ಲಿ ಪ್ರವಚನ ಮಾಡುತ್ತಿದ್ದುದುಂಟು. ಆಗ ಅವರ ವಾಗ್ಧಾರೆ ನಿರಂತರವಾದ ಘಂಟಾನಾದ-ದಂತೆ ಇರುತ್ತಿದ್ದಿತಂತೆ. ಅತ್ಯಂತ ಗಹನವಾದ ವಿಚಾರಗಳನ್ನೂ ತಿಳಿಯಾಗಿ, ಎಳೆ ಎಳೆಯಾಗಿ ಬಿಡಿಸಿ ಹೇಳುವ ಜಾಣ್ಮೆ ಅವರದ್ದಂತೆ. ವಿದ್ವತ್ಸಭೆಗಳಲ್ಲಿ ಸಂಸ್ಕೃತದಲ್ಲೇ ಪ್ರವಚನಮಾಡುತ್ತಿದ್ದರೆಂದೂ ಅವರ ಭಾಷೆ ಸರಳವಾಗಿರುತ್ತಿದ್ದಿತೆಂದೂ ಕೇಳಿದ್ದೇನೆ. ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲೂ ಪ್ರವಚನ ಮಾಡುತ್ತಿದ್ದರಂತೆ; ಆಗಲೂ ಸರಳವಾದ ಮಾತುಗಳು, ಗಂಭೀರವಾದ ಶೈಲಿ. ವಾಕ್ಯಾರ್ಥಗಳಲ್ಲಿ ಪಾಲ್ಗೊಳ್ಳುತ್ತಿದ್ದಾಗ ಅವರ ವಿದ್ವತ್ತಿಗೆ ವಿದ್ವಾಂಸರೂ ಮಣಿಯುವರು ಎಂದು ವಿದ್ವಾಂಸರ ಬಾಯಿಯಿಂದಲೇ ಕೇಳಿದ್ದೇನೆ. ವೇದಾಂತವಂತೂ ಸರಿಯೇ; ಆದರೆ ಮೀಮಾಂಸವೇ, ನ್ಯಾಯವೇ ನಿರುಕ್ತವೇ — ವ್ಯಾಕರಣವೇ ಅವುಗಳಲ್ಲೆಲ್ಲ ಅಗಾಧವಾದ ಪಾಂಡಿತ್ಯವಂತೆ ಅವರದ್ದು. ಆದರೆ ಅವರು ಎಂದೂ ತಮ್ಮ ಪಾಂಡಿತ್ಯವನ್ನು ಮೆರೆದವರಲ್ಲವಂತೆ. ಬರುಬರುತ್ತ ಸಭೆಗಳಲ್ಲಿ ಮಾತನಾಡುವುದನ್ನು ನಿಲ್ಲಿಸಿಬಿಟ್ಟರು. ಚರ್ಚೆಗಳಲ್ಲೂ ಪಾಲ್ಗೊಳ್ಳುತ್ತಿರಲಿಲ್ಲ. ಹೆಚ್ಚೆಂದರೆ ಒಮ್ಮೆ ತಲೆಯಾಡಿಸಿ ಸರಿಯೆಂದು ಸೂಚಿಸುವುದು; ತಮಗೆ ಒಪ್ಪಿಗೆ ಇಲ್ಲವೆಂದಾದರೆ ಒಂದು ಕಿರುನಗೆಯಷ್ಟೇ ಕಾಣಿಸಿಕೊಳ್ಳುತ್ತಿದ್ದುದು.

ಅವರ ಸಂಭಾಷಣೆಗಳು ಹಿತಮಿತವೇ; ಆದರೆ ಬೋಧಪ್ರದವಾಗಿರುವುವು. ನಡುನಡುವೆ ಮಂದಹಾಸದ ಮಿಂಚು. ಮಾತನಾಡುವಾಗ ಕೈಯಾಡಿಸುವುದಾಗಲಿ ತಲೆಯಾಡಿಸುವುದಾಗಲಿ ದನಿಯೇರಿಸುವುದಾಗಲಿ

ಏನೂ ಇರದು. ಮಾತೂ ತುಂಬ ಮೃದು, ಕಿವಿಗೊಟ್ಟು ಕೇಳಿದರೇ ಉಂಟು. ಮೊದಮೊದಲು ಅವರ ಸಂಭಾಷಣೆಯಲ್ಲಿ ಹರಿತವಾದ ತರ್ಕ, ಮೊನಚಾದ ವಾದ ಇದ್ದಂತೆ ಆರ್. ಕೃಷ್ಣಸ್ವಾಮಿ ಅಯ್ಯರು ಬರೆದಿರುವ ಪುಸ್ತಕಗಳಿಂದ (ಡಯಲಾಗ್ಸ್ ವಿತ್ ದ ಗುರು, ಇತ್ಯಾದಿ) ತಿಳಿದುಬರುತ್ತದೆ; ಕೆಲವೊಮ್ಮೆ ಸಾಕ್ರಟೀಸನ ಪದ್ಧತಿಯನ್ನು ಹಿಡಿದು ಎದುರಿನವರ ಬಾಯಿಕಟ್ಟುವುದೂ ಇದ್ದಂತೆ ತೋರುತ್ತದೆ. ಆದರೆ ಹೀಗೆ ಅವರು ಎಂದಾದರೂ ವಾದ ಮಾಡುತ್ತಿದ್ದರೇ ಎಂದು ಊಹಿಸಿಕೊಳ್ಳುವುದೂ ಕಷ್ಟವಾಗುತ್ತದೆ. ಮೂಲದಲ್ಲಿ ಕೇಳಿದ ಮಾತುಕತೆಗಳಿಗೆ ಅಯ್ಯರೇ, ಸ್ವಾರಸ್ಯವಾಗಿರಲೆಂದು, ಈ ರೂಪವನ್ನು ಕೊಟ್ಟರೋ ಎಂದೂ ಒಮ್ಮೊಮ್ಮೆ ಸಂಶಯವಾಗುತ್ತದೆ. ಅದು ಹಾಗಿರಲಿ; ವಾದಮಾಡುವುದು, ಚರ್ಚೆಯನ್ನು ಬೆಳೆಸುವುದು ಅವರ ಸ್ವಭಾವದಲ್ಲಿರಲಿಲ್ಲ.

ಯಾವ ಸಂದರ್ಭದಲ್ಲೂ ಅವರು ಇತರರ ಮನಸ್ಸನ್ನು ನೋಯಿಸುವಂತೆ ಮಾತನಾಡುತ್ತಿರಲಿಲ್ಲ. ಪರಮತ ಖಂಡನೆಯು ಸ್ವಮತ ಮಂಡನೆಗೆ ಅವಶ್ಯ-ವಾದುದು ಎಂದು ಅವರು ಒಪ್ಪಲಿಲ್ಲ. ಉಳಿದ ಆಚಾರ್ಯರ, ಗುರುಗಳ, ಪಂಡಿತರ ವಿಚಾರವಾಗಿ ತುಂಬ ಗೌರವದಿಂದಲೇ ನಡೆದುಕೊಳ್ಳುತ್ತಿದ್ದರು. ಒಮ್ಮೆ ಪಂಡಿತರೊಬ್ಬರು ದ್ವೈತಮತವನ್ನು ಖಂಡಿಸಿ ಗ್ರಂಥವೊಂದನ್ನು ಬರೆದು ಸ್ವಾಮಿಗಳ ಮುಂದೆ ತಂದಿಟ್ಟರು.

ತಮ್ಮ ಈ ಪ್ರಯತ್ನವನ್ನು ಸ್ವಾಮಿಗಳು ಪ್ರಶಂಸೆಮಾಡಿ ಪುರಸ್ಕರಿಸುವರೆಂದು ಪಂಡಿತರ ಆಸೆ. ಗ್ರಂಥದ ವಿಷಯವನ್ನು ಪಂಡಿತರು ಹೇಳಿದ ಮೇಲೆ ಸ್ವಾಮಿಗಳು "ಪುಣ್ಯ ಪುರುಷಾರ್ಥಗಳಿಲ್ಲದ ಈ ಹೊರೆಯನ್ನು ನಮ್ಮ ಬಳಿ ಏಕೆ ತಂದಿರಿ? ಗ್ರಂಥರಚನೆಯ ಸಾಮರ್ಥ್ಯವನ್ನು ಭಗವಂತ ನಿಮಗೆ ಅನುಗ್ರಹಿಸಿದ್ದಾನೆ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಡವೆ? ಯಾವುದೇ ಕೆಲಸವನ್ನು ಮಾಡಿದರೂ ಅದರಲ್ಲಿ ಐಹಿಕವೋ ಆಮುಷ್ಮಿಕವೋ ಆದ ಫಲವಿರಬೇಕು ತಾನೆ? ಇಂಥ ಗ್ರಂಥವನ್ನು ಬರೆದು ಏನು ಸಾಧಿಸುತ್ತೀರಿ? ಅಲ್ಲದೆ, ಅಹಿಂಸೆಯು ಪ್ರಥಮ ಧರ್ಮವೆಂದು ನೀವು ಕೇಳಿಲ್ಲವೆ? ಎರಡನೆಯವರ ಮನಸ್ಸನ್ನು ನೋಯಿಸುವ ಒಂದು ಮಾತನ್ನೂ ಆಡಲು ಪ್ರಾಜ್ಞರು ಹಿಂಜರಿಯುತ್ತಾರೆ. ಹೀಗಿರುವಾಗ ಇಡೀ ಒಂದು ಮತವನ್ನೇ ಖಂಡಿಸುವ ಈ ಗ್ರಂಥದಿಂದ ಎಷ್ಟು ಮಂದಿಯ ಮನಸ್ಸು ನೋಯುತ್ತದೆ ಎಂಬುದನ್ನು ಯೋಚಿಸೋಣವಾಗಲಿ, ನಿರರ್ಥಕವಾದ

ಈ ಕಾರ್ಯದಲ್ಲಿ ಆಯುಸ್ಸನ್ನು ಕಳೆಯಬಹುದೆ? ಅಷ್ಟು ಸಾಲದೆ, ಅದರಿಂದ ನಮ್ಮ ಕಾಲವನ್ನೂ ಹಾಳುಮಾಡಲು ಬರಬಹುದೇ?'' ಎಂದು ಹೇಳಿದರು.

ಪಂಡಿತರು ತಂದಿಟ್ಟ ಗ್ರಂಥವನ್ನು ಕಣ್ಣೆತ್ತಿಯೂ ನೋಡಲಿಲ್ಲ. ಪಂಡಿತರು ಸಹಜವಾಗಿಯೇ ಖಿನ್ನರಾದರು. ಅದನ್ನು ಗಮನಿಸಿ ಸ್ವಾಮಿಗಳು ''ನಿಮ್ಮ ಮನಸ್ಸನ್ನು ನೋಯಿಸಲು ನಾವು ಈ ಮಾತುಗಳನ್ನಾಡುತ್ತಿಲ್ಲ, ನಮ್ಮ ಅಂತಃಕರಣದ ನೋವನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ, ಅಷ್ಟೇ'' ಎಂದು ಸಂತೈಸಿ ಕಳುಹಿಸಿದರು.

ಇನ್ನೊವ್ಮೆ ಮಾತಿನ ನಡುವೆ ಒಬ್ಬರು, ರಾಮಾನುಜಾಚಾರ್ಯರು ದೇವಾಲಯದ ಗೋಪುರವನ್ನೇರಿ ಅಷ್ಟಾಕ್ಷರೀಮಂತ್ರವನ್ನು ಗಟ್ಟಿಯಾಗಿ ಕೂಗಿ-ಹೇಳಿದುದನ್ನು ಪ್ರಸ್ತಾಪಿಸಿ ''ಕೆಲವರು ಶ್ರೀವೈಷ್ಣವರು ಇದನ್ನು ನಂಬುವುದಿಲ್ಲ'' ಎಂದು ಹೇಳಿದರು. ಸ್ವಾಮಿಗಳು ಕುತೂಹಲದಿಂದ ''ಏಕೆ?'' ಎಂದು ಕೇಳಿದರು. ಅದಕ್ಕೆ ಆತ ''ಏಕೆಂದರೆ, ಹಾಗೆ ಮಾಡಿದ್ದರಿಂದ ರಾಮಾನುಜಾಚಾರ್ಯರು ವರ್ಣಾಶ್ರಮಧರ್ಮಗಳನ್ನು ಕಡೆಗಣಿಸಿದಂತೆ ಆಗುತ್ತದೆಯಷ್ಟೆ'' ಎಂದರು. ಸ್ವಾಮಿಗಳು, ''ಅದು ಹೇಗೆ?'' ಎಂದು ಮತ್ತೆ ಕೇಳಿದರು. ಆತ, ''ಮಂತ್ರದ ಉಪದೇಶ ಮಾಡುವಾಗ ವರ್ಣ-ಆಶ್ರಮ-ಅಧಿಕಾರ ಇವನ್ನೆಲ್ಲ ಗಮನಿಸದಿದ್ದರೆ ಧರ್ಮವನ್ನು ಕಡೆಗಣಿಸಿದಂತಲ್ಲವೆ?'' ಎಂದರು. ಸ್ವಾಮಿಗಳು ನಸುನಗುತ್ತ ''ರಾಮಾನುಜಾಚಾರ್ಯರು ಹೇಳಿದ್ದು ಮಂತ್ರವಲ್ಲವೆಂದೂ, ಅವರು ಮಾಡಿದ್ದು ಉಪದೇಶವಲ್ಲವೆಂದೂ ಗ್ರಹಿಸಿದರೆ ಹೇಗೆ?''ಎಂದು ಕೇಳಿದರು. ಆತ ಅಚ್ಚರಿಯಿಂದ ''ಅಷ್ಟಾಕ್ಷರೀ ಎನ್ನುವುದು ಮಂತ್ರವಲ್ಲವೆ? ಅವರು ಅದನ್ನು ಉಚ್ಚರಿಸಿ ಹೇಳಿದಾಗ ಉಪದೇಶವಲ್ಲವೆ?'' ಎಂದು ಕೇಳಲು, ಸ್ವಾಮಿಗಳು ''ಎರಡೂ ಅಲ್ಲ, ರಾಮಾನುಜಾಚಾರ್ಯರಿಗೆ ಇಷ್ಟೂ ತಿಳಿದಿರಲಿಲ್ಲವೆಂದು ಹೇಳಬಹುದೆ? ಮಂತ್ರವೆಂದರೆ ಅಕ್ಷರಗಳ ಸಮುದಾಯವಲ್ಲ, ಉಪದೇಶವೆಂದರೆ ಸುಮ್ಮನೆ ಅದನ್ನು ಉಚ್ಚರಿಸುವುದಲ್ಲ. ಅಷ್ಟೇ ಆದರೆ ಅದು ಬರಿಯ ಶಬ್ದ. ಮಂತ್ರವೆಂದರೆ ಗುರುವು ಅದರಲ್ಲಿ ತನ್ನ ಶಕ್ತಿಯನ್ನು ತುಂಬಿ, ವಿಧಿಯಂತೆ ಆಸ್ಥೆಯಿಂದ ವಿನಯದಿಂದ ಬಂದ ಶಿಷ್ಯನಿಗೆ ಅವನ ಸ್ವರೂಪೋದ್ಧಾರದ ದೃಷ್ಟಿಯಿಂದ ವಿಧ್ಯುಕ್ತವಾಗಿ ಕೊಡುವುದು ಉಪದೇಶ. ರಾಮಾನುಜಾಚಾರ್ಯರಿಗೆ ಇದು ತಿಳಿದೇ ಇದ್ದಿತು. ಬಹುಶಃ ಕೆಲವರು ರಹಸ್ಯವಾಗಿ ಅವರು ಮಂತ್ರೋಪದೇಶ ಮಾಡುತ್ತಿದ್ದುದನ್ನು ವಿರೋಧಿಸಿದರೋ,

ಅಷ್ಟಾಕ್ಷರೀಮಂತ್ರವನ್ನು ತಮಗೂ ಉಪದೇಶಮಾಡಿರೆಂದು ಅಧಿಕಾರವಿಲ್ಲದಿದ್ದರೂ ಒತ್ತಾಯಮಾಡಿದರೋ, ಮಂತ್ರೋಪದೇಶ ಅಷ್ಟು ಸುಲಭವಾದುದಲ್ಲವೆಂದು ಆಚಾರ್ಯರು ಹೇಳಿದರೂ ಇವರು ಕೇಳಲಿಲ್ಲವೋ, ಹೀಗೆ ಏನೋ ನಡೆದು ಗುಡಿಯ ಗೋಪುರವೇರಿ ಗಟ್ಟಿಯಾಗಿ ಹೇಳಿಬಿಟ್ಟರಾಯಿತು ಎಂದು ಬಗೆದಿರಬೇಕು. ಹೇಳಿದಮಾತ್ರಕ್ಕೆ ಮಂತ್ರವಾಗಲಿಲ್ಲ, ಅದನ್ನು ಕೇಳಿದ ಮಾತ್ರಕ್ಕೆ ಉಪದೇಶವಾಗಲಿಲ್ಲ, ಅಲ್ಲವೆ? ಆಚಾರ್ಯರು ಧರ್ಮವನ್ನು ಕಡಿಗಣಿಸಿದರು ಎಂದು ಹೇಳಬಾರದು; ಹೀಗೆ ಅರ್ಥ- ಮಾಡಿಕೊಂಡರೆ ಒಳ್ಳೆಯದು'' ಎಂದು ವಿವರಿಸಿದರು.

೧೯೪೮ರಲ್ಲಿ ನಡೆದ ಮಾತುಕತೆ. ಮೈಸೂರು ಒಂದು ಸಂಸ್ಥಾನವಾಗಿದ್ದಾಗ ಮಂತ್ರಿವರ್ಗದಲ್ಲಿದ್ದ ಎ. ವಿ. ರಾಮನಾಥನ್ ಈ ಮಾತುಕತೆಯನ್ನು ನೆನಪಿನಲ್ಲಿ ಉಳಿಸಿಕೊಟ್ಟಿದ್ದಾರೆ. ಯಾರೋ ಭಕ್ತರೊಬ್ಬರು ಸ್ವಾಮಿಗಳ ಬಳಿ ಬಂದು ''ನನ್ನ ಜೀವನದಲ್ಲಿ ಐದಾರು ಮಂದಿ ಜೀವನ್ಮುಕ್ತರನ್ನು ಕಾಣುವ ಯೋಗವಿದ್ದಿತು; ಆದರೆ ಅವರಲ್ಲೊಬ್ಬರು ಕುರುಬರು, ಇನ್ನೊಬ್ಬರು ಮಹಮ್ಮದೀಯರು, ಮತ್ತೊಬ್ಬರು ಕ್ರೈಸ್ತರು, ಮಗದೊಬ್ಬರು ಶ್ರೀವೈಷ್ಣವರು, ಹೀಗೆ ಬೇರೆಬೇರೆ-ಯಾಗಿದ್ದರೂ ಅವರ ಅನುಭವ ಅದ್ವೈತದ್ದೇ ಆಗಿದ್ದಿತು'' ಎಂದು ಹೇಳಿದರು. ಆಗ ಸ್ವಾಮಿಗಳು ''ಆದರೆ ಎಂದೇನು ಹೇಳೋಣವಾಗುತ್ತದೆ? ಆತ್ಮಾನುಭವದಲ್ಲಿ ಜಾತಿಯ, ಉದ್ಯೋಗದ ಭೇದವುಂಟೊ? ಅದ್ವೈತಾನುಭವವೆನ್ನುವುದು ಶಂಕರಾಚಾರ್ಯರ ಶಿಷ್ಯರ ಸ್ವತ್ತೋ? ಶೃಂಗೇರಿಮಠದ ಜಹಗೀರಿಯೋ? ಅದು ನಿತ್ಯವಾದ ತತ್ತ್ವ. ಶಂಕರಾಚಾರ್ಯರಿಗೆ ಮೊದಲೂ ಇದ್ದದ್ದೇ. ಯಾರಾದರೂ, ಯಾವ ಕಾಲದಲ್ಲಿಯಾದರೂ, ಎಲ್ಲಿಯಾದರೂ ಅದನ್ನು ಪಡೆದುಕೊಳ್ಳುವುದು ಸಾಧ್ಯ'' ಎಂದು ಹೇಳಿದರು.

ಅವರು ಮೊದಲಬಾರಿ ದಕ್ಷಿಣಯಾತ್ರೆಗೆ ಹೋಗಿದ್ದ ಸಂದರ್ಭದಲ್ಲಿ ಕನ್ಯಾಕುಮಾರಿಯಲ್ಲಿ ಕೆಲವು ದಿನಗಳಿದ್ದರಷ್ಟೆ. ಆಗ ಇವರು ತಂಗಿದ್ದ ಬಿಡಾರದಿಂದ ಸ್ವಲ್ಪ ದೂರದಲ್ಲಿ ಹಲವಾರು ಮಂದಿ ಕ್ರೈಸ್ತರೂ ಇತರರೂ ಸ್ವಾಮಿಗಳ ಸಂದರ್ಶನವನ್ನು ಬಯಸಿ ನಿಂತಿದ್ದರು. ಇವರು ವಿಧರ್ಮೀಯರೆಂದು ತಿಳಿದ

ಅಧಿಕಾರಿಗಳು ಅವರೆಲ್ಲ ನಾಸ್ತಿಕರೆಂದು ಬಗೆದು ಅವರನ್ನು ಬಿಡಾರದೊಳಗೆ ಬಿಡಲಿಲ್ಲ. ಈ ಸುದ್ದಿ ಸ್ವಾಮಿಗಳಿಗೆ ಮುಟ್ಟಿತು. ಅವರೇ ಹೊರಗೆ ಬಂದು ಅವರೆಲ್ಲ ನಿಂತಿದ್ದ ಕಡೆ ಹೋಗಿ ಅವರನ್ನು ಕಂಡು ಅವರೊಂದಿಗೆ ಸ್ವಲ್ಪ ಹೊತ್ತು ಮಾತನಾಡಿ, ಆಶೀರ್ವದಿಸಿ ಹಿಂದಿರುಗಿದರು. ಆಗ ಒಳಗಿದ್ದವರಲ್ಲೊಬ್ಬರು, ಆ ಮಂದಿಯೆಲ್ಲ ನಾಸ್ತಿಕರು ಎಂದು ಹೀನಾಯವಾಗಿ ಮಾತನಾಡಲು, ಸ್ವಾಮಿಗಳು ನಸುನಕ್ಕು, ''ನಾಸ್ತಿಕತೆಯೆನ್ನುವುದು ಒಂದು ಜಾತಿಯಲ್ಲ. ಅದು ಅಭಿಪ್ರಾಯ ವಿಶೇಷವಷ್ಟೆ. ಅಭಿಪ್ರಾಯಗಳನ್ನು ಯಾರಾದರೂ ತಳೆಯಬಹುದು, ಯಾರಾದರೂ ಬಿಡಬಹುದು, ಯಾರಾದರೂ ಬದಲಾಯಿಸಬಹುದು. ಅವರ ಅಭಿಪ್ರಾಯಗಳು ನಮಗೆ ಸಮ್ಮತವಲ್ಲವೆಂಬಷ್ಟೇ ಕಾರಣದಿಂದ ಅವರನ್ನು ದೂರಬೇಕಾದುದಿಲ್ಲ, ದೂರ ಇರಿಸಬೇಕಾದುದಿಲ್ಲ'' ಎಂದರು.

ಯಾರು ಬಳಿಗೆ ಬಂದು ಉಪದೇಶವನ್ನು ಬಯಸಿದರೂ, ಏನಾದರೊಂದು ಶಾಸ್ತ್ರಭಾಗವನ್ನು ಕುರಿತು ಪ್ರಸಕ್ತವಾದ ನಾಲ್ಕು ಮಾತು ಹೇಳಿ ಕಳುಹಿಸುವರು; ಅವರನ್ನು ಸಾಧನೆಯಲ್ಲಿ ತೊಡಗಿಸುವರು. ಬಂದವರು ಪಂಡಿತರಾದರೆ 'ಮೂಕ ಕವಿಯ ಪಾದಾರವಿಂದಶತಕದಿಂದ ದಿನವೂ ಹತ್ತು ಶ್ಲೋಕಗಳನ್ನು ಓದೋಣವಾಗಲಿ', 'ದುರ್ವಾಸರ ದೇವೀಸ್ತುತಿಯ ಕವಚಭಾಗವನ್ನು ಓದೋಣವಾಗಲಿ', 'ಯಶ್ಛಂದಸಾಮೃಷಭಃ ಎಂದು ಮೊದಲಾಗುವ ಮಂತ್ರಗಳನ್ನು ಅನುಸಂಧಾನಮಾಡೋಣವಾಗಲಿ' ಎಂದು. ಮುಂತಾಗಿ ಹೇಳುವರು. ಬಂದವರು ಲೌಕಿಕರಾದರೆ ಗೀತೆಯಿಂದಲೋ ಶಿವಾನಂದ-ಲಹರಿಯಿಂದಲೋ ಸೌಂದರ್ಯಲಹರಿಯಿಂದಲೋ ಆತ್ಮಬೋಧ ದಿಂದಲೋ; ನೀಲಕಂಠದೀಕ್ಷಿತರ ಶಾಂತಿವಿಲಾಸ-ಆನಂದಸಾಗರಸ್ತವದಿಂದಲೋ, ಪಂಚದಶಿಯಿಂದಲೋ ಯಾವುದಾದರೊಂದು ಶ್ಲೋಕವನ್ನು ತಾವೇ ಹೇಳಿ ತಮ್ಮ ಅನುಭವದ ಆಧಾರದಮೇಲೆ ಅದರ ಅರ್ಥವನ್ನು ವಿವರಿಸುವರು. ಹಲವು ವೇಳೆ ಅವರು ವಿಷ್ಣುಸಹಸ್ರನಾಮವನ್ನು ಪಾರಾಯಣ ಮಾಡುವಂತೆ, ಗಾಯತ್ರೀಮಂತ್ರದ ಜಪಮಾಡುವಂತೆ, ಮಾರ್ಕಂಡೇಯಕೃತ ಶಿವಸ್ತೋತ್ರವನ್ನು ಹೇಳಿಕೊಳ್ಳುವಂತೆ, ಹನೂಮತ್ ಪಂಚರತ್ನವನ್ನು ಪುರಶ್ಚರಣ ಮಾಡುವಂತೆ ಸೂಚಿಸುತ್ತಿದ್ದರು.

ಕಾಶಿಯಲ್ಲಿರುತ್ತಿದ್ದ ಅವರ ಶಿಷ್ಯ ಸಚ್ಚಿದಾನಂದಸರಸ್ವತೀಸ್ವಾಮಿಗಳಿಗೆ ಭಗವದ್ಗೀತೆಯ ಹನ್ನೆರಡನೇ ಅಧ್ಯಾಯದ ಕೊನೆಯ ಎಂಟು ಶ್ಲೋಕಗಳ (೧೩-೨೦) ಅನುಸಂಧಾನ ಮಾಡಬೇಕೆಂದೂ, ಅನುಭವಕ್ಕೆ ತಂದುಕೊಳ್ಳಬೇಕೆಂದೂ ಹೇಳಿಕಳುಹಿಸಿದರು(ಮುಂಬಯಿಯ ಮಂತ್ರೇಶ್ವರ ಶರ್ಮಾ ಎಂಬ ಭಕ್ತರ ಮೂಲಕ). ಈ ಎಂಟು ಶ್ಲೋಕಗಳು 'ಧರ್ಮ್ಯಾಮೃತ'ವೆಂದು ಪ್ರಸಿದ್ಧವಾಗಿವೆ.

ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳಾಗಿದ್ದ ದೇವುಡು ನರಸಿಂಹಶಾಸ್ತ್ರಿಗಳು ಅವರ ಭಕ್ತರು. ತಮ್ಮ ಯಾವುದೋ ತೊಂದರೆಗೆ ಪರಿಹಾರವನ್ನು ಸೂಚಿಸಬೇಕೆಂದು ಒಮ್ಮೆ ಸ್ವಾಮಿಗಳಲ್ಲಿ ಬಿನ್ನವಿಸಿಕೊಂಡರು. ಆಗ ಸ್ವಾಮಿಗಳು ಅವರಿಗೆ ದತ್ತಮಂತ್ರವನ್ನು (ದತ್ತಪಂಚದಶೀ, ''ಓಂ ದತ್ತ ಓಂ ದತ್ತ ದತ್ತಾತ್ರೇಯ ಶ್ರೀ ದೇವದತ್ತ') ಉಪದೇಶಿಸಿದರು. ಮುಂಬಯಿಯ ಮಂತ್ರೇಶ್ವರ ಶರ್ಮರಿಗೆ ಹೀಗೆಯೇ ತೊಂದರೆಯುಂಟಾದಾಗ ಮೃತ್ಯುಂಜಯ ಮಂತ್ರವನ್ನು ಪತ್ರ ಮುಖೇನ ಸೂಚಿಸಿದರು. ತಮ್ಮಲ್ಲಿ ದೀಕ್ಷೆಗಾಗಿ ಬಂದ ಬಹುಜನರಿಗೆ 'ಗಾಯತ್ರೀ ಮಂತ್ರವೇ ಸಾಕು' ಎಂದು ಹೇಳಿ ಕಳುಹಿಸಿಬಿಡುತ್ತಿದ್ದರು. ಅವರ ನಸುನಗೆಯೇ ಹಲವರಿಗೆ ದೀಕ್ಷೆ, ಮತ್ತೆ ಕೆಲವರಿಗೆ ದೃಷ್ಟಿದೀಕ್ಷೆ; ಮಂತ್ರದೀಕ್ಷೆ. ಸ್ಪರ್ಶದೀಕ್ಷೆ ಇಲ್ಲವೇ ಇಲ್ಲ.

ಅನುಷ್ಠಾನಕ್ಕೆ ಬರದ ವೇದಾಂತದಿಂದ, ಶಾಸ್ತ್ರಾಧ್ಯಯನದಿಂದ ಏನೂ ಪ್ರಯೋಜನವಿರದೆಂದು ಸ್ವಾಮಿಗಳು ಮತ್ತೆ ಮತ್ತೆ ಹೇಳುತ್ತಿದ್ದರು. ಪಂಡಿತ ರಾಜ ವಿ. ಎಸ್. ರಾಮಚಂದ್ರ ಶಾಸ್ತ್ರಿಗಳು ಸ್ವಾಮಿಗಳಲ್ಲಿಯೇ ನ್ಯಾಯವೇದಾಂತ ಗ್ರಂಥಗಳನ್ನು ಅಧ್ಯಯನ ಮಾಡಿದ್ದವರು. ಶಾಸ್ತ್ರಿಗಳಿಗೆ ಲೌಕಿಕ ಪ್ರಯೋಜನದ ಸಲುವಾಗಿ ವೇದಾಂತದಲ್ಲಿ ವಿದ್ವತ್ ಪರೀಕ್ಷೆಯನ್ನು ಕೂಡಬೇಕೆನಿಸಿತು; ಕೆಲಸಕ್ಕೆ ಇದೊಂದು ಅರ್ಹತೆಯಾಗಿರುವ ಕಾರಣ, ಸ್ವಾಮಿಗಳೆದುರು ಅವರು ಇದನ್ನು ಅರಿಕೆ ಮಾಡಿಕೊಂಡಾಗ, ಸ್ವಾಮಿಗಳು ''ವೇದಾಂತ ಇರುವುದು ಅನುಷ್ಠಾನಕ್ಕೆ, ಅನುಭವಕ್ಕೆ, ಪರೀಕ್ಷೆಯನ್ನು ಪಾಸುಮಾಡಿ ಯಾರೂ ವೇದಾಂತಿಯಾಗುವುದಿಲ್ಲ, ನಮ್ಮ ಬಳಿ ಪಾಠ ಮಾಡಿದ್ದೀರಲ್ಲ, ಅದೇ ಅರ್ಹತೆಯಾಗದೆ? ಸುಮ್ಮನೆ ನಿಮ್ಮ ಪಾಡಿಗೆ ನೀವು ಅಧ್ಯಯನ ಮಾಡಿಕೊಳ್ಳಿ'' ಎಂದುಬಿಟ್ಟರು. ಶಾಸ್ತ್ರಿಗಳೂ

ಪರೀಕ್ಷೆಯ ಯೋಚನೆಯನ್ನು ಬಿಟ್ಟರು. ಆದರೆ ಮುಂದೆ ಕಾಶಿಯ ವಿಶ್ವವಿದ್ಯಾನಿಲಯದ ಸಂಸ್ಕೃತಕಾಲೇಜಿನ ಮುಖ್ಯಸ್ಥರ ಪದವಿಯೂ ಸರಕಾರದಿಂದ ಪುರಸ್ಕಾರ, ಸನ್ಮಾನ ಎಲ್ಲವೂ ಅವರಿಗೆ ಒದಗಿಬಂದುವು; ಸ್ವಾಮಿಗಳಲ್ಲಿ ಪಾಠಮಾಡಿದ್ದೇ ಕಾರಣವಾಯಿತು.

ಶುಷ್ಕತರ್ಕಕ್ಕಿಂತ ವೈದಿಕಕರ್ಮಾನುಷ್ಠಾನವು ಒಳಿತೆಂದು ಅವರ ಉಪದೇಶ. ಅದರಿಂದ ಅಂತಃಕರಣಶುದ್ಧಿಯಾದರೂ ಆದೀತು; ಶುಷ್ಕತರ್ಕದಿಂದ ರಾಗ-ದ್ವೇಷಗಳು ಕೆರಳಬಹುದು ಅಷ್ಟೆ! ಒಮ್ಮೆ ಪ್ರಸಿದ್ಧರಾದ ಪಂಡಿತರೊಬ್ಬರು, ಪೂರ್ವಪರಿಚಿತರು, ಸ್ವಾಮಿಗಳ ಬಳಿ ಬಂದು ನಮಸ್ಕರಿಸಿದರು. ಸ್ವಾಮಿಗಳು ನಗುಮೊಗದಿಂದ ಅವರ ಕುಶಲವನ್ನು ವಿಚಾರಿಸಿಕೊಂಡು ಅನಂತರ ''ದಿನವೂ ಔಪಾಸನೆ ಮಾಡೋಣವಾಗಿದೆಯೆ?''ಎಂದು ಕೇಳಿದರು. ಪಂಡಿತರು ''ಔಪಾಸನೆಗೆ ಸಮಯವಿಲ್ಲ, ಮಹಾಸ್ವಾಮಿ. ಪಾಠ ಹೇಳುವುದು, ಗ್ರಂಥಗಳನ್ನು ನೋಡುವುದು, ಇದರಲ್ಲೇ ಇರುವ ಕಾಲವೆಲ್ಲ ಮುಗಿಯುತ್ತದೆ!'' ಎಂದು ಹೆಮ್ಮೆಯಿಂದ ಉತ್ತರಕೊಟ್ಟರು. ಸ್ವಾಮಿಗಳು ನಸುನಕ್ಕು ''ಓಹೋ, ಕರ್ಮಕಾಂಡಕ್ಕೆ ಮೊದಲೇ ಜ್ಞಾನಕಾಂಡ ಆರಂಭ ವಾಯಿತಲ್ಲ?''ಎಂದರು.

ಇನ್ನೊಮ್ಮೆ ಆಂಧ್ರಪ್ರದೇಶದಿಂದ ಮೀಮಾಂಸಾಶಾಸ್ತ್ರಭಾಗದಲ್ಲಿ ವಿದ್ವಾಂಸರಾಗಿದ್ದವರೊಬ್ಬರು, ವಿಜಯನಗರದವರು, ಸ್ವಾಮಿಗಳ ಬಳಿ ಬಂದಾಗ, ಅವರು ಹೀಗೆಯೇ ಔಪಾಸನೆ ಮಾಡುತಿದ್ದಾರೋ ಎಂದು ವಿಚಾರಿಸಿಕೊಂಡು ಅವರು ಇಲ್ಲವೆಂದಾಗ, ಸ್ವಾಮಿಗಳು ''ಮೀಮಾಂಸಾಶಾಸ್ತ್ರವು ಪ್ರವಚನಕ್ಕೆ ಮಾತ್ರವೊ? ಅನುಷ್ಠಾನಕ್ಕೂ ಬರುವುದೋ?'' ಎಂದು ಕೇಳಿದರು.

ಬೆಂಗಳೂರಿನಿಂದ ವೈದಿಕರೊಬ್ಬರು ಬಂದಿದ್ದರು; ದೊಡ್ಡ ಪಂಡಿತರು, ಶಂಕರಭಾಷ್ಯವನ್ನು ಹಲವಾರು ಶಿಷ್ಯರಿಗೆ ಪಾಠ ಹೇಳುತ್ತಿದ್ದವರು. ಸ್ವಾಮಿಗಳು ಅವರ ಕುಶಲವನ್ನು ವಿಚಾರಿಸಿ, ''ಭಾಷ್ಯಪಾಠ ನಡೆಯುತ್ತಿದೆಯೋ?'' ಎಂದು ಕೇಳಿದರು. ಹೌದೆಂದು ಅವರು ಹೇಳಲು ''ಔಪಾಸನೆಯೂ ನಡೆಯುತ್ತಿದೆ, ತಾನೆ?'' ಎಂದು ಮತ್ತೆ ಕೇಳಿದರು. ಪಂಡಿತರು, ''ಔಪಾಸನೆಗೆ ಅನುಕೂಲವಿಲ್ಲ, ಮಹಾಸ್ವಾಮಿ; ದೊಡ್ಡ ಊರು, ಬೆರಣಿ ಸಿಗುವುದು ಕಷ್ಟ'' ಎಂದು ಉತ್ತರಕೊಟ್ಟರು. ಸ್ವಾಮಿಗಳು, ''ಓಹೋ, ನಿಮ್ಮ ಊರಿನ ಹಸುಗಳು ಕಾಫಿಗೆ

ಹಾಲು ಕೊಡುತ್ತವೆ ಅಷ್ಟೆ, ಔಪಾಸನೆಗೆ ಸಗಣಿ ಹಾಕುವುದಿಲ್ಲ ಅಲ್ಲವೆ?'' ಎಂದರು.

ಅವರು ಬಹಿರ್ಮುಖವಾಗಿರುವಾಗ ಅವರ ಆಚಾರನಿಷ್ಠೆ ಅನ್ಯಾದೃಶವಾದುದು. ಅವರ ದಕ್ಷಿಣಯಾತ್ರೆಯ ಸಂದರ್ಭದಲ್ಲಿ ರಾಮೇಶ್ವರದಲ್ಲಿರುವಾಗ ಅವರಿಗೆ ಒಂದು ದಿನ ಜ್ವರ ಜೋರಾಗಿ ಕಾಯುತ್ತಿತ್ತು. ಸರ್ವಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳು ಸ್ವಾಮಿಗಳ ಪರಿಚಾರಕರಿಗೆ ''ಈ ಹೊತ್ತು ಸ್ವಾಮಿಗಳು ಮಂತ್ರಸ್ನಾನಮಾಡಲಿ; ಅವರಿಗೆ ಸ್ನಾನಕ್ಕೆ ನೀರು ಬೇಕಾದುದಿಲ್ಲ'' ಎಂದು ಅಪ್ಪಣೆಮಾಡಿದರಂತೆ. ಸ್ನಾನಕ್ಕೆಂದು ಬಂದ ಸ್ವಾಮಿಗಳಿಗೆ ಇದು ತಿಳಿದಾಗ ''ಅನುಷ್ಠಾನವನ್ನು ಬಿಟ್ಟಾದರೂ ಸಂನ್ಯಾಸಿಯು ಶರೀರವನ್ನು ಕಾಪಾಡಿಕೊಳ್ಳಬೇಕೆ? ಯಾವ ಮಕ್ಕಳುಮರಿಗಳಿಗಾಗಿ ಅವನು ಶರೀರವನ್ನು ಉಳಿಸಿಕೊಳ್ಳಬೇಕಾದುದಿದೆ?'' ಎಂದು ಗದರಿಸಿ, ಎಂದಿನಂತೆ ಸ್ನಾನವನ್ನು ಮುಗಿಸಿಯೇ ಹೊರಟರಂತೆ. ಆದರೆ ಬೇರೆಯವರಿಗೂ ಈ ನಿಷ್ಠೆಯಿರಬೇಕೆಂದು ಹಟ ಮಾಡುತ್ತಿರಲಿಲ್ಲ.

ಒಮ್ಮೆ ಅವರು ವೇದಾಂತಪಾಠಕ್ಕೆ ಸಿದ್ಧರಾಗಿ ಬರುವಾಗ ಒಬ್ಬ ವಿದ್ಯಾರ್ಥಿ ಬಂದು ನಮಸ್ಕಾರಮಾಡಿದ. ಸ್ವಾಮಿಗಳು ಅವನ ಕುಶಲವನ್ನು ವಿಚಾರಿಸುತ್ತ ''ಪ್ರತಿದಿನವೂ ಗಾಯತ್ರೀಜಪವನ್ನು ಸಹಸ್ರಾವೃತ್ತಿ ಮಾಡೋಣ-ವಾಗುತ್ತಿದೆಯೋ?'' ಎಂದು ಕೇಳಿದರು. ವಿದ್ಯಾರ್ಥಿ ಅಂಜಿಕೆಯಿಂದಲೂ ನಾಚಿಕೆಯಿಂದಲೂ ತಲೆತಗ್ಗಿಸಿ 'ಇಲ್ಲ'ವೆಂದಾಗ, ಸ್ವಾಮಿಗಳು ಅವನನ್ನು ಸಮಾಧಾನಪಡಿಸುತ್ತ ''ಹೋಗಲಿ ಬಿಡಿ, ವೇದಾಂತ ವಿಚಾರವನ್ನು ಮಾಡೋಣ ವಾಗುತ್ತಿದೆಯಲ್ಲ, ಅದು ಬ್ರಹ್ಮಚಿಂತನವೇ, ಮತ್ತೇನು?'' ಎಂದರು. ''ಹೋಗುತ್ತ ಬರುತ್ತ, ಅದನ್ನು ಇದನ್ನು ಮಾಡುವಾಗಲೆಲ್ಲ ಶಾಸ್ತ್ರಾರ್ಥಚಿಂತನೆಯನ್ನೇ ಮಾಡುತ್ತಿರಬೇಕು'' ಎಂದು ಅವರು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

ನರಸಿಂಹವನದಲ್ಲಿ ಬಹಿರ್ಮುಖರಾಗಿರುವಾಗ ಅವರ ದಿನಚರಿ ಸಾಮಾನ್ಯವಾಗಿ ಹೀಗಿರುತ್ತಿದ್ದಿತು: ಮುಂಜಾನೆ ಎದ್ದವರೆ ಸ್ನಾನಾದಿಗಳನ್ನು ಮುಗಿಸಿ ಆರೂಮುಕ್ಕಾಲು-ಏಳುಗಂಟೆ ಸಮಯಕ್ಕೆ ಜಪಕ್ಕೆ ಕೂಡುವರು. ಮಧ್ಯಾಹ್ನ ಒಂದು ಗಂಟೆಯವರೆಗೂ ಪದ್ಮಾಸನದಲ್ಲೇ ಕುಳಿತಿದ್ದು, ಅನಂತರ ಎದ್ದು

ತುಂಗಾನದಿಗೆ ಸ್ನಾನಕ್ಕೆ ಹೋಗುವರು. ಸ್ನಾನ ಮುಗಿಸಿ ಮಾಧ್ಯಾಹ್ನಿಕವನ್ನು ಮಾಡಿ, ತಮ್ಮ ಗುರುಗಳ ಸಮಾಧಿಗೆ ಬಂದು ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸಿ, ಭಿಕ್ಷೆಯನ್ನು ಸ್ವೀಕರಿಸುವರು. ಭಿಕ್ಷೆಯೆಂಬ ಲಘು ಆಹಾರವನ್ನು ಸ್ವೀಕರಿಸುವ ಸಮಯ ಮಧ್ಯಾಹ್ನ ಎರಡು ಅಥವಾ ಮೂರು! ಮತ್ತೆ ಅವರು ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಬಂದವರೊಂದಿಗೆ ಅಷ್ಟಿಷ್ಟು ಮಾತುಕತೆ; ಶಾಸ್ತ್ರವಿಚಾರ ಅಥವಾ ಸಾಧನೆಯ ವಿಚಾರ. ಮಾನಸಿಕ-ಅಸ್ವಾಸ್ಥ್ಯವೆಂದು ಹತ್ತಿರದ ಜನರು ಹೇಳಿಕೊಳ್ಳುವುದಿದ್ದರೂ, ಅವರ ದೈಹಿಕ-ಆರೋಗ್ಯ ಚೆನ್ನಾಗಿಯೇ ಇದ್ದಿತು. ಸಣ್ಣಪುಟ್ಟ ಬೇನೆಗಳು ಕೂಡ ಅವರನ್ನು ಕಾಡುತ್ತಿರಲಿಲ್ಲ. ಕೆಲಕಾಲ ಆಸನವೇ ಮೊದಲಾದ ಯೋಗಾಭ್ಯಾಸವನ್ನು ಮಾಡಿ ಆಮೇಲೆ ಬಿಟ್ಟುಬಿಟ್ಟರು; ಕೆಲವೊಮ್ಮೆ ಪ್ರಾಣಾಯಾಮವನ್ನು ಮಾಡುತ್ತಿದ್ದುದುಂಟು. ಹಲವಾರು ದಿನ ಉಪವಾಸವೇ ಇರುತ್ತಿದ್ದರಾದರೂ ನಿತ್ರಾಣವೆಂಬುದನ್ನು ಕಂಡರಿಯರು. ಆಸನಜಯ, ಕಷ್ಟಸಹಿಷ್ಣುತೆ, ತಾಳ್ಮೆ ಅವರಿಗೆ ಬಾಲ್ಯದಿಂದಲೇ ಒದಗಿಬಂದ ಗುಣಗಳು.

ಜಗದ್ಗುರುಗಳೆನಿಸಿದ ತಮ್ಮನ್ನು ಜನರು ಗೌರವಿಸುತ್ತಿರುವುದನ್ನು ಒಮ್ಮೆ ವಿಶ್ಲೇಷಣೆ ಮಾಡಿದರು. ಉಪಾಸನೆಮಾಡುವಾಗ ಉಪಾಸ್ಯವಾದ ವಸ್ತುವಿನ ಸ್ವರೂಪವು ಉಪಾಸಕನ ಸ್ವಭಾವ, ಯೋಗ್ಯತೆ, ನಿರೀಕ್ಷೆಗಳನ್ನು ಅವಲಂಬಿಸುತ್ತದೆ ಎನ್ನುವ ವಿಚಾರವಾಗಿ ಮಾತುಕತೆ ನಡೆದಿತ್ತು. ಸ್ವಾಮಿಗಳು, "ನನ್ನನ್ನೇ ನೋಡಿ, ನೀವೆಲ್ಲರೂ ನನ್ನನ್ನು ಗೌರವಿಸುತ್ತೀರಿ ಅಲ್ಲವೆ? ಎಲ್ಲರೂ ಗೌರವಿಸುವ ವಸ್ತು ಒಂದೇ ಎಂದು ಸ್ಥೂಲವಾಗಿ ಹೇಳಬಹುದಾದರೂ, ನಿಜವಾಗಿ ವಿಚಾರ ಮಾಡಿದರೆ, ಬೇರೆಬೇರೆಯವರಿಗೆ ನಾನು ಬೇರೆಬೇರೆಯಾಗಿ ಕಾಣುತ್ತೇನೆ; ಗೌರವವನ್ನು ಪಡೆಯುವ ವಸ್ತು ಒಂದೇ ಅಲ್ಲ. ಸಾಮಾನ್ಯವಾಗಿ ಜನರು ನನ್ನ ವ್ಯಕ್ತಿತ್ವವನ್ನು ಗೌರವಿಸುವುದಕ್ಕಿಂತ ಹೆಚ್ಚಾಗಿ ನನ್ನ ಪೀಠ, ಸ್ಥಾನ, ಸಂಸ್ಥಾನದ ಸಂಪತ್ತು, ವೈಭವ ಈ ಆವರಣಗಳಿಂದ ಆಕರ್ಷಿತರಾಗುತ್ತಾರೆ. ಈ ಆವರಣಗಳೂ ವೈಭವವೂ ಯಾರಿಗಿದ್ದರೂ ಆ ವ್ಯಕ್ತಿಯನ್ನು ಈ ಜನ ಗೌರವಿಸುತ್ತಾರೆ ಅಲ್ಲವೆ? ಎಂದಮೇಲೆ ಅವರು ನಿಜವಾಗಿ ಗೌರವಿಸುವುದು ಈ ಆವರಣಗಳನ್ನೇ, ಈ

ಆವರಣಗಳ ಹಿಂದಿರುವ ವ್ಯಕ್ತಿಯನ್ನಲ್ಲ. ಇನ್ನು ಕೆಲವರು ನನ್ನ ಆಶ್ರಮಕ್ಕಾಗಿ ನನ್ನನ್ನು ಗೌರವಿಸುತ್ತಾರೆ, ಸಂನ್ಯಾಸಿಯೆಂದು.

ಇಲ್ಲಿಯೂ ಮೊದಲಿನಂತೆಯೇ; ಈ ಆಶ್ರಮದಲ್ಲಿ ಯಾರಿದ್ದರೂ ಅವರಿಗೆ ಇವರ ಕಡೆಯಿಂದ ಗೌರವ ದೊರೆಯುತ್ತದೆ. ವ್ಯಕ್ತಿಗಿಂತ ಆಶ್ರಮದಲ್ಲಿ ಅವರಿಗೆ ಹೆಚ್ಚು ವಿಶ್ವಾಸ. ಮತ್ತೆ ಕೆಲವರು ನನ್ನ ಆವರಣವನ್ನಾಗಲೀ ಆಶ್ರಮವನ್ನಾಗಲೀ ಗಮನಿಸದೆ ನನ್ನನ್ನು ಎಲ್ಲಿದ್ದರೂ ಯಾವ ಸ್ಥಿತಿಯಲ್ಲಿದ್ದರೂ ನನ್ನಲ್ಲಿ ಇರಬಹುದಾದ ಚಿತ್ತಶುದ್ಧಿ ಸ್ವಭಾವಶುದ್ಧಿಗಳಿಗಾಗಿ ನನ್ನನ್ನು ಗೌರವಿಸುತ್ತಾರೆ. ನನ್ನ ಶಾಸ್ತ್ರಜ್ಞಾನ, ಆಧ್ಯಾತ್ಮಿಕನಿಷ್ಠೆ ಎಷ್ಟರಮಟ್ಟಿಗೆ ಇವೆಯೋ ಅಷ್ಟರಮಟ್ಟಿಗೆ ಅವರಿಂದ ನನಗೆ ಗೌರವ ಸಲ್ಲುತ್ತದೆ. ಎಲ್ಲಿಯೋ ಕೆಲವರು ಮಾತ್ರ ನನ್ನಲ್ಲಿರುವ ಪರಂಜ್ಯೋತಿಯ ಅಂಶಕ್ಕಾಗಿ ನನ್ನನ್ನು ಗೌರವಿಸುತ್ತಾರೆ. ಇವರು ವಿವೇಕಿಗಳು. ಸರ್ವಾಂತರ್ಯಾಮಿಯಾದ ಆ ಪರಂಜ್ಯೋತಿಯನ್ನು ನನ್ನಲ್ಲಿ ಕಂಡಂತೆಯೇ ಎಲ್ಲರಲ್ಲಿಯೂ ಕಾಣಬಹುದಷ್ಟೆ?'' ಎಂದು ವಿಚಾರಿಸಿದರು.

ಇನ್ನೊಮ್ಮೆ ಯಾರೋ ಸ್ವಾಮಿಗಳ ಬಳಿ ಬಂದು ''ತಮ್ಮ ಅನುಗ್ರಹದಿಂದ ಲೋಕೋದ್ಧಾರವಾಗುತ್ತದೆ''ಎಂದು ಬಿನ್ನವಿಸಿಕೊಂಡರು. ಅದಕ್ಕೆ ಸ್ವಾಮಿಗಳು ''ಇದೆಲ್ಲ ಉಪಚಾರದ ಮಾತು. ನಿಜವಾಗಿ ನೀವು ಹಾಗೆ ನಂಬಿದ್ದರೆ ಅದು ಭ್ರಾಂತಿ. ಎಲ್ಲರೂ ಸುಖವಾಗಿರಲಿ ಎಂಬುದಷ್ಟೇ ನಮ್ಮ ಬಯಕೆ. ಯಾರಯಾರ ಉದ್ದೇಶ ಏನೇನಿದೆಯೋ ಅದು ನಮಗೆ ವಿಮರ್ಶನೀಯವಲ್ಲ. ವಿಚಿತ್ರವಾದ ಈ ಪ್ರಪಂಚದಲ್ಲಿ ಎಲ್ಲರ ಉದ್ದೇಶಗಳೂ ನೆರವೇರಲಾರವು. ಗುರುಪೀಠವೆಂದು ಜನ ಭಕ್ತಿಯಿಂದ ಬರುತ್ತಾರೆ, ನಮ್ಮನ್ನು ಗುರುಗಳೆಂದು ಭಾವಿಸಿ ನಮಸ್ಕಾರ ಮಾಡುತ್ತಾರೆ. ಅವರಿಗೆ ಒಳ್ಳೆಯದಾಗಲೆಂದು ಹರಸುವುದಷ್ಟೇ ನಮ್ಮ ಕೆಲಸ. ಇದರಿಂದ ಕೆಲವರಿಗೆ ಒಳ್ಳೆಯದಾಗಲೂ ಬಹುದು. ಆದರೆ ಅದಕ್ಕೂ ನಮಗೂ ಸಂಬಂಧವಿಲ್ಲ!'' ಎಂದುತ್ತರವಿತ್ತರು.

## ಸಂನ್ಯಾಸಾಶ್ರಮ

ತಮಿಳುನಾಡಿನಲ್ಲಿ ಪ್ರವಾಸಮಾಡುತ್ತಿರುವಾಗ ಲವಣ ಸಮುದ್ರವೆಂಬ ಅಗ್ರಹಾರದಲ್ಲಿ ನೀಲಕಂಠ ಅಯ್ಯರೆಂಬ ಸಾತ್ತ್ವಿಕ ಗೃಹಸ್ಥರ ಮನೆಯಲ್ಲಿ

ಪೂಜಾದಿಗಳನ್ನು ಮುಗಿಸಿ ಸಂಜೆ ಉಪನ್ಯಾಸಮಾಡುವ ಸಂದರ್ಭದಲ್ಲಿ, "ಈ ಮನೆಯ ಯಜಮಾನರಾದ ನೀಲಕಂಠ ಅಯ್ಯರು ನಮ್ಮಂತೆಯೇ ಪರಮಹಂಸಾಶ್ರಮಕ್ಕೆ ಯೋಗ್ಯರಾದವರು; ಸಂನ್ಯಾಸಕ್ಕೆ ಬೇಕಾದ ಅಧಿಕಾರ ಅವರಿಗಿದೆ. ಆದರೆ ಜನಕಮಹರಾಜನಂತೆ ಲೋಕಸಂಗ್ರಹಕ್ಕಾಗಿ ಗೃಹಸ್ಥರಾಗಿಯೇ ಇದ್ದುಕೊಂಡು ಧರ್ಮವನ್ನು ನಡೆಸುತ್ತಿದ್ದಾರೆ" ಎಂದರು. ಸಂನ್ಯಾಸಾಶ್ರಮವು ಗೃಹಸ್ಥಾಶ್ರಮಕ್ಕಿಂತ ಉತ್ತಮವಾದುದೆಂಬ ಎಣಿಕೆ ಅವರಿಗಿರಲಿಲ್ಲ. ಸಂನ್ಯಾಸಿಯಾದ ಮಾತ್ರಕ್ಕೆ ಗೃಹಸ್ಥರಿಂದ ಪೂಜೆ ಮಾಡಿಸಿಕೊಳ್ಳಬೇಕು ಎಂದೇನು ನಿಯಮವಿಲ್ಲ, ಎನ್ನುತ್ತಿದ್ದರು. ಸಂನ್ಯಾಸಿಯಾಗಲಿ, ಗೃಹಸ್ಥನಾಗಲಿ ಅವನವನ ಧರ್ಮವನ್ನು ಅವನು ನಿಷ್ಠೆಯಿಂದ ನಡೆಸಿದರೆ ಲೋಕಕ್ಕೆ ಮಾರ್ಗದರ್ಶನ; ಅವುಗಳಲ್ಲಿ ಮೇಲುಕೀಳೆಂಬುದಿಲ್ಲ ಎಂದು ಅವರ ಅಭಿಪ್ರಾಯ.

ತಾವು ಭಾರತದಲ್ಲೆಲ್ಲ ಪ್ರಸಿದ್ಧವಾದ, ಸಂಪದ್ಭರಿತವಾದ ಧರ್ಮಸಂಸ್ಥಾನ-ವೊಂದರ ಅಧಿಪತಿಗಳು, ಜಗದ್ಗುರುಗಳು ಎಂಬ ಅಭಿಮಾನವಾಗಲೀ ಯೋಗದಲ್ಲಿ ನಿಷ್ಣಾತರು, ಪಾಂಡಿತ್ಯದಲ್ಲಿ ಅದ್ವಿತೀಯರು ಎಂಬ ಅರಿವಾಗಲೀ ಅವರಿಗಿರಲಿಲ್ಲ. ಅವರನ್ನು ಜೀವನ್ಮುಕ್ತರೆಂದು ಜನ ಕರೆಯುತ್ತಿದ್ದರೂ ಅದರ ಕಡೆ ಇವರು ಗಮನ ಕೊಡಲಿಲ್ಲ. ಮೊದಲಿಂದ ವಿನಯ ಅವರಲ್ಲಿ ಹಾಸುಹೊಕ್ಕಾಗಿ ಸೇರಿಬಂದಿದ್ದ ಗುಣ. ಮೊದಲ ಬಾರಿ ಇವರು ಕಾಲಡಿಗೆ ಹೋಗಿದ್ದು ಅಲ್ಲಿಯೇ ಶಂಕರಜಯಂತೀ ಉತ್ಸವವನ್ನು ನಡೆಸಿದಾಗ ನಡೆದದ್ದು ಇದು:

ವೇದಪಾಠಶಾಲೆ ಅಲ್ಲಿಯೇ ಇದ್ದಿತಷ್ಟೆ; ಅದರ ಅಧ್ಯಾಪಕರಾಗಿದ್ದವರು ಕರುಕ್ಕುಳಂ ಕೃಷ್ಣಶಾಸ್ತ್ರಿಗಳೆಂಬುವರು. ಸ್ವಾಮಿಗಳೂ ಪಂಡಿತರೂ ವಿದ್ಯಾರ್ಥಿಗಳೂ ಶಂಕರಾಚಾರ್ಯರ ಸನ್ನಿಧಿಯಲ್ಲಿ ಕುಳಿತಿದ್ದರು. ಸ್ವಾಮಿಗಳಿಂದ ಪ್ರವಚನವೋ ಸಂಭಾವನೆಯೋ ಏನೋ ಸಂದರ್ಭದಲ್ಲಿ, ಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಗಳನ್ನುದ್ದೇಶಿಸಿ "ವಿದ್ಯಾರ್ಥಿಗಳು ಮುಂದೆ ಬನ್ನಿ" ಎಂದು ಕರೆದರು. ಒಡನೆಯೇ ಸ್ವಾಮಿಗಳು "ಅವರು ಮಾತ್ರ ವಿದ್ಯಾರ್ಥಿಗಳೆ? ಆಚಾರ್ಯರ ಮುಂದೆ ನಾವೆಲ್ಲ ವಿದ್ಯಾರ್ಥಿಗಳೇ! ವಿದ್ಯಾರ್ಥಿಗಳು, ಪಂಡಿತರು ಎನ್ನುವ ಭೇದ ಬೇರೆ ಕಡೆ" ಎಂದು ಶಾಸ್ತ್ರಿಗಳನ್ನು ಎಚ್ಚರಿಸಿದರು.

ಬಹಿರ್ಮುಖರಾಗಿರುವಾಗ ಸ್ವಾಮಿಗಳು ಸಂಜೆ, ಭಕ್ತರು ತಮ್ಮ ದರ್ಶನಕ್ಕೆಂದು ಕಾದಿದ್ದರೆ, ನರಸಿಂಹವನದಲ್ಲಿ ತಮ್ಮ ಗುರುಗಳ ಅಧಿಷ್ಠಾನದ ಎದುರು ವರಾಂಡದಲ್ಲಿ ಬಂದು ಕೂಡುವುದು ವಾಡಿಕೆ. ಆಗ ನೆರೆದವರ ಅಗತ್ಯವನ್ನೂ ಅಧಿಕಾರವನ್ನೂ ಗಮನಿಸಿ ಏನಾದರೊಂದು ವಿಷಯವನ್ನು ಎತ್ತಿಕೊಂಡು ಕೊಂಚಹೊತ್ತು ಮಾತನಾಡುವರು. ಲೌಕಿಕವ್ಯವಹಾರಗಳಿಗೆ ನಂಟಿರುವಂಥ ಆಧ್ಯಾತ್ಮಿಕ ವಿಚಾರಗಳನ್ನೇ ಕುರಿತು ಅವರ ಮಾತು; ಮಠದ ಆಡಳಿತ, ನಡವಳಿಕೆ, ರಾಜಕಾರಣ, ವ್ಯಕ್ತಿವಿಮರ್ಶೆ ಮೊದಲಾದ ಯಾವ ಪ್ರಸಂಗವನ್ನೂ ಅವರು ಪ್ರಸ್ತಾಪಿಸುತ್ತಿರಲಿಲ್ಲ.

ಆಗ ಅವರ ಮಾತಿನಲ್ಲಿ ಇರುತ್ತಿದ್ದ ಅಪೂರ್ವವಾದ ಸೊಗಸನ್ನೂ ಸಾರ್ಥಕತೆಯನ್ನೂ ಹಲವರು ಹಿರಿಯರು ನೆನಪಿನಲ್ಲಿರಿಸಿಕೊಂಡಿದ್ದಾರೆ. ನೇರವಾಗಿ ಒಡಲೊಳಗೆ ಹೊಕ್ಕು ಪ್ರಭಾವವನ್ನು ಮೂಡಿಸುವಂಥ ಮಾತು. ಆ ಶಾಂತವಾತಾವರಣದಲ್ಲಿ ಶಾಂತಿಯೇ ಮೈವೆತ್ತುಬಂದಂತೆ ಸ್ವಾಮಿಗಳು ಕಾಣಿಸಿಕೊಂಡು ಮಾತನಾಡುತ್ತಿದ್ದರೆ ಅದಕ್ಕಿಂತ ಹೆಚ್ಚಿನ ಹೃದಯಸಂಸ್ಕಾರವುಂಟೆ? ನೆರೆದವರು ಬಡವರೋ, ಭಾಗ್ಯವಂತರೋ, ಪಂಡಿತರೋ, ಪಾಮರರೋ, ವೈದಿಕರೋ, ಲೌಕಿಕರೋ, ಊರವರೋ, ಹೊರಗಿನವರೋ ಇದೊಂದರ ಪರಿವೆಯೂ ಸ್ವಾಮಿಗಳಿಗಿರದು. ಕಡೆಗೆ ಎದುರಿಗೆ ಇಬ್ಬರೇ ಕುಳಿತಿದ್ದರೂ ಅದೇ ಬಗೆ; ಹತ್ತಾರು ಮಂದಿ ಇದ್ದಾಗಲೂ ಅದೇ ಬಗೆಯ ಮಾತು; ಅಷ್ಟೇ ಆಳವಾದ, ಆಧ್ಯಾತ್ಮಿಕವಾದ ವಿಚಾರ.

ಕೆಲವೊಮ್ಮೆ ಸ್ವಾಮಿಗಳು ಹಾಸ್ಯರಸವನ್ನು ಚಿಮ್ಮಿಸುತ್ತಿದ್ದುದೂ ಉಂಟು; ಅಪರೂಪಕ್ಕೆ ಎನ್ನಿ. ಒಂದು ಸಾರಿ ವಿದ್ವತ್ಸಭೆ ನೆರೆದಿದೆ; ವಾಕ್ಯಾರ್ಥಗಳ ಕಾರ್ಯಕ್ರಮ ಜರುಗಲಿದೆ. ಪಂಡಿತರೊಬ್ಬರು ಎದ್ದು ಅಲಂಕಾರಶಾಸ್ತ್ರದಲ್ಲಿ ವಾಕ್ಯಾರ್ಥ ನಡೆಸಲು ತಮಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡರು. ಸ್ವಾಮಿಗಳು ''ಅಲಂಕಾರಶಾಸ್ತ್ರದಿಂದ ಆರಿಸಿಕೊಂಡ ಭಾಗಗಳು ಶೃಂಗಾರ-ಪ್ರಧಾನವಾಗಿರಬಹುದು. ಈ ಸಭೆಗೆ ತಕ್ಕುದೆಂದು ತೋರುವುದಿಲ್ಲ'' ಎಂದರು. ಪಂಡಿತರು ಬಿಡಲಿಲ್ಲ, ಮತ್ತೆ ಮತ್ತೆ ಕೇಳಿಕೊಂಡರು. ಸ್ವಾಮಿಗಳು ಅವರಿಗೆ

ನಿರಾಶೆಯಾಗಬಾರದೆಂದು ಒಪ್ಪಿದರು. ಪಂಡಿತರು ರಸಲಕ್ಷಣವನ್ನು ಹೇಳಲಾರಂಭಿಸಿ, ಇದಕ್ಕೆ ಶ್ರುತಿಯ ಸಮರ್ಥನೆಯೂ ಇದೆಯೆಂದು ತೋರಿಸಲು 'ರಸೋ ವೈ ಸಃ, ರಸಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ' ಎನ್ನುವ ಉಪನಿಷದ್ವಾಕ್ಯವನ್ನು ಉದ್ಧರಿಸಿದರು. ಒಡನೆಯೇ ಸ್ವಾಮಿಗಳು ನಡುವೆ ಬಾಯಿಹಾಕಿ ''ಈ ವಾಕ್ಯದಲ್ಲಿ ನೀವು ಅಲಂಕಾರಿಕರಸವನ್ನು ಪ್ರತಿಪಾದನೆಮಾಡಬೇಕಾದರೆ ವಾಕ್ಯದ ಯೋಜನೆ ಹೀಗಿರಬೇಕು-ಅಯಂ ಪುಮಾನ್ ಏತಂ ರಸಂ ಲಬ್ಧ್ವಾ ಅನುಭೂಯ ನಂದೀ ಭವತಿ ಪಶುರ್ಭವತಿ ಇತ್ಯರ್ಥಃ'' ಎಂದು ಹೇಳಿ ಸಭೆಯನ್ನು ನಗೆಯಲ್ಲಿ ಮುಳುಗಿಸಿದರು. ಅವರ ಪ್ರಕಾರ ಯೋಜನೆಯಂತೆ 'ಮನುಷ್ಯನು ಈ ರಸವನ್ನು ಪಡೆದು (ಎಂದರೆ ಅನುಭವಿಸಿ) ನಂದಿಯಾಗುತ್ತಾನೆ (ಪಶುವಾಗುತ್ತಾನೆ)'!

ಇನ್ನೊಮ್ಮೆ ಶೃಂಗೇರಿಯಲ್ಲಿ ತಮ್ಮ ಗುರುಗಳ ಆರಾಧನೆಯ ಸಮಯ, ಸಂತರ್ಪಣೆ ನಡೆಯುತ್ತಿತ್ತು. ಪಂಡಿತರ ಪಂಕ್ತಿಗೆ ಸ್ವಾಮಿಗಳು ತೀರ್ಥಕೊಟ್ಟು ಹಿಂದಿರುಗಿ ಬರುತ್ತ ''ಸಾವಕಾಶವಾಗಿ ಭೋಜನವಾಗಲಿ'' ಎಂದು ಸಂಸ್ಕೃತದಲ್ಲಿ ಹೇಳಿದರು. ಎದುರಿಗೆ ಕುಳಿತಿದ್ದ ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳನ್ನು ನೋಡಿ, ''ಸಾವಕಾಶವೆಂದು ಕಾಲದ ದೃಷ್ಟಿಯಿಂದ ಹೇಳಿದೆವು ಅಷ್ಟೆ, ದೇಶದ ದೃಷ್ಟಿಯಿಂದಲ್ಲ'' ಎಂದು ಹೇಳಿ ನಕ್ಕರು; ಪಂಡಿತಮಂಡಲಿಯೂ ಈ ನಯವಾದ ಹಾಸ್ಯದ ಹೊನಲಲ್ಲಿ ಹಿಗ್ಗಿತು. ಕಾಲದ ದೃಷ್ಟಿಯಿಂದ ಸಾವಕಾಶವೆಂದರೆ 'ನಿಧಾನವಾಗಿ', 'ಆತುರಪಡದೆ', ಎಂದರ್ಥ; ದೇಶದ ದೃಷ್ಟಿಯಿಂದ 'ಹೊಟ್ಟೆಯಲ್ಲಿ ಸ್ಥಳವಿರುವಂತೆ ಊಟಮಾಡಿ. ಹೊಟ್ಟೆಬಿರಿಯ ತಿನ್ನಬೇಡಿ' ಎಂದರ್ಥವಾಗಿಬಿಡುತ್ತದೆ !

ಸ್ವಾಮಿಗಳು ತೀರಿಕೊಳ್ಳುವ ಮೊದಲು ಕೆಲವು ದಿನಗಳ ಹಿಂದೆ ಪಂಡಿತ ಪ್ರವರ ಸುಬ್ರಹ್ಮಣ್ಯಶಾಸ್ತ್ರಿಗಳು ಸ್ವಾಮಿಗಳ ಬಳಿ ಬಂದು ನಮಸ್ಕಾರಮಾಡಿ ''ನನಗೆ ಈ ಜನ್ಮದಲ್ಲೇ ಬ್ರಹ್ಮಸಾಕ್ಷಾತ್ಕಾರವಾಗುವಂತೆ ಮಹಾಸ್ವಾಮಿಗಳು ಅನುಗ್ರಹಿಸಬೇಕು'' ಎಂದು ಬೇಡಿಕೊಂಡರು. ಅದನ್ನು ಕೇಳಿ ಸ್ವಾಮಿಗಳು ನಗುತ್ತ

"ಬ್ರಹ್ಮಸಾಕ್ಷಾತ್ಕಾರಕ್ಕೇನು ಕಷ್ಟ? ಆಚಾರ್ಯರೇ ಗೀತಾಭಾಷ್ಯದಲ್ಲಿ ಹೇಳಿದ್ದಾರಲ್ಲ-ಬಾಹ್ಯಾಕಾರಭೇದಬುದ್ಧಿ ಹೋದರೆ ಅದೇ ಆತ್ಮಸ್ವರೂಪಾಲಂಬನೆಗೆ ಕಾರಣವಾಗುತ್ತದೆ ಎಂದು? ಆದುದರಿಂದ ಬ್ರಹ್ಮಜ್ಞಾನಕ್ಕೇನು ಯಾರೂ ಯತ್ನಪಡಬೇಕಾದುದಿಲ್ಲ. ಆತ್ಮವಲ್ಲದ್ದನ್ನು ಆತ್ಮನೆಂದು ತಿಳಿದಿದ್ದೇವಲ್ಲ, ಅದು ಹೋಗಬೇಕೆಂದು ಯತ್ನಮಾಡಬೇಕು!" ಎಂದು ಹೇಳಿದರು.

# ೧೫. ಸಾರಸ್ವತ ಸಂಪತ್ತು

ಸ್ವಾಮಿಗಳಿಗೆ ಗ್ರಂಥರಚನೆ ಮಾಡಬೇಕೆಂಬ ಉತ್ಸಾಹ ಎಂದೂ ಇರಲಿಲ್ಲ. ಅವರು 'ವಿವೇಕಚೂಡಾಮಣಿ' ಗ್ರಂಥಕ್ಕೆ ಬರೆದ ಅಪೂರ್ಣವ್ಯಾಖ್ಯಾನದ ವಿಚಾರ ಆಗಲೇ ಬಂದಿದೆ. ಈ ಗ್ರಂಥ ಶಂಕರಾಚಾರ್ಯರದೆಂದು ಪ್ರತೀತಿ. ಅದಕ್ಕೊಂದು ವ್ಯಾಖ್ಯಾನವನ್ನು ಸಿದ್ಧಪಡಿಸಬೇಕೆಂದು ಹಿಂದಿನ ಸ್ವಾಮಿಗಳೇ ಬಯಸಿದ್ದರು; ಅದು ಕೈಗೂಡಲಿಲ್ಲ. ಹಿಂದಿನವರು ಸಂಕಲ್ಪಮಾಡಿದ್ದುದನ್ನು ತಾವು ಪೂರೈಸಬೇಕೆಂದುಕೊಂಡು, ಸರ್ವಾಧಿಕಾರಿಗಳ ಅಪೇಕ್ಷೆಯಂತೆ, ಸ್ವಾಮಿಗಳು ವ್ಯಾಖ್ಯಾನ ಬರೆಯಲು ತೊಡಗಿದರು. ಇವರು ತಾವಾಗಿ ಬರೆದ ಭಾಗಗಳುಂಟು; ಇವರು ಹೇಳುತ್ತ ಇದ್ದಂತೆ ಅವರ ಬಳಿ ಪಾಠಮಾಡುತ್ತಿದ್ದ ಶಿಷ್ಯರಲ್ಲೊಬ್ಬರು (ಬಹುಮಟ್ಟಿಗೆ ಪಂಡಿತರಾಜ ವಿ. ಎಸ್. ರಾಮಚಂದ್ರ-ಶಾಸ್ತ್ರಿಗಳು) ಬರೆದುಕೊಂಡದ್ದೂ ಉಂಟು. ಮೊದಮೊದಲು ಶ್ಲೋಕಗಳಿಗೆ ವ್ಯಾಖ್ಯಾನ ವಿಸ್ತಾರವಾಗಿ, ಬರುಬರುತ್ತ ಮೊಟಕಾಗುತ್ತ ಬಂದು ೫೧೫ನೆಯ ಶ್ಲೋಕಕ್ಕೆ ನಿಂತುಬಿಟ್ಟಿದೆ; ಮುಂದೆ ಅರವತ್ತಾರು ಶ್ಲೋಕಗಳಿಗೆ ವ್ಯಾಖ್ಯಾನವಿಲ್ಲ.

ವ್ಯಾಖ್ಯಾನ ಆರಂಭವಾದದ್ದು ೧೯೩೯-೪೦ರ ಸುಮಾರಿಗೆ, ಕಾಲಡಿಯಲ್ಲಿ ಹತ್ತು ತಿಂಗಳು ತಂಗಿದ್ದಾಗ. ಶೃಂಗೇರಿಗೆ ಹಿಂದಿರುಗಿದಮೇಲೆ, ಅವರು ಬಹುಮಟ್ಟಿಗೆ ಅಲೌಕಿಕಸ್ಥಿತಿಯಲ್ಲೇ ಇರುತ್ತಿದ್ದರಾಗಿ ಕ್ರಮದಿಂದ ವ್ಯಾಖ್ಯಾನ ಮುಂದುವರಿಯಲಿಲ್ಲ. ಬಹಿರ್ಮುಖವಾದಾಗ ಅಷ್ಟಿಷ್ಟು ಸಾಗುವುದು ಅಷ್ಟೆ. ಕಡೆಕಡೆಗೆ ಶಿಷ್ಯರನ್ನು ನೋಡುವುದನ್ನೇ ಬಿಟ್ಟರಾಗಿ ಗ್ರಂಥರಚನೆ ಅಷ್ಟಕ್ಕೇ ನಿಂತಿತು. ಮುಗಿಸಬೇಕೆಂದು ಕೇಳಿದುದಕ್ಕೆ "ಹೇಳಬೇಕಾದುದನ್ನೆಲ್ಲ ಹೇಳಿಯಾಗಿದೆ. ಈಗ ಧ್ಯಾನವೊಂದನ್ನು ಬಿಟ್ಟು ಮನಸ್ಸು ಯಾವುದನ್ನೂ ಬಯಸುತ್ತಿಲ್ಲ" ಎಂದುಬಿಟ್ಟರೆಂದು ಅವರ ಉತ್ತರಾಧಿಕಾರಿಗಳು ಅಚ್ಚಾದ ಗ್ರಂಥದ ಪ್ರಸ್ತಾವನೆಯಲ್ಲಿ ಬರೆದಿದ್ದಾರೆ.

ವ್ಯಾಖ್ಯಾನದ ಭಾಷೆ ಸಂಸ್ಕೃತ; ಶೈಲಿ ಸರಳವಾಗಿ, ಗಂಭೀರವಾಗಿದೆ. ವ್ಯಾಖ್ಯಾನವನ್ನು ಓದುವಾಗ, ಅವರು ಬಹುಶ್ರುತರಾಗಿದ್ದುದು ಸ್ಪಷ್ಟವಾಗುತ್ತದೆ. ಆದರೆ ಪಾಂಡಿತ್ಯವನ್ನಷ್ಟೆ ನೆಚ್ಚಿಕೊಂಡು ಪ್ರಮೇಯಗಳನ್ನು ಪ್ರತಿಪಾದಿಸಲು, ವಿಷಯವನ್ನು ವಿವರಿಸಲು ಅವರು ತೊಡಗುವುದಿಲ್ಲ; ತಮ್ಮ ಅನುಭವದಲ್ಲಿ ನೇರಾಗಿ ಬಂದ ಕಾಣ್ಕೆಯನ್ನು ಇಲ್ಲಿ ಕಾಣಿಸಲು ಯತ್ನಿಸಿದ್ದಾರೆ. ಕೆಲವು ಬಾರಿ ಮೂಲಶ್ಲೋಕಗಳ ಜಾಡನ್ನೇ ಹಿಡಿದು ಅನ್ವಯಕ್ರಮದಿಂದಷ್ಟೆ ತಾತ್ಪರ್ಯವನ್ನು ಸೂಚಿಸುತ್ತಾರೆ. ಹಲವು ಬಾರಿ ಇಡೀ ಶ್ಲೋಕದ ಪಿಂಡಾರ್ಥವನ್ನು ಮಾತ್ರ ದಿಗ್ದರ್ಶನ ಮಾಡಿಸುತ್ತಾರೆ; ಕೆಲವೊಮ್ಮೆ ಸ್ವತಂತ್ರವಾಗಿ ವಿವರಣೆಯನ್ನು ಕೊಡುತ್ತಾರೆ. ಒಟ್ಟಿನಲ್ಲಿ ಇದನ್ನು ವ್ಯಾಖ್ಯಾನವೆಂದು ಕರೆಯುವುದು ನಿಮಿತ್ತದ ದೃಷ್ಟಿಯಿಂದ; ದಿಟವಾಗಿ ಇದೊಂದು ಸ್ವತಂತ್ರ ಗ್ರಂಥವೇ ಎನ್ನಬೇಕು. ತತ್ರಾಪಿ, ಯೋಗರೂಢರಿಗೂ ಯೋಗಾವಚರರಿಗೂ ದಾರಿತೋರಿಸುವ ಬರಹ ಸ್ವಾಮಿಗಳದ್ದು. ಅಲ್ಲಲ್ಲಿ ಮೂಲಕ್ಕಿಂತ ಬಹು ಮುಂದೆ ಹೋಗುತ್ತದೆ. ಅದರ ಸುದೀರ್ಘ ವಿವೇಚನೆಯನ್ನು ಬೇರೆಡೆ ಮಾಡಬೇಕೆಂದಿದ್ದೇನೆ.

ಸ್ವಾಮಿಗಳು ಮುಕ್ತರಾಗಿ ಮೂರು-ನಾಲ್ಕು ವರ್ಷಗಳಾದಮೇಲೆ ಮಠದ ಕಡೆಯಿಂದ ಈ ವ್ಯಾಖ್ಯಾನ ಅಚ್ಚುಕಂಡಿತು, ೧೯೫೭ರಲ್ಲಿ. ಅವರ ಶಿಷ್ಯರಾಗಿದ್ದು ಕೆಲವು ವರ್ಷಗಳ ಹಿಂದೆ ತೀರಿಕೊಂಡ ಪಂಡಿತರಾಜ ವೆಳ್ಳೂರು ರಾಮಚಂದ್ರಶಾಸ್ತ್ರಿಗಳು ಈ ಬರಹವನ್ನು ಸಂಪಾದಿಸಿ, ಪರಿಷ್ಕರಣ ಮಾಡಿ, ಮುದ್ರಣದ ವ್ಯವಸ್ಥೆಯನ್ನು ಮಾಡಿದರು. ಬೆಂಗಳೂರು ಮುದ್ರಣಾಲಯದಲ್ಲಿ ಇದು ಅಚ್ಚಾಗಿದೆ. ರಾಮಚಂದ್ರಶಾಸ್ತ್ರಿಗಳ ಪರಿಚಯದ ಪುಣ್ಯ ನನಗಿದ್ದಿತು. ಈ ಗ್ರಂಥದ ಬಹುಭಾಗ ಕಾಲಡಿಯಲ್ಲೇ ಸಿದ್ಧವಾಗಿದ್ದಿತೆಂದೂ ಆ ಸಮಯದಲ್ಲೇ ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದಲ್ಲಿ ಅಚ್ಚು ಮಾಡಿಸುವ ಆಲೋಚನೆ ಆ ಮುದ್ರಣಾಲಯದ ಒಡೆಯರೂ, ಶೃಂಗೇರಿಮಠದ ಶಿಷ್ಯರೂ ಆಗಿದ್ದ ಟಿ. ಕೆ. ಬಾಲಸುಬ್ರಹ್ಮಣ್ಯ ಅಯ್ಯರಿಗೆ ಇದ್ದಿತೆಂದೂ ಶಾಸ್ತ್ರಿಗಳಿಂದ ಕೇಳಿದ್ದೇನೆ. ಶ್ರೀರಂಗದ ಈ ಮುದ್ರಣಾಲಯವೇ 'ಶಾಂಕರಗ್ರಂಥಾವಲಿ'ಯ ಸಂಪುಟಗಳನ್ನು ಅಚ್ಚುಕಟ್ಟಾಗಿ ಹೊರತಂದಿತು. ಇಲ್ಲಿಂದಲೇ ಹಿಂದಿನ ಸ್ವಾಮಿಗಳ 'ಭಕ್ತಿಸುಧಾತರಂಗಿಣಿ'ಯೂ ಸೊಗಸಾಗಿ ಪ್ರಕಟಗೊಂಡಿತು. ಬಾಲ ಸುಬ್ರಹ್ಮಣ್ಯ ಅಯ್ಯರು ಸ್ವಾಮಿಗಳ 'ವಿವೇಕಚೂಡಾಮಣಿ' ವ್ಯಾಖ್ಯಾನವನ್ನು ಪ್ರಕಟಿಸುವ

ಆಲೋಚನೆಯನ್ನು ಸ್ವಾಮಿಗಳಲ್ಲಿ ಪ್ರಸ್ತಾಪಿಸಿದಾಗ ಅವರು ''ಆಚಾರ್ಯರ ಹಿರಿಮೆಯನ್ನು ನೆನಸಿಕೊಂಡರೆ, ನಮ್ಮ ಬರಹವನ್ನು ಪ್ರಕಟಿಸಲು ನಾಚಿಕೆಯಾಗುತ್ತದೆ!'' ಎಂದು ಹೇಳಿ ಅಯ್ಯರ ಉತ್ಸಾಹವನ್ನು ಅಷ್ಟಕ್ಕೇ ಮೊಟಕು ಮಾಡಿದ್ದರಂತೆ.

ಮೇಲೆ ಹೇಳಿದ ಶ್ರೀರಂಗದ ವಾಣೀವಿಲಾಸ ಮುದ್ರಣಾಲಯವೇ ಸ್ವಾಮಿಗಳ ಕೆಲವು ಸಂಸ್ಕೃತ ಕವನಗಳ ಸಂಕಲನವನ್ನು ಪ್ರಕಟಿಸಿತು. ಇದು ಮುಖ್ಯವಾಗಿ ಸ್ತುತಿಪರವಾದುದು. ಸ್ವಾಮಿಗಳು ಪಟ್ಟಕ್ಕೆ ಬಂದ ಹೊಸದರಲ್ಲಿ ಆಗಾಗ ಸ್ತೋತ್ರಗಳನ್ನು ರಚಿಸುವ ವಾಡಿಕೆಯಿದ್ದಿತು. ಇದಕ್ಕೆ ಸ್ಫೂರ್ತಿ, ತಮ್ಮ ಗುರುಗಳ ಮಾರ್ಗದರ್ಶನ ಸಾಕ್ಷಾತ್ತಾಗಿ ದೊರೆಯಲಿಲ್ಲವೆಂಬ ಅಳಲು. ತಮ್ಮ ಗುರುಗಳ ಹಿರಿಮೆಯನ್ನು ನೆನೆದು, ಅವರು ತಮ್ಮ ಮೇಲೆ ತೋರಿದ ಅವ್ಯಾಜ ಕರುಣೆಗೆ ಮಣಿದು, ಅವರ ದಯೆ ತಮ್ಮ ಮೇಲೆ ಇರಬೇಕೆಂದು ಅಂಗಲಾಚುವ ಹಲವಾರು ಸ್ತೋತ್ರಗಳು ಇಲ್ಲಿವೆ; ಪಾದಾವಲಂಬನಸ್ತುತಿ, ದೇಶಿಕನವರತ್ನಮಾಲೆ, ತೋಟಕಸ್ತೋತ್ರ, ಗುರುಪ್ರಾರ್ಥನಾ, ಗುರುಸುವರ್ಣಮಾಲೆ, ದೇಶಿಕೋತ್ಕರ್ಷಮಂಜರಿ ಮೊದಲಾದುವು. ತಮ್ಮಲ್ಲಿರುವ ನಿಶ್ಚಲವಾದ ಗುರುಭಕ್ತಿಯನ್ನೂ ವಿನಯವನ್ನೂ ಇಲ್ಲಿ ಕಾಣಿಸಿದ್ದಾರೆ. ತಮ್ಮ ಅಲ್ಪಜ್ಞತ್ವ, ಅಲ್ಪಶಕ್ತಿತ್ವ, ಅಸಹಾಯಕತೆಗಳನ್ನು ಗುರುಗಳ ಬಳಿ ಬಿನ್ನವಿಸಿಕೊಂಡು, ಆಚಾರ್ಯರು. ನಿರ್ಮಿಸಿದ ಈ ಪೀಠದಲ್ಲಿ ತಮ್ಮಂಥ ಮಂದಮತಿಗಳು ಬಾಹ್ಯದಲ್ಲಿಯೇ ಆಸಕ್ತರಾದವರು, ಕೂರುವುದು ಯುಕ್ತವಲ್ಲವೆಂದು ನೈಚ್ಯಾನುಸಂಧಾನಮಾಡಿಕೊಂಡಿದ್ದಾರೆ.

ಅವರ ಕವಿತೆಗಳಲ್ಲಿ ಪದಲಾಲಿತ್ಯ ಮತ್ತು ಭಾವುಕತೆ ಇವು ಮುಖ್ಯಗುಣಗಳು. ತಮ್ಮ ಬಾಳುವೆಯಲ್ಲಿ ಹೇಗೋ ತಮ್ಮ ಕಾವ್ಯಸೃಷ್ಟಿಯಲ್ಲೂ ಹಾಗೆಯೇ ನಯ, ವಿನಯಗಳಿಗೆ ಮನಸ್ಸು ಸೋತವರು. ಕ್ಲಿಷ್ಟವಾದ, ಕರ್ಕಶವಾದ ಶಬ್ದಗಳನ್ನು ಅವರು ಬಳಸುವುದಿಲ್ಲ; ಇಟ್ಟ ಮಾತುಗಳೆಲ್ಲ ಸರಳ, ಮೂಡಿಸಿದ ಭಾವಗಳೆಲ್ಲ ಸುಂದರ. ಅವರೇ ಒಂದೆಡೆ (ಪಂಚದಶೀಸ್ತೋತ್ರದಲ್ಲಿ) ದೇವಿಯನ್ನು ಬೇಡಿಕೊಳ್ಳುತ್ತ 'ಸರಸಮೃದುಮಧುರಕವಿತಾಸರಿದಿವ ಹಿಮಭೂಭೃತೋ ಮುಖಾತ್ ಪ್ರಸರೇತ್' ಎಂದಿದ್ದಾರೆ. ಹಿಮಾಲಯದಿಂದ ಹರಿದುಬರುವ ನದಿಯಂತೆಯೇ ಅವರ ಕವಿತೆ ಇರುವುದನ್ನು ಕಾಣಬಹುದು.

ಸ್ತೋತ್ರದ ವ್ಯಾಜದಲ್ಲಿ ಅವರು ತಮ್ಮ ಮನಸ್ಸಿನ ಆತಂಕಗಳನ್ನು, ಹೃದಯದ ವೇದನೆಗಳನ್ನು ತೋಡಿಕೊಳ್ಳುತ್ತಾರೆ. ಮನುಷ್ಯನಿಗೆ, ಅದರಲ್ಲೂ ಸಂನ್ಯಾಸಿಗೆ, ಇರಲೇಬೇಕಾದ ಮುಮುಕ್ಷುತ್ವಕ್ಕೆ (ಮುಕ್ತಿಯ ಬಯಕೆಗೆ) ಅಡ್ಡಿಗಳನ್ನೊಡ್ಡುವ ವ್ಯವಹಾರವನ್ನು ಕುರಿತು ತಮ್ಮ ಆತಂಕವನ್ನು ಎತ್ತಿತೋರಿಸುತ್ತಾರೆ.

'ಸಾಂಬಾಷ್ಟಕ' ವೆಂಬುದೊಂದು ಉಜ್ವಲವಾದ ಕವಿತೆ. ಅಷ್ಟಕದ ಒಂದೊಂದು ಚರಣದಲ್ಲೂ ಇರುವ ಭಾವನೆ, ಪ್ರಾಪಂಚಿಕವಾದ ಎಲ್ಲ ಸಂಪತ್ತೂ ಸೌಕರ್ಯಗಳೂ ಇದ್ದರೂ ಹೋಗುವ ಸಮಯ ಬಂದಾಗ ಇದು ಯಾವುದೂ ನೆರವಿಗೆ ಬಾರದು, ದೇವರೊಬ್ಬನೇ ನೆರವು ಎಂಬುದು. 'ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ' ಎನ್ನುವ ಪಲ್ಲವಿ ಬರುತ್ತದೆ. ಇದರಲ್ಲಿ ಮಾರ್ಮಿಕವಾಗಿ ಮಠಾಧಿಪತಿಯ ಆಡಂಬರವನ್ನೂ ವೈಭವವನ್ನೂ ಪ್ರಸ್ತಾಪಿಸಿದ್ದಾರೆ. ದತ್ತಾತ್ರೇಯ, ದಕ್ಷಿಣಾಮೂರ್ತಿ, ಷಣ್ಮುಖ, ಮೀನಾಕ್ಷಿ, ಲಲಿತಾಂಬೆ, ಶಾರದೆ ಈ ದೇವತೆಗಳನ್ನು ಉದ್ದೇಶಿಸಿ ಸ್ತುತಿಗಳಿವೆ. ದೇವತಾಸ್ತುತಿಯ ಉದ್ದೇಶ, ಹೃದಯದ ಕತ್ತಲೆಯನ್ನು ಕಳೆದುಕೊಂಡು ದೇಹಾಭಿಮಾನವನ್ನು ತೊರೆದು ಚಿತ್ತಶುದ್ಧಿಯನ್ನು ಪಡೆದುಕೊಳ್ಳುವುದೆಂದು ಅವರ ನಿಲುವು ('ಚಿತ್ತಶುದ್ಧಿಮಭಿಲಿಪ್ಸುರಹಂ ದ್ರಾಕ್, ದತ್ತದೇವಮನಿಶಂ ಕಲಯಾಮಿ'; 'ಶಿಥಿಲಯತು ತಮೋ ಹಾರ್ದಮಾಶು ಪ್ರಗಾಢಂ'; 'ಸಫಲಯ ಜನಿಂ ಸಕ್ತಿಂ ದೇಹೇ ನಿರಾಕುರು ಸದ್ಘನೇ'). ಮನಸ್ಸಿಗೆ ಸಹಜವಾದ ಚಂಚಲತೆಯನ್ನು ನೀಗಿಕೊಂಡು ವೇದೋಕ್ತವಾದ ಮಾರ್ಗದಲ್ಲಿ ನಡೆದು ಪಾಪವನ್ನು ತೊಡೆದುಹಾಕಿಕೊಳ್ಳುವುದಕ್ಕೆ ದೇವರ ಸ್ಮರಣೆ ನೆರವಾಗುವುದೆಂದು ಅವರ ವಿಶ್ವಾಸ.

ಶ್ರುತ್ಯುಕ್ತಕರ್ಮನಿವಹಾಕರಣಾದಶುದ್ಧಿಃ
ಚಿತ್ತಸ್ಯ ನಾಸ್ತಿ ಮಮ ಚಂಚಲತಾನಿವೃತ್ತ್ಯೈ ।
ಕುರ್ಯಾಂ ಕಿಮಂಬ ಮನಸಾ ಸಕಲಾಘಶಾಂತ್ಯೈ
ಮಾತಸ್ತ್ವದಂಘ್ರಿಭಜನಂ ಸತತಂ ದಯಸ್ವ ॥

ಹಲವು ವೃತ್ತಗಳಲ್ಲಿ ಕವಿತೆ ನಡೆದಿದೆ. ಛಂದಸ್ಸಿನ ಮೇಲೆ ಅವರಿಗಿದ್ದ ಒಡೆತನ ಅವರ ಒಂದೊಂದು ಕವಿತೆಯಲ್ಲೂ ಎದ್ದುಕಾಣುತ್ತದೆ. ವೃತ್ತದ ಅಗತ್ಯವನ್ನು

ಗಮನಿಸಿ ಅರ್ಥಪುಷ್ಟಿಯನ್ನು ಕೈಬಿಡದೆ ವಾಗರ್ಥಸಂಪೃಕ್ತತೆಯನ್ನು ಸಾಧಿಸುತ್ತಾರೆ. ನಿಯಮಿತವಾದ ಚೌಕಟ್ಟಿನಲ್ಲಿ ವಿಸ್ತೃತವಾದ ತಾತ್ಪರ್ಯವನ್ನು ಸೂಚಿಸುತ್ತಾರೆ. ವೃತ್ತದ ಓಟದಲ್ಲಿ ಮಾತು ಬಂದಾಗ ತಾತ್ಪರ್ಯದ ಸುಳಿಗಾಳಿ ಹರಡಿಕೊಳ್ಳುವಂತೆ ಮಾಡುವ ಚಾತುರ್ಯ ಅವರ ಕೃತಿಗಳಲ್ಲಿದೆ. ಕಾವ್ಯ ರಚನೆಯ ಕಡೆಯೇ ದೃಷ್ಟಿಯನ್ನಿರಿಸಿಕೊಂಡಿದ್ದರೆ ಮಹಾಕವಿಯೆಂಬ ಕೀರ್ತಿಯನ್ನು ಪಡೆಯುತ್ತಿದ್ದರೇನೋ. ವೃತ್ತದ ನಡೆ, ಮಾತುಗಳ ಸವಿ, ಅರ್ಥದ ಗಾಂಭೀರ್ಯ ಹೇಗೆ ಒಟ್ಟುಗೂಡಿಬಂದಿವೆಯೆನ್ನಲು ಕೆಲವು ನಿದರ್ಶನಗಳನ್ನು ನೋಡಿ-

ಸ್ಥಿತೇಽನುಕಂಪಾ ಮಕರಂದಪೂರ್ಣೇ
ಜಗದ್ಗುರೋಃ ಪಾದಸಹಸ್ರಪತ್ರೇ ।
ಕಿಮನ್ಯತೋ ಧಾವಸಿ ಚಿತ್ತಭೃಂಗ
ಪ್ರಯಾಹಿ ತತ್ರೈವ ರಮಸ್ವ ನಿತ್ಯಮ್ ॥

ಇದು ಪಾದಾವಲಂಬನಸ್ತುತಿಯ ಮೊದಲ ಪದ್ಯ. ತಮ್ಮ ಗುರುಗಳ ಪಾದವನ್ನು ಕರುಣೆಯೆಂಬ ಮಕರಂದ ತುಂಬಿದ ಕಮಲವೆಂದು ಬಗೆದು, ತಮ್ಮ ಮನಸ್ಸನ್ನು ದುಂಬಿಯೆಂದು ಪರಿಭಾವಿಸಿಕೊಂಡು, ಕಮಲದಲ್ಲಿ ಸವಿ ಇರುವಾಗ ದುಂಬಿ ಬೇರೆಡೆ ಹರಿದಾಡಲೇಕೆ, ಅಲ್ಲೇ ಎಂದೂ ನಿಲ್ಲಬಾರದೇ ಎನ್ನುವ ಮನೋಬೋಧೆ ಇದು.

ಜಲಬುದ್ಬುದವತ್ ಕ್ಷಣಭಂಗಯುತೇ
ಮಲಮೂತ್ರವಸಾಸಹಿತೇ ವಪುಷಿ ।
ಕುರುತೇಽಭಿಮತಿಂ ಹೃದಯಂ ಹಿ ಮುಧಾ
ಲಘು ವಾರಯ ದೇಶಿಕ ತಾಂ ದಯಯಾ ॥

ಇದು ತೋಟಕಸ್ತೋತ್ರದ ಎರಡನೆಯ ಪದ್ಯ. ತೋಟಕವೆನ್ನುವುದು, ನಾಲ್ಕು ಪಾದಗಳಿದ್ದು ಒಂದೊಂದು ಪಾದದಲ್ಲೂ ಹನ್ನೆರಡು ಅಕ್ಷರಗಳಿರುವ ಛಂದೋವಿಶೇಷ. ಇದರ ನಿರ್ವಾಹ ಕಷ್ಟಸಾಧ್ಯವೆಂದು ಕಾವ್ಯದಲ್ಲಿ ಪರಿಶ್ರಮವಿರುವವರೆಲ್ಲ ಬಲ್ಲರು. ಮೆರವಣಿಗೆಯಲ್ಲಿ ಸಜ್ಜುಗೊಳಿಸಿದ ಕುದುರೆಯು ಕಾಲುಹಾಕುವಂತೆ ಪದಗಳು ನಡೆಯಬೇಕು; ಈ ನಡೆಗೆ

ಅನುಕೂಲವಾದ ಸಣ್ಣಸಣ್ಣ ಪದಗಳನ್ನು ಹುಡುಕಿ ಹೆಣೆಯಬೇಕು. ನಡೆ-ನುಡೆಗಳು ಒಡಗೂಡಿದಾಗ ಅರ್ಥ ಬರಡಾಗಬಾರದಲ್ಲ? ಈ ವೃತ್ತದಲ್ಲಿ ಸ್ವಾಮಿಗಳು ಇಪ್ಪತ್ತೊಂದು ಪದ್ಯಗಳನ್ನು ರಚಿಸಿದ್ದಾರೆ; ಒಂದೊಂದೂ ಒಂದು ಬಂಗಾರದ ಗಟ್ಟಿ. ಮೇಲೆ ಕಾಣಿಸಿದ ಪದ್ಯದ ಅರ್ಥ ಸರಳವಾಗಿದೆ: 'ನೀರ ಮೇಲಣ ಗುಳ್ಳೆಯಂತೆ ತೋರಿಯಡಗುವ ಶರೀರವನ್ನು, ಆಲೋಚನೆಮಾಡದೆ ಒಡಲು ತನ್ನದೆಂದು ಮೆಚ್ಚಿಕೊಳ್ಳುತ್ತದೆ; ಗುರುವಿನ ದಯೆ ಇದನ್ನು ನೀಗಿಸಬೇಕು.' ಇದೇ ಸ್ತೋತ್ರದ ಮತ್ತೆ ಕೆಲವು ಪದ್ಯಖಂಡಗಳಲ್ಲಿ ತಮ್ಮ ದುಗುಡ-ದುಮ್ಮಾನಗಳನ್ನೂ ಬಯಕೆ-ಬಡತನಗಳನ್ನೂ ತೋಡಿಕೊಂಡಿದ್ದಾರೆ.

**ಕರಣಾನಿ ಸಮಾನಿ ಭವಂತಿ ಕದಾ**
**ತರಣಂ ನು ಕಥಂ ಭವವಾರಿನಿಧೇಃ ।**
**ಶರಣಂ ಮಮ ನಾಸ್ತಿ ಗುರೋ ತ್ವದೃತೇ**
**ನಿರುಪಾಧಿಕೃಪಾಜಲಧೇಽವ ಜವಾತ್ ॥**

'ನನ್ನ ಇಂದ್ರಿಯಗಳು ಮೇಲಾಟಮಾಡದೆ ಸುಮ್ಮನಿರುವುದು ಎಂದು? ಸಂಸಾರವೆಂಬ ಸಾಗರವನ್ನು ದಾಟುವೆನೆಂತು? ಗುರುವನ್ನು ಬಿಟ್ಟು ಬೇರೊಂದು ದಾರಿ ನನಗಿರದಲ್ಲ? ನನ್ನಿಂದ ಏನನ್ನೂ ಬಯಸದೆ ಕರುಣೆ ತೋರುವ ಆ ಗುರುವೇ ನನ್ನನ್ನು ಸಲಹಬೇಕು'.

**ಸದಸನ್ಮತಿರೇವ ನ ಮೇಽಸ್ತಿ ಗುರೋ**
**ವಿರತಿಂ ಪ್ರತಿ ಸಾ ಕರಣಂ ಗದಿತಾ ।**
**ವಿರತಿಃ ಕ್ವ ನು ಮೇ ವಿಷಯಾಶಹೃದಃ**
**ಕಥಮಾಪ್ನುವ ಏವ ವಿಮುಕ್ತಿಪಥಮ್ ॥**

'ನನಗೆ ಸತ್, ಅಸತ್ ಎನ್ನುವ ವಿವೇಕವೇ ಇರದಲ್ಲ! ವಿರಕ್ತಿಗೆ ಈ ವಿವೇಕವೇ ದಾರಿಯೆಂದು ಹೇಳುವರು. ಇನ್ನು, ವಿಷಯಗಳಿಂದ ತುಂಬಿದ ನನ್ನ ಒಡಲಲ್ಲಿ ವಿರಕ್ತಿ ಎಲ್ಲಿ ಬಂದೀತು ? ಮುಕ್ತಿಯ ಮಾರ್ಗವನ್ನು ನಾನು ಹಿಡಿಯುವುದಾದರೂ ಹೇಗೆ?'

ಹಾಗೆಯೇ ಭುಜಂಗಪ್ರಯಾತವೆಂಬ ಮನೋಹರವಾದ ನಟನ-ಯೋಗ್ಯವಾದ ವೃತ್ತದಲ್ಲಿ ಶಾರದಾಭುಜಂಗವನ್ನು ರಚಿಸಿದ್ದಾರೆ. ಇಲ್ಲಿಯೂ ಭಾವಬಂಧುರತೆ ಗಮನಾರ್ಹವಾಗಿದೆ.

ಶರೀರಂ ಸ್ವತಂತ್ರಂ ತಥಾಕ್ಷಾಣಿ ಸರ್ವಾಣ್ಯಹೋ
ಕಿಂ ಕರೋಮಿ ಕ್ವ ಯಾಮ್ಯಂಬಿಕೇ ವಾ ।
ಮಯಾ ಪೊಷ್ಯಮಾಣಾನಿ ಮದ್ವಶ್ಯತಾಂ ನ
ಪ್ರಯಾಂತ್ಯಂಜಸಾ ಮದ್ವಶೇ ತಾನಿ ತನ್ಯಾಃ ॥

'ಶರೀರ ಸ್ವತಂತ್ರವಾಗಿದೆ; ಹಾಗೆಯೇ ಇಂದ್ರಿಯಗಳು ಸ್ವತಂತ್ರವೇ! ನಾನೇನು ಮಾಡಲಿ? ಎಲ್ಲಿ ಹೋಗಲಿ? ನಾನೇ ಅವುಗಳನ್ನು ಉಣಿಸಿ ತಣಿಸಿದೆ, ಆದರೆ ನನ್ನ ವಶದಲ್ಲೆಂದಿಗೂ ಅವು ಬಾರವಲ್ಲ?'

ಶರೀರೇ ಸ್ವಕೇಽಹಂ ತ್ವಮಸ್ತಂ ಪ್ರಯಾಯಾದಿತಿ
ತ್ವಾಂ ಪ್ರಪನ್ನಾ ಜನಾಃ ಶಾರದಾಂಬ ।
ಸಮಸ್ತೇಷು ವಸ್ತುಷ್ವಹಂತಾಂ ಭಜಂತೇ
ಕಿಮೇತದ್ವಿಚಿತ್ರಂ ಚಿದಾನಂದರೂಪೇ ॥

'ತಮ್ಮ ದೇಹದಲ್ಲಿ "ನಾನು", "ನೀನು" ಎನ್ನುವ ಭೇದ ಅಳಿಯಲೆಂದು ನಿನ್ನನ್ನು ಆಶ್ರಯಿಸಿರುವವರೂ ಎಲ್ಲ ವಸ್ತುಗಳಲ್ಲೂ "ನಾನು", "ನಾನೆಂದು" ಮುನ್ನುಗ್ಗುವರಲ್ಲ, ಏನು ಸೋಜಿಗ!'

ಪ್ರಸಿದ್ಧವಾದ ಶ್ಯಾಮಲದಂಡಕದ ಧಾಟಿಯಲ್ಲೇ ಶಾರದಾದಂಡಕ-ವೊಂದನ್ನು ರಚಿಸಿ 'ಗಂಗಾನದೀತುಲ್ಯ ತುಂಗೋತ್ತರಾಂಗಾವಲೀ ಶೋಭಿ ತುಂಗಾಧುನೀತೀರ ಸಂರಾಜಿ ಶೃಂಗಾದ್ರಿವಾಸೈಕಲೀಲೆ'ಯಾದ ಶಾರದೆಯನ್ನು 'ನಿರ್ವ್ಯಾಜಕಾರುಣ್ಯಘಂಟಾಪಥೇ, ಯೋಗಿ ಚಿತ್ತಾತಿಥೇ, ಶಾರದೇ, ಪಾರದೇ ದುಃಖವಾರಾಂ ನಿಧೇಃ' ಎಂದು ಮುಂತಾಗಿ ಬಣ್ಣಿಸಿ 'ಪಾಹಿ ಮಾಂ ಮೋಹಿತಂ ಮಾಯಯಾ, ಧೇಹಿ ಶೀರ್ಷೇ ಪದಂ ಮಾಮಕೇ ತಾವಕಂ, ಭಾಹಿ ಮನ್ಮಾನಸೇ ಸಂತತಂ ಭಾರತೀ, ದೇಹಿ ಮೇ ಸಂವಿದಂ ಶಾಶ್ವತೀಂ' ಎಂದು ಬೇಡಿಕೊಳ್ಳುತ್ತಾರೆ. ಗದ್ಯಶೈಲಿಯ ಸೊಗಸನ್ನು ಇಲ್ಲಿ ಸವಿಯಬಹುದು.

ವೃತ್ತಗಳ ಕಟ್ಟುಪಾಡೇ ಸಾಕು; ಇದರ ಮೇಲೆ ಚರಣಗಳು ನಿರ್ದಿಷ್ಟ ಅಕ್ಷರಗಳಿಂದಲೇ ಆರಂಭವಾಗಬೇಕೆಂಬ ನಿಯಮವನ್ನೂ ಇರಿಸಿಕೊಂಡರೆ ರಚನೆ ಕಷ್ಟವಾಗುತ್ತದೆ. ಹಲವು ಬಾರಿ ಇಂಥ ಪ್ರಯತ್ನಗಳು ಕೃತಕವೆಂಬಂತೆ ಕಾಣಿಸುವುದೂ ಉಂಟು. ಆದರೆ ಸ್ವಾಮಿಗಳು ಈ ಬಗೆಯ ರಚನೆಗಳಲ್ಲೂ ಕೈಹಾಕಿ ಕೃತಕತೆಯ ಗಂಧವೂ ಇರದಂತೆ ನಿರ್ವಹಿಸಿದ್ದಾರೆ. ಶ್ರೀವಿದ್ಯಾಮಂತ್ರದ ಹದಿನೈದು ಅಕ್ಷರಗಳಿಂದ ಆರಂಭವಾಗುವ ಹದಿನೈದು ಶ್ಲೋಕಗಳು ಪಂಚದಶೀಸ್ತೋತ್ರದಲ್ಲಿವೆ. ತಮ್ಮ ಗುರುಗಳ ಹೆಸರಿನ ಅಕ್ಷರಗಳು ಮೊದಲಾಗಿ ಗುರುಸುವರ್ಣಮಾಲಾಸ್ತೋತ್ರವಿದೆ. 'ಓಂ ನಮಃ ಶಂಕರಾಯ' ಎನ್ನುವ ವಾಕ್ಯದ ಅಕ್ಷರಗಳಿಂದ ಆರಂಭವಾಗುಸ ಎಂಟು ಶ್ಲೋಕಗಳು ಆಚಾರ್ಯ-ಪಾದಾವಲಂಬನಸ್ತುತಿಯೆನಿಸಿಕೊಂಡಿವೆ ('ಸ್ತೋತ್ರಂ ತದೀಯಂ ಅನುವರ್ಣ-ಯುತಂ'). ಹೀಗೆಯೇ ದಕ್ಷಿಣಾಮೂರ್ತಿಮಂತ್ರ ಮಾತೃಕಾಸ್ತವವೂ 'ಮನ್ತ್ವಕ್ಷರಘಟಿತ'ವಾದುದು.

ಈ ಸ್ತೋತ್ರಸಂಕಲನವು ೧೯೫೯ರಲ್ಲಿ ಪುನರ್ಮುದ್ರಣವನ್ನು ಕಂಡಾಗ 'ನರಜನ್ಮ ಪ್ರಶಸ್ತಿಃ ತತ್ ಕೃತ್ಯಂ ಚ' ಎನ್ನುವ ಗದ್ಯಭಾಗವನ್ನು ಸೇರಿಸಿದ್ದಾರೆ. ಸ್ವಾಮಿಗಳು ಮಾಡಿದ ಪ್ರವಚನವೊಂದು ಇದು. ಇಲ್ಲಿ ಮನುಷ್ಯಜನ್ಮದ ಮಹತಿಯನ್ನು ಒತ್ತಿಹೇಳಿ, ಶಾಸ್ತ್ರಪ್ರಾಮಾಣ್ಯದ ಅಗತ್ಯವನ್ನು ತಿಳಿಸಿ, ಧರ್ಮದಿಂದಲೇ ಹಿತ ಎನ್ನುವುದನ್ನು ಬಿಡಿಸಿಹೇಳಿ, 'ಧರ್ಮವಿಲ್ಲದೆ, ನಿತ್ಯಾನಂದದ ಮಾತು ಹಾಗಿರಲಿ, ಭ್ರಾಂತಿಸಿದ್ಧವಾದ ಈ ಲೋಕದ ಸುಖವೂ ದೊರೆಯಲಾರದು!' ಎಂದು ಮುಗಿಸಿದ್ದಾರೆ. ಅವರ ಮಾತಿನ ಶೈಲಿಯನ್ನು ಅರಿತುಕೊಳ್ಳಲು, ಈ ಪ್ರವಚನದ ಕಡೆಯ ಭಾಗದ ಒಕ್ಕಣೆಯನ್ನು ನೋಡಿ-

'ತಿಷ್ಠತು ದೂರೇ ನಿತ್ಯಾನಂದಾವಾಪ್ತಿಃ, ಭ್ರಾಂತಿಸಿದ್ಧಸುಖಾವಾಪ್ತಿರಪಿ ನ ಧರ್ಮಂ ವಿನಾ ಸಂಭವತಿ... ಅತೋ ಲೋಕಸಿದ್ಧಂ ಶಾಸ್ತ್ರಸಿದ್ಧಂ ವಾ ಸುಖಂ ಧರ್ಮಮಂತರಾ ನೈವ ಲಬ್ಧುಂ ಶಕ್ಯಮಿತಿ ಸರ್ವೇಣ ಪುರುಷೇಣ ಶಾಸ್ತ್ರಂ ಶರಣೀಕೃತ್ಯ ತದುಕ್ತಕರ್ಮಾನುಷ್ಠಾನಂ ಯಥಾವಿಧಿ ಕೃತ್ವಾ ಸ್ವೇಪ್ಸಿತಂ ಸುಖಂ ಲಬ್ಧುಂ ಶಕ್ಯಂ, ಶಾಸ್ತ್ರನಿಷಿದ್ಧಂ ತ್ಯಕ್ತ್ವಾ ದುಃಖಂ ಪರಿಹರ್ತುಂ ಚೇತಿ ಸರ್ವಂ ಶಿವಂ''.

ಇದೇ ದ್ವಿತೀಯಮುದ್ರಣದಲ್ಲಿ 'ದೇಶಿಕೋತ್ಕರ್ಷಮಂಜರಿ'ಯೆಂಬ ಅವರ ಇನ್ನೊಂದು ಹದಿನೈದು ಚರಣಗಳ ಸ್ತೋತ್ರವನ್ನೂ ಸೇರಿಸಿದ್ದಾರೆ. ಇದರ ಪ್ರತಿಚರಣದ ಕಡೆಯಲ್ಲಿ 'ಅವರೇ ನನ್ನ ಗುರು, ಬೇರೆ ಯಾರನ್ನೂ ಹೆಸರೆತ್ತಿ ಕೂಡ ಕರೆಯುವುದಿಲ್ಲ' ('ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ ನಾಮ್ನಾಯತೇ') ಎನ್ನುವ ಪಲ್ಲವಿಯಿದೆ. ಹದಿನಾಲ್ಕನೆಯ ಚರಣದಲ್ಲಿ ತಮ್ಮ ಗುರುಕಲ್ಪನೆಯ ಪ್ರಕಾರಗಳನ್ನು ನಿರೂಪಿಸಿದ್ದಾರೆ-

**ಸತ್ಯಂ ವಾಚಿ ದಯಾ ನತೇಷು ಪಟುತಾ ಧರ್ಮಾಧ್ವಸಂರಕ್ಷಣೇ**
**ಸೌಜನ್ಯಂ ಸುಜನೇ ಭೃಶಂ ವಿಮುಖತಾ ದುಷ್ಟೇಷು ಯಸ್ಯಾಭವತ್ ।**
**ರಕ್ತಿರ್ಬ್ರಹ್ಮಣಿ ನಿಂದಿತೇಷು ವಿಷಯೇಷ್ವಾಸೀದ್ವಿರಕ್ತಿರ್ದೃಢಾ**
**ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾऽಪಿ ನಾಮ್ನಾಯತೇ ॥**

'ಮಾತಿನಲ್ಲಿ ಸತ್ಯ, ತನ್ನ ನೆರವನ್ನು ಬಯಸಿಬಂದವರಲ್ಲಿ ದಯೆ, ಧರ್ಮವನ್ನು ಕಾಪಾಡುವುದರಲ್ಲಿ ಜಾಣತನ, ಒಳ್ಳೆಯ ಜನರ ವಿಚಾರವಾಗಿ ಸೌಜನ್ಯ, ಕೆಟ್ಟವರ ಬಗ್ಗೆ ಔದಾಸೀನ್ಯ, ಬ್ರಹ್ಮವಸ್ತುವಿನಲ್ಲಿ ಆಸಕ್ತಿ, ವಿಷಯ ಸುಖಗಳಲ್ಲಿ ವಿರಕ್ತಿ- ಈ ಗುಣಗಳು ಗುರುವಿನಲ್ಲಿದ್ದರೆ ಶಿಷ್ಯನು ಬೇರೆ ಯಾರನ್ನು ಆಶ್ರಯಿಸಬೇಕಾದದ್ದಿದೆ?'

ಸ್ವಾಮಿಗಳು ಬಹುಮಟ್ಟಿಗೆ ಭಾಷಣಮಾಡುತ್ತಿರಲಿಲ್ಲ. ಶೃಂಗೇರಿಯಲ್ಲಿದ್ದಾಗ ಮೊದಮೊದಲು ಬ್ರಹ್ಮಸೂತ್ರಭಾಷ್ಯವನ್ನು ಶಿಷ್ಯರಿಗೆ ಪಾಠ-ಹೇಳುತ್ತಿದ್ದರು. ನೆಲಮಾವು ಮಠದ ಕಮಲಾನಂದ-ನರಸಿಂಹಭಾರತೀಸ್ವಾಮಿಗಳು, ಶಕಟಪುರದ ರಾಮಚಂದ್ರಭಾರತೀ ಸ್ವಾಮಿಗಳು, ಕಾಶಿಯ ಸಚ್ಚಿದಾನಂದ ಸರಸ್ವತೀಸ್ವಾಮಿಗಳು, ಪಂಡಿತರಾದ ವೆಳ್ಳೂರು ರಾಮಚಂದ್ರ ಶಾಸ್ತ್ರಿಗಳು, ಪಂಡಿತಪ್ರವರ ಸುಬ್ರಹ್ಮಣ್ಯಶಾಸ್ತ್ರಿಗಳು ಮುಂತಾದವರು ಇವರಲ್ಲಿ ವೇದಾಂತವನ್ನು ಕಲಿತವರೇ. ಬರುಬರುತ್ತ ಪಾಠಹೇಳುವ ಪದ್ಧತಿಯನ್ನು ಬಿಟ್ಟುಬಿಟ್ಟರು. ಮೊದಲನೆಯ ಬಾರಿ ದಕ್ಷಿಣದೇಶದ ಯಾತ್ರೆಗೆ ಹೊರಟಾಗ ಅಲ್ಲಲ್ಲಿ ಸಭೆಗಳನ್ನುದ್ದೇಶಿಸಿ ಕನ್ನಡ, ತಮಿಳು, ತೆಲುಗು ಅಥವಾ ಸಂಸ್ಕೃತದಲ್ಲಿ ಭಾಷಣ ಮಾಡುತ್ತಿದ್ದರು. ವಾಕ್ಯಾರ್ಥದಲ್ಲಿ, ವಿದ್ವತ್ಸಭೆಗಳಲ್ಲಿ ಅಧ್ಯಕ್ಷರಾಗಿ ಭಾಷಣ ಮಾಡುತ್ತಿದ್ದರು. ಆದರೆ ಕಡೆಕಡೆಗೆ ಇವೆಲ್ಲವೂ ನಿಂತು, ಅವರಿವರು

ದರ್ಶನಕ್ಕಾಗಿ ಬಂದಾಗ ಮಾತುಕತೆ ನಡೆಸುತ್ತಿದ್ದುದೇ ಉಪದೇಶಕ್ಕೆ ಸಂದರ್ಭವಾಗಿರುತ್ತಿದ್ದಿತು. ಅದೂ ಅವರು ಅಂತರ್ಮುಖರಾಗಿರದಿದ್ದಾಗ ಮಾತ್ರ. ಈ ಸಂಭಾಷಣೆಗಳನ್ನು ತಿನ್ನವೆಲ್ಲಿಯ ಆರ್. ಕೃಷ್ಣಸ್ವಾಮಿ ಅಯ್ಯರ್ ಎಂಬ ಸದ್ಗೃಹಸ್ಥರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹುರಗಲವಾಡಿ ಲಕ್ಷ್ಮೀನೃಸಿಂಹ-ಶಾಸ್ತ್ರಿಗಳು, ಗಮಕಿ ರಾಮಕೃಷ್ಣಶಾಸ್ತ್ರಿಗಳು, ಪಂಡಿತಪ್ರವರ ಸುಬ್ರಹ್ಮಣ್ಯಶಾಸ್ತ್ರಿ-ಗಳು, ಟಿ. ಎಲ್. ವೆಂಕಟರಾಮ ಅಯ್ಯರ್, ಮಂತ್ರೇಶ್ವರ ಶರ್ಮಾ ಮೊದಲಾದವರೂ ನೆನಪುಗಳನ್ನು ಪ್ರಕಾಶಪಡಿಸಿದ್ದಾರೆ. ಇವರೆಲ್ಲರ ಬರಹ-ಗಳಿಂದ ಸ್ವಾಮಿಗಳ ಮಾತನ್ನು ಆಯ್ದು ಇಲ್ಲಿ ಕೊಡಲಾಗಿದೆ.

೧. ಶಾಸ್ತ್ರವು ವಿಧಿನಿಷೇಧಗಳನ್ನು ಮನುಷ್ಯನನ್ನು ಕುರಿತೇ ಹೇಳುತ್ತದೆ. ಇತರ ಪ್ರಾಣಿಗಳನ್ನು ಕುರಿತು ಹೇಳುವುದಿಲ್ಲ. ಮನುಷ್ಯನಿಗೆ ಯಾವುದು ಹಿತವೋ ಅದನ್ನು ವಿಧಿಸಿ, ಯಾವುದು ಅಹಿತವೋ ಅದನ್ನು ನಿಷೇಧಿಸುವುದು ಶಾಸ್ತ್ರದ ಕೆಲಸ. ಹಿತವನ್ನು ಪಡೆಯಬೇಕೆಂಬ ಮತ್ತು ಅಹಿತವನ್ನು ಬಿಡಬೇಕೆಂಬ ಬಯಕೆಯೇನೋ ನೈಸರ್ಗಿಕವೇ. ಆದರೆ ಹಿತಾಹಿತಗಳ ಗಣನೆ ನಿರ್ದುಷ್ಟವಾಗಿರಬೇಕಾದರೆ ಬುದ್ಧಿ ಇರಬೇಕು, ಅನುಭವ ಇರಬೇಕು. ಎಲ್ಲರಿಗೂ ಇವು ಇರದಾದಕಾರಣ ಶಾಸ್ತ್ರಗಳು ಪ್ರವೃತ್ತವಾಗಿವೆ. ಯಾವುದು ಸುಖಸಾಧನ, ಯಾವುದು ದುಃಖನಿವೃತ್ತಿಸಾಧನ ಎನ್ನುವುದನ್ನು ಶಾಸ್ತ್ರದಿಂದಲೇ ತಿಳಿಯಬೇಕು. ನಿತ್ಯಸುಖದ ಮಾತು ಹಾಗಿರಲಿ, ಭ್ರಾಂತಿಸಿದ್ಧವಾದ ಈ ಲೌಕಿಕಸುಖವೂ ಶಾಸ್ತ್ರವಿಲ್ಲದೆ ಬಾರದು. ಧರ್ಮವೇ ಸುಖಕ್ಕೆ ಮೂಲವೆಂಬುದನ್ನು ತಿಳಿಯಬೇಕು. ಶಾಸ್ತ್ರವು ಲೋಕಕಲ್ಯಾಣದೃಷ್ಟಿಯಿಂದ ಖಚಿತವಾಗಿ ಹೇಳಿರುವ ವಿಚಾರಗಳಲ್ಲಿ ನಾವು ಸ್ವತಂತ್ರವಾಗಿ ಯಾವ ಅಭಿಪ್ರಾಯವನ್ನೂ ಕೊಡಲು ಅಸಮರ್ಥರು. ಅಲ್ಲದೆ ಈ ವಿಚಾರದಲ್ಲಿ ಸ್ವಾತಂತ್ರ್ಯ ವಹಿಸಿ ಯಾರು ಏನು ಹೇಳಿದರೂ ಅದಕ್ಕೆ ಬೆಲೆಯಿಲ್ಲ.

೨. ಧರ್ಮದಲ್ಲಿ ಅನುಷ್ಠಾನವು ಅತಿಮುಖ್ಯ. ಶಾಸ್ತ್ರಗಳಿರುವುದು ಪ್ರವಚನಕ್ಕಲ್ಲ, ಅನುಷ್ಠಾನಕ್ಕೆ. ನೂರಾರು ಗ್ರಂಥಗಳಲ್ಲಿ ಪಾಂಡಿತ್ಯವನ್ನು ಪಡೆಯುವುದಕ್ಕಿಂತ ಶ್ರದ್ಧೆಯಿಂದ ಒಂದು ತತ್ವವನ್ನು ಅನುಷ್ಠಾನ ಮಾಡುವುದು ಒಳ್ಳೆಯದು. ವಿದ್ಯೆ ಹೆಚ್ಚಾದರೆ ವಿವಾದಕ್ಕೆ ದಾರಿ. ಈ ವಿವಾದ ದಿಂದ ಯಾರಿಗೂ ಹಿತವಿಲ್ಲ. ವಾಗ್ವೈಖರಿ, ಶಬ್ದಝರಿ, ಪರಮತಖಂಡನ ಇವು ಭುಕ್ತಿಗೆ

ತಕ್ಕುವು, ಮುಕ್ತಿಗಲ್ಲ. ದ್ವೈತಾದ್ವೈತವಿವಾದಗಳು ನಿರರ್ಥಕವಾದುವು. ದ್ವೈತಮತವನ್ನು ಖಂಡಿಸಿ ಗ್ರಂಥಗಳನ್ನು ಬರೆದರೆ ಮುಕ್ತಿ ದೊರೆಯುವುದೆಂದು ಶಂಕರಾಚಾರ್ಯರು ಎಲ್ಲಿಯಾದರೂ ಹೇಳಿದ್ದಾರೆಯೇ? ಶಂಕರಾಚಾರ್ಯರು ಅದ್ವೈತವನ್ನು ಮಾತ್ರವೇ ಹೇಳಲಿಲ್ಲ. ರಾಗದ್ವೇಷಾದಿಗಳನ್ನು ಬಿಡಬೇಕೆಂದೂ ಹೇಳಿದ್ದಾರೆ! ದ್ವೇಷದಿಂದ ಹುಟ್ಟಿ ದ್ವೇಷವನ್ನೇ ಪ್ರಚೋದಿಸುವ ಇಂಥ ಖಂಡನಗ್ರಂಥಗಳನ್ನು ಬರೆದು ರಾಗ ದ್ವೇಷಗಳಿಗೆ ಧಾರ್ಮಿಕಕ್ಷೇತ್ರದಲ್ಲಿ ಸ್ಥಾನಕೊಡುವುದು ಸರಿಯಲ್ಲ.

ಅಷ್ಟಲ್ಲದೆ, ಅದ್ವೈತವನ್ನು ದೃಢಪಡಿಸಲು ದ್ವೈತವನ್ನು ಖಂಡಿಸಿ ಗ್ರಂಥಗಳನ್ನು ಬರೆದರೆ ಅದರಿಂದ ಅದ್ವೈತದೂಷಣೆ ಇನ್ನೂ ಹೆಚ್ಚಾಗುತ್ತದೆ. ಉರಿಯುವ ಒಲೆಗೆ ಸೌದೆಯನ್ನು ಹಾಕುತ್ತ ಇದ್ದರೆ ಉರಿ ಕಡಿಮೆಯಾಗುವುದು ಎಲ್ಲೂ ಕಂಡುಬಂದಿಲ್ಲ. ಇಂಥ ಗ್ರಂಥಗಳಿಂದ ಇತರರ ಉದ್ವೇಗ ಹೆಚ್ಚುತ್ತದೆ. ಬೇರೆಯವರು ಅದ್ವೈತವನ್ನು ಒಪ್ಪಲಿ, ಬಿಡಲಿ; ನೀವು ದ್ವೈತವನ್ನು ಒಪ್ಪಿಕೊಳ್ಳುತ್ತ ಬನ್ನಿ; ಖಂಡನೆಯ ಮಾತುಗಳಿಗೆ ಕಿವಿಕೊಡದೆ ಉದಾಸೀನರಾಗಿ ಇದ್ದುಬಿಡಿ. ನೀವು ಕಿವುಡರಾದರೆ ಮತ್ತೊಬ್ಬರ ಸಂಗೀತವಾಗಲೀ ಬೈಗಳಾಗಲೀ ನಿಮ್ಮನ್ನು ಏನು ಮಾಡಬಲ್ಲವು? ದ್ವೈತವು ಆತ್ಮ- ಸಾಕ್ಷಾತ್ಕಾರದ ಮೊದಲ ಮೆಟ್ಟಿಲು; ಭಗವಂತನ ಉಪಾಸನೆಗೆ ಅದು ಉತ್ತಮ ಸಹಕಾರಿ.

೩. ತಾವು ಕಲಿತಿರುವ ವಿದ್ಯೆ ಉತ್ಕೃಷ್ಟವಾದುದು ಎಂಬ ನಂಬಿಕೆ ವೈದಿಕರಿಗೇ ಇಲ್ಲದಿರುವಾಗ ಲೌಕಿಕರು ಅವರನ್ನು ಕಡೆಗಣ್ಣಿಂದ ಕಾಣುವುದು ಸಹಜವೇ. ಶ್ರೀಮಂತರಾದ ಲೌಕಿಕರನ್ನು ಕಂಡು ಸಾಮಾನ್ಯಸ್ಥಿತಿಯ ವೈದಿಕರು ಹೊಟ್ಟೆಕಿಚ್ಚುಪಡುತ್ತಾರೆ; ತಾವೂ ಅವರಂತೆ ಆಧುನಿಕವಿದ್ಯಾಭ್ಯಾಸವನ್ನು ಪಡೆಯದಿದ್ದುದಕ್ಕೆ ದುಃಖಪಡುತ್ತಾರೆ. ಇದು ಸರಿಯಲ್ಲ. ವಿದ್ಯೆಯು ಧನಾರ್ಜನೆಗೆ ಮಾತ್ತ ಇರಬಾರದು. ಅಪೇಕ್ಷಿಸುವವರಿದ್ದರೇ ಪದಾರ್ಥಕ್ಕೆ ಬೆಲೆ. ನಿಮಗೆ ಹಣದಲ್ಲಿ ಅಪೇಕ್ಷೆ ಇಲ್ಲದಿದ್ದಾಗ ಮತ್ತೊಬ್ಬರಲ್ಲಿ ಎಷ್ಟು ಐಶ್ವರ್ಯ- ವಿದ್ದರೂ ನೀವು ತಿರುಗಿಯೂ ನೋಡುವುದಿಲ್ಲ, ಅಲ್ಲವೆ?

ಯಾರಿಗೆ ಯಾವುದಿಷ್ಟವೋ ಅದೇ ಧನ. ಪಾಮರರಿಗೆ ರೂಪಾಯಿಯೇ ಧನವಾದರೆ ವಿದ್ವಾಂಸರಿಗೆ ದಾರಿದ್ರ್ಯವೇ ಧನ. ಹಣ ಬೇಡವೆಂದಲ್ಲ, ಆದರೆ

ಹಣಕ್ಕೆ ಅದಕ್ಕಿರುವುದಕ್ಕಿಂತಲೂ ಹೆಚ್ಚಿನ ಬೆಲೆ ಕೊಡಬಾರದು. ಹಣವು ಸುಖಕ್ಕೆ ಸಾಮಾನ್ಯಸಹಕಾರಿಯುಷ್ಟೆ; ಹಣವೇ ಸುಖವಲ್ಲ. ಹಣವು ದೊರಕಿದರೆ ಸಂತೋಷವಾಗಿ ವೆಚ್ಚಮಾಡಿ; ದೊರಕದಿದ್ದಾಗ ಅದಕ್ಕಾಗಿ ರಾತ್ರಿಹಗಲು ಕಷ್ಟಪಡುವುದು, ದುಃಖಪಡುವುದು ಬೇಡ. ಕಷ್ಟಪಟ್ಟರೇ ಹಣವು ದೊರೆಯುವುದೆಂದು ನಾನು ನಂಬುವುದಿಲ್ಲ.

೪. ಎಲ್ಲಿಯವರೆಗೆ ಜನರಲ್ಲಿ ಧರ್ಮಶ್ರದ್ಧೆ ಇರುವುದೋ ಅಲ್ಲಿಯವರೆಗೆ ಅವರು ಸುಖವಾಗಿರುತ್ತಾರೆ. ಎಂದು ಧರ್ಮ, ಕರ್ಮಗಳಲ್ಲಿ ಶ್ರದ್ಧೆ ಕಡಿಮೆಯಾಗುವುದೋ ಅಂದಿನಿಂದ ಸುಖವೂ ಕಡಿಮೆಯಾಗುತ್ತದೆ. ಸುಖವು ಇರುವಲ್ಲಿ ಧರ್ಮ-ಕರ್ಮಗಳಲ್ಲಿ ಶ್ರದ್ಧೆಯಿದೆಯೆಂದು ತಿಳಿಯಬೇಕು. ಇವೆರಡೂ ಸುಖದ ಮೂಲಸ್ಥಾನಗಳು. ಸುಖವನ್ನು ಒರೆಹಚ್ಚುವುದು ಹಣದ ಒರೆಗಲ್ಲಿನಲ್ಲಲ್ಲ. ಸುಖವೆನ್ನುವುದು ಮನಸ್ಸಿನ ಸ್ಥಿತಿ. ನಾವು ಬಯಸುವ ವಸ್ತು ನಮಗೆ ದೊರೆತರೆ ಅದು ಸುಖ. ಬಯಕೆಯೇ ಇದ್ದಾಗ, ಎಂದರೆ ವಸ್ತು ದೊರಕದಿದ್ದಾಗ, ಮನಸ್ಸು ತಳಮಳಿಸುತ್ತದೆ; ವಸ್ತು ದೊರೆತೊಡನೆ, ಬಯಕೆ ತೀರಿದೊಡನೆ, ನೆಮ್ಮದಿ ಒದಗುತ್ತದೆ. ಹಾಗೆಯೇ ನಮಗೆ ಇಷ್ಟವಿಲ್ಲದ ವಸ್ತು ನಮ್ಮಿಂದ ದೂರವಾದರೆ ಅದು ಸುಖ. ಅದು ಇದ್ದಾಗ ಮನಸ್ಸಿನ ಕಳವಳ, ದೂರವಾದಾಗ ನೆಮ್ಮದಿ. ಎರಡೂ ಸಂದರ್ಭಗಳಲ್ಲಿ ಸುಖವು ಒಂದೇ ವಿಧವಾದುದು. ಮನಸ್ಸಿನ ನೆಮ್ಮದಿಯನ್ನು ಕೆಡಿಸಿಕೊಳ್ಳದೇ ಇದ್ದರೆ ಎಷ್ಟುಕಾಲ ಬೇಕಾದರೂ ಸುಖವಾಗಿರಬಹುದು!

ಮನಸ್ಸು ತಳಮಳಿಸಿ ಅನಂತರ ನೆಮ್ಮದಿಯನ್ನು ಕಾಣುವುದು ಸಾಮಾನ್ಯವಾಗಿ ನಾವು ಕಾಣುವ ಸುಖದ ಕ್ರಮ; ವಸ್ತುವನ್ನು ಬಯಸಿ ಅದನ್ನು ಪಡೆಯುವುದು, ಅಥವಾ ಬೇಡವಾದ ವಸ್ತುವನ್ನು ಹೊರದೂಡುವುದು. ಆದರೆ ಇದು ಸ್ವಭಾವಸಿದ್ಧವಾದ ಸುಖವಲ್ಲ. ರೋಗ ಬಂದು ಗುಣವಾದವನಿಗಿಂತ ರೋಗದ ಮುಖವನ್ನೇ ಕಾಣದವನ ಆರೋಗ್ಯ ಸ್ವಭಾವಸಿದ್ಧವಾದುದು, ಸ್ಥಿರವಾದುದು. ಕೆಸರನ್ನು ತುಳಿದು ಕಾಲು ತೊಳೆಯುವುದಕ್ಕಿಂತ ಕೆಸರನ್ನು ತುಳಿಯದೆ ಇರುವುದೇ ಮೇಲಲ್ಲವೆ? ಒಂದು ವಸ್ತುವಿನ ಇಷ್ಟಾನಿಷ್ಟಗಳಿಂದ ಉಂಟಾಗುವ ಸುಖಕ್ಕಿಂತ ಮನಸ್ಸಿನ ಸಮತೆಯಿಂದ ಒದಗುವ ಸುಖ ಸ್ವಭಾವಸಿದ್ಧವಾದುದು.

೫. ಹಿಂದೂಧರ್ಮವೆಂಬ ಹೆಸರು ನಮ್ಮ ಸಂಪ್ರದಾಯಕ್ಕೆ ಈಚೆಗೆ ಆದ ನಾಮಕರಣ. ಹಿಂದಿನ ಕಾಲದಿಂದಲೂ ಇದಕ್ಕೆ 'ಸನಾತನ ಧರ್ಮ', 'ಶಾಶ್ವತ ಸಂಪ್ರದಾಯ'ವೆಂದೇ ವ್ಯವಹಾರ. ಇಂಥ ದಿನ ಹುಟ್ಟಿತು, ಇಂಥವರಿಂದ ಹುಟ್ಟಿತು, ಇಂಥವರು ಸ್ಥಾಪಕರು, ಪ್ರವರ್ತಕರು ಎನ್ನುವುದು ಈ ಧರ್ಮದಲ್ಲಿ ಇಲ್ಲ. ಇದು ಶಾಶ್ವತವಾದುದರಿಂದ ವಿಶ್ವವ್ಯಾಪಿ. ಇದು ದೇಶಕಾಲಗಳ ಗಣನೆಗೆ ಒಳಪಟ್ಟಿದ್ದಲ್ಲ. ಜಗತ್ತಿನ ಎಲ್ಲರೂ ಹಿಂದುಗಳೇ ಎಂದು ನಮ್ಮ ಅಭಿಪ್ರಾಯ.

ಆದರೆ ಎಲ್ಲರಿಗೂ ಒಂದೇ ವಿಧವಾದ ಮಾರ್ಗದರ್ಶನವಿಲ್ಲ. ಶೃಂಗೇರಿಗೆ ಬರುವುದಕ್ಕೆ ಒಂದೇ ದಾರಿಯೇ? ಶಿವಮೊಗ್ಗ, ಆಗುಂಬೆ, ತೀರ್ಥಹಳ್ಳಿ ಯಾವ ಕಡೆಯಿಂದಲಾದರೂ ಬರಬಹುದಲ್ಲವೆ? ಬೇರೆಬೇರೆ ಧರ್ಮಪ್ರವರ್ತಕರು ಬೇರೆಬೇರೆ ಮಾರ್ಗಗಳನ್ನು ತೋರಿಸಿದ್ದಾರೆ, ಆದರೆ ಗುರಿ ಒಂದೇ. ಮತಾಂತರವು ಅಗತ್ಯವಿಲ್ಲ, ನಾವು ಯಾರನ್ನೂ ಪರಿವರ್ತಿಸುವುದಿಲ್ಲ. ಮತಾಂತರವು ಯಾವಾಗ ಆವಶ್ಯಕ ಅಥವಾ ಸಾಧ್ಯ ಗೊತ್ತೆ ? ಮತಾಂತರ ಹೊಂದಬೇಕೆನ್ನುವವನು ತಾನು ಬಯಸುವ ಮತಕ್ಕೆ ಸೇರದೇ ಇದ್ದಾಗ ! ಪ್ರತಿಯೊಬ್ಬ ವ್ಯಕ್ತಿಗೂ ಅವರ ಸ್ವಧರ್ಮವು ತಾಯಿಯಂತೆ. ಹೆತ್ತತಾಯಿಗೆ ಅಗೌರವವನ್ನು ತೋರಿಸಿ ಹೊರಗಿನವರನ್ನು ಪುರಸ್ಕರಿಸುವುದು ಯಾವ ನ್ಯಾಯ?

ನಾವು ಈ ಪೀಠದಲ್ಲಿ ಕುಳಿತಿರುವುದು ಅವರವರು ತಂತಮ್ಮ ಸಂಪ್ರದಾಯಗಳನ್ನು ನಡೆಸಿಕೊಂಡುಬರಲೆಂದು ಹೇಳುವುದಕ್ಕೆ; ಯಾರನ್ನೂ ಯಾವೊಂದು ಧರ್ಮಕ್ಕೂ ಪರಿವರ್ತನೆ ಮಾಡುವುದಕ್ಕಲ್ಲ. ಬೇರೆಬೇರೆ ಧರ್ಮಗಳಲ್ಲಿರುವ ಲೋಪದೋಷಗಳನ್ನು ವಿಚಾರಿಸುವ ಶಕ್ತಿ ನಮಗೆಲ್ಲಿಯದು? ಇಬ್ಬರಲ್ಲಿರುವ ಗುಣಗಳನ್ನು ನಿರ್ಣಯಿಸಲು ಹೊರಡು- ವವನು ಅವರಿಬ್ಬರಿಗಿಂತಲೂ ಹೆಚ್ಚು ಶಕ್ತನಾಗಿರಬೇಕು. ಕ್ರಿಸ್ತ, ಮೊಹಮ್ಮದ್ ಮುಂತಾದವರ ಬೋಧನೆಗಳನ್ನು ಅರಿತು, ಅವುಗಳ ಮೇಲೆ ತೀರ್ಮಾನ ಕೊಡುವಂಥ ಮೇಧಾಶಕ್ತಿಯನ್ನು ಭಗವಂತ ನಮಗೆ ಕೊಟ್ಟಿದ್ದಾನೆಯೇ? ಯಾವುದಾದರೂ ಒಂದು ಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡಿ, ಅದರ ಒಂದೇ ಒಂದು ಭಾಗವನ್ನಾದರೂ ಅರಗಿಸಿಕೊಳ್ಳುವುದಕ್ಕೂ ನಮ್ಮ ಆಯುಷ್ಯ ಸಾಲದು!

ಧರ್ಮಗಳನ್ನು ಅಧ್ಯಯನಮಾಡುವವರಿಗೆ ಸಂಶಯಗಳು ಒದಗುವುದು ಸಹಜ. ಆದರೆ ಸಂಶಯಗಳನ್ನು ಬಗೆಹರಿಸಿಕೊಳ್ಳಲು ಸುಮ್ಮನೆ ಪಾಂಡಿತ್ಯವನ್ನು ಪಡೆದವರಲ್ಲಿ ಹೋದರೆ ಉಪಯೋಗವಿಲ್ಲ. ತಮ್ಮ ಮತಧರ್ಮವನ್ನು ತಮ್ಮ ಬಾಳಿನ ಸರ್ವಸ್ವವೆಂದು ನಂಬಿ ಅದನ್ನು ನಿತ್ಯಜೀವನಕ್ಕೆ ಅಳವಡಿಸಿಕೊಂಡಿರುವವರು ಈ ಸಂಶಯಗಳನ್ನು ಪರಿಹರಿಸಬಹುದು.

೬. ಹುಟ್ಟು-ಸಾವುಗಳನ್ನು ಅತಿಕ್ರಮಿಸಿದ ಮೋಕ್ಷವೆಂಬ ಸ್ವಯಂಸಿದ್ಧವಾದ ಸ್ಥಿತಿಯೊಂದಿದೆ. ಅದು ಸುಲಭವಾಗಿ ಸಿಗುವುದೋ ಇಲ್ಲವೋ, ಅಂತೂ ಮನುಷ್ಯಪ್ರಯತ್ನದಿಂದಲೇ ಸಾಧಿಸಬಹುದಾದದ್ದು. ನಮ್ಮಿಂದ ಅದನ್ನು ಪಡೆಯುವುದು ಸಾಧ್ಯ. ಅದು ನಮ್ಮನ್ನು ಎಂದೆಂದೂ ಸುಖವಾಗಿ ಇಡಬಲ್ಲ ಶಕ್ತಿಯುಳ್ಳದ್ದು. ಅಂದಮೇಲೆ ಅದನ್ನು ಸರ್ವಪ್ರಯತ್ನದಿಂದಲೂ ನಾವು ಸಾಧಿಸಬೇಡವೆ? ಸಾಧಿಸಲು ಯತ್ನವನ್ನಾದರೂ ಮಾಡಬೇಡವೆ?

ಈಗ ಇದಕ್ಕೆ ಬೇಕಾದ ಅನುಕೂಲಗಳೆಲ್ಲವನ್ನೂ ಪಡೆದಿರುವ ಮನುಷ್ಯನು ಇನ್ನು ನೂರು ವರ್ಷಗಳ ನಂತರ, ಮತ್ತೊಂದು ಜನ್ಮವೆತ್ತಿದಾಗ, ಅದೇ ಅನುಕೂಲಗಳನ್ನು ಪಡೆದಿರುತ್ತಾನೆಂದು ಏನು ನಂಬಿಕೆ? ನಮ್ಮ ಸುತ್ತಮುತ್ತಲಿನ ವಾತಾವರಣವೆಲ್ಲ ಕೆಡುತ್ತಿದೆಯೆಂದು ಹೇಳುತ್ತೀರಿ, ವೈದಿಕ ಕರ್ಮಗಳನ್ನು ಮಾಡುವುದಕ್ಕೆ ಅಕ್ಕಪಕ್ಕದವರಿಂದ ಅಡ್ಡಿ ಬರುತ್ತದೆಯೆಂದು ಹೇಳುತ್ತೀರಿ. ಇರಬಹುದು, ಆದರೆ ವೈದಿಕಧರ್ಮ ಹೇಗಿದೆ ಗೊತ್ತೆ? ಹತ್ತಾರು ಸಾಮಗ್ರಿ-ಗಳನ್ನು ಸಿದ್ಧಪಡಿಸಿಕೊಂಡು, ಹಲವಾರು ಋತ್ವಿಜರನ್ನು ಕರೆಸಿ, ದಕ್ಷಿಣೆಯನ್ನು ಕೊಟ್ಟು, ವೇದೋಕ್ತಕ್ರಮದಿಂದ ಕರ್ಮಗಳನ್ನು ಮಾಡುವುದು ಒಂದು; ಇವು ಯಾವುದರ ಆವಶ್ಯಕತೆಯೂ ಇಲ್ಲದೆ ಆತ್ಮನ ಕಡೆ ಮುಖಮಾಡಿ ಏಕಾಂತದಲ್ಲಿ ಕುಳಿತು ಮಾಡುವ ಧ್ಯಾನ ಎರಡನೆಯದು. ಹೀಗೆ ವೈದಿಕಧರ್ಮಕ್ಕೆ ಎರಡು ಮುಖಗಳು. ಎರಡನೆಯದಕ್ಕೆ ಅಕ್ಕಪಕ್ಕದವರಿಂದ ಏನೂ ಅಡ್ಡಿ ಬರಲಾರದಷ್ಟೆ?

೭. ಯಾವ ಧರ್ಮವನ್ನಾಗಲೀ ಅದರ ಗಹನತತ್ತ್ವಗಳನ್ನೆಲ್ಲ ಅಧ್ಯಯನ ಮಾಡಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಸರ್ವಾಂತರ್ಯಾಮಿಯಾದ, ಸರ್ವಶಕ್ತನಾದ, ಸರ್ವಜ್ಞನಾದ ಭಗವಂತನಲ್ಲಿ ದೃಢವಾದ ಶ್ರದ್ಧೆಯಿದ್ದರೆ ಸಾಕು.

ಎಲ್ಲ ಧರ್ಮಗಳು ಹೇಳುವುದೂ ಇಷ್ಟೆ. ತಿಳಿದುಕೊಳ್ಳ- ಬೇಕೆಂಬ ಕುತೂಹಲವಿದ್ದರೆ ವೃದ್ಧಾಪ್ಯದಲ್ಲಿ, ಕೆಲಸದಿಂದ ನಿವೃತ್ತರಾದ ಮೇಲೆ, ಬೇಕಾದಷ್ಟು ಸಮಯವಿರುತ್ತದೆ. ಆದರೆ ವೃದ್ಧಾಪ್ಯದಲ್ಲಿ, ಹೊಸದಾಗಿ ತಿಳಿದುಕೊಳ್ಳುವುದಕ್ಕಿಂತ ತಿಳಿದುಕೊಂಡಿರುವುದನ್ನು ಅನುಷ್ಠಾನಕ್ಕೆ ತಂದು- ಕೊಳ್ಳುವುದು ಒಳ್ಳೆಯದು!

೮. ವೇದಾಂತದ ಗುರಿಯನ್ನು ಮುಟ್ಟಲು, ಎಂದರೆ ಆತ್ಮಜ್ಞಾನವನ್ನು ಪಡೆಯಲು, ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಅನುಷ್ಠಾನಗಳು ಮೂರು ಬಗೆಯಾಗಿರುತ್ತವೆ; ಮೊದಲು ಭೌತಿಕ, ಅನಂತರ ನೈತಿಕ, ಕಡೆಯದಾಗಿ ಮಾನಸಿಕ. ಮನಸ್ಸು ಉಲ್ಲಾಸವಾಗಿದ್ದಾಗಲೆಲ್ಲ ಧ್ಯಾನವನ್ನು ಮಾಡಬೇಕು; ಆದರೆ ಆಯಾಸವಾದಾಗ ಧ್ಯಾನಮಾಡುವುದು ಒಳ್ಳೆಯದಲ್ಲ. ಧ್ಯಾನ ಮಾಡುತ್ತಿರುವಾಗ ನಿದ್ರೆಬಾರದಂತೆ ನೋಡಿಕೊಳ್ಳಬೇಕು. ಮೊದಮೊದಲು ಕೆಲವೇ ನಿಮಿಷಗಳ ಕಾಲ ಧ್ಯಾನಮಾಡುತ್ತಿದ್ದು ಕ್ರಮೇಣ ಈ ಅವಧಿಯನ್ನು ಹೆಚ್ಚಿಸಬೇಕು. ಪ್ರತಿದಿನವೂ ಚಿಂತನಮಾಡಬೇಕು, ವಿಚಾರ- ಮಾಡಬೇಕು. ಭಗವದ್ಗೀತೆ, ದೃಗ್ದೃಶ್ಯವಿವೇಕ, ಆತ್ಮಬೋಧ, ಪಂಚದಶೀ ಮೊದಲಾದ ಗ್ರಂಥಗಳಿಂದ ಇಂಥ ವಿಚಾರಕ್ಕೆ ವಸ್ತು ದೊರಕುತ್ತದೆ.

## ಸ್ವಾಮಿಗಳ ಕೈಬರಹ – ಅವರದ್ದೇ ಒಂದು ರಚನೆ

इति नारायणस्मृतयः
ॐ जूं सः मां पालय पालय।
मृततरसंजीविनि - ३२बार
प्रत्यहं जप्यतां -
- सौभाग्य विद्यां जप्त्वा।

श्री गुरुभ्यो नमः

मौलौ मंदाकिनी यस्य मालतीमा
लिकानिभा । मौनिमानसहंसो
यं मौढ्यं हरतु नशिवः ।४५

- इति सर्वं शिवं -

ಶ್ರೀ ಗುರುಭ್ಯೋ ನಮಃ

ಮೌಳೌ ಮಂದಾಕಿನೀ ಯಸ್ಯ ಮಾಲತೀಮಾಲಿಕಾನಿಭಾ ।
ಮೌನಿಮಾನಸಹಂಸೋಽಯಂ ಮೌಢ್ಯಂ ಹರತುಃನಃಶಿವಃ ॥
–ಇತಿ ಸರ್ವಂ ಶಿವಂ–

## ಸ್ವಾಮಿಗಳ ಸೂಕ್ತಿಸುಧೆ

(ಸಾಧಕರಿಗೆ ಕಿವಿಮಾತು)

(ವಿವೇಕಚೂಡಾಮಣಿಯೆಂಬುದೊಂದು ಪ್ರಸಿದ್ಧವಾದ, ಜನಪ್ರಿಯವಾದ ವೇದಾಂತಪ್ರಕರಣ ಗ್ರಂಥ. ಶಂಕರಾಚಾರ್ಯರೇ ರಚಿಸಿದ್ದೆಂದು ಪ್ರತೀತಿಯಿದೆ ಯಾದರೂ ಸೂತ್ರಭಾಷ್ಯದಲ್ಲಿ ಕಾಣಸಿಗುವ ಧೋರಣೆಗಿಂತ ಅಲ್ಲಲ್ಲಿ ತೀರ ಬೇರೆಯಾದ ಅಭಿಪ್ರಾಯಗಳು ಇಲ್ಲಿರುವುದರಿಂದ ಅವರದ್ದೇ ಎನ್ನುವುದು ಖಚಿತವಾಗುವುದಿಲ್ಲ. ಏನಾದರಿರಲಿ, ಇದೊಂದು ಉತ್ತಮವಾದ, ಹೃದ್ಯವಾದ, ರೋಚಕವಾದ ಕೃತಿ; ಸಾಧಕರಿಗಂತೂ ಮಹೋಪಕಾರಿ. ಇದಕ್ಕೆ ಶ್ರೀ ಶ್ರೀ ಚಂದ್ರಶೇಖರಭಾರತೀಸ್ವಾಮಿಗಳ ವ್ಯಾಖ್ಯೆಯೊಂದಿದೆ; ಸಂಸ್ಕೃತದಲ್ಲಿ ಇದರ ರಚನೆಯ ವಿಚಾರ ಹಿಂದೆಯೇ ಬಂದಿದೆ. ಇದರಲ್ಲಿ ಪ್ರಾಸಂಗಿಕವಾಗಿ ಸ್ವಾಮಿಗಳ ಒಲವು, ಅನಿಸಿಕೆ, ಎಣಿಕೆ, ನಿಲುವುಗಳನ್ನು ಕುರಿತಂತೆ ಮಾತುಗಳು ಬಂದಿವೆ. ಇವುಗಳಲ್ಲಿ ಕೆಲವನ್ನು ಆಯ್ದುಕೊಂಡು, ಕನ್ನಡಕ್ಕೆ ಅನುವಾದ ಮಾಡಿ ಕೆಳಗೆ ಕಾಣಿಸಿದ್ದೇನೆ. ಇಲ್ಲಿ ಕೊಟ್ಟಿರುವ ಪುಟಸಂಖ್ಯೆಗಳು ೧೯೫೭ರಲ್ಲಿ ಶೃಂಗೇರಿ ಜಗದ್ಗುರುಸಂಸ್ಥಾನದ್ವಾರಾ ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಣಗೊಂಡ ಗ್ರಂಥಕ್ಕೆ ಅನ್ವಯಿಸುತ್ತವೆ.)

೧. ಅನೇಕಯುಕ್ತಿಗಳಿಂದ ಸಿದ್ಧವಾಗುವುದೇನೆಂದರೆ, ಶರೀರಕ್ಕಿಂತ ಬೇರೆಯಾಗಿ ಆತ್ಮವೊಂದಿದೆ ಎನ್ನುವುದು. ಹೀಗೆ ಶರೀರಾತಿರಿಕ್ತವಾದ ಆತ್ಮವನ್ನು ಒಪ್ಪಿಕೊಂಡವನೇ ಆಸ್ತಿಕ. ಆಸ್ತಿಕ ಎನ್ನುವ ಮಾತಿಗೆ ಅಷ್ಟೇ ಅರ್ಥ. ಇದು ಶಾಸ್ತ್ರದಿಂದಲೂ ಸಿದ್ಧವಾಗುತ್ತದೆ, ವ್ಯವಹಾರಕ್ಕೂ ಒಪ್ಪಾಗುತ್ತದೆ (ಪು.೨).

೨. ಆದರೆ ಇಂದ್ರಿಯಗಳ ಅನುಭವಕ್ಕೆ ಬಾರದ, ಮೀರಿದ, ಆತ್ಮವನ್ನು ಅರಿತುಕೊಳ್ಳಬೇಕೆಂದರೆ ಗುರುವಿನ ಅಗತ್ಯವಿದೆ. ನೆರವಾಗಬಲ್ಲ

ಗುರುವಾದರೋ, ಉಪನಿಷತ್ತು ಹೇಳುವಂತೆ, ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರಬೇಕು. ಲೋಕದಲ್ಲಿಯೂ ಕ್ರಮ ಇದೇ ತಾನೆ? ನಾವು ಕಂಡರಿಯದ ದಾರಿಯನ್ನು ಅರಿತುಕೊಳ್ಳಲು, ಆ ದಾರಿಯನ್ನು ಕಂಡುಕೊಂಡಿರುವವನ ನೆರವನ್ನು ಪಡೆದುಕೊಳ್ಳುವೆವು. ನಾವೇ ಹೇಗೋ ಆತ್ಮದ ಇರವನ್ನು ಕಂಡುಕೊಂಡೆವೆನ್ನಿ. ಆದರೆ ಅದನ್ನು ಕುರಿತಂತೆ ಹಲವಾರು ಸಂಶಯಗಳಿರುತ್ತವೆ. ಅವನ್ನು ನೀಗಿಸಿಕೊಳ್ಳಲಾದರೂ ಗುರು ಬೇಕಾಗುತ್ತಾನೆ. ಯೋಗವಾಸಿಷ್ಠದಲ್ಲಿ ಇದೇ ವಿಚಾರ ಬರುತ್ತದೆ. ಶುಕನು ಜನ್ಮಾಂತರದಲ್ಲಿ ಮಾಡಿದ್ದ ಪುಣ್ಯ ಈಗ ಫಲಿಸಿತು, ತಂದೆಯೂ ಇವನಿಗೆ ತತ್ತ್ವವನ್ನು ಕುರಿತು ಉಪದೇಶ ಮಾಡಿದ. ಹೀಗಿದ್ದೂ ಅವನು ವಿದೇಹದ ದೊರೆ ಜನಕನ ಬಳಿ ಹೋಗಿ ಅವನೊಂದಿಗೆ ಮಾತುಕತೆ ನಡೆಸಿದಮೇಲೇ ಅವನ ಮನಸ್ಸಿಗೆ ನೆಮ್ಮದಿ ದೊರೆತದ್ದು (ಪು.೭).

೩. ಸಂಸಾರವೆಂಬ ಸಾಗರದಲ್ಲಿ ಆತ್ಮವು ಮುಳುಗಿರುತ್ತದೆ. ಅನಾದಿಯಾದ ಅವಿದ್ಯೆಯಿಂದಾಗಿ ಆತ್ಮವಿಲ್ಲದ ದೇಹ ಮೊದಲಾದವುಗಳಲ್ಲಿ (ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ) ತಾನೇ ಆತ್ಮ ಎಂಬ ಭ್ರಮೆಯನ್ನು ಹೊಂದಿರುವುದೇ ಇದಕ್ಕೆ ಕಾರಣ. ತಾನು, ತನ್ನದು ಎಂಬುದನ್ನು ಆತ್ಮದ ಮೇಲೆ ಹೇರಿದಾಗ ಅವಿದ್ಯೆಯಿಂದ ಅಸ್ಮಿತೆ (ತಾನು ಎನ್ನುವುದು), ಅಸ್ಮಿತೆಯಿಂದ ರಾಗದ್ವೇಷಗಳು, ಅದರಿಂದ ಅಭಿನಿವೇಶ (ಸಂಸಾರವನ್ನು ಬಿಡಬಾರದೆಂಬ ಬಯಕೆ, ಇದಕ್ಕೇ ಅಂಟಿಕೊಂಡಿರುವ ಮನೋಧರ್ಮ). ಇವು ಎಡೆಬಿಡದೆ ಇರುವುದೇ, ಸಾಗಿಬರುವುದೇ ಸಂಸಾರವೆನ್ನಿಸಿಕೊಳ್ಳುತ್ತದೆ. ಆತ್ಮವು ಅಸಂಗ; ಸತ್-ಚಿತ್-ಆನಂದವೇ ಅದರ ಸ್ವರೂಪ. ನಾವು ತನಿ ನಿದ್ರೆಯಲ್ಲಿದ್ದಾಗ ಒದಗುವ ಅನುಭವವು ಸಂಸಾರದ ಸ್ಥಿತಿಯದಲ್ಲ, ಆದ್ದರಿಂದ ಆತ್ಮದ ದಿಟವಾದ ಸ್ವರೂಪವೇನೆಂಬುದರಿಯದೆ, ಮನಸ್ಸೆಂಬ ಉಪಾಧಿಯನ್ನು ಮೇಲಿರಿಸಿಕೊಂಡು, ಅದನ್ನು ಶರೀರವೇ ಮೊದಲಾದುವುಗಳಲ್ಲಿ ತೊಡಗಿಸಿದಾಗ ಆತ್ಮವು ಸಂಸಾರವೆಂಬ ಸಾಗರದಲ್ಲಿ ಮುಳುಗಿದಂತೆ.

ಅವಿವೇಕಿಯಾದ (ಎಂದರೆ ಆತ್ಮ ಯಾವುದು, ಆತ್ಮ ಅಲ್ಲದ್ದು ಯಾವುದು ಎಂದು ಬೇರ್ಪಡಿಸಲಾರದ) ಮನಸ್ಸು ಭ್ರಮೆಗೆ ಪಕ್ಕಾಗುತ್ತದೆ. ಇದನ್ನೇ ಬಂಧವೆನ್ನುವುದು (ಪು.೮). ಇದರಲ್ಲಿ ದೇಹವಾಸನೆ, ಶಾಸ್ತ್ರವಾಸನೆ, ಲೋಕವಾಸನೆ

ಎಂದು ಮೂರು ತೆರನಾದ ವಾಸನೆಗಳಿರುತ್ತದೆ. ಇದೇ ಒಂದು ಕಾರಾಗೃಹವಿದ್ದಂತೆ. ಎಲ್ಲರೂ ನನ್ನನ್ನು ಮೆಚ್ಚಿಕೊಳ್ಳಬೇಕು, ಯಾರೂ ನನ್ನನ್ನು ತೆಗಳಬಾರದು-ಹೀಗೆ ನಡೆದುಕೊಳ್ಳುವುದು ಲೋಕವಾಸನೆ. ಓದಬೇಕೆನ್ನುವುದು, ಪುಸ್ತಕಗಳನ್ನು ನಂಬುವುದು, ಅಲ್ಲಿ ಹೇಳಿರುವಂತೆ ನಡೆದುಕೊಳ್ಳಲು ತೊಡಗುವುದು-ಶಾಸ್ತ್ರವಾಸನೆ. ದೇಹದಲ್ಲಿ ಆತ್ಮದ ಗುಣಗಳನ್ನೇ ಕಾಣುವುದು, ದೋಷಗಳನ್ನು ತೊಡೆದುಕೊಳ್ಳುವುದು ಮತ್ತು ಒಂದನ್ನು ಮತ್ತೊಂದಾಗಿ ಕಾಣುವ ಭ್ರಾಂತಿ-ಇದು ದೇಹವಾಸನೆ. ಈ ಮೂರರಿಂದ ಆತ್ಮದ ಅರಿವು ಮರೆಯಾಗುತ್ತದೆ. ಅಜ್ಞಾನದ ಕಾಮ ಭದ್ರವಾಗುತ್ತದೆ. ಇದರಿಂದ ಬಿಡಿಸಿಕೊಳ್ಳುವುದೇ ಮೋಕ್ಷ (ಪು. ೧೬೧-೧೯೨).

೪. ಹೀಗೆ ತನ್ನ ಅನುಭವಕ್ಕೇ ಬಂದ ಬಂಧನದಿಂದ ಬಿಡಿಸಿಕೊಳ್ಳಲಾಗುವುದು ತನ್ನಿಂದ ಮಾತ್ರ; ಬೇರೆಯವನಿಂದಲ್ಲ (ಪು.೩೬). ಶಾಸ್ತ್ರದಿಂದ ಒದಗಿದ ವಿವೇಕ (ಆತ್ಮ-ಅನಾತ್ಮ ವಿವೇಕ) ಮನಸ್ಸಿಗೊಂದು ಸಂಸ್ಕಾರವನ್ನು ನೀಡಿ ಬಂಧನದಿಂದ ಬಿಡಿಸಬಲ್ಲುದು (ಪು.೮). ಉಪನಿಷತ್ತುಗಳಂಥ ಶಾಸ್ತ್ರ ಸರಿಯಾದ ಆಚಾರ್ಯರಿಂದ ಉಪದೇಶ ಇವುಗಳಿಂದ ತತ್ತ್ವಜ್ಞಾನವಾಗುತ್ತದೆ. ಆದರೆ ಶಾಸ್ತ್ರಕೋಲಾಹಲವನ್ನು ಮಾಡಬಾರದು. ಅದು ಶಾಸ್ತ್ರವಾಸನೆಯಾಗಿ ಅದರಿಂದ ಜ್ಞಾನಕ್ಕೆ ಅಡ್ಡಿಯೇ ಆದೀತು (ಪು.೪೧). ಚೆನ್ನಾಗಿ ವಿಚಾರಮಾಡಿ ತತ್ತ್ವವನ್ನು ತಿಳಿದು ಗಟ್ಟಿಮಾಡಿಕೊಂಡಾಗ ಆತ್ಮದ ದಿಟವಾದ ಸ್ವರೂಪವೇನೆಂಬುದು ಮನದಟ್ಟಾಗುತ್ತದೆ; ಇದೇ ಬ್ರಹ್ಮಸಾಕ್ಷಾತ್ಕಾರ, ಬೇರೇನೂ ಅಲ್ಲ (ಪು.೧೦).

ಸರಿಯಾದ ತಿಳಿವಳಿಕೆಯಿಲ್ಲವಾಗಿ ತಾನೇ ಭ್ರಾಂತಿಗೊಂಡ ಮನುಷ್ಯನಿಗೆ ತಾನಾಗಿ ವಿಚಾರಮಾಡುವುದು ಸಾಧ್ಯವಾಗದು; ಆಗ ಆಪ್ತರ ಹಿತೋಕ್ತಿ ನೆರವಿಗೆ ಬರುತ್ತದೆ. ಇದೇ ಶಾಸ್ತ್ರ ಮಾಡುವ ಕೆಲಸ. ಇದ್ದದ್ದನ್ನು ಇದ್ದಂತೆಯೇ ತಿಳಿಸುವುದು ಹಿತೋಕ್ತಿ. ವಿಚಾರವೆಂದರೆ ಆತ್ಮವು ದಿಟವಾಗಿ ಇರುವ ಬಗೆಯನ್ನು ನಿಶ್ಚಯಮಾಡಿಕೊಳ್ಳಲು ನೆರವಾಗುವ ಮಾನಸವ್ಯಾಪಾರ (ಅರ್ಥಯಾಥಾತ್ಮ್ಯ ನಿಶ್ಚಯಾನುಕೂಲ) (ಪು.೧೦).

ಮನಸ್ಸನ್ನು ಶುದ್ಧಿಮಾಡಿಕೊಳ್ಳದೆ ವಿಚಾರವೂ ಸರಿಯಾಗದು. ಸಂಸಾರಕ್ಕೆ ಕಾರಣವಾದ ಅಧ್ಯಾಸಕ್ಕೆ (ಅನಾತ್ಮವಾದುದನ್ನು ಆತ್ಮವೆಂದು ತಿಳಿಯುವುದು,

ಅನಾತ್ಮವಾದುದರಲ್ಲಿ ಆತ್ಮವನ್ನು ಗುರುತಿಸದೆ ಇರುವುದು) ಮನಸ್ಸೇ ಮೂಲ. ಅಧ್ಯಾಸರೂಪವಾದ ಬಂಧವಿದ್ದಾಗ ಶರೀರ-ಇಂದ್ರಿಯಗಳೆಲ್ಲ ಮನಸ್ಸಿನಿಂದಲೇ ಎದ್ದುಕೊಳ್ಳುವುವು; ಅಧ್ಯಾಸವೂ ಮನಸ್ಸಿನಿಂದಲೇ ಎದ್ದುಕೊಂಡದ್ದು (ಪು.೧೧೭). ಮನಸ್ಸೇ ಅವಿದ್ಯೆಯೆಂದರೂ ತಪ್ಪಲ್ಲ (ಪು.೧೧೮). ಅಂತಃಕರಣವು ಒಂದೇ ಆದರೂ ಸಂಶಯಾತ್ಮಕವೃತ್ತಿಯಿದ್ದಾಗ ಅದು ಮನಸ್ಸೆನಿಸಿಕೊಳ್ಳುತ್ತದೆ; ನಿಶ್ಚಯಾತ್ಮಕವೃತ್ತಿಯಿದ್ದಾಗ ಅದೇ ಬುದ್ಧಿಯೆನಿಸಿಕೊಳ್ಳುತ್ತದೆ. ಮನಸ್ಸು ಕಾರಣ (ಎಂದರೆ ಕೆಲಸ ಮಾಡಲು ನೆರವಾಗುವ ಉಪಕರಣ); ಬುದ್ಧಿಯು ಕರ್ತೃ (ಕೆಲಸದಲ್ಲಿ ತೊಡಗುವುದು). ಮನಸ್ಸು ಮುಂಚೆ, ಅನಂತರ ಬುದ್ಧಿ. ಮನಸ್ಸು ಹೊರಗಣ ವಿಷಯಗಳ ಕಡೆ ಓಡುವುದು (ಬಾಹ್ಯ). ಬುದ್ಧಿಯಾದರೋ ಒಳಗಡೆ ಹೊರಡುವುದು (ಆಂತರ)(ಪು.೧೨೦).

ಶರೀರವೆಂಬ ಬಂಡಿಗೆ ಇಂದ್ರಿಯಗಳು ಕುದುರೆಗಳಾದರೆ ಮನಸ್ಸು ಕುದುರೆಗಳನ್ನು ಕಟ್ಟಿದ ಹಗ್ಗವಿದ್ದಂತೆ (ಪ್ರಗ್ರಹ). ಅದಕ್ಕೆ ವಿಷಯಗಳನ್ನು ಕುರಿತು ವಿಚಾರಮಾಡುವ ಸಾಮರ್ಥ್ಯವಿದೆ; ಇಂದ್ರಿಯಗಳಿಗೇ ಈ ಸಾಮರ್ಥ್ಯವಿರದು; ಬುದ್ಧಿಯು ಬಂಡಿಯನ್ನು ನಡೆಸುವ ಸಾರಥಿ; ಅದರ ಕೈಯಲ್ಲಿ ಕಡಿವಾಣವಿರಬೇಕು (ಎಂದರೆ ಮನಸ್ಸು ಅದರ ಅಂಕೆಯಲ್ಲಿರಬೇಕು). ಹೀಗೆಂದು ಗೀತೆ ತಿಳಿಸುತ್ತದೆ (ಪು.೧೭).

೫. ಧರ್ಮ ಎನ್ನುವಾಗ, ಆಚಾರ್ಯರು ಹೇಳುವಂತೆ, ವೇದೋಕ್ತವಾದ ಎರಡು ಧರ್ಮಗಳು-ಪ್ರವೃತ್ತಿಧರ್ಮ, ನಿವೃತ್ತಿಧರ್ಮ ಎಂದು. ನಿತ್ಯಸುಖವನ್ನು ಪಡೆದುಕೊಳ್ಳಬೇಕೆಂದರೆ ಧರ್ಮವೇ ಸಾಧನೆಯೆಂದು ಮೀಮಾಂಸಕರ ಅಭಿಪ್ರಾಯ. ಧರ್ಮ, ಅರ್ಥ, ಕಾಮಗಳು ಮನುಷ್ಯನ ಗುರಿಗಳು; ಪುರುಷಾರ್ಥಗಳು. ಇವುಗಳನ್ನು ಪಡೆದುಕೊಳ್ಳುವುದು ಪ್ರವೃತ್ತಿಧರ್ಮ. ಆದರೆ ಪರಮಪುರುಷಾರ್ಥವೆಂದರೆ ಮೋಕ್ಷ. ಅದನ್ನು ಪಡೆದುಕೊಳ್ಳಲು ಬ್ರಹ್ಮಸಾಕ್ಷಾತ್ಕಾರವೇ ಸಾಧನೆ. ಅದನ್ನು ಕೈಗೂಡಿಸಿಕೊಳ್ಳಲು ನೆರವಾಗುವುದು ವೇದಾಂತವಿಚಾರ. ಇದಕ್ಕೆ ನೆರವಾಗುವುದು ಸಂನ್ಯಾಸರೂಪವಾದ ನಿವೃತ್ತಿಧರ್ಮ. ಸಂನ್ಯಾಸವಾದರೋ ವೈರಾಗ್ಯವಿಲ್ಲದೆ ಒದಗಿಬರಲಾರದು. ವೈರಾಗ್ಯ ಹೇಗೆ ಬರುತ್ತದೆ? ಚಿತ್ತಶುದ್ಧಿಯಿಂದಲೇ. ಈ ಚಿತ್ತಶುದ್ಧಿಗಾಗಿ ಮಾಡಲೇಬೇಕಾದುದು ನಿಷ್ಕಾಮಕರ್ಮಾನುಷ್ಠಾನ (ಫಲವನ್ನು ಬಯಸದೆ,

ತಾನು ಮಾಡುತ್ತಿರುವವನೆಂಬ ಅಭಿಮಾನವಿರದೆ ಕರ್ತವ್ಯದೃಷ್ಟಿಯಿಂದ ಕೆಲಸಗಳಲ್ಲಿ ತೊಡಗುವುದು). ಇದು ಪ್ರವೃತ್ತಿಧರ್ಮವೇ. ಪ್ರವೃತ್ತಿಧರ್ಮ ಹೀಗೆ ಅಗತ್ಯವಾದುದು. ಆದರೆ ಅದರಿಂದಲೇ ನೇರವಾಗಿ ನಿರತಿಶಯವಾದ ಸುಖ ಒದಗಿ ಬಂದೀತೆಂದು ಭಾವಿಸಬಾರದು. ನಿವೃತ್ತಿಯಿಂದಲೂ ಈ ಬಗೆಯ ಸುಖ ದೊರಕಲಾರದು ಎಂಬುದನ್ನು ನಾವು ತಿಳಿಯಬೇಕು (ಪು.೪).

ಮಾಡಿದ ಕೆಲಸವೆಲ್ಲ ಈಶ್ವರಾರ್ಪಣವೆಂಬ ಬುದ್ಧಿಯಿಂದ ಮಾಡುವವನು ತನ್ನ ಚಿತ್ತವನ್ನು ಹೀಗೆ ಶುದ್ಧಿಗೊಳಿಸಿಕೊಂಡು, ವಿಷಯಸುಖಗಳಿಂದ ವಿರತಿಯನ್ನು ಹೊಂದಿ, ಅನಂತರ ಕರ್ಮದಿಂದಲೂ ವಿಮುಖನಾಗುವನು. ಅದು ಸಂನ್ಯಾಸವೆನಿಸಿಕೊಳ್ಳುತ್ತದೆ. ಆದರೆ ಸಂನ್ಯಾಸವಾಗಿಬಿಟ್ಟರೆ ಆಯಿತು ಎಂದಲ್ಲ. ಸಂನ್ಯಾಸಿಯಾದಮೇಲೆ ಮಾಡಬೇಕಾದ ಸಾಧನೆಯೇ ಮುಖ್ಯ (ಪು.೪-೫).

ಉಪನಿಷದ್ವಾಕ್ಯಗಳನ್ನು ಅಧ್ಯಯನಮಾಡಬೇಕು; ಇದು ಶ್ರವಣವೆನಿಸಿಕೊಳ್ಳುತ್ತದೆ. ಇದರಿಂದ ಬ್ರಹ್ಮನ ಪರೋಕ್ಷಜ್ಞಾನ ಪಡೆದುಕೊಳ್ಳುವುದಷ್ಟೆ ಇದರ ಪ್ರಯೋಜನ. ಹೀಗೆ ಅದನ್ನು ಪಡೆದುಕೊಂಡಮೇಲೆ ಆತ್ಮ ಯಾವುದು ಅನಾತ್ಮ ಯಾವುದು ಎಂಬ ವಿವೇಚನೆಯನ್ನು ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳಲು ಮಾಡುವ ಅನುಚಿಂತನೆ ಅದು. ಇದರಿಂದ ಸಂಶಯಗಳು ತೊಲಗಿಹೋಗುತ್ತವೆ (ಪು.೫).

ಅನಂತರದಲ್ಲಿ ಸ್ವಾನುಭವ; ನಿದಿಧ್ಯಾಸನಪೂರ್ವಕವಾದ ಬ್ರಹ್ಮಸಾಕ್ಷಾತ್ಕಾರ. ಅದಕ್ಕಾಗಿಯೇ ಅದನ್ನು ಸ್ವಾನುಭವವೆಂದು ಕರೆದಿರುವುದು. ಮನನದಿಂದ ಸಂಶಯಗಳು ನಿವೃತ್ತವಾದರೆ ನಿದಿಧ್ಯಾಸನದಿಂದ ವಿಪರೀತಭಾವನೆಗಳು ಮರೆಯಾಗುತ್ತವೆ. ವಿಪರೀತಭಾವನೆಯೆಂದರೆ ಒಂದು ರೀತಿ ಇರುವುದನ್ನು ಬೇರೊಂದು ರೀತಿ ಇರುವಂತೆ ತಿಳಿದುಕೊಳ್ಳುವುದು. ನಿದಿಧ್ಯಾಸನವಿಲ್ಲದಿದ್ದರೆ ಶ್ರವಣ-ಮನನಗಳಿಂದ ಒದಗಿಬಂದ ಅನುಭವಕ್ಕೆ ಸೌಷ್ಠವ ಇರಲಾರದು. ಬ್ರಹ್ಮಸಾಕ್ಷಾತ್ಕಾರವನ್ನು 'ಬ್ರಹ್ಮಾತ್ಮನಾ ಸಂಸ್ಥಿತಿಃ ಮುಕ್ತಿಃ'ಎಂದು ಬಣ್ಣಿಸಲಾಗುತ್ತದೆ. ಬ್ರಹ್ಮವೇ ಆತ್ಮವೆಂಬ ನೆಲೆಯಲ್ಲಿ ನಿಲ್ಲುವುದು ಸಂಸ್ಥಿತಿ; ಅದೇ ಮುಕ್ತಿ. ಇದರಿಂದ ವಾಸನಾಕ್ಷಯ, ಮನೋನಾಶ ಎರಡೂ ಸಿದ್ಧಿಸಿ ಬ್ರಹ್ಮದ ಅನುಭವವಾಗುತ್ತದೆ. ಅದೇ ಸ್ವಾನುಭವ. ಮನಸ್ಸಿನಿಂದ ಕಲ್ಪಿತವಾದ ಎಲ್ಲ ಬಗೆಯ ಉಪಾಧಿಗಳ ನಂಟನ್ನೂ ಕಡಿದುಕೊಂಡು ಎಂದೆಂದೂ

ಪರಿಶುದ್ಧವಾಗಿರುವ, ಜ್ಞಾನರೂಪವಾಗಿರುವ, ನಮ್ಮ ಒಳಗಣ ಆತ್ಮಕ್ಕೆ ಬೇರೆಯಲ್ಲದ, ಪರಿಪೂರ್ಣಸ್ವರೂಪದಲ್ಲಿ ನಿಲ್ಲುವುದೇ ಸಂಸ್ಥಿತಿ, ಅದೇ ಕೈವಲ್ಯ; ಮುಕ್ತಿ (ಪು.೫).

೬. ಮುಕ್ತಿಗಾಗಿ ನಾವು ಮಾಡುವ ಎಲ್ಲ ಪ್ರಯತ್ನವೂ ಸಮ್ಯಗ್- ದರ್ಶನ ನಿಷ್ಠೆಯಲ್ಲಿ ಮುಗಿಯುತ್ತದೆ; ಮೋಕ್ಷಕ್ಕೆ ಇದೇ ಸಾಕ್ಷಾತ್ ಸಾಧನ. ಇದಕ್ಕೆ ಮುಖ್ಯಕಾರಣವಾಗುವುದನ್ನು ಪರವೈರಾಗ್ಯ ಅಥವಾ ಯೋಗಾರೂಢತ್ವ ಎನ್ನುತ್ತಾರೆ. ಭಗವದ್ಗೀತೆಯಲ್ಲಿ ಯೋಗಾರೂಢನ ವಿಚಾರ ಬಂದಿದೆ; ಪರವೈರಾಗ್ಯದ ವಿಚಾರ ಪತಂಜಲಿಯ ಯೋಗಸೂತ್ರದಲ್ಲಿ ಬಂದಿದೆ. ಪರವೈರಾಗ್ಯದ ಪುರಃಸರವಾಗಿ ಸಮ್ಯಗ್‌ದರ್ಶನ ಕೈಗೂಡುತ್ತದೆ. ಸಮ್ಯಗ್ದರ್ಶನವೆಂದರೆ ಬ್ರಹ್ಮವನ್ನು ಇರುವಂತೆಯೇ (ಯಥಾಭೂತಾರ್ಥ) ಏನೊಂದು ಕೊರತೆಯೂ ಇಲ್ಲದಂತೆ (ಕೃತ್ಸ್ನ) ನೇರವಾಗಿ ಕಾಣುವುದು. ದರ್ಶನವೆಂದರೆ ಕಾಣ್ಕೆ. ಇದನ್ನೇ ಸಮ್ಯಕ್‌ಜ್ಞಾನವೆಂದೂ ಕರೆಯುತ್ತಾರೆ. ಅಜ್ಞಾನದಿಂದ ಮೇಲೆದ್ದುಕೊಂಡು ಮೆರೆಯುತ್ತಿರುವ ಸಂಸಾರಸಾಗರವನ್ನು ಈ ಜ್ಞಾನವಿಲ್ಲದೆ ದಾಟುವುದು ಸಾಧ್ಯವಿಲ್ಲ (ಪು.೭-೮).

ಅವಿವೇಕಿಯಾದ ಮನಸ್ಸು ಆತ್ಮವನ್ನು ಈ ಸಂಸಾರಸಾಗರದಲ್ಲಿ ಮುಳುಗಿಸುತ್ತದೆ. ಶ್ರವಣ, ಮನನ ಮುಂತಾದ ಶಾಸ್ತ್ರೀಯ ಸಂಸ್ಕಾರಗಳಿಂದ ಸಂಸ್ಕೃತಗೊಂಡ ಮನಸ್ಸು ಆತ್ಮವನ್ನು ಸಂಸಾರಸಾಗರದಿಂದ ಮೇಲೆತ್ತುತ್ತದೆ (ಪು.೮).

೭. ಬ್ರಹ್ಮವು ನಿತ್ಯವಾದದ್ದು, ಸಂಸಾರಕ್ಕೆ ಸೇರಿದ ಜಗತ್ತು ಅನಿತ್ಯವಾದದ್ದು-ಎಂದಷ್ಟು ಹೇಳಿಬಿಟ್ಟರೆ ದೃಢವಾದ ವೈರಾಗ್ಯ ಬರಲಾರದು. ಸುಖ ಅನಿತ್ಯವಾದರೇನಾಯಿತು, ಅದರ ಬಯಕೆ ಇರಬಹುದಲ್ಲ? ಲೋಕದಲ್ಲಿ ಎಲ್ಲರೂ ಅನಿತ್ಯವಾದ ಸುಖವನ್ನೇ ಬಯಸುವರು ತಾನೆ? ಅದೇ ಜಗತ್ತು ಮಿಥ್ಯೆ, ಕಾಲ್ಪನಿಕ, ದಿಟವಾದದ್ದಲ್ಲ ಎಂದು ಹೇಳಿದಾಗ, ಮಾಯೆಯ ಸುಖ ಯಾರಿಗೆ ಬೇಕು? ಕಾಲ್ಪನಿಕವೆಂಬಂಥ ಸಂತೋಷವನ್ನು ಯಾರು ಆರಸುತ್ತಾರೆ? ದಿಟವಲ್ಲದ್ದನ್ನು ಕಟ್ಟಿಕೊಂಡು ಮಾಡುವುದೇನು? ರಾಜ್ಯವನ್ನು ಬಯಸುವವರು ಕನಸಿನ ರಾಜ್ಯವನ್ನು ಬಯಸುತ್ತಾರೆಯೆ? ಆದ್ದರಿಂದಲೇ ವೈರಾಗ್ಯವನ್ನು ಹುಟ್ಟಿಸಲು ಬ್ರಹ್ಮ ದಿಟವಾದುದು, ಸತ್ಯ ಎಂದು ಹೇಳುವುದರ ಜೊತೆಗೆ ಜಗತ್ತು ಮಿಥ್ಯೆಯೆಂದೂ ಹೇಳಿರುವುದು (ಪು. ೧೫-೧೬).

೮. ಹೊರಗಣ ವಿಷಯಗಳು ಹುಟ್ಟಿಕೊಳ್ಳುತ್ತವೆ, ಮರೆಯಾಗುತ್ತವೆ. ಅವನ್ನು ಪಡೆದುಕೊಳ್ಳಲು ಬಹುಮಟ್ಟಿಗೆ ಹಣಸಂಪಾದಿಸಬೇಕು, ವೆಚ್ಚ ಮಾಡಬೇಕು, ಆಯಾಸಪಡಬೇಕು. ಅವು ಇದ್ದಂತೆಯೇ ಇರುವುದಿಲ್ಲ; ಮಾರ್ಪಡುತ್ತಲೇ ಇರುತ್ತವೆ. ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳುವುದೂ ಉಂಟು; ಅವುಗಳಿಂದ ತೊಂದರೆಯೂ ಆಗಬಹುದು. ಇವೆಲ್ಲ ದೋಷಗಳನ್ನು ಕಂಡುಕೊಂಡರೆ ವಿಷಯಗಳ ಮೇಲೆ ಆಸೆ ಹೋಗುತ್ತದೆ, ವೈರಾಗ್ಯ ಬರುತ್ತದೆ. ವೈರಾಗ್ಯವಿದ್ದಾಗ ಮನಸ್ಸು ತನ್ನ ಗುರಿಯಲ್ಲೇ (ಅದು ಸಗುಣವಾಗಲಿ ನಿರ್ಗುಣವಾಗಲಿ) ನೆಲೆಗೊಳ್ಳುತ್ತದೆ, ನಿಶ್ಚಲವಾಗುತ್ತದೆ, ನಿರ್ವಿಕಾರವಾಗುತ್ತದೆ. ಹೀಗೆ ಮನಸ್ಸು ನೆಲೆಯಾಗಿ ನಿಲ್ಲುವುದನ್ನೆ 'ಶಮೆ'ಯೆನ್ನುತ್ತಾರೆ (ಪು.೧೭).

ಕಣ್ಣುಕಿವಿ ಮೊದಲಾದ ಜ್ಞಾನೇಂದ್ರಿಯಗಳಾಗಲಿ, ನಾಲಗೆ ಮೊದಲಾದ ಕರ್ಮೇಂದ್ರಿಯಗಳಾಗಲಿ, ತಮ್ಮಷ್ಟಕ್ಕೆ ತಾವೇ ವಿಷಯಗಳನ್ನು ಕೈಬಿಡಲಾರವು. ಇವು ಗ್ರಹಿಸಿದ ವಿಷಯಗಳನ್ನು ಕುರಿತಂತೆ ವಿಚಾರಮಾಡುವ ಶಕ್ತಿಯಿರುವುದು ಮನಸ್ಸಿಗೆ. ಮನಸ್ಸಾದರೆ ತಾನಾಗಿ ವಿಷಯಗಳ ಕೈಬಿಡಬಹುದು. ಮನಸ್ಸು ಇಂದ್ರಿಯಗಳನ್ನು ಕುದುರೆಗಳ ಕಡಿವಾಣದಂತೆ ಹಿಡಿದಿಡಬಲ್ಲುದು. ಮನಸ್ಸು ಹೊರಗಣ ಇಂದ್ರಿಯಗಳನ್ನು ನಿಗ್ರಹಿಸುವುದು 'ದಮ' ಎನಿಸಿಕೊಳ್ಳುತ್ತದೆ (ಪು.೧೭).

ಕೆರೆಯ ನೀರು ತೂಬುಗಳ ಮೂಲಕ ಕೋಡಿಹರಿದು, ನೆರೆಯಲ್ಲಿರುವ ಹೊಲಗದ್ದೆಗಳ ಮೇಲೆ ಹರಿದು, ಆಯಾ ಭೂಮಿಯ ಆಕಾರವನ್ನೆ ಪಡೆದುಕೊಳ್ಳುವುದಲ್ಲವೆ? ಹಾಗೆಯೇ ಮನಸ್ಸು ಇಂದ್ರಿಯಗಳ ಮೂಲಕ ಹೊರಗೆ ಹರಿದು ವಿಷಯಗಳ ಆಕಾರವನ್ನು ತಳೆಯುತ್ತದೆ. ಹೊರಗಣ ಇಂದ್ರಿಯಗಳನ್ನು ತಡೆಗಟ್ಟಿದೆವೆಂದರೆ ಒಳಗಿರುವ ಮನಸ್ಸು ಹೊರಗೆ ಹರಿಯಲಾರದು. ಇದು 'ಉಪರತಿ' (ಪು.೧೮).

ಲೋಕದಲ್ಲಿ ಯಾವ ಮನುಷ್ಯನಾಗಲಿ ತನಗೆ ಆಪ್ತರಾದವರ ಮಾತಿನಲ್ಲಿ ನಂಬಿಕೆಯಿಡದಿದ್ದರೆ ಅವನು ಲೌಕಿಕ ವಿಷಯಗಳನ್ನೇ ಕುರಿತು ವಿಚಾರ-ಮಾಡಲಾರ. ಇನ್ನು ಅತೀಂದ್ರಿಯವಾದ ವಸ್ತುವನ್ನು ಹೇಳುವ ಶಾಸ್ತ್ರದಲ್ಲಿ ಶ್ರದ್ಧೆಯಿರದಿದ್ದರೆ ಹೇಗೆ? ಗುರುವಿನಲ್ಲಿ, ವೇದಾಂತವಾಕ್ಯಗಳಲ್ಲಿ ಸಾಧಕನು

ವಿಶ್ವಾಸವಿಡಬೇಕು. ಯಾವುದರಿಂದ ವಸ್ತು ನಮಗೆ ದೊರಕುವುದೋ ಅದೇ ಶ್ರದ್ಧೆಯೆಂದು ತಿಳಿದವರು ಹೇಳುತ್ತಾರೆ (ಪು.೧೮-೧೯).

ಈ ಬಗೆಯ ಶ್ರದ್ಧೆಯಿಂದ 'ಸಮಾಧಾನ'ವೆಂಬುದು ಸಿದ್ಧಿಸುತ್ತದೆ. ಶಮೆಯನ್ನು ಅಭ್ಯಾಸಮಾಡುವಾಗ ಮತ್ತೆಮತ್ತೆ ವಿಷಯಸುಖದಲ್ಲಿ ದೋಷವನ್ನು ಕಾಣುತ್ತ, ಮನಸ್ಸನ್ನು ಗಟ್ಟಿಮಾಡಿಕೊಳ್ಳಬೇಕಾಗುತ್ತದೆ; ಇದು ವಿಶೇಷವಾದ ಪ್ರಯತ್ನದಿಂದಲೇ ಸಾಧ್ಯವಾದೀತು. ಶಮೆಯು ಸಾಧನವಾದರೆ ಸಮಾಧಾನ ಅದರ ಫಲ. ಶಮೆಯು ಮನಸ್ಸಿಗೆ ಸಂಬಂಧಿಸಿದ್ದಾದರೆ, ಸಮಾಧಾನವು ಬುದ್ಧಿಗೆ ಸೇರಿದ್ದು. ಬುದ್ಧಿಯು ನಿಶ್ಚಯಾತ್ಮಕವಾದದ್ದು; ಶುದ್ಧವಾದ ಎಲ್ಲ ಉಪಾಧಿ ಗಳಿಂದಲೂ ಸ್ವತಂತ್ರವಾದ ಬ್ರಹ್ಮನಲ್ಲಿ ನೆಲೆಗೊಳ್ಳಬೇಕೆಂಬ ನಿರ್ಣಯ ವನ್ನು ಅದು ಕೈಗೊಳ್ಳಬೇಕು (ಪು.೧೯).

೯. ಇಷ್ಟೂ ಆದಮೇಲೆ ಮುಮುಕ್ಷುತೆ, ಎಂದರೆ ಮೋಕ್ಷವನ್ನು ಕುರಿತಂತೆ ಬಯಕೆ. ಚೈತನ್ಯದ ಪ್ರತಿಫಲನದಂತೆ ಇರುವುದು 'ನಾನು'ಎನ್ನುವ ಅಭಿಮಾನ (ಅಹಂಕಾರ). ನಮ್ಮಲ್ಲಿ ಐದು ಕೋಶಗಳಿವೆಯಲ್ಲ, ಅನ್ನಮಯ (ದೇಹ), ಪ್ರಾಣಮಯ(ಇಂದ್ರಿಯ),ಮನೋಮಯ(ಮನಸ್ಸು), ವಿಜ್ಞಾನಮಯ (ಬುದ್ಧಿ) ಮತ್ತು ಆನಂದಮಯಗಳೆಂದು-ಇವೆಲ್ಲವೂ ಅಜ್ಞಾನದಿಂದ ಒದಗಿಬಂದುವೇ ಬಂಧರೂಪವಾದುವೇ. ಇವುಗಳಲ್ಲೆಲ್ಲ 'ನಾನು' ಎಂಬ ಅಭಿಮಾನ ಮೂಡಿರುತ್ತದೆ; ಒಂದೊಂದೂ ಪ್ರತ್ಯಗಾತ್ಮವೇ ಎಂಬ ತಪ್ಪು ತಿಳಿವಳಿಕೆಯಿರುತ್ತದೆ. ಆತ್ಮದ ದಿಟವಾದ ಸ್ವರೂಪದ ಅರಿವು ಆದರೆ ಮಾತ್ರ ಈ 'ನಾನು' ಎಂಬ ಅಭಿಮಾನ ಸಡಿಲವಾಗುತ್ತದೆ. ದೇಹ, ಇಂದ್ರಿಯ ಮೊದಲಾದ ಯಾವ ವಿವರದಲ್ಲೂ 'ನಾನು, ನನ್ನದು' ಎನ್ನುವ ಅಭಿಮಾನ ಮತ್ತೆ ಒಡಮೂಡಲಾರದು. ಇದನ್ನೇ ಮುಕ್ತಿಯೆನ್ನುವುದು-ಪಂಚಕೋಶಾತ್ಮಕವಾದ ಬಂಧದಿಂದ ಬಿಡುಗಡೆ. ಇದನ್ನು ಪಡೆದುಕೊಳ್ಳಬೇಕೆಂಬ ಬಯಕೆಯೇ ಮುಮುಕ್ಷುತ್ವ (ಪು.೨೦).

ಮೋಕ್ಷದ ಸಹಜಸ್ವರೂಪ ಎಂದಿಗೂ ಅಳಿಯದ, ಬದಲಾಗದ ಸುಖ (ನಿತ್ಯಸುಖ). ಆದರೆ ಜನಸಾಮಾನ್ಯನಿಗೆ ಸಂಸಾರದ ವಾಸನೆಗಳು ಅವನ ಅಂತಃಕರಣದಲ್ಲಿ ಮನೆ ಮಾಡಿಕೊಂಡಿರುತ್ತವೆಯಾಗಿ ಅವನಿಗೆ ಮೋಕ್ಷದ ಬಯಕೆ

ತೋರಿಕೊಳ್ಳುವುದಿಲ್ಲ. ಅಧ್ಯಾತ್ಮಶಾಸ್ತ್ರವನ್ನು ಅಧ್ಯಯನ (ಶ್ರವಣ) ಮಾಡುತ್ತಿರುವ ಕಾಲದಲ್ಲೂ ಈ ಬಯಕೆಯೇನೂ ಗಟ್ಟಿಯಾಗಿರುವುದಿಲ್ಲ. ಒಂದು ವೇಳೆ ಬಯಕೆ ತಕ್ಕಮಟ್ಟಿಗೆ ಇದ್ದರೂ, ತಾತ್ಕಾಲಿಕವಾದದ್ದು ಅಷ್ಟೆ; ತೋರಿಕೊಳ್ಳುತ್ತದೆ, ಮರೆಯಾಗುತ್ತದೆ. ಇದು ಮಂದವೆನಿಸಿಕೊಳ್ಳುವ ಮುಮುಕ್ಷುತ್ವ. ಆದರೆ ಶ್ರವಣವಾದಮೇಲೆ ಆತ್ಮಾನಾತ್ಮ ವಿವೇಕ ಒದಗಿ, ಸಂಸಾರದಲ್ಲಿ ದೋಷಗಳನ್ನು ಕಂಡುಕೊಂಡಾಗ ವೈರಾಗ್ಯ ದೊರಕಿ, ಎಲ್ಲ ಕರ್ಮಗಳನ್ನೂ ಬಿಡುವ ಮನಸ್ಸಾಗುತ್ತದೆ. ಆಗ ಆತ್ಮ ವಿಚಾರಮಾಡಲು, ಗುರುವನ್ನು ಅರಸುತ್ತಾನೆ. ಇದು ಮುಮುಕ್ಷುತ್ವದ ಮಧ್ಯಮ-ನೆಲೆ. ಯಾವಾಗ ವೈರಾಗ್ಯವು ಬಲಿತು, ಮನಸ್ಸು ಉಪಶಾಂತವಾಗಿ ಸಮಾಧಿಯ ಸ್ಥಿತಿಗೆ ಬರುವುದೋ ಆಗ ತೀವ್ರವಾದ ಮುಮುಕ್ಷುತ್ವ. ಇಂಥ ಮುಮುಕ್ಷುವೇ ಮೋಕ್ಷಕ್ಕೆ ಮುಖ್ಯಾಧಿಕಾರವುಳ್ಳವನು. ಅವನಿಗೆ ಮೋಕ್ಷವೂ ಬೇಗನೆ ದೊರಕುತ್ತದೆ (ಪು.೨೦).

ಈ ಬಗೆಯ ತೀವ್ರವೈರಾಗ್ಯ ಬರಲೆಂದೇ ಮೊದಲು ಹೇಳಿದ ಶಮ, ದಮ ಮೊದಲಾದುವು ಇರಬೇಕು. ತೀವ್ರವೈರಾಗ್ಯವೆಂಬ ಚೌಕಟ್ಟಿನಲ್ಲೇ ಶಮ ಮೊದಲಾದ ಮಾತುಗಳಿಗೆ ಅರ್ಥ ಬರುವುದು, ಅವು ಪ್ರಸಕ್ತವಾಗುವುದು. ತೀವ್ರವಾದ ಮುಮುಕ್ಷುತ್ವ ಒದಗಿತೆಂದರೆ ಶಮ ಮೊದಲಾದವು ಫಲಕಾರಿಗಳಾದುವೆಂದು ಅರ್ಥ (ಪು.೨೧). ಆದರೆ ವಿರಕ್ತಿ, ಮುಮುಕ್ಷುತ್ವಗಳು ಮಂದವಾಗಿರುವ ವೇಳೆ ಬಿಸಿಲಿನಲ್ಲಿ ಮರಳು ಕಾಡಿನಲ್ಲಿ ನೀರನ್ನು ಕಂಡಂತೆ ಮೋಕ್ಷದ ತೋರಿಕೆಯಷ್ಟೆ ಇರುತ್ತದೆ. ಅದನ್ನು ಅರಸಿಕೊಂಡುಹೋಗುವಾಗ ಬರಿಯ ಆಯಾಸ; ಮೋಕ್ಷದ ಬಾಯಾರಿಕೆಯೇನೂ ಇಂಗಲಾರದು (ಪು.೨೨).

೧೦. ಆತ್ಮಸಾಕ್ಷಾತ್ಕಾರಕ್ಕೆ ಸಾಕ್ಷಾತ್‌ಸಾಧನವಾಗಿ ಭಕ್ತಿಯೂ ನೆರವಾಗುತ್ತದೆ. ಭಕ್ತಿಯೆನ್ನುವ ಮಾತಿಗೆ ಆತ್ಮವು ತನ್ನ ದಿಟವಾದ ಸ್ವರೂಪವನ್ನೇ ಅನುಸಂಧಾನ ಮಾಡುವುದು ಎಂದರ್ಥ. ಇದನ್ನೇ ನಿದಿಧ್ಯಾಸನವೆಂದೂ ಕರೆಯಬಹುದು. ಮೋಕ್ಷಕ್ಕೆ ಕಾರಣವೂ ಅಭಿವ್ಯಂಜಕವೂ ಆದ ಜ್ಞಾನಕ್ಕೆ ಸಾಧನಸಮುದಾಯ-ಗಳಿವೆಯಲ್ಲ, ಅವುಗಳಲ್ಲಿ, ಭಕ್ತಿ ಮುಖ್ಯವಾದುದು. ಭಕ್ತಿಯು ಆತ್ಮಾನಾತ್ಮ-ವಿವೇಕದಿಂದ ಆರಂಭವಾಗಿ ನಿದಿಧ್ಯಾಸನದಲ್ಲಿ ಮುಗಿಯುತ್ತದೆ (ಪು.೨೨).

ಪೂಜ್ಯವಾದ-ಗುರು, ದೇವತೆ, ಇತ್ಯಾದಿ ವಸ್ತುಗಳಲ್ಲಿ-ಅನುರಾಗ-ವಿರುವುದೇ ಭಕ್ತಿಯೆನಿಸಿಕೊಳ್ಳುತ್ತದೆ. ಅದು ಮನಸ್ಸಿನ ಧರ್ಮ. ಅದರಿಂದ ಅಂಥ ವಸ್ತುವಿನ ವಿಚಾರವಾಗಿ ವಿನಯ, ನಮ್ರತೆಗಳು, ಅದನ್ನು ಸೇವೆಮಾಡಬೇಕೆಂಬ ತವಕ, ತನಗೆ ಅದು ಅಭಿಮುಖವಾಗಬೇಕೆಂಬ ಬಯಕೆ-ಇವು ಒದಗಿಬರುತ್ತವೆ. ಮನಸ್ಸು, ಮೈ, ಮಾತು ಮೂರರಲ್ಲೂ ಒಂದು ಶುದ್ಧಿ (ತ್ರಿಕರಣಶುದ್ಧಿ) ಉಂಟಾಗುತ್ತದೆ (ಪು.೨೪-೨೫).

೧೧. ಆತ್ಮವನ್ನು, ಅದರ ತತ್ತ್ವವನ್ನು, ತಿಳಿಯದೆ, ಬರಿಯ ಬಾಯಿಮಾತಿನಿಂದ ಮುಕ್ತಿ ಮುಕ್ತಿ ಎಂದ ಮಾತ್ರಕ್ಕೆ, ಒಳಗಣ ಅನುಭವವಿರದೆ 'ಅಹಂ ಬ್ರಹ್ಮಾಸ್ಮಿ' ಮೊದಲಾದ ಬರಿಯ ಶಬ್ದಗಳನ್ನು ಉಚ್ಚರಿಸಿದರೆ ಮನುಷ್ಯನಿಗೆ ಮುಕ್ತಿ ದೊರಕುವುದು ಎಂದಿಗೂ ಸಾಧ್ಯವಿಲ್ಲ. ದೃಶ್ಯವಾದ ಎಲ್ಲ ಪ್ರಪಂಚ-ವಿಷಯಗಳನ್ನೂ ಆತ್ಮ, ತತ್ತ್ವಜ್ಞಾನದಲ್ಲಿ ಪ್ರವಿಲಾಪನ ಮಾಡಿಕೊಂಡು, ಇರುವುದು ಬ್ರಹ್ಮವೊಂದೇ ತತ್ತ್ವವೆಂದು ಅರಿತರೆ ಮಾತ್ರ ಮುಕ್ತಿ. ತತ್ತ್ವ ಜ್ಞಾನದಿಂದಲೇ ಮುಕ್ತಿ; ಬೇರೆ ಯಾವುದರಿಂದಲೂ ಮುಕ್ತಿ ಸಿಗಲಾರದು. ಬಾಹ್ಯಶಬ್ದಗಳಿಂದ ಮುಕ್ತಿ ದೊರಕಲಾರದೆಂದು ಮನವರಿಕೆ ಮಾಡಿಕೊಂಡು, ಆತ್ಮತತ್ತ್ವವನ್ನು ಸಮರ್ಥನಾದ ಗುರುವಿನಿಂದ ಅರಿತುಕೊಳ್ಳಲು ಪ್ರಯತ್ನ ಪಡಬೇಕು. ಮೊದಲು ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗ-ವಿರಾಗ, ಶಮದಮಾದಿಸಾಧನಸಂಪತ್ತು, ಮುಮುಕ್ಷುತ್ವ ಈ ಸಾಧನ-ಚತುಷ್ಟಯವನ್ನು ಸಂಪಾದಿಸಿಕೊಂಡು ಸದ್ಗುರುವನ್ನು ಆಶ್ರಯಿಸತಕ್ಕದ್ದು. ಸಾಧ್ಯವಿರುವ ಎಲ್ಲ ಪ್ರಯತ್ನವನ್ನೂ ಮಾಡಿ, ಸಂಸಾರವೆಂಬ ಬಂಧದಿಂದ ಪಾರಾಗಲು ಯತ್ನಿಸಬೇಕು (ಪು.೪೨-೪೪).

೧೨. ಮುಮುಕ್ಷುವಿಗೆ 'ನನಗೆ ಹೇಗೆ ಮುಕ್ತಿಯಾದೀತು?' ಎಂಬುದೇ ಮುಖ್ಯಪ್ರಶ್ನೆಯಾಗಿರಬೇಕು. ಈ ಬಂಧವೆಂಬುದು ಏನು? ಅದು ಒದಗಿಬಂದುದು ಹೇಗೆ? ಅದರ ನೆಲೆ ಏನು-ಮೊದಲಾದ ಪ್ರಶ್ನೆಗಳು ಸಲ್ಲವು. ಮನೆಗೆ ಬೆಂಕಿ ಬಿದ್ದಿರುವಾಗ ಅದನ್ನು ಆರಿಸುವುದು ಹೇಗೆ ಎಂಬುದೇ ಮುಖ್ಯ ಸಮಸ್ಯೆಯಲ್ಲವೆ? ಅದನ್ನು ಮಾಡದೆ, ಬೆಂಕಿಯು ಎಲ್ಲಿ ಬಿದ್ದಿತು? ಹೇಗೆ ಬಿದ್ದಿತು?- ಮೊದಲಾಗಿ ವಿಚಾರಮಾಡುವುದರಲ್ಲೇ ಕಾಲ ಕಳೆಯುತ್ತಿದ್ದರೆ ಮನೆಯು ಪೂರಾ ಬೆಂಕಿಯಿಂದ ಬೂದಿಯಾಗುತ್ತದೆ. ಅಜ್ಞಾನಿಗಳಾದ

ಎಲ್ಲರಿಗೂ ಸಾಂಸಾರಿಕವಾದ ಬಂಧ ತೀವ್ರವಾಗಿ ಇದ್ದೇ ಇದೆ. ಅದನ್ನು ತೊಲಗಿಸಿಕೊಳ್ಳಲು ಒಡನೆಯೇ ಪ್ರಯತ್ನಿಸಬೇಕು. ಹಿರಿಯರು ಹೇಳುವಂತೆ, ಶಾಸ್ತ್ರ ಅನಂತವಾಗಿದೆ, ತಿಳಿದುಕೊಳ್ಳುವುದು ಎಷ್ಟೋ ಇದೆ. ಆದರೆ ನಮಗಿರುವ ಕಾಲ ಅಲ್ಪವಾದುದು; ವಿಘ್ನಗಳೋ ಅನೇಕ. ಯಾವುದು ಮುಖ್ಯವೋ ಅಷ್ಟನ್ನು ಮಾತ್ರ ತಿಳಿದುಕೊಳ್ಳುವುದು ಒಳ್ಳೆಯದು. ಆತ್ಮ-ಅನಾತ್ಮ ಇವುಗಳ ಭೇದವನ್ನು ತಿಳಿದುಕೊಂಡಲ್ಲದೆ ಬಂಧದ ಸ್ವರೂಪವು ತಿಳಿದು ಬರುವುದಿಲ್ಲ.

೧೩. ಹೊರಗಣ ಇಂದ್ರಿಯಗಳ ಮೂಲಕ ಮನಸ್ಸು ಹೊರಗೆ ಹರಿದಾಗ, ವಿಷಯಗಳು ಬೇರೆಬೇರೆಯಾಗಿ ಖಂಡತುಂಡಾಗಿ ಇರುವುದರಿಂದ, ಅವುಗಳ ಆಕಾರವನ್ನೇ ತಳೆದ ಮನಸ್ಸಿನಿಂದ ಉಪಹಿತವಾದ ಜೀವವು ಅಲ್ಪವೇ ಆಗುತ್ತದೆ. ಜ್ಞಾನಿಗಳಿಗಾದರೋ ಹಾಗಲ್ಲ. ಅವರು ಯಾವಾಗಲೂ ಮನಸ್ಸನ್ನು ಒಳಮುಖ ಮಾಡಿಕೊಂಡಿರುತ್ತಾರಾಗಿ ಮಹತ್ತ್ವವು ಸಹಜವಾದದ್ದೇ (ಪು.೨೪೬).

೧೪. ಬ್ರಹ್ಮವಿದ್ಯೆಯ ಫಲವೇನು? ಎಲ್ಲ ಕಾರ್ಯಗಳಿಂದಲೂ ನಿವೃತ್ತಿ; ಯಾವ ವ್ಯಾಪಾರವೂ ಇಲ್ಲದಿರುವುದು; ನೆಮ್ಮದಿಯ ಪರಮಾವಧಿ. ಮಾಡಬೇಕಾದುದನ್ನೆಲ್ಲ ಮಾಡಿಯಾಯಿತು, ಪಡೆದುಕೊಳ್ಳಬೇಕಾದುದನ್ನೆಲ್ಲ ಪಡೆದುಕೊಂಡಾಯಿತು; ಇನ್ನು ಮುಂದೆ ಮಾಡಬೇಕಾದುದು ಏನೂ ಇರದು, ಪಡೆದುಕೊಳ್ಳಬೇಕಾದುದು ಏನೂ ಇರದು ಎಂಬ ಧನ್ಯತೆಯ ಬುದ್ಧಿ. ಇದರಿಂದಾದ ಹೆಚ್ಚಿನ ಸುಖ. ವಿಷಯಗಳಿಂದ ಉಂಟಾದ ಸುಖ ಅಲ್ಲ ಅದು. ಈ ಸುಖಕ್ಕೆ ಎಣೆಯೇ ಇರದು. ಇದು ನಿರ್ವಿಷಯವಾದ ನಿತ್ಯನಿರತಿಶಯ-ವಾದ ಸುಖ. ಪ್ರಾರಬ್ಧಕರ್ಮದಿಂದ ದುಃಖಬಂದರೂ ಅದರಿಂದ ಉದ್ವೇಗ-ಗೊಳ್ಳದಿರುವುದು. ಇದೇ ಆತ್ಮತತ್ತ್ವಜ್ಞಾನದ ದೃಷ್ಟ (ಎಂದರೆ ನಮ್ಮ ಅನುಭವಕ್ಕೆ ಇಲ್ಲೇ ಬರುವ) ಫಲ.

# ಶ್ರೀ ಗುರುಕೃತಿರತ್ನಮಾಲೆ

## ೧. ಗುರುಸ್ತುತಿಃ

ಇದನ್ನು ಶ್ರೀರಂಗದ ವಾಣೀವಿಲಾಸಪ್ರೆಸ್ಸಿನ ಪ್ರಕಟಣೆಯಲ್ಲಿ ತೋಟಕಸ್ತೋತ್ರವೆಂದು ನಿರ್ದೇಶಿಸಿದ್ದಾರೆ. ತೋಟಕ (ಅಥವಾ ತ್ರೋಟಕ) ಎಂಬುದು ಒಂದು ವೃತ್ತದ ಹೆಸರು. 'ದ್ವಾದಶಾಕ್ಷರಪಾದಚ್ಛಂದಃ'ಎಂದು ಅದರ ಲಕ್ಷಣ; ಎಂದರೆ ಹನ್ನೆರಡು ಅಕ್ಷರಗಳುಳ್ಳ ಪಾದಗಳು ನಾಲ್ಕಿರುವುವು. ಛಂದೋಮಂಜರಿಯಲ್ಲಿ 'ವದ ತೋಟಕಮಬ್ಧಿಸಕಾರಯುತಂ' ಎಂದು ನಿರ್ದೇಶಿಸಿ ಈ ಉದಾಹರಣೆಯನ್ನು ಕೊಡಲಾಗಿದೆ-

**ಯಮುನಾತಟಮಚ್ಯುತಕೇಲಿಕಲಾ-**
**ಲಸದಂಘ್ರಿಸರೋರುಹಸಂಗರುಚಿಮ್ ।**
**ಮುದಿತೋऽಟಕಲೇರಪನೇತುಮಘಂ**
**ಯದಿ ಚೇಚ್ಛಸಿ ಜನ್ಮ ನಿಜಂ ಸಫಲಮ್ ॥**

ಇದೇ ವೃತ್ತದಲ್ಲಿ ಸ್ವಾಮಿಗಳು ರಚಿಸಿರುವ ಇಪ್ಪತ್ತೊಂದು ಪದ್ಯಗಳ ಮಾಲಿಕೆ ಇದು. ವೃತ್ತದಂತೆಯೇ ಅರ್ಥವೂ ಮನೋಜ್ಞವಾಗಿದೆ.

ಶ್ರೀಚಂದ್ರಶೇಖರಭಾರತೀಸ್ವಾಮಿಗಳಿಗೆ ತಮ್ಮ ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಸ್ವಾಮಿಗಳ ನೇರಪರಿಚಯ ಇದ್ದದ್ದು ತೀರ ಕಡಿಮೆ. ಶೃಂಗೇರಿಯಲ್ಲಿ ಮಠವೇ ನಡೆಸುತ್ತಿದ್ದ ಶಾಲೆಗೆ ಅವರು ಸೇರಿಕೊಂಡಾಗ ಅವರಿಗೆ ಹದಿನಾಲ್ಕು ವರ್ಷ ವಯಸ್ಸು; ಇವರು ಶಾಲೆಗೆ ಸೇರಿಕೊಂಡ ಒಂದೆರಡು ತಿಂಗಳುಗಳಲ್ಲೇ ಜಗದ್ಗುರುಗಳು ಸಂಚಾರಕ್ಕೆ ಹೊರಟುಬಿಟ್ಟರು. ಶೃಂಗೇರಿಯಲ್ಲಿ ಅವರು ಓದಿದ ಮೂರು ವರ್ಷಗಳ ಕಾಲವೂ, ಜಗದ್ಗುರುಗಳು ಶೃಂಗೇರಿಯಲ್ಲೇ ಇದ್ದಾಗಲೂ, ಅವರು ದೂರವೇ ಎತ್ತರವೇ; ಈ ಹುಡುಗನಿಗೆ ದಕ್ಕುವಂತಿರಲಿಲ್ಲ. ಇನ್ನು ಬೆಂಗಳೂರಿನಲ್ಲಿ ಗೀರ್ವಾಣ ಪ್ರೌಢವಿದ್ಯಾಭಿವರ್ಧಿನಿಶಾಲೆಯಲ್ಲಿ ಓದಿಗೆಂದು ಬಂದಮೇಲಂತೂ ಜಗದ್ಗುರುಗಳು ದೂರವೇ ಆಗಿಬಿಟ್ಟರು. ಮುಂದೆ ಹುಡುಗ ಪೀಠವೇರಲು ಶೃಂಗೇರಿಗೆ ಹಿಂದಿರುಗುವಾಗ ಅವರು ದೇಹವನ್ನೇ ಬಿಟ್ಟಿದ್ದರು. ಹೀಗಾಗಿ ಇವರಿಗೆ ಹಿಂದಿನ ಜಗದ್ಗುರುಗಳೊಂದಿಗೆ ಒಡನಾಡುವ ಅವಕಾಶ ಇರಲೇ ಇಲ್ಲ; ಅವರ ವ್ಯಕ್ತಿತ್ವದ ಪರಿಚಯವಾಗುವ ಸಾಧ್ಯತೆಯೂ ಇರಲಿಲ್ಲ.

ಆದರೆ ಗುರುಗಳೆಂಬ ಕಲ್ಪನೆ, ಭಾವನೆ ಬೇರೂರಿದ್ದಿತು. ಗುರುವಿನಲ್ಲಿ ಇವರು ಕಂಡದ್ದು ಶಿವನನ್ನೇ 'ದಕ್ಷಿಣಾಮೂರ್ತಿಯನ್ನೇ' ಶಂಕರಾಚಾರ್ಯರನ್ನೇ. ಅವರು ಮನುಷ್ಯ ಮಾತ್ರದವರೆಂದು ಇವರು ಎಂದಿಗೂ ಬಗೆಯಲಿಲ್ಲ. ಮತ್ತೆ, ದತ್ತಸಂಪ್ರದಾಯವನ್ನು ಅಂತರಂಗದಲ್ಲಿ ಗ್ರಹಿಸಿದ್ದರಾಗಿ, ಗುರುವೆಂದರೆ ದತ್ತಾತ್ರೇಯನ ರೂಪವೆಂದೇ ಇವರ ಎಣಿಕೆ. ಆದ್ದರಿಂದ ಇವರು ಗುರುವಿನ ಮಹತಿಯನ್ನು ತಮ್ಮ ರಚನೆಗಳಲ್ಲಿ ಚಿತ್ತರಿಸುವಾಗ ಗುರುತತ್ತ್ವವನ್ನೆತ್ತಿ ಹಿಡಿದಿದ್ದಾರೆ.

ಸ್ಮಿತನಿರ್ಜಿತಕುಂದಸುಮಂ ಹ್ಯಸಮಂ
ಮುಖಧೂತಸುಧಾಂಶುಮದಂ ಶಮದಮ್ ।
ಸುಖರೂಪಪರಾತ್ಮರತಂ ನಿರತಂ
ಶ್ರಿತಕಲ್ಪತರುಂ ಪ್ರಣಮಾಮಿ ಗುರುಮ್ ॥ ೧ ॥

ಗುರುವಿನ ಮುಗುಳುನಗೆಯೆಂದರೆ ಚೆಲುವಾದ ಮೊಲ್ಲೆಹೂವು ಕೂಡ ನಾಚುವುದು; ಅವನಿಗೆಣೆಯಿದೆಯೆ? ಅವನ ಮುಖವೋ, ಬೆಳದಿಂಗಳ ಹೆಮ್ಮೆಯನ್ನೂ ಮುರಿಯುವುದು; ನೋಡಿದವರ ಒಳಗೆ ನೆಮ್ಮದಿಯನ್ನು ತರುವುದು. ಗುರುವೆಂದರೆ ಸುಖವು ಮೈವೆತ್ತು ಬಂದಂತಿರುವ ಪರಮಾತ್ಮನಲ್ಲಿ ನೆಲೆಸಿದವನು, ಮುಳುಗಿದವನು; ತನ್ನ ನೆರವನ್ನು ಬಯಸಿಬಂದವರ ಪಾಲಿಗೆ ಬೇಡಿದ್ದನ್ನು ನೀಡುವ ಕಲ್ಪವೃಕ್ಷವೇ. ಅಂಥ ಗುರುವಿಗೆ ಮಣಿಯುವೆನು.

ಜಲಬುದ್ಬುದವತ್ ಕ್ಷಣಭಂಗಯುತೇ
ಮಲಮೂತ್ರವಸಾಸಹಿತೇ ವಪುಷಿ ।
ಕುರುತೇಽಭಿಮತಿಂ ಹೃದಯಂ ಹಿ ಮುಧಾ
ಲಘು ವಾರಯ ದೇಶಿಕ ತಾಂ ದಯಯಾ ॥೨॥

ನನ್ನ ಒಡಲು ತನ್ನದೆಂದು ಆದರದಿಂದ ಕಾಣುವ ಈ ಶರೀರವೆಂಥದು? ನೀರ ಮೇಲಣ ಗುಳ್ಳೆಯಂತೆ ಒಂದು ಗಳಿಗೆ ಇದ್ದು ಮರುಗಳಿಗೆಯೇ ಮರೆಯಾಗುವುದು! ಅದರ ತುಂಬ ಇರುವುದು ಹೇಸಿಗೆಯೆ! ಈ ಶರೀರವನ್ನು ಮೆಚ್ಚಿಕೊಳ್ಳುವ ಜಾಣತನವೇನು? ಗುರುವೇ, ಈ ದಡ್ಡತನವನ್ನು ನನ್ನಿಂದ ದೂರಮಾಡು.

ಧೃತದಂಡಕಮಂಡಲುಜಾಪಸರಂ
ಸತತಂ ಹೃದಯೇ ಶಶಿಖಂಡಧರಮ್।
ದಧತಂ ನಮತಾಂ ವೃಜಿನೌಘಹರಂ
ದದತಂ ಪ್ರತಿಭಾಂ ಪ್ರಣಮಾಮಿ ಗುರುಮ್ ॥೩॥

ಯತಿಧರ್ಮಕ್ಕನುಗುಣವಾಗಿ ಕೈಗಳಲ್ಲಿ ದಂಡ, ಕಮಂಡಲು, ಜಪಮಾಲೆಗಳು; ಒಡಲೊಳಗೆ ಎಂದೂ ಶಿವನಿರುವ. ಅಡಿಗೆರಗಿದವರ ದುರಿತಗಳ ದಂಡನ್ನೇ ಅಡಗಿಸುವ ಶಕ್ತಿ; ಅವರಿಗೆ ಮುಕ್ತಿಸಾಧಕವಾದ ಪ್ರತಿಭೆಯನ್ನೂ ನೀಡುವ ಗುರು; ನಿನಗೆರಗುವೆನು.

ಕರಣಾನಿ ಸಮಾಸಿ ಭವಂತಿ ಕದಾ
ತರಣಂ ನು ಕಥಂ ಭವವಾರಿನಿಧೇಃ ।
ಶರಣಂ ಮಮ ನಾಸ್ತಿ ಗುರೋ ತ್ವದೃತೇ
ನಿರುಪಾಧಿಕೃಪಾಜಲಧೇಽವ ಜವಾತ್ ॥೪॥

ನನ್ನ ಇಂದ್ರಿಯಗಳು ಹಾರಾಡಿ ಮೇಲೇರಿ ಕುಣಿಯದೆ ನೆಮ್ಮದಿಯಿಂದ ಇರುವಂತಾಗುವುದು ಎಂದೋ? ಈ ಸಂಸಾರವೆಂಬ ಕಡಲನ್ನು ದಾಟುವ ಬಗೆಯೆಂತೋ? ನೀನಲ್ಲದೆ ನನಗೆ ಬೇರೊಂದು ಆಸರೆಯುಂಟೆ, ಗುರುವೇ? ನಿನ್ನ ದಯೆಯೆಂಬ ನೀರಿನ ಹರವಿಗೆ ಮೇರೆಯಿರದು; ಈಗಲೇ ನನ್ನನ್ನು ಸಲಹು.

ಚರಿತಂ ನ ಮಯೇಷದಪೀಹ ಶುಭಂ
ಭರಿತಂ ಜಠರಂ ಬಹುಧಾಽಘಚಯಾತ್ ।
ಭುರಿತಂ ಹೃದಯಂ ನಿತರಾಂ ತಮಸಾ
ತ್ವರಿತಂ ವಿಮಲಂ ತನು ತದ್ಗುರುರಾಟ್ ॥ ೫ ॥

ಒಳಿತೆಂಬುದೇನು ನಡೆದಿಲ್ಲ ನನ್ನಿಂದ! ನನ್ನೊಡಲೋ ತುಂಬಿದೆ ನಾನಾ ಬಗೆಯ ಪಾಪಗಳಿಂದ! ಒಳಗಿದ ಆಳದಲ್ಲಿ ಕಗ್ಗತ್ತಲೆಯು ಗಟ್ಟಿಯಾಗಿ ಮಡುಗಟ್ಟಿ ನಿಂತಿದೆ. ಬೇಗನೆ ಬದುಕನ್ನು ತಿಳಿಮಾಡು, ಒಡೆಯ ಗುರುವೇ !

ಗಲಿತೇಽಪಘನೇ ಪಲಿತೇಽಪಿ ಶಿರ-
ಸ್ಯಲಿತಂ ಮಮ ದೇಶಿಕ ನೈವ ಹೃದಾ ।
ತವ ಪಾದಪಯೋಜಯುಗೇ ನು ಕದಾ
ನಿರತಂ ನಿರತಂ ಪ್ರಲಭೇತ ಮುದಮ್ ॥೬॥

ಈ ಮೈಯು ಹಣ್ಣಾಗಿ ಸುಕ್ಕಿಟ್ಟಿತು, ತಲೆಗೂದಲು ನೆರೆಯಿತು. ಆದರೂ ಒಡಲಲ್ಲಿ ಪ್ರಪಂಚದ ಗೀಳು ಸಾಕು ಸಾಕೆನಿಸಲಿಲ್ಲವಲ್ಲ, ಗುರುವೇ! ನಾನು ನಿನ್ನಡಿದಾವರೆಗಳ ಜೋಡಿಯಲ್ಲಿ ನೆಲೆಗೊಳ್ಳುವುದೆಂದು? ಎಂದೆಂದೂ ಇರುವ ಸುಖವನ್ನು ಪಡೆದುಕೊಳ್ಳುವುದೆಂದು?

ಕರುಣಾರ್ದ್ರವಿಲೋಚನ ಮೋಚಯ ಮಾಂ
ಭವಬಂಧನತೋ ಬಹುಧಾ ವ್ಯಥಿತಮ್ ।
ಕ್ವಥಿತಂ ಪ್ರತಿಘಾದಿಕೃಶಾನುವಶಾತ್
ಕರುಣಾರಸಸೇಚನತೋಽವ ಗುರೋ ॥೭॥

ದುಃಖದಿಂದ ಬೆಂದವರನ್ನು ಕಂಡು, ಕರುಣೆಯಿಂದ ಹೊರಗಣ್ಣುಗಳೆರಡು ಒಳಗಣ್ಣೊಂದು ಮೂರೂ ನೀರುಗಟ್ಟಿರುವ ಗುರುವೇ, ಈ ಸಂಸಾರದ ಕಟ್ಟುಗಳಿಂದ ಬಹುವಾಗಿ ನೊಂದಿರುವ ನನ್ನನ್ನು ಪಾರುಮಾಡಯ್ಯ ನೀನು! ಅಡ್ಡಿ ಆಡಚಣೆಗಳನ್ನು ಹೊಡೆದುಹಾಗಬೇಕೆಂಬ ಸಿಟ್ಟಿನಿಂದ ಬೆಂದು ಸೀದಿರುವ ನನ್ನ ಮೇಲೆ ನಿನ್ನ ಕರುಣೆಯ ರಸವನ್ನು ಸಿಂಪಡಿಸಿ ಕಾಪಾಡು!

ಶಿವ ಏವ ಭವಾನಿತಿ ಮೇ ಧಿಷಣಾ
ಹ್ಯುದಪದ್ಯತ ದೇಶಿಕ ಚೇನ್ನ ತಥಾ ।
ಸಕಲಂ ಜಗದಪ್ಯವಬುದ್ಧ್ಯತಿ ತೇ
ಸಮತಾಂ ಸಕಲೇಷ್ವಪಿ ತತ್ತು ಕಥಮ್ ॥೮॥

ದಿಟವಾಗಿ ನೀನು ಶಿವನೇ ಎಂದು ನನ್ನಲ್ಲಿ ತಿಳಿವಳಿಕೆ ಮೂಡಿದೆ, ಗುರುವೆ! ಹಾಗಿಲ್ಲವಾದರೆ ಇಡೀ ಜಗತ್ತು ನಿನ್ನನ್ನು ತಿಳಿಯುವುದೆಂತು? ಎಲ್ಲ ಜನರನ್ನೂ ಸಮತೆಯಿಂದ ನೀನು ಕಾಣುತ್ತಿರುವುದಾದರೂ ಹೇಗೆ?

ವಿಷಯೇಷು ಸದಾ ರಮತೇ ಹೃದಯಂ
ವಿಷತುಲ್ಯಧಿಯಂ ದಿಶ ತತ್ರ ಗುರೋ ।
ಲಷಿತತ್ವದಪಾಂಗಝುರೀ ಪ್ರಸರ-
ತ್ವಚಿರಾನ್ಮಯಿ ಬಂಧವಿನಾಶಕರೀ ॥೯॥

ನನ್ನೊಡಲು ಹೊರಗಣ ವಿಷಯಗಳಲ್ಲೆ ತೊಡಗಿ ಅಲ್ಲೇ ಸುಖ ಕಾಣುವ ಹಂಬಲದಲ್ಲಿ ಮುಳುಗಿದೆ. ಹೊರಗಣ ವಿಷಯಗಳ ಬಯಕೆ ದಿಟವಾಗಿ ವಿಷವೇ, ಅಧ್ಯಾತ್ಮದ ಬಯಕೆಯನ್ನು ಹುಟ್ಟಡಗಿಸಿ ಬಿಡುವುದು ಅದು-ಎಂಬ ಬುದ್ಧಿಯನ್ನು ನನಗೆ ಕೊಡಮಾಡಯ್ಯ ಗುರುವೇ! ಈ ಬಗೆಯ ಬಯಕೆಯೆಂಬ ಕಟ್ಟುಗಳನ್ನು ಕಿತ್ತು ಬಿಸುಡುವ ನಿನ್ನ ಕಡೆಗಣ್ಣೋಟವೆಂಬ ತೊರೆ ನನ್ನೊಳಗೆ ಹರಿದು ಬರಲಯ್ಯ !

ಸದಸನ್ಮತಿರೇವ ನ ಮೇಽಸ್ತಿ ಗುರೋ
ವಿರತಿಂ ಪ್ರತಿ ಸಾ ಕರಣಂ ಗದಿತಾ ।
ವಿರತಿಂ ಕ್ವ ನು ಮೇ ವಿಷಯಾಶಹೃದಃ
ಕಥಮಾಪ್ನುವ ಏವ ವಿಮುಕ್ತಿಪಥಮ್ ॥೧೦॥

ದಿಟ ಯಾವುದು, ಸಟೆ ಯಾವುದು ಎಂಬ ಅರಿವೇ ನನಗಿರದು, ಗುರುವೇ! ಈ ಅರಿವಲ್ಲವೆ ವಿರತಿಗೆ ದಾರಿ? ಅದಿಲ್ಲದೆ ವಿಷಯಗಳ ಬಯಕೆ ತೊಲಗಲಾರದೆಂದು ಶಾಸ್ತ್ರ ಹೇಳುವುದಿಲ್ಲವೆ? ವಿಷಯಗಳ ಬಯಕೆಯಿಂದ ತುಂಬಿರುವ ನನ್ನೊಡಲಲ್ಲಿ ವಿರಕ್ತಿಯ ನೆಳಲಾದರೂ ಬೀಳುವುದೆಂತು? ಇನ್ನು, ಬಿಡುಗಡೆಯ ಹಾದಿಯನ್ನೇನು ನಾ ಹಿಡಿಯಬಲ್ಲೆ?

ಬ್ರುವತೇ ನಿಗಮಾ ಬಹುವಾರಮಿದಂ
ಜಗದಭ್ರತಲಾದಿಸದೃಕ್ಷಮಿತಿ ।
ಮಮ ತಾದೃಶಧೀಃ ಸಮುದೇತಿ ಕದಾ
ವದ ದೇಶಿಕ ಮೇಽಂಘ್ರಿಜುಷೇ ಕೃಪಯಾ ॥೧೧॥

ವೇದಗಳೇನೋ ಅಡಿಗಡಿಗೆ ಸಾರುತ್ತಲೆ ಇವೆ-ಈ ಜಗತ್ತು ದಿಟವಲ್ಲ, ಆಗಸದ ಅಡಿಯಂತೆ ತೋರಿಯಡಗುವುದಷ್ಟೆ ಎಂದು. ಆದರೆ ಈ ಅರಿವು ನನ್ನಲ್ಲಿ ಬೇರೂರುವುದೆಂದಿಗೆ ತಿಳಿಯದಲ್ಲಾ! ನಿನ್ನಡಿಗೆರಗಿರುವ ನನಗಿಷ್ಟು ಹೇಳಯ್ಯ, ಗುರುವೆ!

**ಜನನೀ ಜನಕಃ ಸುತದಾರಮುಖಾಃ**
**ಸ್ವಹಿತಾಯ ಲಷಂತಿ ಸದಾ ಮನುಜಮ್ ।**
**ಗುರುರೇವ ಲಷತ್ಯಖಿಲಸ್ಯ ಹಿತಂ**
**ತದಹಂ ತವ ಪಾದಯುಗಂ ಶ್ರಿತವಾನ್ ॥೧೨॥**

ತಾಯಿಯಾಗಲಿ ತಂದೆಯಾಗಲಿ ಹೆಂಡತಿಯಾಗಲಿ ಮಗನಾಗಲಿ ಯಾರಾಗಲಿ ತಂತಮ್ಮ ಹಿತಕ್ಕಾಗಿಯೇ ಮನುಷ್ಯನನ್ನು ಬಯಸುವುದು, ಸೇರುವುದು. ಆದರೆ ಗುರುವೊಬ್ಬನೆ ಎಲ್ಲರ ಹಿತವನ್ನೂ ಬಯಸುವವನು. ಆದ್ದರಿಂದಲೆ ನಾನು ನಿನ್ನಡಿಗಳನ್ನಾಶ್ರಯಿಸಿರುವೆನಯ್ಯ, ಗುರುವೆ!

**ಮದಮೋಹಮುಖಾಂತರಶತ್ರುಗೃಹಂ**
**ದಮಶಾಂತಿವಿರಕ್ತಿಸುಹೃದ್ರಹಿತಮ್ ।**
**ಕಥಮೇನಮವೇರ್ಭವಸಾಗರತಃ**
**ಕಿಮಸಾಧ್ಯಮಿದಂ ವದ ದೇಶಿಕ ತೇ ॥೧೩॥**

ಹೆಮ್ಮೆ ಹಮ್ಮು ಮರುಳು ಮೊದಲಾದ ಒಳಗಣ ವೈರಿಗಳ ಬಣ ನನ್ನಲ್ಲೇ ಬೀಡುಬಿಟ್ಟಿದೆ! ದಮೆ, ಶಮೆ, ವಿರಕ್ತಿ ಮೊದಲಾದ ನೇಹಿಗರು ಮರೆಯಾಗಿದ್ದಾರೆ. ಹೀಗಿರುವ ನನ್ನನ್ನು ಈ ದುಃಖದ ಕಡಲಿನಿಂದ ನೀನು ದಡಹಾಯಿಸುವುದೆಂತೋ ನಾನರಿಯೆ! ನಿನಗಿದು ಆಗಲಾರದ ಹದನವೇ, ತಿಳಿಯಹೇಳು, ಗುರುವೆ!

**ಧುನುಷೇಽಘಚಯಂ ಪದನಂತ್ರನೃಣಾಂ**
**ತನುಷೇ ಭವುಕಂ ಸಕೃದೀಕ್ಷಣತಃ ।**
**ಜನುಷೇ ಸದಸಚ್ಚ ಯಥಾ ನ ಭವೇ-**
**ನ್ಮಮ ಕರ್ಮ ತಥಾ ಕುರು ದೇಶಿಕರಾಟ್ ॥೧೪॥**

ನಿನ್ನಡಿಗೆರಗುವ ಜನರ ಪಾಪಗಳನ್ನೆಲ್ಲ ಕೊಡಹಿಬಿಡುವೆಯೋ ಗುರುವೇ, ಒಮ್ಮೆ ನೀನು ನೋಡಿದೆಯೆಂದರೆ ಒಳಿತು ತಾನಾಗಿಯೇ ಒದಗುವುದು. ನಾ ಮಾಡುವ ಕರ್ಮ, ಒಳಿತೋ ಕೆಡುಕೋ ಏನಾದರಾಗಲಿ, ಮರುಹುಟ್ಟಿಗೆ ಕಾರಣವಾಗದಂತೆ ಮಾಡಿಬಿಡು, ಒಡೆಯ ಗುರುವೇ!

ಸಮವಾಪ್ಯ ಸುದುರ್ಲಭವಿಪ್ರಜನು-
ರ್ಯತಿತಾಮಪಿ ಕೋ ನು ಜನೋ ಮದೃತೇ ।
ವ್ಯವಹಾರವಶತ್ವಮುಪೈತಿ ಗುರೋ
ಗತಿರೇವ ನ ಮೇ ತವ ಪಾದಮೃತೇ ॥೧೫॥

ಲಕ್ಷಲಕ್ಷ ಜೀವಯೋನಿಗಳಲ್ಲಿ ವಿಪ್ರನಾಗಿ ಹುಟ್ಟುವುದು ಬಹು ವಿರಳ. ವಿಪ್ರನಾಗಿ ಹುಟ್ಟಿದ ಮೇಲೂ ಕಡೆಯದಾದ ಸಂನ್ಯಾಸಾಶ್ರಮವನ್ನು ಪಡೆದುಕೊಳ್ಳುವುದು ಇನ್ನೂ ವಿರಳ. ವಿಪ್ರನಾಗಿ ಹುಟ್ಟಿದ ನಾನು ಸಂನ್ಯಾಸಾಶ್ರಮವನ್ನೂ ಪಡೆದುಕೊಂಡೆ. ಆದರೆ ಈ ವ್ಯವಹಾರ ಪ್ರಪಂಚದಲ್ಲಿ ಸಿಕ್ಕಿಬಿದ್ದಿರುವೆನಲ್ಲಾ, ನನ್ನಂತೆ ನಿರ್ಭಾಗ್ಯ ಇನ್ನೊಬ್ಬನುಂಟೆ? ನನಗಿನ್ನು ದಾರಿ ತೋರುವರಾರು, ನಿನ್ನಡಿಯಾಸರೆಯಲ್ಲದೆ ಗುರುವೆ?

ಉದದೀಧರ ಏವ ಬಹೂನ್‌ಮನುಜಾನ್
ಕೃಪಯಾ ಭವಸಾಗರಮಧ್ಯಗತಾನ್ ।
ಕಿಮಹಂ ತವ ಭಾರತಿ ಲೋಕಗುರೋ
ನ ಹಿ ಭೂಭೃದಹೇರಣುರಸ್ತಿ ಭರಃ ॥೧೬॥

ಈ ಸಂಸಾರವೆಂಬ ಕಡಲಿನ ನಡುವೆ ಬಿದ್ದ ಅನೇಕರನ್ನು ಕರುಣೆಯಿಂದ ಕೈಹಿಡಿದು ಮೇಲೆತ್ತಿ ನೀ ದಡಹಾಯಿಸಿದೆ, ಲೋಕಗುರುವೇ! ನಾನೊಬ್ಬ ನಿನಗೆ ಹೊರೆಯಾಗಿಬಿಟ್ಟೆನೆ? ಭೂಮಿಯನ್ನೆ ಹೊತ್ತಿರುವ ಹಾವಿಗೆ (ಆದಿಶೇಷನಿಗೆ) ಅಣುವೊಂದು ಹೊರಲಾಗದ ಹೊರೆಯೆನಿಸೀತೆ ?

ದಮುನಾ ಯಮುನಾಜನಕಶ್ಚ ವಿಧು-
ರ್ಮಿಲಿತಾಃ ಶತಶೋಽಪಿ ನ ಶಕ್ನುವತೇ ।
ಯದಪಾಕರಣೇ ತದಚಿತ್ತಿಮಿರಂ
ತ್ವಮಪಾಕುರುಷೇ ವಚಸೈವ ಗುರೋ ॥೧೭॥

ಒಳಗಣ ಅರಿವಿರದ ಕತ್ತಲೆಯನ್ನು (ಅಜ್ಞಾನ, ಅವಿದ್ಯೆ) ತೊಲಗಿಸಲೆಂದು ಬೆಂಕಿ, ಸೂರ್ಯ, ಚಂದ್ರ ಇವರೆಲ್ಲ ಸಾಸಿರಸಂಖ್ಯೆಯಲ್ಲಿ ಸೇರಿ ಬಂದರೂ ಅದು ಆಗಲಾರದು! ಹೊರಗಣ ಬೆಳಕು ಒಳಗಣ ಕತ್ತಲೆಯ ನೀಗುವುದೆಂತು? ಆದರೆ ಗುರುವೇ, ನಿನ್ನ ಉಪದೇಶವೆಂಬ ಮಾತೇ ಸಾಕು, ಈ ಕತ್ತಲೆ ತೊಲಗಿಹೋಗುತ್ತದೆ.

ಗುರುಶಂಕರನಿರ್ಮಿತಭಾಷ್ಯಸುಧಾ-
ಸರಿದೀಶನಿಮಜ್ಜನತೃಪ್ತಮಿಮಮ್ ।
ಪ್ರವಿಧಾಯ ಗುರೋ ಭವವಾರಿನಿಧೇ-
ರ್ಲಘು ತಾರಯ ಮಾಂ ಕರುಣಾರ್ದ್ರದೃಶಾ ॥೧೮॥

ಶಂಕರಭಗವತ್ಪಾದರು ರಚಿಸಿರುವ ವೇದಾಂತಸೂತ್ರಭಾಷ್ಯವೆಂಬ ಅಮೃತ ರೂಪದ ನದಿಯಲ್ಲಿ ನನ್ನನ್ನು ಮುಳುಗಿಸಿ ಕೃತಕೃತ್ಯನಾಗಿ ಮಾಡಯ್ಯ, ಗುರುವೆ! ಕರುಣೆಯೆಂಬ ನೀರಿನಿಂದ ತೊಯ್ದ ನಿನ್ನ ಕಂಗಳನ್ನು ನನ್ನತ್ತ ಬೀರಿ ಈ ದುಃಖದ ಕಡಲಿನಿಂದ ದಡಹಾಯಿಸಿಬಿಡು.

ಪದನಮ್ರಜನೌಘಪುಮರ್ಥಕರಿ
ಪ್ರಬಲಾಘಸಮುದ್ರನಿಮಗ್ನತರೀ ।
ಮಯಿ ದೇಶಿಕ ತೇ ಶ್ರುತಿಮೂರ್ಧಚರೀ
ಪ್ರಸರೇನ್ನು ಕದಾ ಸುಕಟಾಕ್ಷಝರೀ ॥ ೧೯ ॥

ನಿನ್ನ ಅಡಿಗೆರಗಿದ ಜನಜಂಗುಳಿಗೆಲ್ಲ ಪುರುಷಾರ್ಥಗಳನ್ನೊದಗಿಸುವೆ, ಗುರುವೆ; ಬಲಗೊಂಡು ಮಡುಗಟ್ಟಿದ ಪಾಪವೆಂಬ ಸಮುದ್ರವನ್ನು ದಾಟಿಸುವ ಹಡಗು ನೀನು! ವೇದಕ್ಕೆ ಮುಡಿಯಂತಿರುವ ಉಪನಿಷತ್ತುಗಳಲ್ಲಿ ಅಡ್ಡಾಡುವ ನಿನ್ನ ಕುಡಿನೋಟದ ಅಲೆ ನನ್ನತ್ತ ಬೀಸಿ ಹರಡಿಕೊಳ್ಳಲಯ್ಯ.

ಬಹುಜನ್ಮಶತಾರ್ಜಿತಪುಣ್ಯವಶಾ-
ದ್ಭವದೀಯದಯಾ ಸಮವಾಪಿ ಮಯಾ ।
ಭವಬಂಧನತೋ ನ ಬಿಭೇಮಿ ಗುರೋ
ಕರಣೀಯಮಪೀಹ ನ ಮೇಽಸ್ತ್ಯಪರಮ್ ॥೨೦॥

ಹಿಂದಣ ಅನೇಕ ಜನ್ಮಗಳಲ್ಲಿ ಏನು ಪುಣ್ಯವನ್ನು ಪಡೆದುಕೊಂಡಿದ್ದೆನೋ ಅದರಿಂದಾಗಿ ಈಗ ನಿನ್ನ ಕರುಣೆಯನ್ನೂ ನಾನೂ ಪಡೆದುಕೊಳ್ಳುವಂತಾಯಿತು! ಇನ್ನು ಸಂಸಾರದ ಬಲೆಯಲ್ಲಿ ಸಿಲುಕಿಕೊಳ್ಳುವೆನೆಂಬ ಭಯವಿರದು, ಗುರುವೇ. ಮತ್ತೆ, ನಾನು ಮಾಡಬೇಕಾದುದಾದರೂ ಇನ್ನು ಏನೂ ಇರದು !

ಸ್ವರವೇಽಘಗಿರೇರ್ಭಜತಾಂ ದಿವಿಷ-
ತ್ತರವೇ ಪ್ರತಿಭಾಜಿತಗೋಗುರವೇ ।
ಪುರವೈರಿಪದಾಬ್ಜನಿವಿಷ್ಟಹೃದೇ
ಕರವೈ ಪ್ರಣತಿಂ ಜಗತೀಗುರವೇ ॥೨೧॥

ತನ್ನನು ಭಜಿಸಿ ಬಂದವರ ಪಾಪಗಳೆಂಬ ಬೆಟ್ಟವನ್ನು ಒಡೆದುರುಳಿಸುವ ವಜ್ರ ನೀನು; ಸಗ್ಗದಲಿರುವ ಕಲ್ಪತರು. ನಿನ್ನ ಪ್ರತಿಭೆಯೋ, ದೇವಗುರುವಾದ ಬೃಹಸ್ಪತಿಯನ್ನೂ ಸೋಲಿಸುವುದು. ನಿನ್ನ ಒಡಲೊಳಗೆ ನೆಲೆಸಿವೆ ತ್ರಿಪುರಾರಿಯಾದ ಶಿವನ ಅಡಿದಾವರೆಗಳು, ಲೋಕಗುರುವೇ, ನಾ ನಿನಗೆರಗುವೆನಯ್ಯ !

★★★

## ೨. ಪಾದಾವಲಂಬನಸ್ತುತಿಃ

ಸ್ಥಿತೇಽನುಕಂಪಾಮಕರಂದಪೂರ್ಣೇ
ಜಗದ್ಗುರೋಃ ಪಾದಸಹಸ್ರಪತ್ರೇ ।
ಕಿಮನ್ಯತೋ ಧಾವಸಿ ಚಿತ್ತಭೃಂಗ
ಪ್ರಯಾಹಿ ತತ್ರೈವ ರಮಸ್ವ ನಿತ್ಯಮ್ ॥೧॥

ಒಲುಮೆಯೇ ರಸಗಟ್ಟಿನಿಂತಿರುವ ಲೋಕಗುರುವಿನ ಅಡಿದಾವರೆಯಿರುತಿರಲು, ಓ ಮನವೆಂಬ ದುಂಬಿಯೆ, ಬೇರೆಲ್ಲೆಲ್ಲಿ ಅಲೆದಾಡುವೆ ನೀನು? ಅಲ್ಲಿಗೆ ಓಡು, ಅಲ್ಲಿಯೇ ನೆಲೆಗೊಂಡು ಎಂದೆಂದು ಸುಖಿಸು, ಕಂಡೆಯಾ!

ಯೋಗಿವರ್ಯಯಮಿರಾಜನತಾಂಘ್ರೇ
ಭೋಗಿರಾಜನವನೀಯಚರಿತ್ರ ।
ರಾಗಿಭಿನ್ನಮನುಜಾಪ್ಯಪದಾಬ್ಜ
ದೇಶಿಕೇಂದ್ರ ಮಮ ದೇಹ್ಯವಲಂಬಮ್ ॥೨॥

ಯೋಗಿಗಳಲ್ಲಿ ಹಿರಿಯರೂ, ದಾಂತರಲ್ಲಿ ಉತ್ತಮರೂ ಆದವರು ನಿನ್ನಡಿಗೆರಗುವರು; ಭೋಗಿಗಳಲ್ಲಿ ಪ್ರಮುಖರು ನಿನ್ನಯ ಇರವಿನ ತೀರನ್ನು ಹಾಡಿ ಹೊಗಳುವರು. ರಾಗವನ್ನು ತೊರೆದವರು ನಿನ್ನ ಅಡಿದಾವರೆಯನ್ನು ಸೇರಿಕೊಳ್ಳುವರು. ಗುರುವೇ, ನನಗೆ, ನಿನ್ನಲಿ ಆಸರೆಯನ್ನು ನೀಡು.

ಯದ್ವಚೋಮಧುರಿಮಾಪಜಿತೇಮಂ
ಲೋಕಮೇವ ವಿಸಸರ್ಜ ಸುಧಾಽಪಿ ।
ಪಾದಪದ್ಮನತಮುಕ್ತಿದ ಸ ತ್ವಂ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೩॥

ನಿನ್ನ ಮಾತಿನ ಮಾಧುರ್ಯವನ್ನು ಕಂಡು ಸುಧೆಯು (ಅಮೃತವು) ಸೋತು ಈ ಮನುಷ್ಯಲೋಕವನ್ನೇ ತೊರೆದು ಮೇಲೆ ಹೋಗಿಬಿಟ್ಟಿತಲ್ಲಾ, ಗುರುವೇ! ನಿನ್ನಡಿಗೆರಗುವ ಮಂದಿಗೆ ಮುಕ್ತಿಯನ್ನು ನೀಡುವೆ ನೀನು, ನಿನ್ನ ಅಡಿಗಳಲ್ಲಾಸರೆಯೆನಗೆ ಕೊಡು ಕಂಡೆಯಾ!

ದಾತೃಭಾವಮವಗಮ್ಯ ಮಹಾಂತಂ
ಕರ್ಣ ಆಪ ಜನಕರ್ಣಪಥಂ ತೇ ।
ದಾರಿತಾಖಿಲದರಿದ್ರಜನಾರ್ತೇ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೪॥

ನಿನ್ನ ಔದಾರ್ಯಕ್ಕೆ ಎಣೆಯುಂಟೆ? ಎಲ್ಲ ಜನರ ಕಿವಿಗಳಲ್ಲಿ ಮೊರೆಯುತ್ತಿರುವ ಈ ಔದಾರ್ಯದ ಸೊಲ್ಲನ್ನು ಕೇಳಿಯೇ ತಾನೆ ಕರ್ಣನು ದಾನಶೂರತ್ವವನ್ನು ಪಡೆದುಕೊಂಡದ್ದು? ದಿಕ್ಕಿಲ್ಲದ ದರಿದ್ರರ ದುಃಖವನ್ನು ತರಿದುಹಾಕುವವ ನೀನು. ಗುರುವೇ, ನಿನ್ನಡಿಗಳಾಸರೆಯ ನೀಡೆನಗೆ !

ಶಾಂತಿದಾಂತಿವಿರತೀರಪವರ್ಗ-
 ಪ್ರಾಪಿಕಾಃ ಸುದೃಢಮಾಶು ವಿತೀರ್ಯ ।
ಜನ್ಮಮೃತ್ಯುಭಯರೋಗಯುತಸ್ಯ
 ದೇಹಿ ದೇಶಿಗ ಮಮಾಂಘ್ರ್ಯವಲಂಬಮ್ ॥೫॥

ಹುಟ್ಟು-ಸಾವು, ಭೀತಿ-ರೋಗಗಳಿಂದ ತಲ್ಲಣಗೊಂಡಿರುವವ ನಾನು. ಇವುಗಳಿಂದ ಪಾರಾಗಲು ಮುಕ್ತಿಯೊಂದೇ ಕಾರಣವಾದೀತು. ಮುಕ್ತಿಯನ್ನು ಒದಗಿಸಲು ಶಮೆ (ಮನಸ್ಸಿನ ಹಿಡಿತ), ದಮೆ (ಇಂದ್ರಿಯಗಳ ಹಿಡಿತ), ವಿರಕ್ತಿ (ವಿಷಯಭೋಗಗಳಲ್ಲಿ ಬಯಕೆಯಿರದಿರುವುದು) ಇವು ಸಾಧನಗಳು. ಇವುಗಳು ಈಗಲೇ ನನ್ನಲ್ಲಿ ನೆಲೆಗೊಳ್ಳುವಂತೆ ಅನುಗ್ರಹಿಸಿ, ಗುರುವೇ, ನಿನ್ನಡಿಗಳಾಸರೆಯ ನೀಡು!

ದರ್ಶನಾತ್ಕಿಲ ದುರಧ್ವಗಮರ್ತ್ಯಾ
 ಯಸ್ಯ ಜಾತು ಬಹವಃ ಕೃತಕೃತ್ಯಾಃ ।
ಸೂಕ್ತಿನಾ ತು ಕಿಮು ವಾಚ್ಯಮಯಂ ತ್ವಂ
 ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೬॥

ನಿನ್ನನ್ನೊಮ್ಮೆ ನೋಡಿಯೇ ಅನೇಕ ದುರ್ಮಾರ್ಗಿಗಳು ಮಾರ್ಪಟ್ಟು ತಂತಮ್ಮ ಪುರುಷಾರ್ಥಗಳನ್ನು ಸಾಧಿಸಿಕೊಂಡರಲ್ಲಾ! ನಿನ್ನ ಹೆಗ್ಗಳಿಕೆಯನ್ನು ಹೊಗಳುವ ಬೇರೆ ಮಾತುಗಳು ಬೇಕೆ? ಗುರುವೇ, ನನಗೆ ನಿನ್ನಡಿಗಳಾ- ಸರೆಯ ನೀಡು!

ಭಸ್ಮದಾನಪರಿಪೂರಿತನಮ್ರಾ-
 ಕಾಂಕ್ಷಿತಾರ್ಥಪರಮಾತ್ಮವಿದಗ್ರ್ಯ ।
ವಿಸ್ಮಯಾವಹತುರೀಯಕಯಾತ್ರ
 ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೭॥

ಬಯಕೆಗಳುಳ್ಳವರು ನಿನ್ನಡಿಗೆರಗಿ ಬರುವರು; ಅವರಿಗೆ ಬರಿಯ ಬೂದಿಯನ್ನು ನೀಡಿ ಬಯಕೆಗಳನ್ನು ತೀರಿಸುವೆ ನೀನು! ಪರಮಾತ್ಮ ತತ್ತ್ವವನ್ನು ತಿಳಿದವರೆಲ್ಲರ ಮುಂಚೂಣಿಯಲಿರುವೆ ನೀನು! ಸಂನ್ಯಾಸಧರ್ಮವನ್ನು ಹಿಡಿದು ಅದನ್ನು ನೀ ನಡೆಸುವ ಪರಿಯನ್ನು ಕಂಡು ಬೆರಗಾಗುವರಯ್ಯ, ಗುರುವೇ, ನಿನ್ನಡಿಗಳಾಸರೆ ನನಗಿರಲಿ !

ಈಹಿತಂ ವಿತರ ಸಚ್ಚಿತ್ತಿಸಂಜ್ಞಂ
ಮೋಹಿತಸ್ಯ ಜಗದೀಶ್ವರಶಕ್ತ್ಯಾ ।
ಕೋ ಹಿತಂ ಮಮ ತನೋತಿ ವಿನಾ ತ್ವಾಂ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೮॥

ಪರಮೇಶ್ವರನ ಮಾಯಾಶಕ್ತಿಯಿಂದ ಮರುಳುಗೊಂಡು ಇಲ್ಲಿ ಅಲೆದಾಡುತ್ತಿರುವೆ ನಾನು. ನನ್ನ ಬಯಕೆಯೇನೋ ಪರಮೇಶ್ವರನ ಸತ್‌ಚಿತ್ ಸ್ವರೂಪಾನುಭವ! ನನಗದನ್ನು ಅನುಗ್ರಹಿಸು, ಗುರುವೇ. ನೀನಲ್ಲದೆ ನನಗಿನ್ನಾರು ಹಿತವರು ? ನಿನ್ನಡಿಗಳಾಸರೆಯ ನೀಡೆನೆಗೆ!

ಶಂಕರಾರ್ಯಕೃತಸರ್ವನಿಬಂಧ-
ಪ್ರೋಕ್ತಿಪಾಟವಮತೀವ ವಿತೀರ್ಯ ।
ಅಶ್ರುತೇಽಪಿ ಪರಿಭಾಷಣದಾಕ್ಷ್ಯಂ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೯॥

ಪೀಠಾಧಿಪತಿಯಾಗಿ ನನ್ನ ಕರ್ತವ್ಯ ಶಂಕರಾಚಾರ್ಯರಿಂದ ರಚಿತವಾದ ಎಲ್ಲ ಪ್ರಬಂಧಗಳನ್ನೂ ಜನರಿಗೆ ತಿಳಿಯುವಂತೆ ಹೇಳುವುದು. ಇದಕ್ಕೆ ಅಗತ್ಯವಾದ ಮಾತುಗಾರಿಕೆಯ ಹದವನ್ನು ನೀನೇ ನನಗೆ ನೀಡಬೇಕು, ಗುರುವೇ! ನಾನು ಶ್ರವಣ ಮಾಡದೆ (ಎಂದರೆ ಅಧ್ಯಯನ ಮಾಡದೆ) ಇರುವ ವಿಚಾರವಾಗಿಯೂ ಮನನಮಾಡಿ ಮಾತನಾಡುವ ಜಾಣತನವನ್ನು ತಿಳಿಸಿಕೊಡಬೇಕು! ನಿನ್ನಡಿಗಳಾಸರೆಯಿಂದ ಅದು ಸಾಧ್ಯ.

ವ್ಯಾಸಜೈಮಿನಿಕಣಾದಪದಾಕ್ಷೈಃ
ಪಾಣಿನಿಪ್ರಭೃತಿಭಿರ್ಮುನಿವರ್ಯೈಃ ।
ಪ್ರೋಕ್ತಶಾಸ್ತ್ರಪರಿಪಕ್ವಮನೀಷಾಂ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೧೦॥

ವ್ಯಾಸ, ಜೈಮಿನಿ, ಕಣಾದ, ಅಕ್ಷಪಾದ, ಪಾಣಿನಿ ಮೊದಲಾದ ಋಷಿಗಳಿಂದ ರಚಿತವಾದ ಉತ್ತರಮೀಮಾಂಸಾ, ಪೂರ್ವಮೀಮಾಂಸಾ, ವೈಶೇಷಿಕ, ನ್ಯಾಯ, ವ್ಯಾಕರಣ ಮೊದಲಾದ ಶಾಸ್ತ್ರಗಳಲ್ಲಿ ನಿಶ್ಚಿತವಾದ ತಿಳಿವಳಿಕೆಯನ್ನು ನನಗೆ ಒದಗಿಸಿ ಅನುಗ್ರಹಿಸು, ಗುರುವೆ. ನಿನ್ನಡಿಗಳಾಸರೆಯನೆನಗೆ ನೀಡು!

ಮಾರಮತ್ತಗಜಚಂಡಮೃಗೇಂದ್ರ
ದಾರಬಂಧುಮಮತಾಗಕುಠಾರ ।
ತಾರಯಾಶು ಭವವಾರಿನಿಧೇರ್ಮಾಂ
ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೧೧॥

ಮಾರನೆಂಬ ಮದ್ದಾನೆಗೆ ಸಿಂಹದಂತಿರುವವನು ನೀನು; ಹೆಂಡತಿ-ನಂಟರೆಂಬ ಅಭಿಮಾನದ ಮರಕ್ಕೆ ಕೊಡಲಿ ! ಈ ಸಂಸಾರವೆಂಬ ಸಾಗರದಿಂದ ಕೂಡಲೇ ಪಾರಗಾಣಿಸು, ಗುರುವೆ, ನಿನ್ನಡಿಗಳಾಸರೆಯನ್ನು ನೀಡು.

**ಪಾದಧೂಳಿಪರಿಪಾವಿತಲೋಕ**
**ಭೇದವಾದವನದಾವಕೃಶಾನೋ ।**
**ಮೋದಮಾನ ಪರಮಾತ್ಮನಿ ನಿತ್ಯಂ**
**ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೧೨॥**

ನಿನ್ನಡಿಗಳ ಮೇಲಣ ಧೂಳನ್ನು ಕೊಂಡು ಲೋಕವೇ ಪಾವನಗೊಂಡಿತು, ಗುರುವೇ. ಭೇದವಾದಿಗಳಾದ ನಿರೀಶ್ವರಸಾಂಖ್ಯರೇ ಮೊದಲಾದವರು ಕಾಡು ಗಳಾದರೆ ನೀನು ಕಾಡುಕಿಚ್ಚು! ಎಡೆಬಿಡದೆ ಪರಮಾತ್ಮನಲ್ಲೇ ನೆಲೆಗೊಂಡು ಸುಖಿಸುತ್ತಿರುವ ಗುರುವೇ, ನಿನ್ನಡಿಗಳ ಆಸರೆಯನ್ನು ನೀಡೆನಗೆ !

**ಬ್ರಾಹ್ಮಣತ್ವಮತಿದುರ್ಲಭಮಾಪ್ತಂ**
**ಹ್ಯಾಶ್ರಮಶ್ಚ ಸಮವಾಪಿ ತುರೀಯಃ ।**
**ನಾಸ್ತಿ ರಾಗರಹಿತತ್ವಮಪೀಷದ್**
**ದೇಹಿ ದೇಶಿಕ ಮಮಾಂಘ್ರ್ಯವಲಂಬಮ್ ॥೧೨॥**

ಮನುಷ್ಯರಲ್ಲಿ ವೇದಾಧ್ಯಯನಮಾಡುವ ಬ್ರಾಹ್ಮಣರಾಗಿ ಹುಟ್ಟುವುದು ವಿರಳ. ಅವರಿಗೆ ವಿಹಿತವಾದ ಆಶ್ರಮಗಳಲ್ಲಿ ಕಡೆಯದು, ಸಂನ್ಯಾಸ, ಇನ್ನೂ ವಿರಳ. ನಾನು ಎರಡನ್ನೂ ಪಡೆದುಕೊಂಡೆನಾದರೂ ಪ್ರಾಪಂಚಿಕ ವಿಷಯಗಳ ಬಯಕೆ ಕೊಂಚವಾದರೂ ಮರೆಯಾಗಲಿಲ್ಲವಲ್ಲಾ! ಗುರುವೇ, ನಿನ್ನಡಿಗಳ ಆಸರೆಯನೆನಗೆ ನೀಡು!

★★★

## ೩. ದೇಶಿಕನವರತ್ನಮಾಲಾ

(ಇಲ್ಲಿ ಬಂದಿರುವ ಒಂಬತ್ತು ಪದ್ಯಗಳೂ ಸ್ವಾಮಿಗಳ ಗುರುಗಳಾದ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತಿಗಳನ್ನೇ ಕುರಿತವು. ಸ್ವಾಮಿಗಳು ಇವರ ಉತ್ತರಾಧಿಕಾರಿಯಾಗಿ ನೇಮಕಗೊಂಡು ಶೃಂಗೇರಿಗೆ ಬರುವಷ್ಟರಲ್ಲಿ ಇವರು ದೇಹಬಿಟ್ಟಿದ್ದರು. ಹಾಗಾಗಿ ಸ್ವಾಮಿಗಳು ಇವರಿಂದ ಸಂನ್ಯಾಸಾಶ್ರಮವನ್ನಾಗಲಿ, ಉಪದೇಶವನ್ನಾಗಲಿ, ಪೀಠಾಧಿಕಾರವನ್ನಾಗಲಿ ನೇರವಾಗಿ ಸ್ವೀಕರಿಸ ಲಾಗಲಿಲ್ಲ. ಅವರು ಗುರುವನ್ನು ಕಣ್ಣಾರೆ ನೋಡುವುದೂ ಆಗಲಿಲ್ಲ. ಆ ಅಳಲನ್ನು ಇಲ್ಲಿ ತೋಡಿಕೊಂಡು "ಆ ಗುರುವು ನನ್ನ ಕಣ್ಣೆದುರು ಬಂದು ನಿಲ್ಲುವುದಾದರೆ ನಾನು ಧನ್ಯ" ಎಂದು ಸೂಚಿಸಿದ್ದಾರೆ. ತಮ್ಮ ಮನಸ್ಸಿನ ಕಣ್ಣಿಂದ ನೋಡುತ್ತಿದ್ದ ಗುರುವು ಹೊರಗಣ್ಣಿಗೂ ಕಾಣಿಸಿಕೊಳ್ಳಲೆಂದು ಅವರ ತವಕ. ಗುರುಗಳ ಜೀವಿತಕಾಲದಲ್ಲಿ ನಡೆದ ಕೆಲವು ಪ್ರಸಂಗಗಳ ಉಲ್ಲೇಖವೂ ಇಲ್ಲಿ ಬಂದಿದೆ. ದಕ್ಷಿಣಾಮೂರ್ತಿಯಂತೆ, ದತ್ತಾತ್ರೇಯನಂತೆ ಇದ್ದವರು ತಮ್ಮ ಗುರು ಎಂದು ಒಕ್ಕಣೆ.)

**ಲೋಕಂ ಸಮಸ್ತಮಪಿ ಮೋಹಮಹಾಂಧಕಾರ-**
**ನಶ್ಯದ್ದೃಶಂ ಭವಮಹಾಜಲಧೌ ಪತಂತಮ್ ।**
**ಸ್ವೋಕ್ತ್ಯಂಜನೇನ ಸಮಪಾಲಯದಾಶು ಯಃ ಸಃ**
**ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೧॥**

ಎಲ್ಲ ಜನರೂ ನಾನು-ನನ್ನದೆಂಬ ಮರುಳುತನದ ಕಾಡುಕತ್ತಲೆಯಲ್ಲಿ ತೊಡಗಿ ಕಣ್ಣು ಕಾಣದಂತಾಗಿ, ಸಂಸಾರವೆಂಬ ದೊಡ್ಡಕಡಲಲ್ಲಿ ಬಿದ್ದಿರುವರು. ಇವರನ್ನು ಇದರಿಂದ ಮೇಲೆತ್ತಲು ಗುರುವಿನ ಮಾತು ಕಾಣದ ಕಣ್ಣಿಗೆ ಕಾಣುವ ಬಲವನ್ನು ಕೊಡುವ ಅಂಜನದಂತೆ. ಕಣ್ಣಿದ್ದವರು ಕಾಣಲು ತೊಡಗುವರು; ಕಂಡ ಮೇಲೆ ಹಳ್ಳಕ್ಕೆ ಬೀಳರು. ಹೀಗೆ ಕಾಪಿಡುವ ಆ ಗುರುರಾಜನು ಬೇಗನೆ ನನ್ನ ಕಣ್ಣುಗಳಿಗೆ ಕಾಣಿಸಿಕೊಳ್ಳಲಿ!

**ಪಾಷಂಡಮುಖ್ಯಮತಕುಂಭಿಷು ಕೇಸರೀಂದ್ರಃ**
**ಪಾಪಾಟವೀದವವಿಭಾವಸುರಾನತಾನಾಮ್ ।**
**ಅದ್ವೈತವಾರಿನಿಧಿಪೂರ್ಣಶಶೀ ಚ ಯಃ ಸಃ**
**ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೨॥**

ಪಾಷಂಡರು, ನಾಸ್ತಿಕರು, ಧರ್ಮನಿಂದಕರು, ವೇದದೂಷಕರು ಇವರೇ ಮೊದಲಾದವರ ಅಭಿಪ್ರಾಯಗಳು ಮದ್ದಾನೆಗಳೆಂದರೆ ಗುರುವು ಸಿಂಹದಂತೆ! ತನಗೆರಗಿದವರ ದುರಿತಗಳ ಕಾಡನ್ನು ಸುಡುವ ಕಾಡ್ಗಿಚ್ಚು! ಶುದ್ಧಾದ್ವೈತವೆಂಬ ಸಾಗರಕ್ಕೆ ಪೂರ್ಣಚಂದ್ರನಂತೆ ಇರುವ ಈ ಗುರುರಾಜನು ಬೇಗನೆ ನನ್ನ ಕಂಗಳೆದುರು ತೋರಿಕೊಳ್ಳಲಿ !

ಶಬ್ದಾದಿಮಾನ್ ಹಿ ವಿಷಯಾನ್ ವಿಷತುಲ್ಯಕಕ್ಷ್ಯಾನ್
ಜ್ಞಾತ್ವಾಪಿ ತತ್ರ ಬಹುರಾಗವತೋ ಮಮಾಶು ।
ಪಾದಾನತಾಖಿಲಜನಸ್ಯ ವಿರಕ್ತಿದಾತಾ
ದೃಗ್ಗೋಚರೋ ಭವತು ದೇಶಿಕಸಾರ್ವಭೌಮಃ ॥೩॥

ಶಬ್ದ, ರೂಪ, ರಸ, ಗಂಧ ಮೊದಲಾದ ವಿಷಯಗಳನ್ನು ಬಯಸುವುದು ವಿಷವನ್ನುಂಡಂತೆಯೆ ಎಂಬುದು ನನಗೆ ತಿಳಿದಿದೆ. ಆದರೂ ಅವುಗಳಲ್ಲಿ ಆಸೆ ಬಹಳವಾಗಿಯೇ ಇದೆ! ತನ್ನ ಅಡಿಗೆರಗಿದವರಿಗೆಲ್ಲ ವಿರಕ್ತಿಯನ್ನು ನೀಡುವ ಆ ಗುರುವು ನನ್ನ ಕಂಗಳೆದುರು ತೋರಿಕೊಂಡು ನನ್ನನು ಕಾಪಿಡಲಿ.

ಶ್ರೀಮನ್ನೃಸಿಂಹಗುರುಪಾದಯುಗಾಬ್ಜಭೃಂಗಃ
ಸೀಮಾವಿಲಂಘಿಧಿಷಣೋಽಖಿಲಶಾಸ್ತ್ರವೇತ್ತಾ ।
ನಮ್ರಾಂತರಾಂಧ್ಯವಿನಿವಾರಣಚಂಡರಶ್ಮಿ-
ರ್ದೃಗ್ಗೋಚರೋ ಭವತು ದೇಶಿಕರಾಣ್ಮಮಾತು ॥೪॥

ನಿಮ್ಮ ಗುರುಗಳಾದ ಉಗ್ರನರಸಿಂಹಭಾರತೀಸ್ವಾಮಿಗಳ ಅಡಿದಾವರೆಯಲ್ಲಿ ಅಲೆದಾಡುವ ದುಂಬಿ ನೀವು, ಗುರುವೇ, ನಿಮ್ಮ ಮೇಧಾಶಕ್ತಿಗೆ ಎಲ್ಲೆಗಳೆಲ್ಲಿವೆ? ಎಲ್ಲ ಶಾಸ್ತ್ರವನ್ನೂ.ಬಲ್ಲವರು ನೀವು. ನಿಮ್ಮಲ್ಲಿ ಶರಣುಬಂದವರ ಒಳಗಣ ಕುರುಡನ್ನು ಕಳೆಯುವ ಸೂರ್ಯ ನೀವು! ನನ್ನ ಕಣ್ಣೆದುರು ಕಾಣಿಸಿಕೊಳ್ಳಿ!

ಕಾಮಾದಿಶೃಂಗಿಪರಿಭೇದನವಜ್ರಪಾಣಿಃ
ನಾಮಾವಧೂತನಿಖಿಲಾಘಚಯೋ ಮಹಸ್ವೀ ।
ಸಾಮಾದಿಶೀರ್ಷಪರಿಗೀತನಿಜಸ್ವರೂಪೋ
ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೫॥

ಕಾಮ, ಕ್ರೋಧ ಮೊದಲಾದ ಒಳಗಣ ಹಗೆಗಳು ಬೆಟ್ಟಗಳಂತೆ ಬೆಳೆದಿದ್ದರೆ, ಅವನ್ನು ಕಡಿದು ಉರುಳಿಸುವ ವಜ್ರಾಯುಧವನ್ನು ಹಿಡಿದಿರುವ ಇಂದ್ರನೇ ಗುರು. ಅವನ ಮಹತಿ ಎಷ್ಟೆಂದರೆ ಎಲ್ಲ ಪಾಪಗಳನ್ನೂ ಹೇಳಹೆಸರಿಲ್ಲದೆ ಕೊಡವಿಹಾಕಿಬಿಡಬಲ್ಲನು! ಸಾಮವೇದದ ಉಪನಿಷತ್ತು ಛಾಂದೋಗ್ಯ. ಅದರಲ್ಲಿ ಗುರುವಿನ ದಿಟವಾದ ಸ್ವರೂಪದ ಉಲ್ಲೇಖವಿದೆ. ಅಂಥ ಗುರುವು ನನ್ನ ಕಂಗಳಿಗೆ ತೋರಿಕೊಳ್ಳಲಿ.

ಆಶ್ರಾಮವಾಸಿವಟುಮೇಕಮಭಾಷಮಾಣಂ
ಸಂಭಾಷಮಾಣಮಕರೋತ್ ತ್ವರಿತಂ ಕೃಪಾತಃ ।
ಶ್ರೀಶಂಕರಾರ್ಯ ಇವ ಯಃ ಸ ಹಿ ಹಸ್ತಧಾತ್ರೀಂ
ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೬॥

ಶಂಕರಾಚಾರ್ಯರು ಮುಗ್ಧನಾದ ಮೂಕನಾದ ಶಿಷ್ಯನೊಬ್ಬನನ್ನು (ಹಸ್ತಾ ಮಲಕನನ್ನು) ಜ್ಞಾನಿಗಳಲ್ಲಿ ಅಗ್ರಗಣ್ಯನನ್ನಾಗಿ ಮಾಡಿಬಿಟ್ಟರೆಂಬ ಕತೆಯಿದೆ. ಹಾಗೆಯೇ ಗುರುವು ತಮ್ಮನ್ನೂ ಅನುಗ್ರಹಿಸಲೆಂಬ ಕಾತುರ ಇಲ್ಲಿನದು. ಶೃಂಗೇರಿಯ ಆಶ್ರಮದಲ್ಲಿದ್ದ ಒಬ್ಬ ಬ್ರಹ್ಮಚಾರಿ ಇವರು; ಮೂಕನಂತೆ ಮಾತೇ ಹೊರಡದ ಇವರೊಂದಿಗೆ ಮಾತನಾಡುತ್ತಲೇ ಗುರುವು ತಮ್ಮ ಕಾರುಣ್ಯ ವಿಶೇಷದಿಂದ ಇವರಲ್ಲಿ ಮಾತಿನ ಸಾಮರ್ಥ್ಯವನ್ನು ತುಂಬಿದರು. ಇಂಥ ಗುರುವು ಮತ್ತೆ ತಮ್ಮ ಕಣ್ಣೆದುರು ನಿಲ್ಲಲಿ ಎಂದು ಪ್ರಾರ್ಥಿಸುತ್ತಾರೆ. ತಮ್ಮ ವಿದ್ಯಾರ್ಥಿದೆಶೆಯಲ್ಲಿ ತಮ್ಮೊಂದಿಗೆ ಗುರುಗಳು ಮಾತನಾಡಿದ ಸಂದರ್ಭ ಇದರ ಹಿನ್ನೆಲೆ.

**ವಿಪ್ರಂ ಹ್ಯಪಸ್ಮೃತಿಯುತಂ ಪ್ರಸಮೀಕ್ಷ್ಯ ತಸ್ಯ**
**ಮೂರ್ಧ್ನ್ಯಂಘ್ರಿಮಾದಧದಪಾರಕೃಪಾಂಬುರಾಶಿಃ ।**
**ಯೋ ದಕ್ಷಿಣಾಸ್ಯ ಇವ ರೋಗಮಪಾನುದತ್ತಂ**
**ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೭॥**

ಒಮ್ಮೆ ಗುರುಗಳ ಬಳಿಗೆ ಅಪಸ್ಮಾರರೋಗದಿಂದ ಪೀಡಿತನಾದ ಬ್ರಾಹ್ಮಣನೊಬ್ಬನು ಬರಲು, ಅವನ ತಲೆಗೆ ತಮ್ಮ ಪಾದವನ್ನು ಸೋಕಿಸಿ ಅವನ ರೋಗವನ್ನು ಪರಿಹರಿಸಿದ ಪ್ರಸಂಗ ಇಲ್ಲಿ ಉಲ್ಲೇಖಕ್ಕೆ ಬಂದಿದೆ. ಕರುಣೆಯ ಸಮುದ್ರವೇ ಅವರು. ದಕ್ಷಿಣಾಮೂರ್ತಿಯಂತೆ ಅಪಸ್ಮಾರಪುರುಷನನ್ನು ತನ್ನ ಕಾಲಿನಿಂದ ತುಳಿದರು. ದಕ್ಷಿಣಾಮೂರ್ತಿಯ ರೂಪವೊಂದಕ್ಕೆ ಈ ಮೂರ್ತಿಲಕ್ಷಣವಿದೆ; ಶಿಲ್ಪಗಳೂ ಉಂಟು. ಇದರ ಪ್ರಸ್ತಾಪ ಇಲ್ಲಿದೆ. ಇಂಥ ಗುರುರಾಜನು ತನ್ನ ಕಂಗಳಿಗೆ ತೋರಿಕೊಳ್ಳಲೆಂದು ಬಯಸುತ್ತಾರೆ.

**ಊರ್ಧ್ವಸ್ಥಲಾನ್ನಿಪತಿತಾಂ ಗೃಹಗೋಧಿಕಾಂ ಯ-**
**ಸ್ತ್ಯಕ್ತಾಸುಮಾಶು ಕರಕಾಂಬುಕಣೇನ ಸಿಕ್ತ್ವಾ ।**
**ಸೋಽಜೀವಯಜ್ಜನಸಮಕ್ಷಮಮೇಯಶಕ್ತಿಃ**
**ದೃಗ್ಗೋಚರೋ ಭವತು ದೇಶಿಕರಾಣ್ಮಮಾಶು ॥೮॥**

ಗುರುಗಳೊಮ್ಮೆ ಬಂದ ಜನರೊಂದಿಗೆ ಕುಳಿತಿರಲು, ಅವರೆದುರು ಮೇಲಿಂದ ಹಲ್ಲಿಯೊಂದು ಕೆಳಗೆ ಬಿದ್ದು ಪ್ರಾಣಬಿಟ್ಟಿತು. ಒಡನೆಯೇ ಗುರುಗಳು ತಮ್ಮ ಕಮಂಡಲುವಿನಿಂದ ಸ್ವಲ್ಪ ನೀರನ್ನೆತ್ತಿಕೊಂಡು ಅದರ ಮೇಲೆ ಚಿಮುಕಿಸಿದರು. ಎಲ್ಲರೂ ನೋಡುತ್ತಿರುವಂತೆಯೇ ಹಲ್ಲಿಯು ಬದುಕಿ ನಡೆದುಹೋಯಿತು. ಇಂಥ ಅಚಿಂತ್ಯಶಕ್ತಿಯುಳ್ಳ ಗುರುರಾಜರು ತಮ್ಮೆದುರು ತೋರಿಕೊಳ್ಳಲೆಂದು ಪ್ರಾರ್ಥನೆ.

ಮರ್ತ್ಯಾಚಿಕಿತ್ಸ್ಯಬಹುಕುಷ್ಠನಿಪೀಡಿತಂ ಯಃ
ವಿಪ್ರಂ ಹಿ ಕಂಚನ ತದಾಮಯಹೀನಮಾಶು ।
ಚಕ್ರೇ ಸ ದತ್ತ ಇವ ಕೇವಲಭಸ್ಮದಾನಾದ್-
ದೃಗ್ಗೋಚರೋ ಭವತು ದೇಶ್ರಾಣ್ಮಮಾಶು ॥೯॥

ಮನುಷ್ಯರಿಂದ ಗುಣಪಡಿಸಲು ಸಾಧ್ಯವಾಗದ ಕುಷ್ಠರೋಗದಿಂದ ಬಳಲುತ್ತಿದ್ದ ಬ್ರಾಹ್ಮಣನೊಬ್ಬನನ್ನು ಗುರುಗಳು, ದತ್ತಾತ್ರೇಯನಂತೆ, ಬರಿಯ ಬೂದಿಯನ್ನು ಅವನಿಗೆ ನೀಡಿ ಅವನ ರೋಗವನ್ನು ಪರಿಹರಿಸಿದರು. ಇಂಥ ಗುರುರಾಜನು ನನ್ನ ಕಂಗಳೆದುರು ತೋರಿಕೊಳ್ಳಲಿ.

(ದತ್ತಚರಿತ್ರೆಯಲ್ಲಿ ಕುಷ್ಠಪೀಡಿತನಾದ ಬ್ರಾಹ್ಮಣನನ್ನು ಗುಣಪಡಿಸಿದ್ದು, ಒಣಗಿದ ಮರ ಚಿಗುರುವಂತೆ ಮಾಡಿದ್ದು ಮೊದಲಾದ ಪ್ರಸಂಗಗಳು ಬಂದಿವೆ. ಈ ಶ್ಲೋಕವೂ ಸ್ವಾಮಿಗಳ ರಚನೆಯೇ)

ದತ್ತೋ ದ್ವಿಜಾತಿಮತಿಕುಷ್ಠನಿಪೀಡಿತಾಂಗಂ
ಸಂಸೇಚಯನ್ ಸ್ವಹಿತವೃಕ್ಷಮತೀವ ಶುಷ್ಕಮ್ ।
ಕೃತ್ವಾ ಪಲಾಶವಿಟಪಾದಿಯುತಂ ಜಹಾರ
ಕುಷ್ಠಂ ತದೀಯಮಿತಿ ದತ್ತಚರಿತ್ರಸಿದ್ಧಮ್ ॥

★★★

## ೪. ಆಚಾರ್ಯಪದಾವಲಂಬನಸ್ತುತಿಃ

(ಇದು ಶಂಕರಾಚಾರ್ಯರನ್ನು ಕುರಿತದ್ದು. ಇದೊಂದು ಅನುವರ್ಣಕೃತಿ, ಎಂದರೆ 'ಓಂ ನಮಃ ಶಂಕರಾಯ' ಎಂಬ ಮಂತ್ರದ ಅಕ್ಷರಗಳನ್ನು ಅನುಕ್ರಮವಾಗಿ ಎತ್ತಿಕೊಂಡು ಆ ಅಕ್ಷರಗಳಿಂದಲೇ ಆರಂಭವಾಗುವ ಪದ್ಯಗಳನ್ನು ರಚಿಸಿದ್ದಾರೆ. ಮಂತ್ರದ ಏಳು ಅಕ್ಷರಗಳನ್ನು ಹಿಡಿದು ಏಳು ಪದ್ಯಗಳು. ಎಂಟನೆಯದು ಫಲಸ್ತುತಿ.)

(ಓಂ) ಓಮಿತ್ಯಶೇಷವಿಬುಧಾಃ ಶಿರಸಾ ಯದಾಜ್ಞಾಂ
ಸಂಬಿಭ್ರತೇ ಸುಮಮಯೀಮಿವ ನವ್ಯಮಾಲಾಮ್ ।
ಓಂಕಾರಜಾಪರತಲಭ್ಯಪದಾಬ್ಜ ಸ ತ್ವಂ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೧॥

ಯಾರ ಆಣತಿಯನ್ನು ವಿದ್ವಾಂಸರೆಲ್ಲರೂ 'ಓಂ'(ಎಂದರೆ 'ಒಪ್ಪಿಗೆ', 'ಆಗಲಿ', 'ಹಾಗೆಯೇ' ಎಂದೂ ಅರ್ಥವಿದೆ) ಎಂದು ತಲೆಬಾಗಿ, ಹೊಸ ಹೂಮಾಲೆಯನ್ನು ಕೊರಳಲ್ಲಿ ತೊಟ್ಟಂತೆ, ಸ್ವೀಕರಿಸುವರೋ ಅಂಥ ಶ್ರೀಶಂಕರಾಚಾರ್ಯರೇ, ತಮ್ಮ ಅಡಿಗಳಲ್ಲಿ ನನಗೆ

ಆಸರೆಯನ್ನು ನೀಡಿ. ಓಂಕಾರದ (ಎಂದರೆ ಪ್ರಣವದ) ಜಪದಲ್ಲೇ ತೊಡಗಿದವರಿಗೆ ತಾನೆ ತಮ್ಮ ಅಡಿದಾವರೆಗಳು ಸಿಗುವುದು?

(ನ) ನಮ್ರಾಲಿಹೃತ್ತಿಮಿರಚಂಡಮಯೂಖಮಾಲಿನ್
ಕಮ್ರಸ್ಮಿತಾಪಹೃತಕುಂದಸುಧಾಂಶುದರ್ಪ ।
ಸಮ್ರಾಡ್ಯದೀಯದಯಯಾ ಪ್ರಭವೇದ್ದರಿದ್ರಃ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೨॥

ತಮ್ಮ ಅಡಿಗಳಿಗೆರಗಿಬಂದವರ ಒಡಲ ಕತ್ತಲೆಯನ್ನು ಹೊಡೆದೋಡಿಸುವ ಸೂರ್ಯನಂತಿರುವ ಶಂಕರರೇ, ಮಧುರವಾದ ತಮ್ಮ ನಸುನಗೆಯು ಮಲ್ಲೆಹೂವಿನ ಕಂಪಿನ ಹೆಮ್ಮೆಯನ್ನೂ ಚಂದ್ರನ ಬೆಳಕಿನ ಗರ್ವವನ್ನೂ ಮುರಿಯುವಂತಿದೆ! ತಮ್ಮ ಕರುಣೆಯೊಂದಿದ್ದರೆ ಕಡುಬಡವನೂ ನಾಡಿನ ಒಡೆಯನಾಗಬಲ್ಲ! ತಮ್ಮ ಅಡಿಗಳ ಆಸರೆಯನೆನಗೆ ನೀಡಿ!

(ಮಃ) ಮಸ್ತೆ ದುರಕ್ಷರತತಿರ್ಲಿಖಿತಾ ವಿಧಾತ್ರಾ
ಜಾಗರ್ತು ಸಾಧ್ವಸಲವೋऽಪಿ ನ ಮೇऽಸ್ತಿ ತಸ್ಯಾಃ ।
ಲುಂಪಾಮಿ ತೇ ಕರುಣಯಾ ಕರುಣಾಂಬುಧೇ ತಾಂ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೩॥

ನನ್ನ ಹಣೆಯಲ್ಲಿ ಕೆಟ್ಟ ಅಕ್ಷರಗಳನ್ನು ಬರೆದಿದ್ದಾನೆ ಬ್ರಹ್ಮ (ನನ್ನ ಹಣೆಯಬರಹ ಚೆನ್ನಾಗಿಲ್ಲ). ಆದರೆ ಅದಕ್ಕಾಗಿ ಒಂದಿಷ್ಟು ಕಳವಳ ನನಗಿರದು. ತಾವು ಕರುಣೆಯ ಸಾಗರವೇ! ತಮ್ಮ ಕರುಣೆಯನ್ನು ನಾನು ಪಡೆದುಕೊಂಡರೆ ಆ ಬರಹಗಳನ್ನು ತೊಡೆದುಹಾಕಿಬಿಡುವೆ! ತಮ್ಮ ಅಡಿಗಳ ಆಸಗೆಯನೆನಗೆ ನೀಡಿ!

(ಶಂ) ಶಂಪಾಲತಾಸದೃಶಭಾಸ್ವರದೇಹಯುಕ್ತ
ಸಂಪಾದಯಾಮ್ಯಖಿಲಶಾಸ್ತ್ರಧಿಯಂ ಕದಾ ವಾ ।
ಶಂಕಾನಿವಾರಣಪಟೋ ನಮತಾಂ ನರಾಣಾಂ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೪॥

ಮಿಂಚಿನ ಬಳ್ಳಿಯಂತೆ ಬೆಳಗುವ ಶರೀರದ ಕಾಂತಿಯುಳ್ಳ ಶಂಕರರೇ, ಎಲ್ಲ ಶಾಸ್ತ್ರಗಳ ತಿಳಿವಳಿಕೆಯನ್ನು ನಾನು ಗಳಿಸಿಕೊಳ್ಳುವುದೆಂದು? ನಿಮ್ಮಡಿಗೆರಗಿದವರ ಸಂಶಯಗಳನ್ನೆಲ್ಲ ಪರಿಹರಿಸುವ ಸಾಮರ್ಥ್ಯವುಳ್ಳ ಗುರುವೇ, ನಿಮ್ಮಡಿಯ ಆಸರೆಯನೆನಗೆ ನೀಡಿ.

(ಕ) ಕಂದರ್ಪದರ್ಪದಲನಂ ಕಿತವೈರಗಮ್ಯಂ
ಕಾರುಣ್ಯಜನ್ಮಭವನಂ ಕೃತಸರ್ವರಕ್ಷಮ್ ।
ಕೀನಾಶಭೀತಿಹರಣಂ ಶ್ರಿತವಾನಹಂ ತ್ವಾಂ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೫॥

ಮನ್ಮಥನ ಸೊಕ್ಕನ್ನು ಸೊರಗಿಸಿದ ಶಿವನೇ ತಾವು; ಕಾಮನನ್ನು ಗೆದ್ದು ವಿರಕ್ತರಾಗಿದ್ದೀರಿ. ಮೋಸದಿಂದ, ವಂಚನೆಯಿಂದ ನಿಮ್ಮನ್ನು ಸೇರುವುದಾಗದು! ಕರುಣೆಯು ಹುಟ್ಟಿದ ಮನೆಯು ತಾವೇ; ಎಲ್ಲರನ್ನೂ ಸಲಹುವಿರಿ! ಆದರೆ ತಮ್ಮನ್ನು ಸೇರಿದವರು ಸಾವಿಗೆ ಕೂಡ ಬೆದರುವುದಿಲ್ಲ. ತಮ್ಮನ್ನೆ ಆಶ್ರಯಿಸಿರುವೆ, ಶಂಕರಾಚಾರ್ಯರೇ,ತಮ್ಮ ಪಾದಸೇವೆಯನ್ನು ಕರುಣಿಸಿ!

(ರಾ) ರಾಕಾಸುಧಾಕರಸಮಾನಮುಖಪ್ರಸರ್ಪ-
ದ್ವೇದಾಂತವಾಕ್ಯಸುಧಯಾ ಭವತಾಪತಪ್ತಮ್ ।
ಸಂಸಿಚ್ಯ ಮಾಂ ಕರುಣಯಾ ಗುರುರಾಜ ಶೀಘ್ರಂ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೬॥

ಸಂಸಾರದ ಬೇಗೆಯಿಂದ ಬಳಲಿ ಬೆಂಡಾಗಿರುವ ನನ್ನ ಮೇಲೆ ಪೂರ್ಣಚಂದ್ರನಂತಿರುವ ತಮ್ಮ ಮುಖದಿಂದ ಹೊರಹೊಮ್ಮುವ ಉಪನಿಷದ್ವಾಕ್ಯಗಳ ಅಮೃತವನ್ನು ಕರುಣೆಯಿಂದ ಕೂಡಲೇ ಸಿಂಪಡಿಸಿರಿ, ಗುರುರಾಜರೇ, ನನಗೆ ತಮ್ಮ ಪದದಾಶ್ರಯವನ್ನು ನೀಡಿ!

(ಯ) ಯತ್ನಂ ವಿನಾ ಮಧುಸುಧಾಸುರದೀರ್ಘಿಕಾವ-
ಧೀರಿಣ್ಯ ಆಶು ವೃಣತೇ ಸ್ವಯಮೇವ ವಾಚಃ ।
ತಂ ತ್ವತ್ಪದಾಬ್ಜಯುಗಲಂ ಬಿಭೃತೇ ಹೃದಾ ಯಃ
ಶ್ರೀಶಂಕರಾರ್ಯ ಮಮ ದೇಹಿ ಪದಾವಲಂಬಮ್ ॥೭॥

ಯಾವನು ತನ್ನೊಡಲೊಳಗೆ ತಮ್ಮ ಅಡಿದಾವರೆಗಳನ್ನು ಹಿಡಿದಿರಿಸಿಕೊಂಡಿರುವನೋ ಅವನ ಮಾತುಗಳಲ್ಲಿ ಯಾವ ಯತ್ನವೂ ಇರದೆ ಜೇನಿನ ರುಚಿ, ಅಮೃತದ ರಸ, ಗಂಗೆಯ ಗುಣ ಇವನ್ನೂ ಮೀರಿಸುವಂಥ ರುಚಿ, ರಸ, ಗುಣಗಳು ತಾವಾಗಿ ಬಂದು ಸೇರಿಕೊಳ್ಳುವುವು. ಶಂಕರರೇ, ತಮ್ಮ ಅಡಿಯ ಆಸರೆಯನ್ನು ಎನಗೆ ನೀಡಿ!

ಶ್ರೀಶಂಕರಾರ್ಯಕರುಣಾವಶತಃ ಪ್ರಣೀತಂ
ಸ್ತೋತ್ರಂ ತದೀಯಮನುವರ್ಣಯುತಂ ತದಂಘ್ರ್ಯೋಃ ।
ಭಕ್ತ್ಯಾ ಸಮರ್ಪಿತಮಿದಂ ಪಠತಾಂ ನರಾಣಾಂ
ವಿದ್ಯಾಂ ವಿರಕ್ತಿಮತುಲಾಂ ಗುರುರಾಟ್ ತನೋತು ॥೮॥

ಶ್ರೀಶಂಕರಾಚಾರ್ಯರ ದಯೆಯಿಂದಲೇ, 'ಓಂ ನಮಃ ಶಂಕರಾಯ' ಎಂಬ ಪ್ರಣವಪೂರ್ವಕ ಷಡಕ್ಷರೀಮಂತ್ರದ ಅಕ್ಷರಗಳ (ವರ್ಣಗಳ) ಕ್ರಮವರಿತು ಮಾಡಿರುವ ಈ ಸ್ತೋತ್ರವನ್ನು ನಾನು ಅವರ ಪಾದಗಳಲ್ಲೇ ಭಕ್ತಿಯಿಂದ ಸಮರ್ಪಿಸಿರುವೆನು. ಇದನ್ನು ಪಠಿಸುವ ಯಾರಿಗಾದರೂ ಗುರುರಾಜನು ವಿದ್ಯೆಯನ್ನೂ ವಿರಕ್ತಿಯನ್ನೂ ದಯಪಾಲಿಸಲಿ.

★★★

## ೫. ಗುರುಪ್ರಾರ್ಥನಾಸ್ತೋತ್ರಮ್

(ಇದು ತಮ್ಮ ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿಗಳನ್ನು ಕುರಿತದ್ದು)

ಪೃಥ್ವೀಮಂಡಲರಾಜಮಾನನೃಪಮೌಲ್ಯಾಭಾತ್ಕಿರೀಟೋಜ್ಜ್ವಲ-
ದ್ರತ್ನಾಭಾಂಚಿತಪಾದಪದ್ಮಯುಗಲ ಶ್ರೀಮದ್ಗುರೋ ಸತ್ವರಂ ।
ತ್ವತ್ಪಾದೈಕಶರಣ್ಯಮಂದಮತಯೇಽಮುಷ್ಮೈ ಜನಾಯ ಪ್ರಭೋ
ಹಸ್ತಾಲಂಬನಮಾದರಾದ್ವಿತರ ಮಾಂ ದುಃಸಂಸೃತೇಸ್ತಾರಯ ॥೧॥

ಭೂಮಿಯ ಮೇಲಿರುವ ರಾಜರು ತಮ್ಮ ಮುಡಿಗಳನ್ನು ಈ ಗುರುಗಳ ಅಡಿಯ ಮೇಲಿರಿಸಿ ಬೆಳಗುವರು. ಈ ಅಡಿಯನ್ನೇ ನಂಬಿಕೊಂಡಿರುವ ಈ ಜನವನ್ನು (ಎಂದರೆ ನನ್ನನ್ನು) ಕೈಹಿಡಿದು ಮೇಲೆತ್ತಿ ಅನುಗ್ರಹಿಸಬೇಕೆಂಬ, ಕೆಟ್ಟ ಸಂಸಾರದ ಸುಳಿಯಿಂದ ಪಾರಗಾಣಿಸಬೇಕೆಂಬ ಪ್ರಾರ್ಥನೆ.

ಶ್ರೀಮಚ್ಛಂಕರದೇಶಿಕೇಂದ್ರರಚಿತೇ ಪೀಠೇ ಜಗದ್ದೇಶಿಕ
ತ್ವಾದೃಕ್ಷಾಃ ಶಿವರೂಪಿಣೋಽಖಿಲವಿದೋ ಬ್ರಹ್ಮಸ್ಥಿತಾ ವರ್ತಿತುಮ್ ।
ಯುಕ್ತಂ ಕೋಽಹಮತೀವ ಮಂದಧಿಷಣೋ ಬಾಹ್ಯೇಷು ಸಕ್ತೋಽಧುನಾ
ಸ್ಥಾತುಂ ತದ್ಭಗವಾನ್ ಭವಾನ್ ಕರುಣಯಾ ಮಾಮುದ್ಧರತ್ವಂಜಸಾ ॥೨॥

ಜಗದ್ಗುರುವೇ, ಶ್ರೀಶಂಕರಾಚಾರ್ಯರು ಸ್ಥಾಪಿಸಿದ ಈ ಪೀಠದಲ್ಲಿ ಕೂರಲು ತಮ್ಮಂಥ ಶಿವಸ್ವರೂಪವುಳ್ಳವರು, ಎಲ್ಲವನ್ನೂ ಅರಿತವರು, ಬ್ರಹ್ಮನಲ್ಲೆ ನೆಲೆನಿಂತವರು ಯೋಗ್ಯರು. ಆದರೆ ಈಗ ಅಲ್ಲಿ ಕುಳಿತಿರುವ ನಾನು ತುಂಬ ಮಂದಬುದ್ಧಿಯವನು, ಹೊರಗಣ ವಿಷಯಗಳಲ್ಲೇ ಆಸಕ್ತನಾದವನು. ನನಗೆ ಯೋಗ್ಯತೆಯೇನಿದೆ? ತಾವು ದಯೆಯಿಂದ ನನ್ನನ್ನು ಬೇಗನೆ ಕೈಹಿಡಿದೆತ್ತಬೇಕು.

ನಿತ್ಯಾನಿತ್ಯವಿವೇಕವಿರಕ್ತಿಶಮಾದಿಮುಮುಕ್ಷುತಾಹೀನಮ್ ।
ದೃಷ್ಟ್ವಾ ಕೃಪಾರ್ದ್ರದೃಷ್ಟ್ಯಾ ಮುಕ್ತಧ್ವನಿ ಪಥಿಕಮಾತನುಷ್ವ ಗುರೋ ॥೩॥

ಮುಕ್ತಿಗೆ ಅಗತ್ಯವಾದ ಸಾಧನಚತುಷ್ಟಯ (ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲ ಭೋಗವಿರಾಗ, ಶಮಾದಿ ಸಾಧನಸಂಪತ್ತು, ಮುಮುಕ್ಷುತ್ವ) ನನ್ನ ಪಾಲಿಗೆ ಇರದು. ಇದನ್ನು ಕಂಡು ಗುರುವೇ, ತಾವು ಕರುಣೆಯನ್ನು ತೋರಿ ಮುಕ್ತಿಯ ದಾರಿಯಲ್ಲಿ ನಡೆಯುವಂತೆ ಮಾಡಿ.

**ಜ್ಞಾನೇತರೇಷ್ಟದಾನೇ ಚತುರಾಃ ಕಲ್ಪದ್ರುಮಣಿಮುಖಾಃ ಸಂತು ।**
**ಲೋಕತ್ರಯೇಽಪಿ ಸತ್ಯಂ ಜ್ಞಾನದವಸ್ತು ತ್ವಯಾ ವಿನಾ ನಾಸ್ತಿ ॥೪॥**

ಜ್ಞಾನವನ್ನು ಬಿಟ್ಟು ಬೇರೆ ಪ್ರಾಪಂಚಿಕವಾದ ಇಷ್ಟಾರ್ಥಗಳನ್ನು ಪೂರೈಸಲು ಕಲ್ಪವೃಕ್ಷ, ಚಿಂತಾಮಣಿ ಮೊದಲಾದ ಅನುಕೂಲಗಳಿವೆ, ಇರಲಿ. ಆದರೆ ಜ್ಞಾನವನ್ನು ನೀಡುವ ವಸ್ತುವೆಂದರೆ ನಿಮ್ಮನ್ನು (ಗುರುವನ್ನು) ಬಿಟ್ಟು ಬೇರೆ ಯಾವುದೂ ಇರದು.

**ಪಾಪೀಯಾನಿತಿ ಮತ್ವಾ ಮಾಂ ಯದಿ ಲೋಕೈಕದೇಶಿಕ ತ್ಯಜಸಿ ।**
**ಸರ್ವಜನತ್ಯಕ್ತಮಿಮಂ ಕೋ ವಾ ಪರಿಪಾಲಯೇತ್ ಕೃಪಾಜಲಧೇ ॥೫॥**

ತಾವು ಲೋಕಕ್ಕೇ ಗುರು, ಮೇಲಾಗಿ ದಯಾಸಾಗರರು, ನಾನು ಪಾಪದವನೆಂದು ಬಗೆದು ತಾವು ನನ್ನನ್ನು ಕೈಬಿಟ್ಟರೆ, ಎಲ್ಲರಿಂದಲೂ ಬಿಡಲ್ಪಟ್ಟ, ಹೊರದೂಡಲ್ಪಟ್ಟ ನನ್ನನ್ನು ಕಾಪಾಡುವವರು ಯಾರು?

**ತ್ವತ್ಪಾದಾಂಬುಜಯುಗಲಂ ಹಿತ್ವಾ ನಾನ್ಯಾ ಗತಿರ್ಹಿ ಮೇ ಲೋಕೇ ।**
**ಇತಿ ಮತ್ವಾ ತವ ಚರಣೌ ಶರಣಂ ಪ್ರಾಪ್ತೋಽಸ್ಮಿ ಕರುಣಯಾ ರಕ್ಷ ॥೬॥**

ತಮ್ಮ ಅಡಿದಾವರೆಗಳೆರಡನ್ನು ಬಿಟ್ಟು ಲೋಕದಲ್ಲಿ ನನಗೆ ಬೇರೆ ಗತಿಯೇನಿದೆ? ಇದನ್ನು ಮನವರಿಕೆಮಾಡಿಕೊಂಡೇ ತಮ್ಮ ಪಾದಗಳನ್ನು ಆಶ್ರಯಿಸಿದ್ದೇನೆ; ತಾವು ದಯೆಯಿಂದ ಕಾಪಿಡಬೇಕು.

**ನಾಸ್ತಿಕ್ಯತಮಸಿ ಲೋಕೇ ಸರ್ವಜನಾನಾಂ ಹೃದಂಬುಜಾತಾನಿ ।**
**ಮಲಿನೀಕುರ್ವತಿ ಧರ್ಮೇ ಪ್ರಾಯೋ ನಷ್ಟೇ ಸದಾಶಿವೋ ಭಗವಾನ್ ॥೭॥**

ಆತ್ಮವಸ್ತುವನ್ನು ಕಂಡುಕೊಳ್ಳದಿರುವುದು, ಆತ್ಮವೇ ಇರದೆಂದು ಭಾವಿಸುವುದು ನಾಸ್ತಿಕ್ಯ (ನ ಅಸ್ತಿ ಇತಿ). ಇದೊಂದು ಅಜ್ಞಾನ, ಕತ್ತಲೆ. ಲೋಕದಲ್ಲಿ ಎಲ್ಲ ಮನುಷ್ಯರ ಒಡಲುಗಳಲ್ಲಿ ಈ ಕತ್ತಲೆಯು ಕವಿದುಕೊಂಡಿದೆ. ಇದರಿಂದಾಗಿ ಧರ್ಮವೆಂಬುದು ಹೆಚ್ಚೂಕಡಿಮೆ ಮರೆಯಾಗುತ್ತಲಿದೆ. ಇಂಥ ಪರಿಸ್ಥಿತಿಯಲ್ಲಿ ಭಗವಂತನಾದ ಸದಾಶಿವನು (ಮುಂದಿನ ಎರಡು ಶ್ಲೋಕಗಳು ಸೇರಿ ತಾತ್ಪರ್ಯ)

**ಗುರುರೂಪೇಣ ಧರಾಯಾಮವತೀರ್ಯಾಖಿಲಜನಾನವನ್ವಿಪದಃ ।**
**ಧಿಕ್ಕೃತಸೂರ್ಯಮಹೋಭಿರ್ನಾಸ್ತಿಕ್ಯತಮೋ ವಿನಾಶ್ಯ ದುರ್ವಾರಮ್ ॥೮॥**

ಗುರುಗಳಾಗಿ ಭೂಮಿಗಿಳಿದು ಬಂದು, ಎಲ್ಲ ಜನರನ್ನು ಕಷ್ಟಗಳಿಂದ ಪಾರುಮಾಡಿ, ಅವರ ಒಡಲೊಳಗಣ ನಾಸ್ತಿಕ್ಯವೆಂಬ ಕತ್ತಲೆಯನ್ನು ಸೂರ್ಯನಂತೆ ಓಡಿಸಿಬಿಟ್ಟನು! ಆ ಕತ್ತಲೆಯನ್ನು ಬೇರೆ ಯಾರು ತಾನೆ ಹೊಡೆದಟ್ಟಲಾಗುವುದು?

**ಕೃತ್ವಾನೇಕಾಮಾನುಷಕಾರ್ಯಾಣಿ ಜನೈಃ ಸಮರ್ಚಿತೋ ನಿಖಿಲೈಃ ।**
**ತದ್ವಿದಿತಶಂಕರಾಂಶೋ ಲೇಭೇ ಸ್ವಂ ಧಾಮ ಖಲು ವಿಸೃಷ್ಟಾಂಗಃ ॥೯॥**

ಗುರುಗಳು ಮನುಷ್ಯಮಾತ್ರದವರಿಗೆ ಸಾಧ್ಯವಿರದಂಥ ಅನೇಕ ಕಾರ್ಯಗಳನ್ನು ಸಾಧಿಸಿ, ಜನರೆಲ್ಲರಿಂದ ಪೂಜೆಗೊಂಡು, ಶಿವನ ಅವತಾರವೇ ಎಂದು ಪ್ರಸಿದ್ಧರಾದರು. ಕಡೆಗೆ ದೇಹವನ್ನು ಬಿಟ್ಟು, ತಮ್ಮ ದಿಟವಾದ ಸ್ಥಾನಕ್ಕೆ (ಎಂದರೆ ಬ್ರಹ್ಮನಲ್ಲಿ) ಸಂದರು.

**ತತ್ತಾದೃಙ್ಮಹಿಮಾನಂ ಲೋಕಾನುಗ್ರಹನಿಬದ್ಧದೀಕ್ಷಮಹಮ್ ।**
**ವೈರಾಗ್ಯದಾನನಿರತಂ ಶರಣಂ ಕರವಾಣಿ ದೇಶಿಕಂ ಭಕ್ತ್ಯಾ ॥೧೦॥**

ಆ ಬಗೆಯ ಮಹಿಮೆಯುಳ್ಳ, ಲೋಕಸಂಗ್ರಹವೇ ತಮ್ಮ ಕರ್ತವ್ಯವೆಂದು ಬಗೆದು ಜನರಿಗೆ ವಿರಕ್ತಿಯನ್ನು ಉಪದೇಶಿಸುವುದರಲ್ಲೇ ತೊಡಗಿದ್ದ ಗುರುಗಳಲ್ಲಿ ಭಕ್ತಿಯಿಂದ ಶರಣು ಹೋಗುವೆನು.

**ಯನ್ನೈಸರ್ಗಿಕಕರುಣಾ ಲೇಶಮನುಪ್ರಾಪ್ಯ ಮಾನವಾ ಜಗತಿ ।**
**ಸ್ವೀಯಾಚಾರರತಾಃ ಸ್ಯುಸ್ತಂ ದೇಶಿಕವರ್ಯಮಾದರಾನ್ನೌಮಿ ॥೧೧॥**

ಯಾರ ಸಹಜವಾದ ಕರುಣೆಯ ಸಣ್ಣ ತುಣುಕೊಂದನ್ನು ಪಡೆದುಕೊಂಡದ್ದರಿಂದ ಮನುಷ್ಯರು ಲೋಕದಲ್ಲಿ ತಂತಮ್ಮ ಧರ್ಮಾಚರಣೆಯಲ್ಲಿ ತೊಡಗಿರುವಂತಾಯಿತೋ, ಅಂಥ ಗುರುಗಳನ್ನು ಆದರದಿಂದ ನಮಸ್ಕರಿಸುವೆನು.

**ಶ್ರೀಮದ್ದೇಶಿಕವರ್ಯಾನ್ ವಂದೇಽನುದಿನಂ ಶಿವಾಭಿನವಪೂರ್ವಾನ್ ।**
**ಸಚ್ಚಿತ್ಸುಖರೂಪಾನ್ಸದ್ವಿದ್ಯಾಂ ದದತಃ ಸ್ವಪಾದನಮ್ರೇಭ್ಯಃ ॥೧೨॥**

ಶಿಸಾಭಿನವವೆಂಬ ಅಭಿಧಾನವೇ ಮೊದಲಾಗಿ ಸಚ್ಚಿದಾನಂದ ಎಂಬ ಸ್ವರೂಪವೇ ಹೆಸರಾಗಿ ಉಳ್ಳ ಆ ಗುರುಗಳನ್ನು ಎಡೆಬಿಡದೆ ನಮಸ್ಕರಿಸುವೆನು; ತಮ್ಮಡಿಗೆರಗಿದವರಿಗೆ ಸದ್ವಿದ್ಯೆಯನ್ನು ದಯಪಾಲಿಸುವರು ಅವರು.

★★★

## ೬. ದತ್ತನವರತ್ನಮಾಲಿಕಾ

(ಸ್ವಾಮಿಗಳು ತಾವೇ ಅವಧೂತರು; ಅಂತರ್ಮುಖಸ್ಥಿತಿಯಲ್ಲಿರುವಾಗ ದಿಗಂಬರರೂ ಆಗಿರುತ್ತಿದ್ದರು. ಅವರ ಇಷ್ಟದೈವ ದತ್ತಾತ್ರೇಯ ಆಗಿದ್ದುದು ಸೋಜಿಗವೇನಲ್ಲ. ದತ್ತಾತ್ರೇಯರೇ ಸರ್ವ ಗುರುಸ್ವರೂಪರು. ಸ್ವಾಮಿಗಳು ಕೆಲವರಿಗೆ ದತ್ತಮಂತ್ರವನ್ನು ಉಪದೇಶಿಸುತ್ತಿದ್ದುದೂ ಉಂಟು.)

**ವಿತ್ತತರ್ಷರಹಿತೈರ್ಮನುಜಾನಾಂ ಸತ್ತಮೈರನಿಶಸೇವ್ಯಪದಾಬ್ಜಮ್ ।**
**ಚಿತ್ತಶುದ್ಧಿಮಭಿಲಿಪ್ಸುರಹಂ ದ್ರಾಗ್ ದತ್ತದೇವಮನಿಶಂ ಕಲಯಾಮಿ ॥೧॥**

ಪ್ರಾಪಂಚಿಕ ಧನದ ಮೇಲೆ ಆಸೆಯಿಲ್ಲದ ಸಜ್ಜನರು ಎಂದೂ ದತ್ತಾತ್ರೇಯ ಗುರುಗಳ ಅಡಿದಾವರೆಗಳನ್ನು ಸೇವಿಸುವರು. ನಾನು ನನ್ನ ಮನಸ್ಸು ತಿಳಿಯಾಗ ಲೆಂದು ಈ ದತ್ತದೇವನನ್ನು ಬೇಗನೆ ಎಡೆಬಿಡದೆ ಧ್ಯಾನಿಸುವೆನು.

**ಕಾರ್ತವೀರ್ಯಗುರುಮತ್ರಿತನೂಜಂ ಪಾದನಮ್ರಶಿರ ಆಹಿತಹಸ್ತಮ್ ।**
**ಶ್ರೀದಮುಖ್ಯಹರಿದೀಶ್ವರಪೂಜ್ಯಂ ದತ್ತದೇವಮನಿಶಂ ಕಲಯಾಮಿ ॥೨॥**

ದತ್ತಾತ್ರೇಯರು ಕಾರ್ತವೀರ್ಯಾರ್ಜುನನ ಗುರು; ಅತ್ರಿಮಹರ್ಷಿಗಳ ಮಗ. ತನ್ನಡಿಗೆರವಿದವರ ತಲೆಯ ಮೇಲೆ ಅವರ ಅಭಯಹಸ್ತವಿದ್ದೇ ಇರುತ್ತದೆ. ಕುಬೇರನೇ ಮೊದಲಾದ ದಿಕ್ಪಾಲಕರೆಲ್ಲ ಅವರನ್ನು ಪೂಜಿಸುವರು. ಅಂಥ ದತ್ತಗುರುವನ್ನು ಎಡೆಬಿಡದೆ ಧ್ಯಾನಿಸುವೆನು.

**ನಾಕನಾಯಕಸಮರ್ಚಿತಪಾದಂ ಪಾಕಚಂದ್ರಧರಮೌಲ್ಯವತಾರಮ್ ।**
**ಕೋಕಬಂಧುಸಮಪೇಕ್ಷ್ಯ ಮಹಸ್ಕಂ ದತ್ತದೇವಮನಿಶಂ ಕಲಯಾಮಿ ॥೩॥**

ಸ್ವರ್ಗದ ಒಡೆಯನಾದ ಇಂದ್ರನೇ ಈ ಗುರುವಿನ ಪಾದವನ್ನು ಪೂಜಿಸುವವನು. ಬ್ರಹ್ಮ ವಿಷ್ಣು ಶಿವ ಎಂಬ ತ್ರಿಮೂರ್ತಿಗಳು ಒಟ್ಟಾಗಿ ಈ ರೂಪದಲ್ಲಿ ತೋರಿಕೊಂಡರು. ಈ ಗುರುವಿನ ಮಹತಿ ಬೆಳದಿಂಗಳಂತೆ. ಇಂಥ ದತ್ತಗುರುವನ್ನು ಎಡೆಬಿಡದೆ ಧ್ಯಾನಿಸುವೆನು.

**ಮೂಕಪಂಗುಬಧಿರಾದಿಮಲೋಕಾನ್ ಲೋಕತಸ್ತದಿತರಾನ್ ವಿದಧಾನಮ್ ।**
**ಏಕವಸ್ತುಪರಿಬೋಧಯಿತಾರಂ ದತ್ತದೇವಮನಿಶಂ ಕಲಯಾಮಿ ॥೪॥**

ಲೋಕದಲ್ಲಿ ಮೂಗರು, ಹೆಳವರು, ಕುರುಡರು ಮೊದಲಾಗಿ ವಿಕಲರು ಇರುವರು; ದತ್ತಗುರುವಿನ ನೋಟದಿಂದಲೇ ಅವರು ತಂತಮ್ಮ ವೈಕಲ್ಯವನ್ನು ಕಳೆದುಕೊಳ್ಳುವರು. ಎಲ್ಲರಿಗೂ

ಈ ಗುರು ಅದ್ವಿತೀಯವಾದ ಬ್ರಹ್ಮವಸ್ತುವೇ ತತ್ತ್ವ ಎಂಬುದನ್ನು ತಿಳಿಯಹೇಳುವನು. ಈ ಗುರುವನ್ನು ಎಡೆಬಿಡದೆ ಸೇವಿಸುವೆನು.

**ಯೋಗದಾನತ ಇಹೈವ ಹರಂತಂ ರೋಗಮಾಶು ನಮತಾಂ ಭವಸಂಜ್ಞಮ್ ।**
**ರಾಗಮೋಹಮುಖವೈರಿನಿವೃತ್ತ್ಯೈ ದತ್ತದೇವಮನಿಶಂ ಕಲಯಾಮಿ ॥೫॥**

ಸಂಸಾರವೆಂಬಂಥ ರೋಗವನ್ನು ಇಲ್ಲಿಯೇ ಯೋಗಮಾರ್ಗವನ್ನುಪದೇಶಿಸಿ ಬೇಗನೆ ಗುಣಪಡಿಸುವ ಸಾಮರ್ಥ್ಯ ಈ ಗುರುವಿನದು. ಈ ರೋಗಕ್ಕೆ ಕಾರಣವಾದ ಬಯಕೆ, ಸಿಟ್ಟು ಮೊದಲಾದ ಒಳಗಣ ಹಗೆಗಳನ್ನು ಹೋಗಲಾಡಿಸಲೆಂದು ಈ ದತ್ತಾತ್ರೇಯಗುರುವನ್ನು ಎಡೆಬಿಡದೆ ಧ್ಯಾನಿಸುತ್ತೇನೆ.

**ಜಾಮದಗ್ನ್ಯ ಮುನಯೇ ತ್ರಿಪುರಾಯಾ ಜ್ಞಾನಖಂಡಮವಬೋಧಿತವಂತಮ್ ।**
**ಜಾಮಿತಾವಿದಲನಂ ನತಪಂಕ್ತೇರ್ದತ್ತದೇವಮನಿಶಂ ಕಲಯಾಮಿ ॥೬॥**

ಜಮದಗ್ನಿಯ ಮಗನಾದ ಪರಶುರಾಮುನಿಗೆ ದತ್ತಾತ್ರೇಯ ಅವಧೂತರು ತ್ರಿಪುರಾರಹಸ್ಯವನ್ನು, ಅದರಲ್ಲಿಯೂ ಜ್ಞಾನಖಂಡವನ್ನು, ಬೋಧಿಸಿದರು. ತಮ್ಮನ್ನು ಶರಣುಹೊಂದುವ ಮನುಷ್ಯರೆಲ್ಲರ ಜಾಡ್ಯವನ್ನು ತೊಲಗಿಸುವ ಈ ದತ್ತಗುರುವನ್ನು ಎಡೆಬಿಡದೆ ಧ್ಯಾನಿಸುವೆನು.

(ತ್ರಿಪುರಾರಹಸ್ಯ ಅಥವಾ ಹಾರಿತಾಯನ ಸಂಹಿತೆಯು ದತ್ತಾತ್ರೇಯಪರಶುರಾಮರ ಸಂವಾದರೂಪದಲ್ಲಿದೆ. ಇದರಲ್ಲಿ ಮೂರು ಖಂಡಗಳಿವೆ- ಮಾಹಾತ್ಮ್ಯಖಂಡ, ಜ್ಞಾನಖಂಡ ಮತ್ತು ಚರ್ಯಾಖಂಡ. ಇವುಗಳಲ್ಲಿ ಚರ್ಯಾಖಂಡ ಇಂದು ಉಪಲಬ್ಧವಿಲ್ಲ. ಒಟ್ಟು ಹನ್ನೆರಡು ಸಾವಿರ ಗ್ರಂಥಪರಿಮಿತಿಯುಳ್ಳದ್ದು. ಮಾಹಾತ್ಮ್ಯಖಂಡದಲ್ಲಿ ಎಂಬತ್ತು ಅಧ್ಯಾಯಗಳು; ಜ್ಞಾನಖಂಡದಲ್ಲಿ ಇಪ್ಪತ್ತೆರಡು ಅಧ್ಯಾಯಗಳು. ಜ್ಞಾನಖಂಡವೇ ಅಧ್ಯಾತ್ಮರಸಿಕರಿಗೆ ಪ್ರಧಾನವಾದದ್ದು. ಆತ್ಮತತ್ತ್ವವೇ ತ್ರಿಪುರಾದೇವಿಯ ರಹಸ್ಯ ಎಂಬುದು ಇಲ್ಲಿ ಧ್ವನಿತವಾಗಿದೆ. ಮೊದಲಲ್ಲೇ ಅವಧೂತ ಸಂಪ್ರದಾಯದ ಸ್ಪಷ್ಟ ಪರಿಚಯವಾಗುತ್ತದೆ.)

**ತಾರಕಂ ಭವಮಹಾಜಲರಾಶೇಃ ಪೂರಕಂ ಪದನತೇಪ್ಸಿತರಾಶೇಃ ।**
**ವಾರಕಂ ಕಲಿಮುಖೋತ್ಥಭಯಾನಾಂ ದತ್ತದೇವಮನಿಶಂ ಕಲಯಾಮಿ ॥೭॥**

ನಾನು ಎಡೆಬಿಡದೆ ಧ್ಯಾನಿಸುವ ದತ್ತಗುರುವು ಸಂಸಾರವೆಂಬ ಮಹಾಸಮುದ್ರವನ್ನು ದಾಟಿಸಿ ದಡ ಕಾಣಿಸುವವರು, ತಮ್ಮ ಭಕ್ತರ ಎಲ್ಲ ಬಯಕೆಗಳನ್ನೂ ಈಡೇರಿಸುವವರು, ಕಲಿಕಾಲದಲ್ಲಿ ತೋರಿಕೊಳ್ಳುವ ಭಯಗಳನ್ನೆಲ್ಲ ನಿವಾರಿಸುವವರು. ಇಂಥ ದತ್ತಗುರುವನ್ನು ಸದಾ ಧ್ಯಾನಿಸುವೆನು.

**ಸತ್ಯಚಿತ್ಸುಖನಿರಂತರಸಕ್ತಸ್ವಾಂತಮಾನತಜನಂ ವಿದಧಾನಮ್ ।**
**ಶ್ರಾಂತಲೋಕತತಿತೋಷಣಚಂದ್ರಂ ದತ್ತದೇವಮನಿಶಂ ಕಲಯಾಮಿ ॥೮॥**

ತನ್ನನ್ನು ಆಶ್ರಯಿಸಿಬಂದ ಜನರಿಗೆ ಎಂದೂ ಸಚ್ಚಿದಾನಂದರೂಪವಾದ ಆತ್ಮವಸ್ತುವಿನಲ್ಲಿ ಆಸಕ್ತವಾಗಿರುವಂತೆ ಮಾಡುವುದು ಈ ಗುರುವಿನ ಹೆಗ್ಗಳಿಕೆ. ಸಂಸಾರದ ಕಷ್ಟಸುಖಗಳಿಂದ ಬಳಲಿಬಂದ ಜನರಿಗೆ ಚಂದ್ರನಂತೆ ನೆಮ್ಮದಿಯನ್ನುಂಟುಮಾಡುವನು. ಇಂಥ ದತ್ತದೇವನನ್ನು ಎಂದೆಂದೂ ಧ್ಯಾನಿಸುವೆನು.

**ರಕ್ಷಣಾಯ ಜಗತೋ ಧೃತದೇಹಂ ಶಿಕ್ಷಣಾಯ ಚ ದುರಧ್ವಗತಾನಾಮ್ ।**
**ಋಕ್ಷರಾಜಪರಿಭಾವಿನಿಟಾಲಂ ದತ್ತದೇವಮನಿಶಂ ಕಲಯಾಮಿ ॥೯॥**

ಜಗತ್ತಿನ ಜನರನ್ನು ಕಾಪಿಡಲೆಂದು ದೇಹವನ್ನು ಧರಿಸಿಬಂದವನು ಈ ಗುರು. ಕೆಡುಕಿನ ಹಾದಿಯನ್ನು ಹತ್ತಿದವರನ್ನು ನಿಗ್ರಹಿಸುವುದೂ ಈ ಗುರುವೇ. ತಲೆಯ ಮೇಲೆ ಚಂದ್ರಬಿಂಬವನ್ನು ಹೊತ್ತ ಈ ದತ್ತಗುರುವನ್ನು ಎಡೆಬಿಡದೆ ಧ್ಯಾನಿಸುವೆನು.

**ನವರತ್ನಮಾಲಿಕೇಯಂ ಗ್ರಥಿತಾ ಭಕ್ತೇನ ಕೇನಚಿದ್ಯತಿನಾ ।**
**ಗುರುವರಚರಣಾಬ್ಜಯುಗೇ ತನ್ಮೋದಾಯಾರ್ಪಿತಾ ಚಿರಂ ಜೀಯಾತ್ ॥೧೦॥**

ಒಂಬತ್ತು ಪದ್ಯಗಳಿಂದ ಕೂಡಿದ ಈ ನವರತ್ನಮಾಲಿಕೆಯನ್ನು ಭಕ್ತನಾದ ಒಬ್ಬಾನೊಬ್ಬ ಯತಿಯು ಹೆಣೆದಿರುವನು. ಆ ಗುರುವಿಗೆ ಇದು ಸಂತೋಷವನ್ನು ತರಲೆಂದು ಅವನ ಅಡಿದಾವರೆಗಳಲ್ಲಿ ಇದನ್ನು ಸಮರ್ಪಿಸಿದ್ದಾನೆ. ಇದು ಬಹುಕಾಲ ಉಳಿಯಲಿ, ಬೆಳಗಲಿ !

★★★

## ೭. ದಕ್ಷಿಣಾಮೂರ್ತಿಮಂತ್ರಮಾತೃಕಾಸ್ತವಃ

(ಶಿವನ ಪಂಚವಿಂಶತಿ (೨೫) ಲೀಲಾಮೂರ್ತಿಗಳಲ್ಲಿ ದಕ್ಷಿಣಾಮೂರ್ತಿಯದೂ ಒಂದು; ಜ್ಞಾನಪ್ರಧಾನವಾದ ಲೀಲಾಮೂರ್ತಿ. ಯೋಗಿಗಳು ಸಿದ್ಧಿಯನ್ನು ಪಡೆದುಕೊಂಡು ಪ್ರಸಿದ್ಧವಾದ ಮಂತ್ರ 'ಓಂ ನಮೋ ಭಗವತೇ ದಕ್ಷಿಣಾಮೂರ್ತಯೇ ! ಮಹ್ಯಂ ಮೇಧಾಂ ಪ್ರಜ್ಞಾಂ ಪ್ರಯಚ್ಛ ! ಸ್ವಾಹಾ ॥'' ಚತುರ್ವಿಂಶತ್ಯಕ್ಷರಸಮ್ಮಿತವಾದ (ಎಂದರೆ ಇಪ್ಪತ್ತುನಾಲ್ಕು ಅಕ್ಷರಗಳಿರುವ) ಈ ಮಂತ್ರವು ಸಾವಿತ್ರಿ-ಗಾಯತ್ರಿಗೆ ಸಮಾನವಾದದ್ದೆಂದು ಎಣಿಕೆ. ಈ ಮಂತ್ರದ ವರ್ಣಗಳನ್ನು ಹಿಡಿದು ಅವುಗಳಿಂದ ಅನುಕ್ರಮವಾಗಿ ಆರಂಭವಾಗುವ ಪದ್ಯಗಳನ್ನು ಸ್ವಾಮಿಗಳು ರಚಿಸಿದ್ದಾರೆ. ಮಂತ್ರದಲ್ಲಿರುವ ಅಕ್ಷರಗಳೆಲ್ಲ ಮಾತೃಕೆಗಳು. ಹಾಗಾಗಿ ಇದು ಮಂತ್ರಮಾತೃಕಾಸ್ತವ.)

(ಓಂ) ಓಂಕಾರವಾಚ್ಯರೂಪಂ
ಪದನತಜನಮಾಂದ್ಯವಾರಣಪಟಿಷ್ಠಮ್ ।
ಚಿನ್ಮುದ್ರಿಕಾಢ್ಯಹಸ್ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧॥

ದಕ್ಷಿಣಾಮೂರ್ತಿಯು ವಾಚಕವಾದ ಓಂಕಾರಕ್ಕೆ ವಾಚ್ಯಸ್ವರೂಪನಾದವನು; ಪ್ರಣವಪ್ರತಿಪಾದ್ಯನಾದವನು. ಭಕ್ತಜನರ ಒಳಗಣ ಜಾಡ್ಯವನ್ನು (ಕತ್ತಲೆಯನ್ನು) ನಿವಾರಿಸುವುದರಲ್ಲಿ ಅತ್ಯಂತ ಕುಶಲನು. ಹಾಗೆಂದೇ ಉಪದೇಶಭಂಗಿಯಲ್ಲಿರುವ ಬಲಗೈ ಚಿನ್ಮುದ್ರೆಯನ್ನು ತೋರಿಸುತ್ತಿದೆ (ಚಿನ್ಮುದ್ರೆ ಚಿತ್‌ಸ್ವರೂಪವನ್ನು ಬೋಧಿಸುವ ಮುದ್ರೆ). ಇಂಥ ದಕ್ಷಿಣಾಮೂರ್ತಿಯನ್ನು ಎಂದೆಂದೂ ನಮಸ್ಕರಿಸುವೆನು.

(ನ) ನಯನೀಕೃತಸೂರ್ಯಾನಲ-
ಚಂದ್ರಮಸಂ ಚಂದ್ರಮೋವಿಜೇತೃಮುಖಮ್ ।
ನತಿಮಾತ್ರತುಷ್ಟಹೃದಯಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨॥

ನಾನು ಎಡೆಬಿಡದೆ ನಮಸ್ಕರಿಸುವ ದಕ್ಷಿಣಾಮೂರ್ತಿಯು ಮುಕ್ಕಣ್ಣಚಂದ್ರ, ಸೂರ್ಯ, ಅಗ್ನಿ ಇವೇ ಅವನ ಕಣ್ಣುಗಳು. ಇನ್ನು ಅವನ ಮುಖವೋ, ಪೂರ್ಣಚಂದ್ರನನ್ನೂ ನಾಚಿಸುವಂಥದು. ನಮಸ್ಕರಿಸಿದರೆ ಸಾಕು, ಈ ಗುರುಮೂರ್ತಿಯ ಒಡಲು ಸಂತೋಷಗೊಳ್ಳುವುದು.

(ಮೋ) ಮೋಹಧ್ವಾಂತವಿಭೇದನ-
ಚಂಡಕರಂ ತಂಡುಮುಖ್ಯಗಣಸೇವ್ಯಮ್ ।
ಮೋಚಿತನತಜನನಿಕರಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೩॥

ತತ್ತ್ವವನ್ನು ತಿಳಿಯದಿರುವುದೇ ಮೋಹ, ಎಂದರೆ ಅಜ್ಞಾನ. ಇದು ಕತ್ತಲೆಯಂತೆ. ಇದನ್ನು ತೊಲಗಿಸುವುದು ಜ್ಞಾನವೆಂಬ ಸೂರ್ಯ. ದಕ್ಷಿಣಾಮೂರ್ತಿಯು ಜ್ಞಾನಸ್ವರೂಪವೇ. ತಂಡು ಮೊದಲಾದ ಯೋಗಿಗಣವೆಲ್ಲ ಇವನ ಪರಿಚಾರಕರು. ನಮಸ್ಕರಿಸಿದ ಜನರಿಗೆ ಮೋಕ್ಷವನ್ನೇ ಅನುಗ್ರಹಿಸುವ ದೇವತೆ ದಕ್ಷಿಣಾಮೂರ್ತಿಯನ್ನು ಎಂದೂ ನಮಸ್ಕರಿಸುವೆನು.

(ಭ) ಭಸಿತವಿಭಾಸಿತಗಾತ್ರಂ
ಭರ್ಮಾಶ್ಮಸಮಾನಬುದ್ಧಿದಾನಚಣಮ್ ।
ಭಕ್ತಜನಕಲ್ಪವೃಕ್ಷಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೪॥

ಹುತಭಸ್ಮದಿಂದ ಬೆಳಗುತ್ತಿರುವ ಮೈ ದಕ್ಷಿಣಾಮೂರ್ತಿಯದು; ಪಾದರಸದಂತೆ ತೀಕ್ಷ್ಣವಾದ ಬುದ್ಧಿಯನ್ನು ನೀಡುವವರಲ್ಲಿ ಅತ್ಯಂತ ಕುಶಲ ಈ ದೇವತೆ; ಭಕ್ತಜನರ ಪಾಲಿಗೆ ಕಲ್ಪವೃಕ್ಷ. ಇಂಥ ದಕ್ಷಿಣಾಮೂರ್ತಿಯನ್ನು ಎಂದೂ ನಮಸ್ಕರಿಸುವೆನು.

(ಗ) ಗದ್ಯಶ್ಲೋಕಮಯೀ ವಾಙ್-
ನಿಃಸರತಿ ವಿನಾ ಪ್ರಯತ್ನಲೇಶಮಪಿ ।
ಯದ್‌ಭಕ್ತಾನನತಸ್ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೫॥

ದಕ್ಷಿಣಾಮೂರ್ತಿಯ ಭಕ್ತನಾದವನ ಬಾಯಿಂದ ಅವನ ಯಾವ ಪ್ರಯತ್ನವೂ ಇಲ್ಲದೆ ಗದ್ಯಪದ್ಯಗಳ ರೂಪದಲ್ಲಿ ಮಾತು ಹೊರಹೊಮ್ಮುವುದು. ಅಂಥ ದಕ್ಷಿಣಾಮೂರ್ತಿಯನ್ನು ಎಡೆಬಿಡದೆ ನಮಸ್ಕರಿಸುವೆನು.

(ವ) ವಚನೈಃ ಸ್ತುತ್ಯಮಕೃತಕೈ-
ರ್ವಂದನವೇಲಾಪ್ರತೀಕ್ಷಮಾಣಸುರಮ್ ।
ವರವರದಂ ಪದಭಾಗ್‌ಭ್ಯಃ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೬॥

ದೇವತೆಗಳು ಕೂಡ ತಮ್ಮ ಹೃದಯಾರೆ ಹೊರಹೊಮ್ಮುವ, ಏನೊಂದು ಕಪಟವೂ ಇರದಂಥ ಮಾತುಗಳಿಂದ ಈ ದೇವತೆಯನ್ನು ಸ್ತುತಿಸಲು ವೇಳೆಯನ್ನು ಎದುರುನೋಡುತ್ತಿರುವರು. ತನ್ನ ಪಾದಗಳಲ್ಲಿ ಮಣಿದವರಿಗೆ ಬೇಡಿದ ವರಗಳನ್ನು ನೀಡುವ ಈ ದಕ್ಷಿಣಾಮೂರ್ತಿದೇವನನ್ನು ನಮಸ್ಕರಿಸುವೆನು.

(ತೇ) ತೇಪೇ ಯದ್ಭಾರ್ಯಾರ್ಥಂ
ಪ್ರಾಪ್ತ್ಯೈ ಗೌರೀಶಿವಾಭಿಧೇ ಶಿಖರೇ ।
ಗೌರೀ ಜಿತಮಾರಂ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೭॥

ಯಾರ ಹೆಂಡತಿಯಾಗುವ ಬಯಕೆಯಿಂದ ಗೌರಿಯು ಹಿಮಾಲಯದ ಗೌರೀಶಂಕರ ಶಿಖರದಲ್ಲಿ ತಪಸ್ಸು ಮಾಡಿದಳೋ, ಮನ್ಮಥನನ್ನು ಗೆದ್ದ ಆ ದಕ್ಷಿಣಾಮೂರ್ತಿಯನ್ನು ಎಂದೂ ನಮಿಸುವೆನು.

(ದ) ದಲಿತನತಾಪನ್ನಿಕರಂ
ದಯಯಾ ಮುನಿನಿಕರಮೀಕ್ಷಮಾಣಮಹಮ್ ।
ದಮಶಮವಿರಕ್ತಿಲಬ್ಧ್ಯೈ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೮॥

ತನ್ನ ಭಕ್ತರ ಆಪತ್ತುಗಳನ್ನೆಲ್ಲ ದೂರಮಾಡುವ ಈ ದೇವತೆಯು ತನ್ನ ಬಳಿ ಬಂದಿರುವ ಮುನಿಗಳ ಗುಂಪನ್ನು ಕರುಣೆಯಿಂದ ನೋಡುತ್ತಿರುವನು. ಅಂಥ ದಕ್ಷಿಣಾಮೂರ್ತಿಯನ್ನು ನನಗೆ ದಮೆ (ಇಂದ್ರಿಯನಿಗ್ರಹ), ಶಮೆ (ಮನೋನಿಗ್ರಹ), ವಿರಕ್ತಿಗಳು ಒದಗಿಬರಲೆಂದು ನಮಸ್ಕರಿಸುವೆನು.

(ಕ್ಷಿ) ಕ್ಷಿತಿಜಲವಹ್ನಿಸಮೀರಣ-
ಗಗನೇಂದ್ರರ್ಕಾಗ್ನಿಹೋತ್ರಿಣಸ್ತನವಃ।
ಯಸ್ಯ ಶ್ರುತ್ಯುಕ್ತಾಸ್ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೯॥

ದಕ್ಷಿಣಾಮೂರ್ತಿಯು ಅಷ್ಟತನು; ಎಂಟು ವಿವರಗಳೇ ಶರೀರವಾಗಿ ಉಳ್ಳವನು. ಹೀಗೆಂದು ಶ್ರುತಿಯೇ ಸಾರುತ್ತದೆ. ನೆಲ, ನೀರು, ಬೆಂಕಿ, ಗಾಳಿ, ಆಗಸ, ಚಂದ್ರ, ಸೂರ್ಯ, ಅಗ್ನಿ, ಯಜಮಾನ (ಯಜ್ಞವನ್ನು ಮಾಡುವವ)- ಇವೇ ಎಂಟು ವಿವರಗಳು. ಅಂಥ ದೇವತೆಯನ್ನು ನಮಿಸುವೆನು.

(ಣಾ) ಣಾಕಾರಗರ್ಭಶರಗತ
ರಕ್ಷಣದೀಕ್ಷಂ ತರಕ್ಷುಚರ್ಮಧರಮ್ ।
ಶ್ರೀಮದ್‌ಗುರುವರರೂಪಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೦॥

ಣಾಕಾರವನ್ನು ಗರ್ಭದಲ್ಲಿ (ಮಧ್ಯದಲ್ಲಿ) ಹೊಂದಿರುವ ಶರಗತ, ಎಂದರೆ ಶರಣಾಗತ. ಶರಣಾಗತರನ್ನು, ಕಾಪಿಡುವ ವ್ರತವನ್ನೇ ಕೈಗೊಂಡ, ಹುಲಿಯ ತೊಗಲನ್ನು ತೊಟ್ಟ, ಗುರುವಿನ ರೂಪವನ್ನು ತಳೆದ ದಕ್ಷಿಣಾಮೂರ್ತಿಯನ್ನು ಎಡೆಬಿಡದೆ ನಮಸ್ಕರಿಸುವೆನು.

(ಮೂ) ಮೂರ್ತಂ ಚಾಮೂರ್ತಮಪಿ
ಪ್ರತಿಷಿದ್ಧ್ಯ ಹಿ ನೇತಿ ನೇತಿ ವಾಕ್ಯವಶಾತ್ ।
ದ್ರಕ್ಷ್ಯಂತಿ ಯೇ ಸುಕೃತಿನಃ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೧॥

ಶ್ರುತಿಯು ಬ್ರಹ್ಮವಸ್ತುವನ್ನು ಮೂರ್ತವಾದುದೂ (ಎಂದರೆ ಆಕಾರವುಳ್ಳದ್ದು) ಅಲ್ಲ, ಅಮೂರ್ತವಾದುದೂ (ಎಂದರೆ ಆಕಾರವಿಲ್ಲದ್ದು) ಅಲ್ಲ ಎಂದು ಹೇಳಲು 'ಅದಲ್ಲ ಅದಲ್ಲ' (ನ ಇತಿ ನ ಇತಿ) ಎಂಬ ಮಾತನ್ನು ಬಳಸುತ್ತದೆ. ಈ ಮಾತಿನ ಇಂಗಿತವನ್ನರಿತುಕೊಂಡು ಪುಣ್ಯಶಾಲಿಗಳು ದಕ್ಷಿಣಾ- ಮೂರ್ತಿಯು ಸಗುಣ-ನಿರ್ಗುಣ, ಸಾಕಾರ-ನಿರಾಕಾರ ಎರಡನ್ನೂ ಮೀರಿದ ಬ್ರಹ್ಮವಸ್ತು ಎಂದು ಕಾಣುತ್ತಾರೆ. ಅಂಥ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

(ರ್ತ) ತಪ್ತಸ್ಯ ತೀವ್ರಸಂಸೃತಿ
ಚಂಡಾಂಶುಗಭಸ್ತಿಭಿಃ ಸ್ಮೃತಿರ್ಯಸ್ಯ ।
ರಾಕಾಚಂದ್ರಸಖೀ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೨॥

ಸಂಸಾರದ ಬೇಗೆಯಲ್ಲಿ, ಉರಿಬಿಸಿಲಲ್ಲಿ ತಳಮಳಗೊಳ್ಳುವಂತೆ, ಬೆಂದು ಜಡವಾಗಿದ್ದವನು ದಕ್ಷಿಣಾಮೂರ್ತಿಯನ್ನು ಸೇವಿಸಿ ಪೂರ್ಣಚಂದ್ರನಂತೆ ತಣ್ಣಗಾಗುವನು; ಸಂಸಾರದ ಬೇಗೆ ಮರೆಯಾಗಿ ನೆಮ್ಮದಿ ಮೂಡುವುದು. ಅಂಥ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

ಮಂತ್ರದ ವರ್ಣ 'ರ್ತ' ಎಂದು. ಈ ಅಕ್ಷರದಿಂದ ಯಾವ ಪದವಾಗಲೀ ಆರಂಭವಾಗಲಾರದು. ಆದ್ದರಿಂದ 'ತ' ಎಂಬುದನ್ನು ಗ್ರಹಿಸಿದ್ದಾರೆ.)

(ಯೇ) ಯೇ ವೈರಾಗ್ಯವಿವೇಕ
ಶಮಾದಿಮುಷಟ್ಕಾಪವರ್ಗಕಾಂಕ್ಷಾಢ್ಯಾಃ ।
ತೈ ರಾತ್ರಿಂದಿವಚಿಂತ್ಯಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೩॥

ಇಹಾಮುತ್ರಫಲಭೋಗವಿರಾಗ (ಎಂದರೆ ಇಲ್ಲಿನದು ಮೇಲಿನದು ಎಲ್ಲದರಲ್ಲೂ ವೈರಾಗ್ಯವನ್ನು ತಳೆಯುವುದು), ನಿತ್ಯಾನಿತ್ಯವಸ್ತುವಿವೇಕ (ದಿಟವಾದ ಆತ್ಮ ತತ್ತ್ವ, ಸಟೆಯೆನಿಸಿದ ದೇಹ ಮೊದಲಾದುವು ಎರಡರ ನಡುವೆ ಇರುವ ವ್ಯತ್ಯಾಸವನ್ನು ಅರಿತುಕೊಂಡು, ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದು), ಶಮೆಯೇ ಮೊದಲಾದ ಆರು ವಿಧವಾದ ಸಾಧನ ಸಂಪತ್ತನ್ನು (ಶಮ, ದಮ, ತಿತಿಕ್ಷಾ, ಉಪರತಿ, ಸಮಾಧಾನ, ಶ್ರದ್ಧಾ) ಪಡೆದುಕೊಳ್ಳುವುದು ಮತ್ತು ಮುಮುಕ್ಷುತ್ವ (ಮೋಕ್ಷವನ್ನಪೇಕ್ಷಿಸುವುದು) – ಈ ಬಗೆಯ ಸಾಧನಚತುಷ್ಟಯವನ್ನು ಸಾಧಿಸಿಕೊಂಡವರು ಯಾವ ದೇವತೆಯನ್ನು ಹಗಲೂ ರಾತ್ರಿಯೂ ನೆನೆಯುವರೋ ಆ ದಕ್ಷಿಣಾಮೂರ್ತಿಯನ್ನು ನಮಿಸುವೆನು.

(ಮ) ಮಹಿಮಾನಂ ಯಸ್ಯ
ಶ್ರುತಿರಪಿ ಸಂವಕ್ತುಂ ಹಿ ಶಕ್ನುತೇ ನೈವ ।
ಮಂದೇತರಲಭ್ಯಂ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೪॥

ಯಾರ ಮಹತಿಯನ್ನು ಹಾಡಿ ಹೊಗಳಲು ವೇದವೂ ಸಾಮರ್ಥ್ಯವಿಲ್ಲದೆ ಹಿಂಜರಿಯುವುದೋ, ಯಾರನ್ನು ತೀಕ್ಷ್ಣಬುದ್ಧಿಯ ಸಾಧಕರು ಮಾತ್ರ ಪಡೆದುಕೊಳ್ಳುವರೋ ಅಂಥ ದಕ್ಷಿಣಾಮೂರ್ತಿಯನ್ನು ಎಂದೂ ನಮಸ್ಕರಿಸುವೆನು.

(ಹ್ಯಂ) ಹ್ಯಂಬುಜಜೋ ಯಸ್ಯ ಪದೇ
ಸಂಪೂಜ್ಯ ಸಮರ್ಥ ಆಸ ಜನಸರ್ಗೇ ।
ಅವನೇಽಂಬುಜನೇತ್ರಸ್ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೫॥

ಯಾರ ಪದದ್ವಂದ್ವವನ್ನು ಪೂಜಿಸಿ ಬ್ರಹ್ಮನು ಜಗತ್ತನ್ನು ಸೃಷ್ಟಿ ಮಾಡಲು ಸಮರ್ಥನಾದನೋ, ವಿಷ್ಣುವು ಜಗತ್ತನ್ನು ಪಾಲಿಸಲು ಶಕ್ತನಾದನೋ, ಆ ದಕ್ಷಿಣಾಮೂರ್ತಿಯನ್ನು ಎಡೆಬಿಡದೆ ನಮಸ್ಕರಿಸುವೆನು.

(ಮೇ) ಮೇನಾತನೂಭವಾಪರಿ-
ರಬ್ಧಾಂಗಂ ಮೇಚಕಾಭನಿಜಕಂಠಮ್ ।
ಮೇಧಾಪ್ರಾಪ್ತ್ಯೈ ಜವತಃ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೬॥

ಹಿಮವಂತನ ಮಡದಿ ಮೇನಾದೇವಿಯ ಮಗಳಾದ ಪಾರ್ವತಿಯನ್ನು ಆಲಂಗನೆಯಿಂದ ಸುತ್ತರಿದ ಶರೀರವುಳ್ಳ ಶಿವನೇ ದಕ್ಷಿಣಾಮೂರ್ತಿ; ಅವನೇ ಹಾಲಾಹಲವನ್ನು ಕುಡಿದ ನೀಲಕಂಠ. ನನ್ನಲ್ಲಿ ಮೇಧಾಶಕ್ತಿಯು ತಡವಿಲ್ಲದೆ ಕುದುರುವ ಸಲುವಾಗಿ ಅವನನ್ನು ನಮಸ್ಕರಿಸುವೆನು.

(ಧಾಂ) ಧಾಮ ಪರಂ ಕಾಂಕ್ಷಿಷ್ಯನ್
ಚಿರತರಮನನಾದಿಸಾಧನಾವಾಪ್ಯಮ್ ।
ಯತ್ನಂ ವಿನಾ ಕೃಪಾಬ್ಧಿಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೭॥

ಪುರುಷಾರ್ಥಗಳಲ್ಲಿ ಕಡೆಯದಾದ ಮೋಕ್ಷವೇ ಹೆಚ್ಚಿನ ಸ್ಥಾನ (ಪರಂಧಾಮ); ಅದೇ ಬ್ರಹ್ಮಾನಂದಾನುಭವ. ಇದನ್ನು ಪಡೆಯಲಿಚ್ಛಿಸುವವರು ಬಹುಕಾಲ ಮನನವೇ ಮೊದಲಾದ ಸಾಧನೆಯಲ್ಲಿ ತೊಡಗಬೇಕು. ಆದರೆ ಗುರುವಿನ ಕರುಣೆಯೆಂಬ ಸಮುದ್ರ ದೊರೆತಮೇಲೆ, ಯಾವ ವಿಶೇಷ ಪ್ರಯತ್ನವೂ ಪ್ರಯಾಸವೂ ಇಲ್ಲದೆ ಈ ಚರಮಪುರುಷಾರ್ಥ ಕೈಗೂಡುವುದು. ಅಂಥ ಗುರುವಾದ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

(ಪ್ರ) ಪ್ರತಿಭಾಜಿತಸುರಗುರವಃ
ಕರಗತವರಮುಕ್ತಿನಾಮಕನ್ಯಾಕಾಃ ।
ಯತ್ಪದಕಂಜರತಾಸ್ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೮॥

ಯಾವ ಗುರುವಿನ ಪಾದಪದ್ಮಗಳಲ್ಲಿ ತೊಡಗಿರುವವರು ಪ್ರತಿಭೆಯಲ್ಲಿ ಬೃಹಸ್ಪತಿಯನ್ನೇ ಸೋಲಿಸುವರೋ, ಮುಕ್ತಿಯೆಂಬ ಕನ್ನಿಕೆಯನ್ನು ಕೈವಶಮಾಡಿಕೊಳ್ಳುವರೋ ಅಂಥ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

(ಜ್ಞಾಂ) ಜ್ಞಾಂ ಪ್ರಾದ್ಯಾಮತಿವಿಮಲಾಂ
ಯನ್ನೈಸರ್ಗಿಕಕೃಪಾಲವಸ್ತನುತೇ ।
ಸಕೃದಪಿ ಪದನಂತ್ರೇ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೧೯॥

ಗುರುವಿನಲ್ಲಿ ದಯೆ ಎಂಬುದು ಸ್ವಭಾವಸಿದ್ಧವಾದುದು. ಅದರ ಒಂದು ತುಣುಕನ್ನು ಪಡೆದುಕೊಂಡರೂ ಸಾಕು, ಒಮ್ಮೆಯಾದರೂ ನಮಸ್ಕರಿಸಿದರೆ ಸಾಕು, ಪ್ರಜ್ಞೆ ಪರಿಶುದ್ಧವಾಗಿಬಿಡುತ್ತದೆ. ಇಂಥ ಗುರು ದಕ್ಷಿಣಾಮೂರ್ತಿಯನ್ನು ಎಡೆಬಿಡದೆ ನಮಸ್ಕರಿಸುವೆನು.

(ಪ್ರ) ಪ್ರಯತಂತೇ ಯಂ ದ್ರಷ್ಟುಂ
ಸನ್ಮನುಜಾಃ ಶ್ರವಣಚಿಂತನಧ್ಯಾನೈಃ ।
ಸಚ್ಚಿತ್ಸುಖರೂಪಂ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨೦॥

ಸಚ್ಚಿದಾನಂದಸ್ವರೂಪನಾದ ಯಾವ ಗುರುವನ್ನು ಕಾಣಲು ಒಳ್ಳೆಯ ಜನರು ಶ್ರವಣ, ಮನನ, ನಿದಿಧ್ಯಾಸನಗಳೆಂಬ ವೇದಾಂತಮಾರ್ಗವನ್ನು ಹಿಡಿಯುವರೋ, ಅಂಥ ದಕ್ಷಿಣಾಮೂರ್ತಿಯನ್ನು ಎಂದೂ ನಮಸ್ಕರಿಸುವೆನು.

(ಯ) ಯಸ್ಯಾನ್ವಿಷ್ಯದ್ಭ್ಯಾಮಪಿ
ದೃಷ್ಟಂ ನೈವಾಂಘ್ರಿಶೀರ್ಷಮತಿಯತ್ನಾತ್ ।
ವಿಷ್ಣುವಿರಿಂಚಿಭ್ಯಾಂ ತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨೧॥

ಶಿವನ ಲಿಂಗೋದ್ಭವಮೂರ್ತಿಯ ಲೀಲೆಯಲ್ಲಿ ಬ್ರಹ್ಮನು ಶಿವನ ತಲೆಯ ಭಾಗವನ್ನು ಕಂಡುಹಿಡಿಯಲು ಹಂಸರೂಪವನ್ನು ತಳೆದು ಮೇಲೆ ಹಾರುತ್ತಾನೆ; ವಿಷ್ಣುವು ಶಿವನ ಅಡಿಯನ್ನು ಕಂಡುಹಿಡಿಯಲು ವರಾಹರೂಪಿಯಾಗಿ ಭೂಮಿಯ ಒಳಗೆ ಇಳಿಯುತ್ತಾನೆ. ಇಬ್ಬರಿಗೂ ಎಷ್ಟು ಪ್ರಯತ್ನದಿಂದಲೂ ಇದು ಸಾಧ್ಯವಾಗಲಿಲ್ಲ. ಇಬ್ಬರಿಗೂ ಲಿಂಗಮೂರ್ತಿಯ ಅಡಿಮುಡಿಗಳು ಸಿಗಲಿಲ್ಲ. ಇಂಥ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

(ಚ್ಛ) ಛನ್ನಮವಿದ್ಯಾತಮಸಾ
ಲೋಕಂ ಬೋಧಪ್ರಭಾವಪ್ರದಾನೇನ ।
ಭಾಸ್ವಾನಿವೋದ್ಧರಂತಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨೨॥

ಲೋಕವು ಅಜ್ಞಾನವೆಂಬ ಕತ್ತಲೆಯಿಂದ ಆವರಿಸಲ್ಪಟ್ಟಿದೆ. ಜ್ಞಾನವೆಂಬ ಬೆಳಕನ್ನು ಜನರಿಗೆ ನೀಡಿ, ಸೂರ್ಯನು ರಾತ್ರಿಯ ಕತ್ತಲೆಯನ್ನು ಪರಿಹರಿಸುವಂತೆ, ಅಜ್ಞಾನದ ಕತ್ತಲೆಯನ್ನು ನೀಗಿಸಿ ಕಾಪಿಡುವವನು ಈ ಗುರು ದಕ್ಷಿಣಾಮೂರ್ತಿ. ಅವನನ್ನು ಎಡೆಬಿಡದೆ ನಮಸ್ಕರಿಸುವೆನು.

(ಸ್ವಾ) ಸ್ವಾಕಾರವಿಜಿತಮನಸಿಜ-
ದರ್ಪಂ ಸರ್ಪೇಶಭೂಷಿತಗ್ರೀವಮ್ ।
ಸ್ವಾಹಾಸಹಾಯತಿಲಕಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨೩॥

ತನ್ನ ಮನೋಹರವಾದ ರೂಪದಿಂದ ಮನ್ಮಥನ ಹೆಮ್ಮೆಯನ್ನೂ ಮುರಿದವನು; ಅವನು ಕಾಮಾರಿಯಲ್ಲವೆ? ಸರ್ಪವನ್ನೇ ಕಂಠಾಭರಣವನ್ನಾಗಿ ಮಾಡಿಕೊಂಡವನು; ಅವನು ವಿಷಕಂಠನಲ್ಲವೆ? ಸ್ವಾಹಾದೇವಿಯ ಗಂಡ ಅಗ್ನಿ; ಶಿವನ ಮೂರನೆಯದಾದ ಹಣೆಗಣ್ಣು ಅಗ್ನಿಯೇ; ಹಣೆಯ ಮೇಲಿಟ್ಟ ತಿಲಕದಂತಿದೆ. ಇಂಥ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುವೆನು.

(ಹಾ) ಹಾಹಾಹೂಹೂಗೇಯಂ
ಹಾನ್ಯೈ ಬಾಹ್ಯಾಂತರೀಣಶತ್ರೂಣಾಮ್ ।
ಹಾಸಲಸದಾಸ್ಯಕಮಲಂ
ಸತತಂ ಪ್ರಣಮಾಮಿ ದಕ್ಷಿಣಾಮೂರ್ತಿಮ್ ॥೨೪॥

ಹಾಹಾ ಮತ್ತು ಹೂಹೂ ಎಂಬಿಬ್ಬರು ಪುರಾಣಪ್ರಸಿದ್ಧ ಗಂಧರ್ವಗಾಯಕರು; ಇವರು ಶಿವನ ಮಹತಿಯನ್ನು ಹಾಡಿ ಹೊಗಳುತ್ತಿರುವರು. ಶಿವನ ಮೊಗವೆಂಬ ತಾವರೆಯು ನಸುನಗೆಯಿಂದ ಬೆಳಗುತ್ತಿದೆ. ಹೊರಗಣ, ಒಳಗಣ ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳಲು ಈ ಶಿವರೂಪಿಯಾದ ದಕ್ಷಿಣಾಮೂರ್ತಿಯನ್ನು ಎಡೆಬಿಡದೆ ನಮಸ್ಕರಿಸುವೆನು.

(ಇಂದ್ರಿಯವಿಷಯಗಳು ಹೊರಗಣ ಶತ್ರುಗಳು; ಬಯಕೆ, ಸಿಟ್ಟು ಮೊದಲಾದ ಆರು ಒಳಗಣ ಶತ್ರುಗಳು ಅರಿಷಡ್ವರ್ಗವೆನಿಸಿಕೊಂಡಿರುವುವು.)

ಮನ್ವಕ್ಷರಘಟಿತಮಿದಂ
ಸ್ತೋತ್ರಂ ಶ್ರೀದಕ್ಷಿಣಾಮೂರ್ತೇಃ ।
ವ್ಯರಚಿ ಮಯಾ ಗುರುಕೃಪಾಯಾ
ಸಮರ್ಪಿತಂ ದೇಶಿಕೇಂದ್ರಚರಣಾಬ್ಜೇ ॥೨೫॥

ಶ್ರೀದಕ್ಷಿಣಾಮೂರ್ತಿಮಂತ್ರದ ಅಕ್ಷರಗಳನ್ನನುಸರಿಸಿ ರಚಿತವಾದ ಸ್ತೋತ್ರ ಇದು; ಇದನ್ನು ಗುರುವಿನ ದಯೆಯಿಂದಲೇ ನಾನು ಮಾಡುವುದಾಯಿತು. ಆ ಗುರುರಾಜನ ಅಡಿದಾವರೆಯಲ್ಲೇ ಸಮರ್ಪಿಸಿದ್ದೇನೆ.

★★★

## ೮. ಸಾಂಬಾಷ್ಟಕಮ್

ಸಂತಃ ಪುತ್ರಾಃ ಸುಹೃದ ಉತ ವಾ ಸತ್ಕಲತ್ರಂ ಸುಗೇಹಂ
ವಿತ್ತಾಧೀಶಪ್ರತಿಮವಸುಮಾನ್ ಬೋಭವೀತು ಪ್ರಕಾಮಮ್ ।
ಆಶಾಸ್ವಾಸ್ತಾಮಮೃತಕಿರಣಸ್ಪರ್ಧಿ ಕೀರ್ತಿಚ್ಛಟಾ ವಾ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕ ಸಹಾಯಃ ॥೧॥

ಮಕ್ಕಳು ಒಳ್ಳೆಯವರಾಗಿಯೇ ಇರಲಿ, ಸ್ನೇಹಿತರು ಉಪಕಾರಿಗಳಾಗಿಯೇ ಇರಲಿ; ಒಳ್ಳೆಯ ಹೆಂಡತಿ ಒಳ್ಳೆಯ ಮನೆ ಇರಲಿ, ಕುಬೇರನಂತೆ ಧನವಂತನೇ ಆಗಲಿ, ಆಶೆಯೆಲ್ಲವೂ ಸಮೃದ್ಧವಾಗಿ ಪೂರೈಸಿರಲಿ, ಬೆಳದಿಂಗಳಂತೆ ಯಶಸ್ಸು ಎಲ್ಲೆಡೆ ಹರಡಿರಲಿ-ಸಾವಿನ ಸಮಯ ಸನ್ನಿಹಿತವಾಯಿತೆಂದರೆ ಇವೆಲ್ಲವೂ ವ್ಯರ್ಥವೇ! ಸಾಂಬನೊಬ್ಬನೆ ಸಹಾಯಕ್ಕೆ ಬರುವವನು!

ವಾದೇ ಸರ್ವಾನಪಿ ವಿಜಯತಾಂ ಸತ್ಸಭಾಯಾಂ ನೃಪಾಗ್ರೇ
ಭೋಗಾನ್ಸರ್ವಾನನುಭವತು ವಾ ದೈವತೈರಪ್ಯಲಭ್ಯಾನ್ ।
ಭೂಮೌ ನೀರೇ ವಿಯತಿ ಚರಿತುಃ ವರ್ತತಾಂ ಯೋಗಶಕ್ತಿಃ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೨॥

ಅರಸನೆದುರು ನಡೆಯುವ ಸಭೆಯಲ್ಲಿ ಎಲ್ಲರನ್ನೂ ವಾದದಲ್ಲಿ ಗೆಲ್ಲುವುದಾಗಲಿ, ದೇವತೆಗಳಿಗೂ ಅಸಾಧ್ಯವೆನಿಸುವ ಭೋಗಗಳೆಲ್ಲವನ್ನೂ ಅನುಭವಿಸುವುದಾಗಲಿ, ಯೋಗಶಕ್ತಿಯಿಂದ ನೆಲದ ಮೇಲೆ ನೀರಿನಲ್ಲಿ ಆಗಸದಲ್ಲಿ ಮನಬಂದಂತೆ ಓಡಿಯಾಡುವುದಾಗಲಿ- ಇವೆಲ್ಲವೂ ಸಾವು ಸನ್ನಿಹಿತವಾದ ವೇಳೆಯಲ್ಲಿ ವ್ಯರ್ಥವೇ! ಸಾಂಬನೊಬ್ಬನೆ ದಿಕ್ಕು!

ರೂಪಂ ವಾಸ್ತಾಂ ಕುಸುಮವಿಶಿಖಾಖರ್ವಗರ್ವಾಪಹಾರಿ
ಶೌರ್ಯಂ ವಾಸ್ತಾಮಮರಪತಿಸಂಕ್ಷೋಭದಕ್ಷಂ ನಿತಾಂತಮ್ ।
ಪೃಥ್ವೀಪಾಲಪ್ರವರಮಕುಟಾಘಟ್ಟನಂ ಸ್ಯಾತ್ಪದೇ ವಾ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥ ೩ ॥

ಮನ್ಮಥನ ಸೊಕ್ಕನ್ನು ಸೊರಗಿಸುವಂಥ ರೂಪಸೌಂದರ್ಯವಿರಲಿ, ದೇವರಾಜನಾದ ಇಂದ್ರನನ್ನೂ ನಾಚಿಸುವಂಥ ಶೌರ್ಯವಿರಲಿ, ದೊಡ್ಡ ಅರಸರ ಮುಡಿಯನ್ನೆ ಮೆಟ್ಟುವಂಥ ಪ್ರಭಾವವಿರಲಿ-ಸಾವು ಹತ್ತಿರ ಸುಳಿಯಿತೆಂದರೆ ಇವೆಲ್ಲವೂ ವ್ಯರ್ಥವೇ ! ಸಾಂಬನೊಬ್ಬನೆ ಸಹಾಯವಾದಾನು !

ಗೇಹೇ ಸಂತು ಪ್ರವರಭಿಷಜಃ ಸರ್ವರೋಗಾಪನೋದಾಃ
ದೇಶೇ ದೇಶೇ ಬಹುಧನಯುತಾ ಬಂಧವಃ ಸಂತು ಕಾಮಮ್ ।
ಸರ್ವೇ ಲೋಕಾ ಅಪಿ ವಚನತೋ ದಾಸವತ್ಕರ್ಮ ಕುರ್ಯುಃ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೪॥

ಎಲ್ಲ ರೋಗಗಳನ್ನೂ ಪರಿಹರಿಸುವ ಸಾಮರ್ಥ್ಯವುಳ್ಳ ವೈದ್ಯರು ಮನೆಯಲ್ಲೇ ಇರಲಿ, ತುಂಬ ಧನವಂತರಾದ ನಂಟರು ದೇಶ ದೇಶಗಳಲ್ಲಿದ್ದು ತನಗನುಕೂಲವಾಗಿರಲಿ, ತಾನು ಹೇಳಿದ ಒಂದೊಂದು ಮಾತನ್ನು ಎಲ್ಲ ಜನರೂ ಗುಲಾಮರಂತೆ ನಡೆಸಿಕೊಡುವುದಾಗಲಿ-ಸಾವು ಸನ್ನಿಹಿತವಾದ ಸಮಯದಲ್ಲಿ ಇವೆಲ್ಲವೂ ವ್ಯರ್ಥವೇ! ಸಾಂಬನೊಬ್ಬನೆ ಸಹಾಯವಾಗುವನು!

ಅಧ್ಯಾಸ್ತಾಂ ವಾ ಸುಮಣಿಖಚಿತಂ ದಿವ್ಯಪಾರೀಣಪೀಠಂ
ಹಸ್ತ್ಯಶ್ವಾದ್ಯೈರಪಿ ಪರಿವೃತೋ ದ್ವಾರದೇಶೋಽಸ್ತು ಕಾಮಮ್ ।
ಭೂಷ್ಯಂತಾಂ ವಾಭರಣನಿವಹೈರಂಗಕಾನ್ಯರ್ಘಶೂನ್ಯೈಃ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೫॥

ಒಳ್ಳೆಯ ಮಣಿಗಳು ಮೆಟ್ಟಿದ ದಿವ್ಯವಾದ ಆಸನದ ಮೇಲೇ ಕೂಡುವಂತಾಗಲಿ, ಆನೆ-ಕುದುರೆಗಳು ಮೊದಲಾದ ವೈಭವ ಮನೆಬಾಗಿಲಲ್ಲೇ ಇರುವಂತಾಗಲಿ, ಬೆಲೆ ಕಟ್ಟಲಾಗದ ಆಭರಣಗಳು ಮೈಯನ್ನೆಲ್ಲ ಬೆಳಗುತ್ತಿರಲಿ-ಮರಣದ ವೇಳೆ ಒದಗಿಬಂದಿತೆಂದರೆ ಇವೆಲ್ಲವೂ ವ್ಯರ್ಥವೇ! ಸಾಂಬನೊಬ್ಬನೆ ದಿಕ್ಕು!

ಧತ್ತಾಂ ಮೂರ್ಧ್ನಿ ಪ್ರವರಮಣಿಭಿರ್ಜುಷ್ಟದೀವ್ಯತ್ಕಿರೀಟಂ
ವಾಸ್ತಾಂ ದೇಹಂ ವಿವಿಧವಸನೈರ್ಹೇಮಸೂತ್ರಾವಬದ್ಧೈಃ ।
ಆರುಹ್ಯಾಸೌ ವಿಚರತು ಭುವಂ ತಿರ್ಯಗಾಂದೋಲಿಕಾಂ ವಾ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೬॥

ತಲೆಯ ಮೇಲೆ ಶ್ರೇಷ್ಠವಾದ ರತ್ನಗಳಿಂದ ಬೆಳಗುವ ಕಿರೀಟವನ್ನೇ ಧರಿಸಿರಲಿ, ಮೈಮೇಲೆ ಬಂಗಾರದ ನೂಲುಗಳಿಂದ ಹೆಣೆದ ವಸ್ತ್ರವನ್ನೇ ಹೊದ್ದಿರಲಿ, ಅಡ್ಡಪಾಲಕಿಯ ಮೇಲೇ ಕುಳಿತು ಭೂಮಿಯ ಮೇಲೆ ಅಡ್ಡಾಡುತ್ತಿರಲಿ-ಸಾವು ಹತ್ತಿರ ಬಂದಿತೆಂದರೆ ಇವೆಲ್ಲವೂ ವ್ಯರ್ಥ! ಸಾಂಬನೊಬ್ಬನೆ ಸಹಾಯವಾದಾನು!

ಸರ್ವಾಶಾಂತಪ್ರಕಟಿತರವೈರ್ವಂದಿಭಿಃ ಸ್ತೂಯತಾಂ ವಾ
ಭೇರೀಢಕ್ಕಾಪ್ರಮುಖಬಿರುದಂ ದಿಕ್ಷು ದಂಧ್ವನ್ಯತಾಂ ವಾ ।
ಪೃಥ್ವೀಂ ಸರ್ವಾಮವತು ರಿಪುಭಿಃ ಕ್ರಾಂತಪಾದಾಗ್ರಪೀಠಃ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೭॥

ಎಲ್ಲ ದಿಕ್ಕುಗಳ ತುದಿಮುಟ್ಟುವಂತೆ ಹೊಗಳುಭಟ್ಟರು ತನ್ನನ್ನು ಹಾಡಿ ಹೊಗಳುತ್ತಿರಲಿ, ನಗಾರಿ ಡಕ್ಕೆ ಮೊದಲಾದ ವಾದ್ಯಗಳು ಎಲ್ಲೆಡೆ ಮೊಳಗುತ್ತಿರಲಿ, ಶತ್ರುಗಳು ತನ್ನಡಿಗೆರಗಿ ಭೂಮಂಡಲವನ್ನು ತಾನು ಆಳುತ್ತಿರಲಿ- ಸಾಯುವ ಸಮಯ ಸನ್ನಿಹಿತವಾದಾಗ ಇವೆಲ್ಲವೂ ವ್ಯರ್ಥವೆ! ಸಾಂಬನೊಬ್ಬನೆ ದಿಕ್ಕು !

ಹೃದ್ಯಾಂ ಪದ್ಯಾವಲಿಮಪಿ ಕರೋತ್ವರ್ಥಚಿತ್ರಂ ಸುಕಾವ್ಯಂ
ಷಟ್‌ಛಾಸ್ತ್ರೇಷ್ವಪ್ಯಮಿತಧಿಷಣೋ ಗ್ರಂಥಸಂದೋಹಕರ್ತಾ ।
ಸರ್ವೇಷಾಂ ಸ್ಯಾದಮಿತಹೃದಯಾನಂದದೋ ವಾಙ್ಮುಖೈರ್ವಾ
ಸರ್ವಂ ವ್ಯರ್ಥಂ ಮರಣಸಮಯೇ ಸಾಂಬ ಏಕಃ ಸಹಾಯಃ ॥೮॥

ಮನಮುಟ್ಟುವ ಭಾವಗಳುಳ್ಳ ಕವಿತೆಗಳನ್ನು ರಚಿಸಲಿ, ಅನೇಕ ವಿಚಿತ್ರಾರ್ಥಗಳುಳ್ಳ ಕಾವ್ಯಗಳನ್ನು ನಿರ್ಮಿಸಲಿ, ಆರೂ ಶಾಸ್ತ್ರಗಳಲ್ಲಿ ಉದ್ದಾಮ ಪಂಡಿತರೆನಿಸಲಿ, ಅನೇಕಾನೇಕ ಗ್ರಂಥಗಳ ಕರ್ತೃವಾಗಿರಲಿ, ಎಲ್ಲರ ಮನಸ್ಸನ್ನೂ ಸೆಳೆದು ಎಲ್ಲರಿಗೂ ಸಂತೋಷ ನೀಡುವಂಥ ಮಾತುಗಾರನಾಗಿರಲಿ- ಸಾವಿನ ಸಮಯ ಹತ್ತಿರ ಬಂದಿತೆಂದರೆ ಇವೆಲ್ಲವೂ ವ್ಯರ್ಥ! ಸಾಂಬನೊಬ್ಬನೆ ಸಹಾಯ!

★★★

# ೯. ಪಂಚದಶೀಸ್ತೋತ್ರಮ್

(ಶ್ರೀವಿದ್ಯೆಯನ್ನು ಕುರಿತಾದ ಕೃತಿ ಇದು. ಶ್ರೀವಿದ್ಯೆಯ ಉಪಾಸಕರಿಗೆ 'ಕ ಏ ಈ ಲ ಹ್ರೀಂ ಹ ಸ ಕ ಹ ಲ ಹ್ರೀಂ ಸ ಕ ಲ ಹ್ರೀಂ'ಎಂಬ ಪಂಚದಶೀಮಂತ್ರದ, ಎಂದರೆ ಹದಿನೈದು ಅಕ್ಷರಗಳ ಲಲಿತಾಮಂತ್ರದ ಪರಿಚಯ ಇರುತ್ತದೆ. ಚಂದ್ರವಿದ್ಯೆಯಲ್ಲಿ ಚಂದ್ರಮಂಡಲದ ಹದಿನೈದು ಕಲೆಗಳು ಹದಿನೈದು ತಿಥಿದೇವತೆಯರಾಗಿ ಪೂಜೆಗೊಳ್ಳುತ್ತಾರೆ. ಇಡೀ ಚಂದ್ರ ಮಂಡಲವನ್ನು ಒಂದಾಗಿ, ಎಂದರೆ ಸಕಲವಾಗಿ, ಸೇರಿಸಿಕೊಂಡಾಗ ಷೋಡಶೀ ಮಂತ್ರವಾಯಿತು; 'ಶ್ರೀಂ' ಎಂಬ ಅಕ್ಷರವೇ ಹದಿನಾರನೆಯ ಕಲೆ. ಪಂಚದಶೀ ಮಂತ್ರದ ಹದಿನೈದು ಅಕ್ಷರಗಳಿಂದ ಆರಂಭವಾಗುವ ಹದಿನೈದು ಪದ್ಯಗಳು ಈ ಸ್ತೋತ್ರದಲ್ಲಿವೆ. ಲಲಿತೆ ಅಥವಾ ರಾಜರಾಜೇಶ್ವರಿ ಇಲ್ಲಿ ದೇವತೆ.)

**(ಕ) ಕನಕಗಿರಿಧನ್ವಮಹಿಷೀ**
**ಕಲ್ಪದ್ರುಮಬದ್ಧಸಖ್ಯಕರಕಮಲಾ ।**
**ಕಲಿಕಾಲೋತ್ಥಭಯಘ್ನೀ**
**ಕಲಯತು ಮಾಮಾಶು ಸತ್ಕಲಾವಂತಮ್ ॥೧॥**

ತ್ರಿಪುರಾರಿಯಾದ ಶಿವನಿಗೆ ಕನಕಗಿರಿಯೆನಿಸಿದ ಮೇರು ಪರ್ವತವೇ ಬಿಲ್ಲು; ಲಲಿತೆಯು ಅವನ ಮಡದಿ. ಅವಳು ಸ್ನೇಹಕ್ಕೆಂದು ಆರಿಸಿಕೊಂಡದ್ದು ಕಲ್ಪವೃಕ್ಷವೇ; ಬೇಡಿದುದನ್ನೆಲ್ಲ ಈಡೇರಿಸುವ ಕೈಗಳು ಅವಳದ್ದು. ಕಲಿಕಾಲದಲ್ಲಿ ಎದ್ದುಕೊಳ್ಳುವ ಬೆದರಿಕೆಗಳನ್ನೆಲ್ಲ ಪರಿಹರಿಸುವವಳು ಅವಳೇ. ನನ್ನಲ್ಲಿ ಎಲ್ಲ ಒಳ್ಳೆಯ ಕಲೆಗಳೂ ಕೂಡಿಕೊಳ್ಳುವಂತೆ ಅವಳು ಅನುಗ್ರಹಿಸಲಿ.

**(ಏ) ಏಣಶಿಶುಚಪಲನಯನಾ-**
**ಮೇನಃಸಂಘಾಖ್ಯತೂಲವಾತೂಲಾಮ್ ।**
**ಏಧಿತನತಜನಧಿಷಣಾ-**
**ಮೇಜದನೇಜತ್ ಪ್ರಭುಂ ನುಮೋ ಲಲಿತಾಮ್ ॥೨॥**

ಚಿಗುರಿಯ ಮರಿಯಂತೆ ಅತ್ತಿತ್ತ ಹರಿದಾಡುವ ನೋಟ ಅವಳದ್ದು. ಪಾಪರಾಶಿಯೆಂಬ ಅರಳೆಯನ್ನು ಚದುರಿಸುವ ಬಿರುಗಾಳಿ ಅವಳು; ಅವಳನ್ನು ಮೊರೆಹೊಕ್ಕವರ ತಿಳಿವಳಿಕೆ ಮೇಲೇರಿ ಬೆಳಗುವುದು. ಜಡ, ಚೇತನ ಎಲ್ಲಕ್ಕೂ ಅವಳೇ ಒಡತಿ. ಈ ಲಲಿತೆಯನ್ನು ನಮಸ್ಕರಿಸುವಾ.

(ಈ) ಈಕ್ಷಿತ್ವಾಕಾಶಾದೀನ್
ವ್ಯಾಕುರುತೇ ನಾಮರೂಪತಃ ಸೂಕ್ಷ್ಮಾನ್ ।
ಜೀವಾತ್ಮನಾ ಪ್ರವಿಶತೀ
ಸತ್ಪದವಾಚ್ಯಾಂ ನಮಾಮಿ ಲಲಿತಾಂ ತಾಮ್ ॥೩॥

ಸತ್ ಅಥವಾ ಬ್ರಹ್ಮವಸ್ತು ತನ್ನ ಈಕ್ಷಣ ಮಾತ್ರದಿಂದಲೇ ('ಸ ಐಕ್ಷತ') ಆಕಾಶವೇ ಮೊದಲಾದ ಸೂಕ್ಷ್ಮಭೂತಗಳನ್ನು ನಾಮರೂಪಗಳಿಂದ ವಿಂಗಡಿಸಿ ವ್ಯವಹಾರಯೋಗ್ಯವಾಗಿ ಮಾಡಿತು; ಎಲ್ಲವನ್ನೂ ಸೃಷ್ಟಿಮಾಡಿ ('ಅಸೃಜತ್'), ಎಲ್ಲದರೊಳಗೆ ತಾನು ಜೀವರೂಪದಿಂದ ಪ್ರವೇಶ ಮಾಡಿತು ('ತತ್‌ಸೃಷ್ಟ್ವಾ ತದೇವಾನುಪ್ರಾವಿಶತ್ 'ಜೀವಾತ್ಮನಾ'). ಈ 'ಸತ್' ಎಂಬ ಮಾತು ಅನ್ವಯಿಸುವುದು ಲಲಿತೆಗೇನೆ. ಅವಳನ್ನು ನಮಸ್ಕರಿಸುವೆನು.

(ಲ) ಲಲನಾಮೋಹನಿವಾರಕ-
ಪದನಮನಾಂ ಲಾಲಿತಾಂ ಮಹೇಶೇನ ।
ಲಲಿತತರಕವನದಾತ್ರೀಂ
ಜ್ಞಾನೈಕಾಪ್ಯಾಂ ಭಜೇ ಜಗಜ್ಜನನೀಮ್ ॥೪॥

ಮೊರೆಹೊಕ್ಕವರಲ್ಲಿ ಹೆಂಗಳೆಯರುಂಟುಮಾಡುವ ಮರುಳುತನವನ್ನು ಶಿವನಿಂದ ಪರಿಹರಿಸುವವಳು ಲಲಿತೆ. ಸುಂದರ ಕವಿತೆಗಳನ್ನು ರಚಿಸುವ ಸಾಮರ್ಥ್ಯವನ್ನು ನೀಡುವವಳು; ಜ್ಞಾನ ಒಂದರಿಂದಲೇ ಪಡೆಯಲ್ಪಡತಕ್ಕವಳು. ಜಗತ್ತಿಗೇ ತಾಯಿ, ಅವಳನ್ನು ಭಜಿಸುವೆನು.

(ಹ್ರೀಂ) ಹ್ರೀಂಕಾರಜಪರತಾನಾಂ
ಮಾಯಾಮಾತ್ರತ್ವನಿಶ್ಚಯಂ ಜಗತಿ ।
ಉತ್ಪಾದ್ಯ ತಾನ್ ವಿಮುಕ್ತಾನ್
ಕರೋತ್ಯರಂ ಯಾ ಭಜಾಮಿ ಲಲಿತಾಂ ತಾಮ್ ॥೫॥

'ಹ್ರೀಂ' ಎಂಬ ಬೀಜಮಂತ್ರವನ್ನು ಜಪಿಸುವ ಸಾಧಕರಿಗೆ ಇಡೀ ವಿಶ್ವವು ಕೇವಲ ಮಾಯೆ ಎಂಬ ಅರಿವನ್ನು ದೇವಿಯು (ಹ್ರೀಂಕಾರರೂಪಿಣಿಯು) ಒದಗಿಸಿ ಅವರನ್ನು ಮಾಯೆಯಿಂದ ಬಿಡಿಸುವಳು; ಈ ಲಲಿತಾದೇವಿಯನ್ನು ಭಜಿಸುವೆನು.

(ಹ) ಹತಭಂಡಮುಖ್ಯದನುಜಾ
ಹರಿಣಾಂಕಶಿರೋವಿಭೂಷಣಾ ಲಲಿತಾ ।
ಹಸಿತಜಿತಕುಂದಕುಸುಮಾ
ಹರತಾಚ್ಛೀಘ್ರಂ ಮದೀಯಭವತಾಪಮ್ ॥೬॥

ಭಂಡನೇ ಮೊದಲಾದ ಅಸುರರನ್ನು ಕೊಂದವಳು, ಚಂದ್ರನನ್ನು ತಲೆಯ ಮೇಲೆ ಆಭರಣವಾಗಿ ಇರಿಸಿಕೊಂಡವಳು, ಮುಗುಳುನಗೆಯಿಂದ ಮೊಲ್ಲೆ ಹೂವಿನ ಸೊಗಸನ್ನೂ ಗೆಲ್ಲುವವಳು. ಸಂಸಾರದ ನನ್ನ ಬೇಗೆಯನ್ನು ಈ ದೇವಿಯು ಹೋಗಲಾಡಿಸಲಿ.

(ಸ) ಸದ್ಗುರುರೂಪಂ ಧೃತ್ವಾ
ಸರ್ವಾನಾತ್ಮಾಶ್ರಮೋಚಿತಪ್ರವಣಾನ್ ।
ಸಂತನುತೇ ಯಾ ಕೃಪಯಾ
ಸಚ್ಚಿದ್ರೂಪಾಂ ನಮಾಮಿ ತಾಮಂಬಾಮ್ ॥೭॥

ಲಲಿತೆಯು ಗುರುರೂಪವನ್ನು ಧರಿಸಿ (ದತ್ತಾತ್ರೇಯನಾಗಿ ತೋರಿಕೊಂಡು), ಎಲ್ಲ ಜನರು ತಂತಮ್ಮ ಆಶ್ರಮಕ್ಕೆ (ಎಂದರೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ) ಅನುಗುಣವಾದ ಕಾರ್ಯಗಳಲ್ಲಿ ತೊಡಗುವಂತೆ ಮಾಡುವಳು; ಇದು ಅವಳ ದಯೆಯಿಂದಲೇ. ಅವಳ ರೂಪ ವಾದರೋ ಸತ್ (ಇರವು) ಮತ್ತು ಚಿತ್(ಅರಿವು). ಅವಳನ್ನು ನಮಸ್ಕರಿಸುವೆನು.

(ಕ) ಕನಕತೃಣತುಲ್ಯಧಿಷಣಾಂ
ಕಲಯತಿ ಲುಬ್ಧೋಽಪಿ ಯತ್ಪದಾಸಕ್ತಃ ।
ಕಂಜಭವಾದಿಮವಿನುತಾಂ
ಕಲಯೇ ಹೃದಿ ಕಾರ್ಮುಕೀಕೃತೇಕ್ಷುಂ ತಾಮ್ ॥೮॥

ಕಡು ಜಿಪುಣನೂ ಕೂಡ ಯಾರ ಪಾದವನ್ನಾಶ್ರಯಿಸಿದರೆ ವಿರಕ್ತನಾಗಿ ಬಂಗಾರವನ್ನೂ ಹುಲ್ಲುಕಡ್ಡಿಯನ್ನೂ ಸಮವೆಂದೇ ಎಣಿಸುವನೋ, ಬ್ರಹ್ಮನೇ ಮೊದಲಾದ ದೇವತೆಗಳು ಯಾರನ್ನು ನಮಸ್ಕರಿಸುತ್ತಿರುವರೋ, ಯಾರು ಕಬ್ಬಿನ ಜಲ್ಲೆಯನ್ನು ಬಿಲ್ಲಾಗಿ ಮಾಡಿಕೊಂಡಿರುವಳೋ ಆ ಲಲಿತೆಯನ್ನು ಮನಸ್ಸಿನಲ್ಲಿ ಭಾವಿಸಿಕೊಳ್ಳುವೆನು.

(ಹ) ಹಂತ್ರೀಂ ಸಮಸ್ತವಿಪದಾಂ
ಗಂತ್ರೀಂ ಕಲಹಂಸವದ್ ಭಜೇ ಹೃದಯೇ ।
ಮಂತ್ರೀ ಯನ್ಮಂತ್ರೇಣ ಹಿ
ಕಿಂ ತ್ರೀನಪಿ ಕಾಂಕ್ಷತೇ ನರೋ ಲೋಕಾನ್ ॥೯॥

ಎಲ್ಲ ತೊಂದರೆಗಳನ್ನೂ ನಾಶಪಡಿಸುವವಳು, ರಾಜಹಂಸದಂತೆ ನಡೆಯುವವಳು ಈ ದೇವಿ; ಅವಳನ್ನು ಹೃದಯದಲ್ಲಿ ಧ್ಯಾನಿಸುವೆನು. ಆಕೆಯ ಮಂತ್ರವನ್ನು ಜಪಮಾಡುವವನು (ಮಂತ್ರಿಯಾದವನು) ಮೂರೂ ಲೋಕಗಳನ್ನಾಗಲಿ ಬಯಸಲಾರ !

(ಲ) ಲಕ್ಷಣಯಾ ಶ್ರುತಿಬೋಧ್ಯಾ
ಲಲಂತಿಕಾಭಾಸಮಾನನಿಟಿಲತಟಾ ।
ಲಾವಣ್ಯವಾರಿರಾಶಿ-
ರ್ಲಲಿತಾ ಮಮ ಹೃದಯಕಮಲಮಾವಿಶತು ॥೧೦॥

ಶ್ರುತಿಯು ಜಹದಜಹಲ್ಲಕ್ಷಣವೃತ್ತಿಯಿಂದ ಬ್ರಹ್ಮನನ್ನು (ಎಂದರೆ ಲಲಿತೆಯನ್ನು) ಉಪದೇಶಿಸುತ್ತದೆ; ಮುತ್ತಿನ ಬೊಟ್ಟು ಅವಳ ಹಣೆಯನ್ನು ಬೆಳಗುತ್ತಿದೆ. ಸೌಂದರ್ಯದ ಸಮುದ್ರವೇ ಅವಳು. ಇಂಥ ದೇವಿಯು ನನ್ನ ಒಡಲತಾವರೆಯೊಳಗೆ ಹೋಗಲಿ !

(ಹ್ರೀಂ) ಹ್ರೀಮಾನ್ನಿಶಮ್ಯ ಭವತಿ ಹಿ
ಗುರುರಪಿ ಯತ್ಪಾದಭಕ್ತವಾಗ್ಭಂಗೀಮ್ ।
ಹ್ರೀಂಕಾರಪಂಜರಶುಕೀಂ
ಹ್ರೀಪ್ರಾಪ್ತ್ಯೈ ನೌಮಿ ತಾಮಧರ್ಮೇಷು ॥೧೧॥

ಈ ದೇವಿಯ ಭಕ್ತರು ಮಾತನಾಡುವ ಬಗೆಯನ್ನು ನೋಡಿ ಬೃಹಸ್ಪತಿಯೂ ನಾಚುವನು. 'ಹ್ರೀಂ' ಎಂಬ ಬೀಜಮಂತ್ರದ ಪಂಜರದಲ್ಲಿರುವ ಗಿಳಿಯಾದ ಈ ದೇವಿಯನ್ನು ನಮಸ್ಕರಿಸಿ ಅಧರ್ಮದಲ್ಲಿ ನನಗೆ ನಾಚಿಕೆಯುಂಟಾಗುವಂತೆ ಮಾಡೆಂದು ಬೇಡಿಕೊಳ್ಳುವೆನು.

(ಸ) ಸರಸಮೃದುಮಧುರಕವಿತಾ-
ಸರಿದಿವ ಹಿಮಭೂಭೃತೋ ಮುಖಾತ್ ಪ್ರಸರೇತ್ ।
ಸಕೃದಪಿ ಯತ್ಪದನಂತುಃ
ಸಾ ಲಲಿತಾ ಭವತು ಭವ್ಯನಿವಹಾಯ ॥೧೨॥

ಈ ದೇವಿಯ ಪಾದಗಳನ್ನು ಒಮ್ಮೆ ನಮಸ್ಕರಿಸಿದರೂ ಸಾಕು, ಅವನ ಮುಖದಿಂದ, ಹಿಮವತ್ಪರ್ವತದಿಂದ ಗಂಗಾನದಿಯು ಹರಿದುಬರುವಂತೆ, ಮೃದುವಾದ ಶಬ್ದಗಳುಳ್ಳ ಮಧುರವಾದ ಅರ್ಥಗಳುಳ್ಳ ಕವಿತೆ ಹರಿದು ಬರುತ್ತದೆ. ನನ್ನ ಒಳಿತಿನ ಪರಂಪರೆಗೆ ಈ ದೇವಿಯು ಕಾರಣಳಾಗಲಿ.

(ಕ) ಕಲ್ಪದ್ರುವನವಿಹಾರಂ
ಕಮ್ರಸ್ಮಿತವಶಿತಕಾಮಪರಿಪಂಥಿ ।
ಕಲ್ಲೋಲಾಹಂಕೃತಿಹರ-
ಕವಿತಾಪ್ರದಮಾಶ್ರಯೇ ಮಹಃ ಕಿಮಪಿ ॥೧೩॥

ಕಲ್ಪವೃಕ್ಷದ ಉಪವನದಲ್ಲಿ ವಿಹರಿಸುವ ಈ ದೇವಿಯ ನಸುನಗೆ ಕಾಮನನ್ನು ಗೆದ್ದ ಶಿವನನ್ನೇ ಮರುಳು ಮಾಡಿದಂಥದು! ನಮ್ಮಲ್ಲಿ ನಾನು ನಾನೆಂದು ಮೇಲೆ ಮೇಲೇಳುವ ಅಲೆಗಳು ಅವಳಿಂದಲೇ ಅಡಗಬೇಕು! ಕವಿತಾಶಕ್ತಿಯಾದರೂ ಆಕೆಯಿಂದಲೇ

ಒದಗಿಬರುವುದು. ಅದೊಂದು ಮಹಾಚೇತನ; ಅದು ಏನೆಂದು ಯಾರೂ ಅರಿಯರು. ಅದನ್ನು ನಾನು ಆಶ್ರಯಿಸುವೆ.

(ಲ) **ಲಬ್ಧ್ವಾ ಯಾಂ ಗೃಹಿಣೀತ್ವೇ**
**ಲುಬ್ಧಪ್ರವರೋಽಪಿ ಸರ್ವದಾತೃತ್ವಮ್ ।**
**ಅಲಭತ ಲಲಿತಾಂಬಾಂ ತಾಂ**
**ಲಬ್ಧುಂ ಪ್ರಣಮಾಮಿ ನೈಜಮೇವ ಸುಖಮ್ ॥೧೪॥**

ಪರಮೇಶ್ವರನು ವಿರಕ್ತ, ಜ್ಞಾನವನ್ನು ನೀಡುವವನು. ಆದರೆ ಇದನ್ನು ನೀಡಲು ಹಿಂಜರಿದು ಕಣ್ಮರೆಯಾಗಿದ್ದವನು, ಹಿಮಾಲಯದಲ್ಲಿ ಏಕಾಂತವಾಗಿದ್ದವನು. ಪಾರ್ವತಿಯನ್ನು ವರಿಸಿದ ಮೇಲೆ ಬಹಿರ್ಮುಖನಾಗಿ ಬೇಡಿದವರಿಗೆಲ್ಲ ಬೇಡಿದ್ದನ್ನು ನೀಡತೊಡಗಿದನು. ಈಗ ನನ್ನ ಆತ್ಮದ ಸಹಜವಾದ ಆನಂದವನ್ನು ಪಡೆದುಕೊಳ್ಳುವ ಬಯಕೆ ನನ್ನದು. ಶಿವನ ಔದಾರ್ಯಕ್ಕೂ ಕಾರಣಳಾದ ಆ ಲಲಿತಾದೇವಿಯನ್ನೇ ಆಶ್ರಯಿಸುವೆನು.

(ಹ್ರೀಂ) **ಹ್ರೀಂಕಾರರಾಜಹಂಸಃ**
**ಸತತಂ ರಮತಾಂ ಮದೀಯಚಿತ್ತಾಬ್ಜೇ ।**
**ಚಿದಚಿದ್ದುಗ್ಧಕ್ಷ್ಮಪೀಟೇ**
**ತೇನೈವಾಹಂ ವಿವೇಚಯಾಮಿ ಶಿವೇ ॥೧೫॥**

'ಹ್ರೀಂ' ಎಂಬ ಬೀಜಾಕ್ಷರಮಂತ್ರವು ದೇವಿಯ ಸ್ವರೂಪ; ಅದೊಂದು ರಾಜಹಂಸದಂತೆ. ನನ್ನ ಒಡಲತಾವರೆಯಲ್ಲಿ ಈ ರಾಜಹಂಸವು ಎಡೆಬಿಡದೆ ವಿಹರಿಸುತ್ತಿರಲಿ. ಇಲ್ಲವಾದರೆ ಚಿತ್ ಮತ್ತು ಅಚಿತ್, (ಆತ್ಮ, ಅನಾತ್ಮ) ಎಂದು ಬೇರ್ಪಡಿಸುವುದು ನನಗೆ ಹೇಗೆ ಸಾಧ್ಯವಾದೀತು? ಹಂಸವಾದರೆ ಹಾಲು, ನೀರು ಬೇರ್ಪಡಿಸಿ, ಹಾಲನ್ನು ಸ್ವೀಕರಿಸಿ ನೀರನ್ನು ಬಿಡುವುದೆಂದು ಕವಿಸಮಯ. ರಾಜಹಂಸವೇ ನನ್ನೊಡಲಲ್ಲಿದ್ದರೆ ವಿವೇಕಕ್ಕೇನು ಕೊರತೆ? ದೇಹಾಭಿಮಾನವನ್ನು ಬಿಟ್ಟು ಆತ್ಮ ಸಾಕ್ಷಾತ್ಕಾರಕ್ಕೆ ಹಾತೊರೆಯುವೆನು.

**ಪಂಚದಶೀಮನ್ವಕ್ಷರ-**
**ಘಟಿತಮಿದಂ ದೇಶಿಕೇಂದ್ರಕರುಣಾತಃ ।**
**ಸ್ತೋತ್ರಂ ಶ್ರೀಲಲಿತಾಂಬಾ-**
**ಕಟಾಕ್ಷಲಬ್ಧ್ಯೈ ವ್ಯರೀರಚಂ ಭಕ್ತ್ಯಾ ॥೧೬॥**

ಶ್ರೀವಿದ್ಯೆಯಾದ ಪಂಚದಶೀಮಂತ್ರದ ವರ್ಣಗಳಿಂದ ಆರಂಭವಾಗುವ ಪದ್ಯಗಳ ಮಾಲಿಕೆಯನ್ನು ಭಕ್ತಿಯಿಂದ ನಾನು ನನ್ನ ಗುರುವಿನ ದಯೆಯಿಂದ, ಹೆಣೆದಿದ್ದೇನೆ. ಶ್ರೀಲಲಿತಾಂಬೆಯ ಕಡೆಗಣ್ಣೋಟವನ್ನು ಪಡೆದು ಕೊಳ್ಳುವ ಸಲುವಾಗಿ ಈ ರಚನೆ.

★★★

# ೧೦. ಶಾರದಾಭುಜಂಗಮ್

ಪುರಾನೇಕಜನ್ಮಾರ್ಜಿತಾಗಣ್ಯಪುಣ್ಯೈ-
ರ್ಯದಾಪ್ತಂ ಮಯಾ ಶಾರದಾಭಿಖ್ಯಭಾಗ್ಯಮ್ ।
ದಯಾರ್ದ್ರಂ ಗುರೂತ್ತಂಸಸಂಕ್ಲೃಪ್ತಚಕ್ರ-
ಸ್ಥಿತಂ ತತ್ಸದಾ ಮನ್ಮನಸ್ಯಾವಿರಸ್ತು ॥೧॥

ನನ್ನ ಅನೇಕ ಹಿಂದಣ ಜನ್ಮಗಳಲ್ಲಿ ಸಂಪಾದಿಸಿಕೊಂಡ ಲೆಕ್ಕವಿರದಷ್ಟು ಪುಣ್ಯದಿಂದ ಈ ಶಾರದಾಪೀಠವನ್ನೇರುವ ಭಾಗ್ಯ ನನ್ನದಾಯಿತು. ಗುರುಗಳಾದ ಶಂಕರರಿಂದ ಏರ್ಪಟ್ಟ ಶ್ರೀಚಕ್ರದಲ್ಲಿ ಶಾರದೆ ನೆಲೆಸಿದ್ದಾಳೆ; ಕರುಣಾಮಯಿ. ಈ ಭಾಗ್ಯವು ನನ್ನ ಮನಸ್ಸಿನಲ್ಲಿ ಮೈದಳೆಯಬೇಕು ಎಂದು ನನ್ನ ಕೋರಿಕೆ.

ನ ಮಂತ್ರಂ ನ ಯಂತ್ರಂ ನ ವಾ ಸ್ತೋತ್ರರೀತಿಂ
ವಿಜಾನೇಽಂಬ ವಕ್ತುಂ ಚ ಮದ್ದುಃಖರೀತಿಮ್ ।
ತ್ವದಂಘ್ರಿಪ್ರಣಮ್ರೋ ನ ಪಾತ್ರಂ ಶುಚಃ ಸ್ಯಾ-
ದಿತಿ ತ್ವಾಂ ಪ್ರಪದ್ಯೇ ತವೈವ ಪ್ರಸಾದಾತ್ ॥೨॥

ನಾನು ಮಂತ್ರವನ್ನರಿಯೆ, ಯಂತ್ರವನ್ನರಿಯೆ, ಯಾವ ಬಗೆಯಲ್ಲಿ ಸ್ತುತಿಸಬೇಕೆಂಬುದನ್ನು ಅರಿಯೆ. ಕಡೆಗೆ ನನ್ನ ದುಃಖವನ್ನಾದರೂ ಹೇಗೆ ತೋಡಿಕೊಳ್ಳಬೇಕೆಂಬುದನ್ನೂ ಅರಿಯೆ! ಆದರೆ ಇಷ್ಟು ನನಗೆ ತಿಳಿದಿದೆ- ನಿನ್ನ ಅಡಿಗಳಲ್ಲಿ ಶರಣುಹೋದರೆ ಶೋಕ ನನ್ನ ಪಾಲಿಗೆ ಬರದು ಎಂದು. ಆದ್ದರಿಂದ ನಿನ್ನ ಅನುಗ್ರಹದಿಂದಲೇ ನಿನ್ನಲ್ಲಿ ಶರಣುಬಂದಿದ್ದೇನೆ.

ಭವಾಂಭೋಧಿಮಗ್ನಂ ಭವಾದ್ಯೈಃ ಸುದೂರಂ
ವಿಸೃಷ್ಟಂ ಮಹಾಪಾಪಗೇಹಾಯಮಾನಂ ।
ವಿವೇಕಾದಿಹೀನಂ ದಯಾನೀರಧೇ ತೇ
ಮಮಾತ್ಮಾನಮಂಬಾಂಘ್ರಿಯುಗ್ಮೇಽರ್ಪಯಾಮಿ ॥೩॥

ಸಂಸಾರವೆಂಬ ಸಾಗರದಲ್ಲಿ ಮುಳುಗಿದ್ದೇನೆ; ಶಿವನೇ ಮೊದಲಾದ ದೇವತೆಗಳು ದೂರದಿಂದಲೇ ನನ್ನನ್ನು ಕೈಬಿಟ್ಟಿದ್ದಾರೆ. ಮಹಾಪಾಪಗಳು ನನ್ನಲ್ಲೆ ಮನೆಮಾಡಿವೆ; ಸತ್-ಅಸತ್ ಎಂಬ ವಿವೇಕವಾಗಲಿ, ವೈರಾಗ್ಯವಾಗಲಿ ನನಗಿರದು. ಅಮ್ಮ, ಕರುಣಾಸಮುದ್ರಳೇ, ನಿನ್ನ ಅಡಿಗಳಲ್ಲಿ ನಾನು ನನ್ನನ್ನು ಒಪ್ಪಿಸಿಕೊಂಡಿದ್ದೇನೆ.

ಶರೀರಂ ಸ್ವತಂತ್ರಂ ತಥಾಕ್ಷಾಣಿ ಸರ್ವಾ-
ಣ್ಯಹೋ ಕಿಂ ಕರೋಮಿ ಕ್ವ ಯಾಮ್ಯಂಬಿಕೇ ವಾ ।
ಮಯಾ ಪೋಷ್ಯಮಾಣಾನಿ ಮದ್ವಶ್ಯತಾಂ ನ
ಪ್ರಯಾಂತ್ಯಂಜಸಾ ಮದ್ವಶೇ ತಾನಿ ತಸ್ಯಾಃ ॥೪॥

ದೇಹವೂ ಸ್ವತಂತ್ರವಾದುದು, ಎಲ್ಲ ಇಂದ್ರಿಯಗಳೂ ಸ್ವತಂತ್ರವಾದುವು, ಅಯ್ಯೊ ನನ್ನನ್ನು ಕೇಳಿ ಅವೇನೂ ಕೆಲಸ ಮಾಡುವುದಿಲ್ಲ! ನಾನೇ ಅವನ್ನು ಸಾಕಿದ್ದೇನೆ, ಆದರೂ ನನ್ನ ವಶದಲ್ಲೇನೂ ಅವು ಬರುವುದಿಲ್ಲ! ನಾನೇನು ಮಾಡಲಿ? ಶರೀರವನ್ನೂ ಇಂದ್ರಿಯಗಳನ್ನೂ ಬಿಟ್ಟು ಎಲ್ಲಿಗೆ ಹೋಗಲಿ? ಬೇಗನೆ ಅವು ನನ್ನ ವಶಕ್ಕೆ ಹೇಗೆ ಬರಬಹುದೋ ಹಾಗೆ ಮಾಡು!

ಕದಾಚಿಚ್ಚ ತೇ ಪಾದಪದ್ಮಸ್ಯ ಪೂಜಾಂ
ಸ್ಮೃತಿಂ ದರ್ಶನಂ ವಾ ವಿತನ್ಯುಸ್ತ್ವಮೂನಿ ।
ವಿಜಾನನ್ನಹಂ ತಾನಿ ರಕ್ಷಾಮಿ ಮಾತಃ
ಮೃಷಾ ನೈವ ವಕ್ಷ್ಯಾಮಿ ಶೀಘ್ರಂ ಪ್ರಸೀದ ॥೫॥

ಈ ದೇಹವೂ ಇಂದ್ರಿಯಗಳೂ ಎಂದಾದರೂ ಒಮ್ಮೆ ನಿನ್ನ ಅಡಿದಾವರೆಗಳ ಪೂಜೆಯನ್ನು, ಸ್ಮರಣೆಯನ್ನು, ದರ್ಶನವನ್ನಾದರೂ ಮಾಡಿಯಾವೆಂದು ತಿಳಿದು ನಾನು ಅವುಗಳನ್ನು ಕಾಪಿಡುತ್ತಲೇ ಬಂದಿದ್ದೇನೆ. ತಾಯಿ! ಸುಳ್ಳು ಹೇಳುತ್ತಿಲ್ಲ ನಾನು, ಅಮ್ಮ, ಬೇಗನೆ ನನ್ನಲ್ಲಿ ಪ್ರಸನ್ನಳಾಗು.

ಮಯಾ ಬಾಲಭಾವಸ್ಥಿತೇನಾಂಬಿಕೇ ತ್ವ-
ತ್ಪದಾಂಭೋಜಯುಗ್ಮಂ ಸ್ಮೃತಂ ನೈವ ಜಾತು ।
ಕ್ಷಮಸ್ವಾಪರಾಧಂ ದಯಾವಾರಿರಾಶೇ
ತ್ವದನ್ಯಚ್ಛರಣ್ಯಂ ನ ಮೇ ಶಾರದೇಽಸ್ತಿ ॥೬॥

ಅಯ್ಯೋ, ಹುಡುಗಾಟಿಕೆಯ ದೆಶೆಯಲ್ಲೇ ಇದ್ದುಕೊಂಡು ನಿನ್ನ ಅಡಿದಾವರೆಗಳನ್ನು ಎಂದೆಂದೂ ನೆನೆಯಲೇ ಇಲ್ಲವಲ್ಲ! ಈ ತಪ್ಪನ್ನು ಕರುಣಾಸಮುದ್ರಳಾದ ನೀನು ಮನ್ನಿಸಬೇಕು. ಶಾರದೆ, ನಿನ್ನನ್ನು ಬಿಟ್ಟು ನನಗೆ ದಿಕ್ಕು ಬೇರೆ ಯಾರಿದ್ದಾರೆ?

ತಥಾ ಯೌವನೇ ಮತ್ತಚಿತ್ತೋಽಹಮಾಸಂ
ತ್ವದೀಯಂ ಪದಾಬ್ಜಂ ಸ್ಮೃತಂ ನೈವ ನೈವ ।
ಕ್ಷಮಸ್ವಾಪರಾಧಂ ವಿಧಿಪ್ರೇಮಕಾಂತೇ
ನ ಪುತ್ರೇ ಮನಾಗಪ್ಯುಪೇಕ್ಷಾ ಜನನ್ಯಾಃ ॥೭॥

ಹಾಗೆಯೇ ತಾರುಣ್ಯದ ಮದದಿಂದ ಸೊಕ್ಕಿದ ಮನಸ್ಸಿದ್ದಾಗಲಂತೂ ಅಡಿದಾವರೆಗಳನ್ನು ಖಂಡಿತ ಎಂದೆಂದೂ ನೆನೆಯಲೇ ಇಲ್ಲ! ಈ ಅಪರಾಧಗಳನ್ನು ನೀನು ಕ್ಷಮಿಸು, ಬ್ರಹ್ಮನ ಒಲುಮೆಯ ಮಡದಿ ನೀನು! ತಾಯಿಗೆ ಮಗು ವಿಚಾರವಾಗಿ ಸ್ವಲ್ಪವಾದರೂ ಅಸಡ್ಡೆಯಿದ್ದೀತೆ?

ಜರಾರೋಗಸಂಪೀಡಿತಾಂಗೋ ಜರಾಯಾಂ
ಕಥಂ ವಾ ಸ್ಮರೇಯಂ ಪದಂ ಶಾರದಾಂಬ ।
ಕ್ಷಮಸ್ವಾಪರಾಧಂ ಸಮಸ್ತಂ ಮದೀಯಂ
ಕ್ಷಮಾಧೂತಸರ್ವಂಸಹಾಖರ್ವಗರ್ವೇ ॥ ೮ ॥

ಮುಪ್ಪಿನಲ್ಲಾದರೊ ಮುಪ್ಪಿನ ರೋಗಗಳೇ ಎರಗಿಬಂದು ಅಂಗಾಂಗಗಳನ್ನು ಸೊರಗಿಸಿಬಿಡುತ್ತವೆ. ಇಂಥ ಸ್ಥಿತಿಯಲ್ಲಿ, ತಾಯಿಯೇ, ನಿನ್ನ ನೆನಪಾದರೂ ಹೇಗೆ ಬಂದೀತು? ಅಮ್ಮಾ, ನನ್ನೆಲ್ಲ ತಪ್ಪುಗಳನ್ನೂ ಮನ್ನಿಸಿಬಿಡು. ಭೂಮಿಗೆ ಎಲ್ಲವನ್ನೂ ತಾಳಿಕೊಳ್ಳುವಳೆಂಬ ಹೆಮ್ಮೆಯಿದೆಯಲ್ಲ, ನೀನು ಆ ಹೆಮ್ಮೆಯನ್ನೂ ಹತ್ತಿಕ್ಕುವವಳು!

ತ್ವದೀಯಂ ಪದಾಬ್ಜಂ ಸದಾ ಪೂಜಯೇಯಂ
ತಥಾ ಸಂಸ್ಮರೇಯಂ ಚ ಪಶ್ಯೇಯಮೇವಮ್ ।
ಸಮಿಚ್ಛಂಶ್ಚ ಮತ್ಪೂರ್ವದುರ್ವಾಸನಾಭಿ-
ರ್ಬಲಾದಾಹೃತಂ ಮನ್ಮನಃ ಕಿಂ ಕರೋಮಿ ॥೯॥

ನಿನ್ನ ಅಡಿದಾವರೆಗಳನ್ನು ಎಡೆಬಿಡದೆ ಪೂಜಿಸುವ, ನಿನ್ನನ್ನೆ ನೆನೆಸಿಕೊಳ್ಳುವ, ನಿನ್ನನ್ನೆ ಕಾಣುವ ಬಯಕೆ ನನಗಿಲ್ಲದಿಲ್ಲ. ಆದರೆ ನಾನು ಹಿಂದಣ ಜನ್ಮಗಳಲ್ಲಿ ಮಾಡಿದ ಕೆಟ್ಟ ಕೆಲಸಗಳ ಫಲದಿಂದಾಗಿ ನನ್ನ ಮನಸ್ಸು ಬಲವಂತವಾಗಿ ಬೇರೆಡೆ ಸೆಳೆಯಲ್ಪಟ್ಟಿದೆಯಲ್ಲಾ, ನಾನೇನು ಮಾಡಲಿ ?

ಯದಿ ತ್ವಂ ವದಸ್ಯಂಬ ತೇ ಪೂರ್ವಕರ್ಮ
ತ್ವಯೈವ ಪ್ರಯತ್ನೇನ ಜೇತವ್ಯಮೇವಮ್ ।
ತದಾ ಮಯ್ಯಜಸ್ರಂ ಕೃಪಾ ಸಂವಿಧೇಯಾ
ಪ್ರಯತ್ನಂ ಕರೋಮ್ಯೇವ ತತ್ರಾಪಿ ಸಮ್ಯಕ್ ॥೧೦॥

''ನಿನ್ನ ಹಿಂದಣ ಕರ್ಮಫಲವನ್ನು ನೀನೇ ಪ್ರಯತ್ನಪಟ್ಟು ತೊಲಗಿಸಿಕೊಳ್ಳಬೇಕು'', ಎನ್ನುವೆಯೋ ತಾಯಿ, ಆಗಲಿ, ನಾನು ಚೆನ್ನಾಗಿಯೇ ಪ್ರಯತ್ನಪಡುತ್ತೇನೆ. ಆದರೆ ನಿನ್ನ ದಯೆ ಎಂದೆಂದೂ ನನ್ನ ಮೇಲೆ ಇದ್ದರೆ ಮಾತ್ರ ನನ್ನ ಪ್ರಯತ್ನ ಸಫಲವಾದೀತು.

ಯದಿ ತ್ವಂ ಮದೀಯಾಂ ಶುಚಂ ನಾಪನುದ್ಯಾ-
ಸ್ತದಾ ದುಃಖವಹ್ನಿಪ್ರತಪ್ತೇऽಂತರಂಗೇ ।
ಮದೀಯೇ ಸ್ಥಿತಾಯಾಸ್ತವಾಪ್ಯಂಬ ಖೇದೋ
ಭವೇದಿತ್ಯಹಂ ಚಿಂತಯಾರ್ತೋऽಸ್ಮಿ ಭಾಯಃ ॥೧೧॥

ನೀನು ನನ್ನ ದುಗುಡವನ್ನು ತೊಲಗಿಸಲಿಲ್ಲವೆಂದರೆ, ದುಗುಡದಿಂದ ಬೆಂದು ಬಳಲಿರುವ ನನ್ನೊಡಲಲ್ಲಿ ನೀನೇ ನೆಲೆಸಿರುವೆಯಲ್ಲ, ತಾಯಿ, ನಿನಗೆ ಆ ಬೇಗೆ ತಗಲುವುದಿಲ್ಲವೆ? ಈ ಚಿಂತೆಯೆ ನನ್ನನ್ನು ಅಡಿಗಡಿಗೆ ಕಾಡುತ್ತಿರುವುದು!

ವದಂತೀಹ ಶಾಸ್ತ್ರಾಣಿ ಸತ್ಯಶ್ಚಿದಾತ್ಮಾऽ-
ದ್ವಯಶ್ಚಾನ್ಯದಾರ್ತಂ ಸಮಸ್ತಂ ಮೃಷೇತಿ ।
ತಥಾಪ್ಯಂಬ ಮೋಹೋ ನ ಮೇ ವಿಪ್ರಣಷ್ಟೋ
ಝುಟಿತ್ಯಂಬ ತಂ ನಾಶಯಾನರ್ಥಮೂಲಮ್ ॥೧೨॥

ಶಾಸ್ತ್ರಗಳೇನೋ ''ಸಚ್ಚಿತ್‌ಸ್ವರೂಪನಾದವನು ಆತ್ಮ, ಅವನಿಗಿಂತ ಬೇರೆಯಾದ ಸತ್ಯವಿರದು; ಉಳಿದುದೆಲ್ಲ ಸಟೆ!'' ಎಂದು ಹೇಳುತ್ತವೆ. ನಾನೂ ಶಾಸ್ತ್ರವನ್ನು ತಿಳಿದವನೇ ಆದರೂ, ನನ್ನಲ್ಲಿ ಈ ತತ್ತ್ವ ಬೇರೂರಲಿಲ್ಲವಲ್ಲಾ! ಉಳಿದುದೇ ದಿಟ, ಆತ್ಮವಸ್ತುವೇ ಸಟೆಯೆಂಬ ಮರುಳತನ ನನ್ನಿಂದ ತೊಲಗಿಹೋಗಲಿಲ್ಲವಲ್ಲಾ! ಈ ಮರುಳುತನವೇ ಎಲ್ಲ ಅನರ್ಥಗಳಿಗೂ ಮೂಲಕಾರಣವಲ್ಲವೆ? ಇದನ್ನು ನೀನು ಈಗಲೇ ತೊಲಗಿಸು, ತಾಯಿ !

ಯದಾ ದಂಡಧೃತ್‌ಪ್ರೇಷಿತಾ ಭೀಮದೂತಾ
ಮಹಾಪಾಪಿನಂ ಮಾಂ ಸಮಾಕ್ರಷ್ಟುಮಾರಾತ್ ।
ಸಮಾಯಾಂತಿ ತಸ್ಮಿನ್ ಹಿ ಕಾಲೇ ದಯಾಬ್ಧೇ
ಮದೀಯೇ ಮನಸ್ಯಾವಿರೇಧಿ ತ್ವಮಂಬ ॥೧೩॥

ಯಮನಿಂದ ಅಟ್ಟಲ್ಪಟ್ಟ ಭಯಂಕರಸ್ವರೂಪದ ದೂತರು, ಅವನಾಣತಿಯಂತೆ ಮಹಾಪಾಪಿಯಾಪ ನನ್ನನ್ನು ಸೆಳೆದುಕೊಂಡು ಹೋಗಲು ನನ್ನ ಮೇಲೆರಗಿ ಬರುವರಲ್ಲಾ, ಆ ವೇಳೆಯಲ್ಲಿ ನನ್ನ ಮನಸ್ಸಿನಲ್ಲಿ ನೀನು ತೋರಿಕೋ, ತಾಯಿ! ನನಗೆ ಧೈರ್ಯ ಬರುತ್ತದೆ.

ಮಹಾಪಾಪಿನಂ ಮಾಂ ಸಮುದ್ಧರ್ತುಮೇವ
ತ್ವಯಾ ಪುಣ್ಯಪಾಪೇ ಪರೋಕ್ಷೇ ಕೃತೇ ಹಿ ।
ನ ಚೇತ್ಸರ್ವಲೋಕಾ ವಿಜಾನೀಯುರೇನಂ
ಮಹಾಪಾಪಿನಂ ತ್ವಾಂ ಚ ವೈಷಮ್ಯಯುಕ್ತಾಮ್ ॥೧೪॥

ಮಹಾಪಾಪಿಯಾದ ನನ್ನನ್ನು ಕಾಪಿಡಲೆಂದೇ ಅಲ್ಲವೇ ಪಾಪ-ಪುಣ್ಯಗಳನ್ನು ನೇರವಾಗಿ ಯಾರಿಗೂ ಗೋಚರವಾಗದಂತೆ ಮಾಡಿರುವಿ. ಹಾಗೇನಾದರೂ ಎಲ್ಲರ್ರಿಗೂ ತಿಳಿಯುವಂತಿದ್ದರೆ ನಾನು ಮಹಾಪಾಪಿಯೆಂಬುದು ಎಲ್ಲರಿಗೂ ತಿಳಿದುಬಿಡುತ್ತಿತ್ತು! ಅಷ್ಟೇ ಅಲ್ಲ, ಕೆಲವರನ್ನು ಪುಣ್ಯವಂತರನ್ನಾಗಿಯೂ ಮತ್ತೆ ಕೆಲವರನ್ನು ಪಾಪಿಗಳನ್ನಾಗಿಯೂ ಮಾಡುವ ಪಕ್ಷಪಾತಬುದ್ಧಿಯವಳು ನೀನೆಂಬುದನ್ನು ಎಲ್ಲರೂ ಅರಿತುಕೊಂಡು-ಬಿಡುತ್ತಿದ್ದರು!

**ಶರೀರೇ ಸ್ವಕೇಽಹಂತ್ವಮಸ್ತಂ ಪ್ರಯಾಯಾ-**
**ದಿತಿ ತ್ವಾಂ ಪ್ರಪನ್ನಾ ಜನಾಃ ಶಾರದಾಂಬ ।**
**ಸಮಸ್ತೇಷು ವಸ್ತುಷ್ವಹಂತಾಂ ಭಜಂತೇ**
**ಕಿಮೇತದ್ವಿಚಿತ್ರಂ ಚಿದಾನಂದರೂಪೇ ॥೧೫॥**

ಜನರು ತಮ್ಮ ಶರೀರದಲ್ಲಿ 'ನಾನು', 'ನೀನು' ಎಂಬ ಭಾವನೆಗಳನ್ನು ತೊಲಗಿಸಿಕೊಳ್ಳುವ ಸಲುವಾಗಿಯೇ ನಿನ್ನಲ್ಲಿ ಶರಣುಹೋಗುವರಲ್ಲವೆ, ತಾಯಿ? ಆದರೆ ಎಲ್ಲ ವಸ್ತುಗಳಲ್ಲೂ 'ನಾನು' ಎಂಬ ಭಾವನೆಯನ್ನೇ ಮುಂದೆ ಮಾಡಿಕೊಂಡು ವ್ಯವಹರಿಸುವರು, ಇದೇನು ವಿಚಿತ್ರ? ಚಿತ್‌ಸುಖಸ್ವರೂಪಳೇ !

**ಮಹಾವ್ಯಾಧಿಶಾಂತ್ಯೈ ತಥಾ ನಿಃಸ್ವತಾಯಾಃ**
**ಪ್ರಣಾಶಾಯ ಯೇ ತ್ವಾಂ ಭಜಂತೇ ನರಾಸ್ತೇ ।**
**ಜವಾಚ್ಛೂಲಿನಃ ಸ್ಯುಶ್ಚ ಕೃತ್ತಿಂವಸಾನಾಃ**
**ಕ ಏಷ ಪ್ರಕಾರಃ ಪ್ರಪನ್ನೇಷು ತೇಽಂಬ ॥೧೬॥**

ಸಂಸಾರವೆಂಬುದೊಂದು ದೊಡ್ಡ ರೋಗ. ಆಧ್ಯಾತ್ಮಿಕಸಾಧನಸಂಪತ್ತಾದ ಆತ್ಮದ ಅರಿವಿಲ್ಲದಿರುವುದು, ದಮಶಮವಿಲ್ಲದಿರುವುದು ಎಲ್ಲ ಅನರ್ಥಕ್ಕೆ ಮೂಲ. ಇವೆರಡೂ ತೊಲಗಬೇಕೆಂದೇ ಜನರು ನಿನ್ನನ್ನು ಸೇವಿಸುವುದು. ಆದರೆ ಅವರು ಬೇಗನೆ ಶೂಲವನ್ನೇ ಹಿಡಿದು, ಆನೆಯ ತೊಗಲನ್ನೆ ಹೊದ್ದು ತಿರುಗಾಡತೊಡಗುವರು; ಶಿವನಂತೆಯೇ ಆಗಿಬಿಡುವರು! ನಿನ್ನಲ್ಲಿ ಶರಣುಹೊಕ್ಕವರಿಗೆ ನೀನು ಮಾಡುವ ತೆರ ಇದೇನಿದು?

(ಒಳಗಣ ಶತ್ರುಗಳನ್ನು ಕೊಲ್ಲಲು ನಿಗ್ರಹದ ಶೂಲ; ಪ್ರಪಂಚದ ಯಾವೊಂದು ಅನಿಸಿಕೆಯೂ ತಟ್ಟದಂತೆ ಆನೆಯ ದಪ್ಪವಾದ ಚರ್ಮ. ಸಾಧಕರು ಹೀಗೆ ವೀರರೂ ಹೌದು; ಉದಾಸೀನರೂ ಹೌದು. ಮೊದಲನೆಯದು ದಮ, ಎರಡನೆಯದು ಶಮ. ನಿನ್ನ ಭಕ್ತರು ಶಮದಮಾದಿ ಸಂಪತ್ತುಳ್ಳವರಾಗುವರು, ಪ್ರಾಪಂಚಿಕಪ್ರಸಕ್ತಿಯಿಂದ ಮುಕ್ತ ರಾಗುವರು.)

ಕನದ್ದೇಹಭಾಧೂತಸಚ್ಛಾತಕುಂಭಾಂ
ಲಸತ್ತಾರಹಾರಾಢ್ಯವಕ್ಷೋಜಕುಂಭಾಮ್ ।
ಸದಾ ತ್ವಾಂ ಜನಾ ಯೇ ಹೃದಬ್ಜೇ ಸ್ಮರಂತಿ
ಸ್ಮರಂತ್ಯೇವ ತೇ ದೇವಿ ಶಾರೀರಕಾಂತ್ಯಾ ॥೧೭॥

ನಿನ್ನ ಹೊಳೆಯುವ ಮೈಬೆಳಕು ಬಂಗಾರದ ಹೊಳಪನ್ನು ನಾಚಿಸುವುದು; ಎದೆಯ ಮೇಲೆ ಕಂಗೊಳಿಸುವ ಹಾರವುಳ್ಳವಳು, ತಾಯಿ, ನೀನು! ಇದನ್ನು ಯಾರು ತಮ್ಮ ಒಡಲೊಳಗೆ ಭಾವಿಸಿಕೊಳ್ಳುವರೋ ಅವರು ತಮ್ಮ ಮೈಒಳಗಿರುವ ಆತ್ಮದ ಬೆಳಕಿನಿಂದ ನಿನ್ನನ್ನು ಮನವರಿಕೆ ಮಾಡಿಕೊಳ್ಳುವರು.

(ಸಗುಣಾರಾಧನೆಯಿಂದ ನಿರ್ಗುಣಸಾಕ್ಷಾತ್ಕಾರ)

ಕದಾ ವಾ ಸುಧಾಕುಂಭಪುಸ್ತಾಕ್ಷ ಮಾಲಾ-
ವಿಬೋಧಾಖ್ಯಮುದ್ರಾಃ ಕರಾಬ್ಜೈರ್ದಧಾನಾಮ್ ।
ಮುಖಶ್ರೀಪರಾಭೂತಪೂರ್ಣೇಂದುಬಿಂಬಾಂ
ಸದಾ ತ್ವಾಂ ಸ್ಮರನ್ ವೀತಶೋಕೋ ಭವೇಯಮ್ ॥೧೮॥

ಸಗುಣಬ್ರಹ್ಮವೆಂದರೆ ನೀನೆ, ಲಲಿತೆ! ನಿನ್ನ ಕರಕಮಲಗಳಲ್ಲಿ ಅಮೃತಘಟ, ಪುಸ್ತಕ, ಜಪಮಾಲೆ, ವ್ಯಾಖ್ಯಾನ ಮುದ್ರೆ. ನಿನ್ನ ಮುಖದ ಕಳೆಯೋ, ಹುಣ್ಣಿಮೆಯ ಚಂದ್ರಮಂಡಲವನ್ನೂ ನಾಚಿಸುವಂಥದು! ನಿನ್ನನ್ನು ಎಡೆಬಿಡದೆ ಧ್ಯಾನಿಸುತ್ತ ನಾನು ದುಃಖವನ್ನೆಲ್ಲ ಕಳೆದುಕೊಳ್ಳುವಂತಾಗಲಿ, ತಾಯಿ!

ಕದಾ ತುಂಗಭದ್ರಾಸರಿತ್ತೀರದೇಶೇ
ಚರಂತೀಂ ಸಮುತ್ತುಂಗಕಲ್ಯಾಣದಾತ್ರೀಮ್ ।
ಸದಾ ಭಾವಯಂಸ್ತ್ವಾಂ ಮುದಾ ಯಾಪಯೇಯಂ
ಮದಾಯುರ್ಮದೇಭೇಂದ್ರಯಾನೇಽಂಬ ವಾಣಿ ॥೧೯॥

ಎಲೌ ವಾಣಿ! ಅಮ್ಮ! ಮದವೇರಿದ ಗಜರಾಜನಂತೆ ನಡಿಗೆಯುಳ್ಳವಳೇ! ತುಂಗಾಭದ್ರಾ ನದಿಯ ದಡದಲ್ಲಿ ಓಡಿಯಾಡುತ್ತಿರುವ, ವಿಶಿಷ್ಟವಾದ ಮಂಗಳವನ್ನು ನೀಡುವ ನಿನ್ನನ್ನೇ ಎಂದು ಧ್ಯಾನಿಸುತ್ತ ಸಂತೋಷದಿಂದ ನನ್ನ ಆಯುಸ್ಸನ್ನು ಕಳೆಯುವೆನೋ?

ಕರಾಬ್ಜೇಽಕ್ಷಮಾಲಾಂ ವಹಂತೀಂ ಸದಾ ತ್ವಾಂ
ಭಜನ್ ಭೃಂಗಕೀಟಪ್ರಕಾರೇಣ ಮಾತಃ ।
ಕರೇ ಮೇಽಕ್ಷಮಾಲಾಂ ಕರೋಮ್ಯೇವ ನೂನಂ
ಪರಂ ತ್ವನ್ಮನಸ್ತ್ವಂ ಸದಾ ದೇಹಿ ಮಹ್ಯಮ್ ॥೨೦॥

ದೇವಿಯೇ, ನೀನು ಕೈಯಲ್ಲಿ ಜಪಸರವನ್ನು ಹಿಡಿದವಳು; ನಿನ್ನನ್ನೇ ಧ್ಯಾನಿಸುತ್ತ ನಾನೂ ಕೈಯಲ್ಲಿ ಜಪಮಾಲೆಯನ್ನು ಹಿಡಿಯುವೆನು; ಭ್ರಮರಕೀಟನ್ಯಾಯದಂತೆ. ಹುಳುವು ದುಂಬಿಯನ್ನೆ ಆಲೋಚಿಸುತ್ತ ತಾನೂ ದುಂಬಿಯಂತೆ ಆಗಿಬಿಡುವುದಿಲ್ಲವೆ, ಹಾಗೆ. ಆದರೆ ನಿನ್ನ ಒಳಗಣ ಮನಸ್ಸನ್ನು ನೀನೇ ನನಗೆ ನೀಡಬೇಕು, ನಾನದನ್ನು ಧ್ಯಾನದಿಂದ ಪಡೆದುಕೊಳ್ಳಲಾರೆ! ನಿನ್ನನ್ನೆ ಅನುಗಾಲವೂ ಧ್ಯಾನಿಸುವ ಮನಸ್ಸನ್ನು ನೀನು ನೀಡು.

**ದೃಶೌ ದರ್ಶನೇ ತೇ ಕರೌ ಪೂಜನೇ ಸ್ತಾಂ**
**ಶ್ರುತೀ ತ್ವಚ್ಚರಿತ್ರಶ್ರುತೌ ವಾಕ್ ಸ್ತುತೌ ಸ್ಯಾತ್ ।**
**ಶಿರಸ್ತ್ವತ್ಪದಾಬ್ಜಪ್ರಣತ್ಯೇಕಸಕ್ತಂ**
**ಭವತ್ವಂಬಿಕೇ ಧ್ಯಾನಸಕ್ತಂ ಮನೋ ಮೇ ॥೨೧॥**

ನನ್ನ ಕಂಗಳು ನಿನ್ನನ್ನು ಕಾಣುತ್ತಲೆ ಇರಲಿ; ನನ್ನ ಕೈಗಳು ನಿನ್ನ ಪೂಜೆಗಾಗಿಯೆ ಇರಲಿ; ನನ್ನ ಕಿವಿಗಳು ನಿನ್ನ ಮಹತಿಯನ್ನು ಕೇಳುವುದರಲ್ಲೆ ತೊಡಗಿರಲಿ; ನನ್ನ ಮಾತು ನಿನ್ನನ್ನು ಸ್ತುತಿಸುವುದಕ್ಕೇ ಮೀಸಲಾಗಿರಲಿ! ನನ್ನ ತಲೆಯೋ, ನಿನ್ನ ಅಡಿದಾವರೆಗಳನ್ನು ನಮಿಸುತ್ತಲೆ ಇರಲಿ. ನನ್ನ ಮನಸ್ಸನ್ನು ನಿನ್ನ ಧ್ಯಾನದಲ್ಲೇ ತೊಡಗಿರುವಂತೆ ಅನುಗ್ರಹಿಸು.

**ಭುಜಂಗಪ್ರಯಾತಾಖ್ಯವೃತ್ತೇನ ಕ್ಲೃಪ್ತಾಂ**
**ಸ್ತುತಿಂ ಯೇ ನರಾ ಭಕ್ತಿಯುಕ್ತಾಃ ಪಠಂತಿ ।**
**ಸುವಿದ್ಯಾಂ ಮತಿಂ ನಿರ್ಮಲಾಂ ಚಾರುಕೀರ್ತಿಂ**
**ಪ್ರಯಚ್ಛಾಂಬ ತೇಷಾಂ ಭುಜಂಗಾಭವೇಣಿ ॥೨೨॥**

ಭುಜಂಗಪ್ರಯಾತವೆಂಬ ವೃತ್ತದಲ್ಲಿ ಈ ಸ್ತೋತ್ರವನ್ನು ಯಾರು ಭಕ್ತಿಯಿಂದ ಓದುವರೋ ಅವರಿಗೆ ಒಳ್ಳೆಯ ವಿದ್ಯೆಯನ್ನೂ (ಆತ್ಮವಿದ್ಯೆ), ಶುದ್ಧವಾದ ಚಿತ್ತವನ್ನೂ, ಸುಂದರವಾದ ಯಶಸ್ಸನ್ನೂ ನೀಡು, ಓ ದೇವಿಯೇ (ಹಾವಿನಂತೆ ಹೊಳೆಯುವ ಜಡೆಯುಳ್ಳವಳೇ).

★★★

# ಪರಿಶಿಷ್ಟ

## ಸದಾಶಿವಬ್ರಹ್ಮೇಂದ್ರರು - 'ಆತ್ಮವಿದ್ಯಾವಿಲಾಸ'

ಶ್ರೀ ಸದಾಶಿವಬ್ರಹ್ಮೇಂದ್ರರು ಹದಿನೆಂಟನೆಯ ಶತಮಾನದಲ್ಲಿ ಆಗಿಹೋದ ಮಹಾಪುರುಷರು. ಜೀವನ್ಮುಕ್ತರಾಗಿ, ಅವಧೂತರಾಗಿ ಕಾಡುಮೇಡುಗಳಲ್ಲಿ ನದೀತೀರಗಳಲ್ಲಿ ಸಂಚರಿಸುತ್ತಿದ್ದವರಾದರೂ ತಮ್ಮ ಕೀರ್ತನೆಗಳಿಂದ ಶಾಸ್ತ್ರಗ್ರಂಥಗಳಿಂದ ಪ್ರಸಿದ್ಧರಾಗಿದ್ದಾರೆ. ಅವರ ಸಮಾಧಿಯು ತಿರುಚಿರಪಳ್ಳಿ ಪ್ರಾಂತದ ಕರೂರು ಎಂಬ ಊರಿನಲ್ಲಿ ಹನ್ನೆರಡು ಕಿಲೋಮೀಟರ್ ದೂರ ಇರುವ ನೆರೂರು ಎಂಬ ಗ್ರಾಮದಲ್ಲಿದೆ. ಕಾವೇರೀ ತೀರದಲ್ಲೇ ಇರುವ ಈ ಸಮಾಧಿಯ ಮುಂದೆ ೧೯೧೨ರಿಂದಲೂ ವಾರ್ಷಿಕ-ಆರಾಧನೆ ನಡೆಯುತ್ತಿದ್ದು ಇದು ಬಹು ಜನರನ್ನು ಆಕರ್ಷಿಸುತ್ತಿದೆ. ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳು ತಮ್ಮ ತಮಿಳುನಾಡು ಯಾತ್ರೆಯ ಸಂದರ್ಭದಲ್ಲಿ ನೆರೂರಿಗೆ ಬಂದು ಸದಾಶಿವಬ್ರಹ್ಮೇಂದ್ರರ ಸಮಾಧಿಯನ್ನು ಸಂದರ್ಶಿಸಿದ್ದರು. ಅವರ ಗುರುಗಳಾದ ಶ್ರೀ ಸಚ್ಚಿದಾನಂದಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳೂ ತಮ್ಮ ಪರ್ಯಟನೆಯ ಕಾಲದಲ್ಲಿ ಈ ಸಮಾಧಿಯನ್ನು ಸಂದರ್ಶಿಸಿ,

ಸದಾಶಿವಬ್ರಹ್ಮೇಂದ್ರರನ್ನು ಕುರಿತ ಸಂಸ್ಕೃತಸ್ತುತಿಯೊಂದನ್ನೂ ರಚಿಸಿದರು. ನಲವತ್ತೈದು ಶ್ಲೋಕಗಳುಳ್ಳ ಈ ಸ್ತವದಲ್ಲಿ ಅವರ ಬದುಕನ್ನು ತಿಳಿಯಹೇಳುವ ವಿವರಗಳಿವೆ; ಹಲವಾರು ಘಟನೆಗಳ, ಪವಾಡಗಳ ಉಲ್ಲೇಖವೂ ಇದೆ.

ಸದಾಶಿವಬ್ರಹ್ಮೇಂದ್ರರನ್ನು ಕುರಿತಂತೆ ಆದರ ಶ್ರೀಚಂದ್ರಶೇಖರಭಾರತೀ ಸ್ವಾಮಿಗಳಿಗೆ ಅವರ ಗುರುಗಳಿಂದಲೇ ಒದಗಿಬಂದದ್ದು. ಸದಾಶಿವಬ್ರಹ್ಮೇಂದ್ರರ ರಚನೆಗಳಲ್ಲಿ ಪ್ರಸಿದ್ಧವಾದ 'ಆತ್ಮವಿದ್ಯಾವಿಲಾಸ'ವು ಇಬ್ಬರೂ ಗುರುಗಳಿಗೆ ಪ್ರಿಯವಾಗಿದ್ದಿತು. ಇದರಲ್ಲಿ ಬರುವ ಅವಧೂತಚರ್ಯೆಯ ಆದರ್ಶವು ಚಂದ್ರಶೇಖರಭಾರತಿಯವರಲ್ಲಿ ಫಲಿಸಿತು. ತಮ್ಮ 'ಅಂತರ್ಮುಖ' ಸ್ಥಿತಿಯಲ್ಲಿ ಅವರು ಬಹುಮಟ್ಟಿಗೆ ಹೇಳಿಕೊಳ್ಳುತ್ತಿದ್ದುದು 'ಆತ್ಮ ವಿದ್ಯಾವಿಲಾಸ'ದ ಮಾತುಗಳನ್ನೇ. ಸದಾಶಿವಬ್ರಹ್ಮೇಂದ್ರರಂತೆ ಸ್ವತಂತ್ರವಾಗಿರುವ ಅವಕಾಶ ಇವರಿಗೆ ದೊರಕಲಿಲ್ಲವಾದರೂ ಅವರ ಪ್ರತಿಧ್ವನಿಯೇ ಆಗಿದ್ದರು. ಪೀಠಾಧಿಪತಿಗಳಾದರೂ ಅವಧೂತಚರ್ಯೆಯನ್ನು ಸಾಧಿಸಿಬಿಟ್ಟರು! ಅವರ ಆದರ್ಶವಾಗಿದ್ದ ಸದಾಶಿವಬ್ರಹ್ಮೇಂದ್ರರ ವಿಚಾರವನ್ನು ಮತ್ತು ಅವರಿಗೆ ಪ್ರಿಯವಾಗಿದ್ದ 'ಆತ್ಮವಿದ್ಯಾವಿಲಾಸ'ದ ಪೂರ್ಣಪಾಠವನ್ನು ಇಲ್ಲಿ ಸೇರಿಸಿರುವುದು ಅಪ್ರಸ್ತುತವೇನಲ್ಲ.

ಸದಾಶಿವಬ್ರಹ್ಮೇಂದ್ರರ ಕಾಲನಿರ್ಣಯವನ್ನು ಖಚಿತವಾಗಿ ಮಾಡಲಾಗದಿದ್ದರೂ, ಅವರು ತಂಜಾವೂರಿನಲ್ಲಿ ಮರಾಠಾ-ಅರಸರ ಆಳ್ವಿಕೆ ೧೬೭೬ರಲ್ಲಿ ಮೊದಲಾದ ಮೇಲೆ ಎರಡನೆಯ ದೊರೆಯಾದ ಇಮ್ಮಡಿ ಶಾಹಜಿಯ ಕಾಲದಲ್ಲಿ (ಎಂದರೆ ೧೬೮೪-೧೭೧೨) ಇದ್ದವರೆಂಬುದು ತಿಳಿದುಬಂದಿದೆ; ತಮ್ಮ 'ಆತ್ಮವಿದ್ಯಾವಿಲಾಸ'ದ ಪ್ರತಿಯೊಂದನ್ನು, ಶಾಹಜಿಯಾದ ಮೇಲೆ ಆಳಿದ ಶರಭೋಜಿ ಮಹಾರಾಜನಿಗೆ (೧೭೧೨-೧೭೨೮, ಶಾಹಜಿಯ ತಮ್ಮ) ತಾವೇ ಕೊಟ್ಟರೆಂಬ ಉಲ್ಲೇಖವೂ ಇದೆ. ಅಭಿನವಭೋಜನೆಂದು ಹೆಸರಾದ ಶಾಹಜಿಯ ತಿರುವಿಶೈನಲ್ಲೂರಿನಲ್ಲಿ ಬ್ರಾಹ್ಮಣ-ಅಗ್ರಹಾರವೊಂದನ್ನು ನಿರ್ಮಿಸಿ ತನ್ನ ಆಸ್ಥಾನವಿದ್ವಾಂಸರಿಗೆ ಕೊಟ್ಟನು. ಅಲ್ಲಿದ್ದ ಶ್ರೀಧರ ವೆಂಕಟೇಶ ಅಯ್ಯಾವಾಳ್ (ತಮಿಳುನಾಡಿನಲ್ಲಿ ಭಜನ ಪದ್ಧತಿಯ ಪ್ರವರ್ತಕರು) ಶಾಹಜಿಯನ್ನು ಚೆನ್ನಾಗಿ ಬಲ್ಲವರು; 'ಶಾಹೇಂದ್ರವಿಲಾಸ'ವೆಂಬ ಕಾವ್ಯವನ್ನೂ ರಚಿಸಿದರು. ಇವರು ಸದಾಶಿವಬ್ರಹ್ಮೇಂದ್ರರಿಗೆ ಮಾರ್ಗದರ್ಶಿಯಾದದ್ದು ತಿಳಿದಿದೆ. ಅಲ್ಲಿಯೇ ನೆಲೆಸಿದ್ದ ಮರುದಾನಲ್ಲೂರು ವೆಂಕಟರಾಮ ಸದ್ಗುರು- ಸ್ವಾಮಿ (ನಾಮಸಂಕೀರ್ತನ ಪದ್ಧತಿಯನ್ನು ಬೆಳೆಸಿದವರು) ಸದಾಶಿವಬ್ರಹ್ಮೇಂದ್ರ ರನ್ನು ಕುರಿತು ಒಂದು ಕೀರ್ತನ ಪದ್ಧತಿಯನ್ನು ಬೆಳೆಸಿದವರು) ಸದಾಶಿವ-ಬ್ರಹ್ಮೇಂದ್ರರನ್ನು ಕುರಿತು ಒಂದು ಕೀರ್ತನೆಯನ್ನು ರಚಿಸಿದ್ದಾರೆ. ಸದಾಶಿವ- ಬ್ರಹ್ಮೇಂದ್ರರ ಸಮಕಾಲಿಕರೇ ಆಗಿದ್ದು ಅವರ ಮೇಲೆ ಪ್ರಭಾವವನ್ನು ಬೀರಿದ ಇನ್ನೊಬ್ಬರು ಬೋಧೇಂದ್ರ ಸದ್ಗುರುಗಳು. ಇವರೂ ಭಜನ ಸಂಪ್ರದಾಯವನ್ನು ಎತ್ತಿಹಿಡಿದವರು. ಇವರು ಕಂಚಿಕಾಮಕೋಟಿ ಪೀಠದ ಗುರುಪರಂಪರೆಯಲ್ಲಿ ೫೯ನೆಯವರು; ಇವರು (ಭಗವನ್ನಾಮ ಬೋಧೇಂದ್ರ ಸರಸ್ವತೀ) ತೀರಿಕೊಂಡದ್ದು

೧೬೯೦ರಲ್ಲಿ ಎಂಬ ವಿವರವಿದೆ. ಇವರ ಹಿಂದಿನವರು ವಿಶ್ವಾಧಿಕೇಂದ್ರ ಸರಸ್ವತೀ (ಆತ್ಮಬೋಧರ್); ಅವರು ಪೀಠದಲ್ಲಿದ್ದದ್ದು ೧೫೮೪ರಿಂದ ೧೬೩೬ರವರೆಗೆ. ಪುದುಕ್ಕೋಟ್ಟೆಯ ದೊರೆ ರಘುನಾಥ ತೊಂಡೈಮಾನ್ (೧೭೩೦-೧೭೬೯) ಸದಾಶಿವಬ್ರಹ್ಮೇಂದ್ರರನ್ನು ೧೭೩೮ರಲ್ಲಿ ಸಂದರ್ಶಿಸಿದ ದಾಖಲೆಯಿದೆ.

ತೆಲುಗು ನಿಯೋಗಿ ಮೂಲದ ಸದಾಶಿವಬ್ರಹ್ಮೇಂದ್ರರ ತಂದೆ ಮೋಕ್ಷಯಿಂಟಿ ಸೋಮಸುಂದರ ಅವಧಾನಿ. ತಮಿಳುನಾಡಿನ ಮಧುರೆಯಲ್ಲಿದ್ದವರು; ವೇದ ವಿದ್ವಾಂಸರು, ಶಾಸ್ತ್ರವೇತ್ತರು. ಸದಾಶಿವಬ್ರಹ್ಮೇಂದ್ರರ ಮೊದಲ ಹೆಸರು ಶಿವರಾಮಕೃಷ್ಣನೆಂದು. ಮೊದಲ ವಿದ್ಯಾಭ್ಯಾಸ ಮನೆಯಲ್ಲೇ. ಮುಂದಿನ ಓದಿಗೆಂದು ಶಾಹಜಿಪುರವೆನಿಸಿಕೊಂಡ ತಿರುವಿಶೈನಲ್ಲೂರಿಗೆ ಹೋದರು. ಅಲ್ಲಿ ನಾಮಸಂಕೀರ್ತನ ಸಂಪ್ರದಾಯ-ಭಜನಪದ್ಧತಿಗಳ ತ್ರಿಮೂರ್ತಿಗಳೆಂದು ಪ್ರಖ್ಯಾತರಾದ ಶ್ರೀಧರ ವೆಂಕಟೇಶ ಅಯ್ಯವಾಳ್, ಬೋಧೇಂದ್ರಸರಸ್ವತಿಗಳು, ಮರುದಾನಲ್ಲೂರು ಸದ್ಗುರುಸ್ವಾಮಿಗಳು ಇವರ ಸಂಪರ್ಕ ಒದಗಿಬಂದಿತು.

ತಿರುವಿಶೈನಲ್ಲೂರಿನಲ್ಲಿ ರಾಮಭದ್ರದೀಕ್ಷಿತರೆಂಬುವರ ಬಳಿ ಶಾಸ್ತ್ರಶಿಕ್ಷಣವನ್ನು ಮುಗಿಸಿ ಮಧುರೆಗೆ ಹಿಂದಿರುಗಿದಾಗ ತಂದೆತಾಯಿಯರು ಇವರ ಮದುವೆಯನ್ನು ಮಾಡಿಬಿಟ್ಟರು. ಇವರಿಗೆ ಗೃಹಸ್ಥಾಶ್ರಮದಲ್ಲಿ ಏನೇನೂ ರುಚಿಯಿರದೆ ಅಲ್ಲಿಂದ ಓಡಿ ತಿರುವಿಶೈನಲ್ಲೂರಿಗೇ ಬಂದರು. ಬಂದು ಪರಮ ಶಿವೇಂದ್ರರೆನ್ನುವ ಪಂಡಿತ ಯತಿಗಳ ಬಳಿ ಸಂನ್ಯಾಸದೀಕ್ಷೆಯನ್ನು ಪಡೆದು ಕೊಂಡು ಸದಾಶಿವಬ್ರಹ್ಮೇಂದ್ರರಾದರು. ಪರಮಶಿವೇಂದ್ರರು ಯಾರೆಂಬುದು ನಿರ್ದಿಷ್ಟವಾಗಿ ತಿಳಿಯದು. ಇವರು ಕಂಚಿಕಾಮಕೋಟಿಪೀಠದ ಗುರು-ಪರಂಪರೆಗೆ ಸೇರಿದವರೆಂದು ಒಂದು ಅಭಿಪ್ರಾಯ. ಈ ಪರಂಪರೆಯಲ್ಲಿ ೫೬ನೆಯವರ ಹೆಸರು ಸದಾಶಿವಬೋಧೇಂದ್ರರೆಂದೇ ಇದ್ದಿತು. ಇವರ ಕಾಲ ೧೫೨೩-೧೫೨೯; ಇವರು ಪುಣ್ಯಶ್ಲೋಕಮಂಜರಿಯೆಂಬ ಗ್ರಂಥವನ್ನು ಬರೆದವರು. ಅದೇ ಹೆಸರು ಇವರಿಗೂ ಬಂದಿದ್ದೀತು. ಆದರೆ ಸದಾಶಿವ-ಬ್ರಹ್ಮೇಂದ್ರರಿಗೆ ಹಿರಿಯರಾಗಿ, ಪ್ರೇರಕರಾದ ಬೋಧೇಂದ್ರಸದ್ಗುರುಗಳೂ ಕಂಚಿಕಾಮಕೋಟಿಪೀಠದ ಗುರುಗಳೇ. ಅವರ ಹಿಂದಿನವರು ವಿಶ್ವಾಧಿಕೇಂದ್ರಸರಸ್ವತಿಗಳು (ಆತ್ಮಬೋಧೇಂದ್ರರು, ೧೫೮೪-೧೬೩೬); ತಿಳಿಯದು; ಅವರ ಹಿಂದಿದ್ದವರೇ ಸದಾಶಿವಬೋಧೇಂದ್ರರು. ಅಂತೂ ಪರಂಪರೆಯಲ್ಲಿ ಪರಮಶಿವೇಂದ್ರರು ಕಾಣಿಸಿಕೊಳ್ಳುವುದಿಲ್ಲ. ಇದೇ ಹೆಸರಿನವರೊಬ್ಬರು ಕಂಚೀಪೀಠದ ಗುರುಪರಂಪರೆಯಲ್ಲಿ ಆಗಿಹೋಗಿದ್ದಾರೆ; ಆದರೆ ತುಂಬ ಹಿಂದೆ (೪೫ನೆಯವರಾಗಿ ೧೦೬೧ರಲ್ಲಿ ಪೀಠಾರೋಹಣಮಾಡಿ ಇಪ್ಪತ್ತೇಳು ವರ್ಷಗಳಿದ್ದವರು).

ಇದು ಹೇಗಾದರೂ ಇರಲಿ. ಪರಮಶಿವೇಂದ್ರರು ತಮ್ಮ ಗುರುಗಳೆಂಬುದನ್ನು ಸದಾಶಿವಬ್ರಹ್ಮೇಂದ್ರರು ತಮ್ಮ ಹಲವು ಕೃತಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ; 'ಆತ್ಮವಿದ್ಯಾವಿಲಾಸ'ದಲ್ಲೂ ಇದು ಎದ್ದು ಕಾಣುತ್ತದೆ. ಗುರುಗಳನ್ನು ಸ್ತುತಿಸಿ 'ನವಮಣಿಮಾಲೆ'ಯೆಂಬ ಅವರ ಸಣ್ಣ ಕೃತಿಯೇ ಇದೆ. ಪರಮಶಿವೇಂದ್ರಸರಸ್ವತಿಗಳು ಯೋಗಿಯೂ ಆಗಿದ್ದರೆಂದೂ, 'ದಹರವಿದ್ಯಾಪ್ರಕಾಶಿಕೆ' ಎಂದು ಸಂಸ್ಕೃತಪ್ರಬಂಧವನ್ನು ರಚಿಸಿದ್ದರೆಂದೂ ತಿಳಿದುಬರುತ್ತದೆ. ಮೊದಮೊದಲಿಗೆ ಸದಾಶಿವೇಂದ್ರರು ತರ್ಕಕ್ಕೆ ಒಲಿದವರು; ವಾದ-ವಿವಾದವೆಂದರೆ ಪ್ರಿಯವಾದ ಹವ್ಯಾಸ; ವಾಚಾಳಿ. ಒಮ್ಮೆ ಗುರುಗಳು ಬೇಸರಗೊಂಡು ''ಸದಾಶಿವ, ಸುಮ್ಮನಿರಲು ಎಂದು ಕಲಿತುಕೊಳ್ಳುವೆಯೋ?'' ಎಂದರಂತೆ. ''ಇಂದಿನಿಂದಲೇ, ಗುರುಗಳೆ!'' ಎಂದವರು ಅಂದಿನಿಂದ ಮೌನವ್ರತಧಾರಣೆ ಮಾಡಿಬಿಟ್ಟರಂತೆ; ಕಡೆಯವರೆಗೆ ಇದನ್ನು ಬಿಡಲಿಲ್ಲ. ಆದರೆ ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಬ್ರಹ್ಮಸೂತ್ರವೃತ್ತಿ, ಯೋಗಸುಧಾಕರ, ಕೈವಲ್ಯಾಮೃತಬಿಂದು (ಉಪನಿಷತ್ತುಗಳ ಮೇಲೆ), ಸಿದ್ಧಾಂತಕಲ್ಪವಲ್ಲಿ (ಅಪ್ಪಯದೀಕ್ಷಿತರ ಸಿದ್ಧಾಂತಲೇಶಸಂಗ್ರಹದ ಪದ್ಯರೂಪ), ಮನೋನಿಯಮನ (ಹದಿಮೂರು ಶ್ಲೋಕಗಳಲ್ಲಿ) ಮೊದಲಾದುವು ಪಂಡಿತರ ವಲಯದಲ್ಲಿ ಪ್ರಸಿದ್ಧವಾಗಿವೆ. ಅವರ 'ಆತ್ಮವಿದ್ಯಾವಿಲಾಸ' ಪಂಡಿತರಿಗೂ ಯೋಗಿಗಳಿಗೂ ಸಾಧಕರಿಗೂ ಸಿದ್ಧರಿಗೂ ಪ್ರಿಯವಾದುದು.

ಅವರು ಶಾಸ್ತ್ರಪರಿಚರ್ಯೆಯನ್ನು ಕೈಬಿಟ್ಟು ಸಾಧನೆಗೆ ಇಳಿದರು. ಬರುಬರುತ್ತ ತೀವ್ರ ವಿರಕ್ತಿ ಅಡರಿ ಅವಧೂತರಾಗಿಬಿಟ್ಟರು. ಬರಿ ಬೆತ್ತಲೆ; ಮೈಮೇಲೆ ಪರಿವೆಯಿಲ್ಲದೆ, ಹೊರಗಣ ಅರಿವಿಲ್ಲದೆ, ಸಂನ್ಯಾಸಧರ್ಮವನ್ನೂ ಪರಿಗಣಿಸದೆ, ಉನ್ಮತ್ತರಂತೆ. ಇರತೊಡಗಿದರು. ಕಾಡುಮೇಡುಗಳಲ್ಲಿ ಮನಬಂದಂತೆ ಅಲೆದಾಡುವರು; ಮರಗಳ ಕೆಳಗೆ ಕೂಡುವರು; ನದೀದಡದ ಮರಳ ಮೇಲೆ ಮಲಗುವರು. ಬಿಸಿಲು, ಚಳಿ, ಮಳೆ, ಗಾಳಿಯೆಂಬ ಭೇದವನ್ನೇ ಎಣಿಸದೆ ಹೊರಗೇ ಬರಿಮೈಯಲ್ಲೇ ಇರುವರು. ಸೂರಿನ ಕೆಳಗೆ ತಂಗುವವರಲ್ಲ; ಮನೆಗಳೊಳಗೆ ಬರುವವರಲ್ಲ; ಎಡೆಯಿಟ್ಟು ಕರೆದರೆ ಬರುವವರಲ್ಲ; ಯಾರೊಡನೆಯೂ ಮಾತಿಲ್ಲ ಕತೆಯಿಲ್ಲ. ಎಂದೂ, ಯಾವುದಕ್ಕೂ ಸಂತೋಷವೇ! 'ಬ್ರಹ್ಮೈವಾಹಂ ಕಿಲ ಸದ್ಗುರುಕೃಪಯಾ!' ಎಂಬುದೇ ಕಾರಣ. ಸಿದ್ಧಪುರುಷರೆಂದು ಎಲ್ಲರೂ ಗಮನಿಸತೊಡಗಿದರು. ಗುರುಗಳೂ ಮೆಚ್ಚಿಕೊಂಡರು.

ಒಮ್ಮೆ ಪರಮಶಿವೇಂದ್ರರ ಬಳಿ ಯಾರೋ ಬಂದು ''ನಿಮ್ಮ ಶಿಷ್ಯನಿಗೆ ಹುಚ್ಚು ಹಿಡಿದುಬಿಟ್ಟಿದೆ'' ಎಂದು ಹೇಳಲು ಅವರು ''ಅಯ್ಯೋ, ನನಗೆ ಹೀಗೆ ಹುಚ್ಚು ಹಿಡಿಯಲಿಲ್ಲವಲ್ಲ!'' ಎಂದು ದುಗುಡದಿಂದ ಅಂದುಕೊಂಡರಂತೆ. ಸಚ್ಚಿದಾನಂದಶಿವಾಭಿನವ ನೃಸಿಂಹಭಾರತಿಸ್ವಾಮಿಗಳು ಈ ಪ್ರಸಂಗವನ್ನು ಕುರಿತು ಹೀಗೆ ಬರೆದಿದ್ದಾರೆ.

ಉನ್ಮತ್ತವತ್ಸಂಚರತೀಹ ಶಿಷ್ಯ-
ಸ್ತವೇತಿ ಲೋಕಸ್ಯ ವಚಾಂಸಿ ಶೃಣ್ವನ್ ।
ಖಿದ್ಯನ್ನುವಾಚಾಸ್ಯ ಗುರುಃ ಪುರಾಹೋ
ಹ್ಯುನ್ಮತ್ತತಾ ಮೇ ನ ಹಿ ತಾದೃಶೀತಿ ॥

ತಮ್ಮ ನಂತರ ಶೃಂಗೇರಿಯ ಪೀಠವನ್ನಲಂಕರಿಸಿದ ತಮ್ಮ ಶಿಷ್ಯ ಚಂದ್ರಶೇಖರ ಭಾರತೀಸ್ವಾಮಿಗಳಿಗೂ ಹೀಗೆಯೇ ಹುಚ್ಚು ಹಿಡಿದಿದೆ ಎಂದು ಯಾರಾದರೂ ಅವರಿಗೆ ಹೇಳುವಂತಿದ್ದರೆ ಇದೇ ಮಾತನ್ನೇ ಮತ್ತೆ ಹೇಳುತ್ತಿದ್ದರು! ಅವಧೂತರ ಈ ದಿವ್ಯೋನ್ಮಾದ ಸಾಮಾನ್ಯರ ಎಣಿಕೆಗೆ ಸಿಗುವಂಥದಲ್ಲ.

ಸದಾಶಿವಬ್ರಹ್ಮೇಂದ್ರರು ಹೀಗೆ ಅವಧೂತರಾದರೂ ಆಗಾಗ ಗೋವಿಂದ ಪುರಕ್ಕೆ ಬಂದು ಬೋಧೇಂದ್ರಸದ್ಗುರುಗಳನ್ನೂ ತಿರುವಿಶೈನಲ್ಲೂರಿಗೆ ಬಂದು ಶ್ರೀಧರವೆಂಕಟೇಶ ಅಯ್ಯವಾಳ್ ಅವರನ್ನೂ ಕಂಡುಹೋಗುತ್ತಿದ್ದರು. ಆಗಲೂ ಮೌನವ್ರತವೇ; ಆದರೆ ಚೇತನಗಳ ಸತ್ಸಂಗ. ಭಜನಪದ್ಧತಿಯನ್ನು ಪುರಸ್ಕರಿಸಿದ ಅವರಿಬ್ಬರೂ ಸದಾಶಿವರಿಗೆ ''ಮೌನವ್ರತ ವ್ಯವಹಾರಕ್ಕಿರಲಿ, ಭಗವನ್ನಾಮ ಸಂಕೀರ್ತನೆಗೆ ಅಡ್ಡಿಯೇನು?'' ಎಂದು ಸೂಚಿಸಿದರಾಗಿ ಅವರು ಭಜನ ಪದ್ಧತಿಯಲ್ಲಿ ಹಲವಾರು ಕೀರ್ತನೆಗಳನ್ನು ರಚಿಸಿ ಹಾಡಲು ಮೊದಲು ಮಾಡಿದರು. ಉಳಿದಂತೆ ಯಾರೊಂದಿಗೂ ಮಾತುಕತೆಯಿಲ್ಲ. ಸಂಸ್ಕೃತದಲ್ಲೇ ಇರುವ ಈ ಕೀರ್ತನೆಗಳು ಭಜನಮಂಡಳಿಗಳಲ್ಲಿ ಇಂದಿಗೂ ಬಳಕೆಯಲ್ಲಿವೆ. ಇವುಗಳಲ್ಲಿ ರಾಮ, ಕೃಷ್ಣ — ಈ ದೇವತೆಗಳನ್ನು ಬ್ರಹ್ಮದ ಸಗುಣರೂಪಗಳೆಂದು ಎಣಿಸಿದ್ದಾರೆ. 'ಪಿಬ ರೇ ರಾಮರಸಂ', 'ಖೇಲತಿ ಮಮ ಹೃದಯೇ ರಾಮಃ', 'ಭಜರೇ ರಘುವೀರಂ', 'ಚೇತತಃ ಶ್ರೀರಾಮಂ', 'ಪ್ರತಿವಾರಂ ವಾರಂ ಮಾನಸ' — ಇವು ರಾಮನನ್ನು ಕುರಿತವು. 'ಸ್ಮರ ನಂದಕುಮಾರಂ', 'ಗಾಯತಿ ವನಮಾಲೀ ಮಧುರಂ', 'ಭಜ ರೇ ಗೋಪಾಲಂ ಮಾನಸ', 'ಭಜ ರೇ ಯದುನಾಥಂ ಮಾನಸ', 'ಕ್ರೀಡತಿ ವನಮಾಲೀ ಗೋಷ್ಠೇ' 'ಬ್ರೂಹಿ ಮುಕುಂದೇತಿ' — ಇವು ಕೃಷ್ಣನನ್ನು ಕುರಿತವು. ಬ್ರಹ್ಮ ಪರವಾದ ಕೀರ್ತನೆಗಳು 'ಸರ್ವಂ ಬ್ರಹ್ಮಮಯ ರೇ', 'ಖೇಲತಿ ಬ್ರಹ್ಮಾಂಡೇ ಭಗವಾನ್', 'ಮಾನಸ ಸಂಚರ ರೇ ಬ್ರಹ್ಮಣಿ', 'ತದ್ವಜ್ಜೀವತ್ವಂ ಬ್ರಹ್ಮಣಿ' ಮೊದಲಾದವು. ಒಟ್ಟು ಇಪ್ಪತ್ತೊಂದು ಅಥವಾ ಇಪ್ಪತ್ತೆರಡು ಕೀರ್ತನಗಳು ಅವರವು. 'ಪರಮಹಂಸ' ಎಂಬುದು ಅವರ ಮುದ್ರೆ.

ತಂಜಾವೂರಿನ ದೊರೆ ಶರಭೋಜಿಯು (೧೭೧೨-೧೭೨೮) ಅವರ ಬಳಿ ಬಂದಾಗ ಅವನಿಗೆ ತಮ್ಮ 'ಆತ್ಮ ವಿದ್ಯಾವಿಲಾಸ'ದ ಪ್ರತಿಯೊಂದನ್ನು ನೀಡಿ ಅನುಗ್ರಹಿಸಿದರು. ಪುದುಕ್ಕೊಟ್ಟೆಯ ಅರಸ ರಘುನಾಥ ತೊಂಡೈಮಾನ್ (೧೭೩೦-೧೭೬೯) ಅವರಲ್ಲಿ

ಭಕ್ತಿಯಿಂದ ನಡೆದುಕೊಂಡವನು. ಆದರೆ ಅವರು ಯಾರ ಹಂಗಿಗೂ ಸಿಗದೆ, ಯಾರ ಅಂಕೆಗೂ ಒಳಗಾಗದೆ, ಎಲ್ಲಿಯೂ ನೆಲೆಸದೆ, ಸ್ವತಂತ್ರರಾಗಿ ಸ್ವೇಚ್ಛೆಯಿಂದ ಅಲೆದಾಡುತ್ತಲೆ ಬದುಕನ್ನು ಸಾಗಿಸಿದರು. ಕಡೆಗಾಲದಲ್ಲಿ ನೆರೂರಿಗೆ ಬಂದು ಅಲ್ಲಿ ಕಾವೇರೀ ತೀರದಲ್ಲೇ ದೇಹವಿಟ್ಟರು. ಅವರ ಜೀವಸಮಾಧಿ ಇಂದಿಗೂ ಸಾಧಕರ ಯಾತ್ರಾಸ್ಥಳ ವಾಗಿದೆ. ಅವರು ಕಣ್ಮರೆಯಾದದ್ದು ಜ್ಯೇಷ್ಠಶುದ್ಧದಶಮೀ ದಿನ. ಲಕ್ಷ್ಮಾರ್ಚನೈಸ್ವಾಮಿ ಎಂಬುವವರು ೧೯೧೨ ರಿಂದ ಈ ಸಮಾಧಿ ಯಾದ ಮೇಲೆ ಒಂಬತ್ತನೆಯ ದಿನ ಅದೇ ಸ್ಥಳದಲ್ಲಿ ಬಿಲ್ವವೃಕ್ಷವೊಂದು ಕಾಣಿಸಿಕೊಂಡಿತಂತೆ. ಇಂದಿಗೂ ಅದು ಇದೆ. ಅದನ್ನು ಅವರ ಪ್ರತೀಕವೆಂದೇ ಭಾವಿಸಿ ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಹನ್ನೆರಡನೆಯ ದಿನ ಬಾಣಲಿಂಗವೊಂದು (ಕಾಶಿಯಿಂದ ತಂದದ್ದು) ಅವರ ಸಮಾಧಿಯಿಂದ ಹತ್ತು-ಹನ್ನೆರಡು ಅಡಿ ದೂರದಲ್ಲಿ ಪ್ರತಿಷ್ಠೆಗೊಂಡಿತು. ಪುದುಕ್ಕೋಟ್ಟೆಯ ದೊರೆ ರಘುನಾಥ ತೊಂಡೈಮಾನನೇ ಇದನ್ನು ನೆರವೇರಿಸಿದನಂತೆ.



ಇನ್ನು ಮುಂದೆ ಕಾಣಿಸಿರುವ 'ಆತ್ಮವಿದ್ಯಾವಿಲಾಸ'ವು ಆರ್ಯಾವೃತ್ತದಲ್ಲಿದ್ದು ಅರವತ್ತೆರಡು ಶ್ಲೋಕಗಳನ್ನೊಳಗೊಂಡಿದೆ. ಸರಳವಾದ ಸಂಸ್ಕೃತಭಾಷೆ; ವೈರಾಗ್ಯವೇ ವಿಷಯ. ಇದರ ಹೆಚ್ಚುಗಾರಿಕೆಯಿರುವುದು ಅದರಲ್ಲಿ ಉಲ್ಲೇಖ ಗೊಂಡಿರುವ ಅವಧೂತಚರ್ಯೆ. ಜೀವನ್ಮುಕ್ತರೂ ಸಿದ್ಧರೂ ಆದ ವಿರಕ್ತರು ವ್ಯವಹಾರವನ್ನೇ ದೂರ ಸರಿಸಿ, ಶಾಸ್ತ್ರವನ್ನೂ ಕೈಬಿಟ್ಟು, ಸಂಪ್ರದಾಯದ ಕಟ್ಟು- ಕಟ್ಟಳೆಗಳನ್ನೆಲ್ಲ ಬದಿಗೊತ್ತಿ, ದೇಹಧರ್ಮವನ್ನೂ ಕಡೆಗಣಿಸಿ ಉನ್ಮತ್ತರಂತೆ, ಪಿಶಾಚದಂತೆ, ಬಾಲಕರಂತೆ ಬದುಕುವ ಬಗೆಯೇ ಅವಧೂತಚರ್ಯೆ. ನಾಶರಹಿತವಾದ (ಅ), ಶ್ರೇಷ್ಠವಾದ ಸತ್‌ಸ್ವರೂಪದಲ್ಲೆ ನೆಲೆಗೊಂಡು (ವ), ಪಾಪವೇ ಮೊದಲಾದ ಎಲ್ಲ ಕಟ್ಟುಗಳನ್ನು ಕಳಚಿ ಬಿಸುಟು (ಧೂ), ಬ್ರಹ್ಮಸ್ವರೂಪವನ್ನು ತಿಳಿಯಹೇಳುವ 'ತತ್ತ್ವಮಸಿ' ಮೊದಲಾದ ವಾಕ್ಯಗಳಿಗೆ ನಿದರ್ಶನವಾಗಿ (ತ) ಇರುವುದು 'ಅವಧೂತ' ಎಂಬ ಮಾತಿನಲ್ಲಿರುವ ಧ್ವನಿಯೆಂದು ಒಕ್ಕಣೆಯಿದೆ. (ಅಕ್ಷರತ್ವಾತ್ ವರೇಣ್ಯತ್ವಾತ್ ಧೂತಪಾಪಾದಿಬಂಧನಾತ್ ತತ್ತ್ವಮಸ್ಯಾದಿ-ಲಕ್ಷ್ಯತ್ವಾತ್ ಅವಧೂತಃ ಪ್ರಕೀರ್ತಿತಃ)

★★★

# ಆತ್ಮವಿದ್ಯಾವಿಲಾಸ

## ಆದಿಗುರುಸ್ತುತಿ

**ಚಿನ್ಮುದ್ರಿತಕರಕಮಲಂ ಚಿಂತಿತಭಕ್ತೇಷ್ಟದಂ ವಿಮಲಮ್ ।**
**ಗುರುವರಮಾದ್ಯಂ ಕಂಚನ ನಿರವಧಿಕಾನಂದನಿರ್ಭರಂ ವಂದೇ ॥**

ಆದಿಗುರುವೆಂದರೆ ಜ್ಞಾನದಕ್ಷಿಣಾಮೂರ್ತಿ; ಶಿವನ ಲೀಲಾವತಾರಗಳಲ್ಲೊಂದು. ಬಲಗೈಯಲ್ಲಿ ವ್ಯಾಖ್ಯಾನಮುದ್ರೆ; ಎಡಗೈಯಲ್ಲಿ ವರದಾನಮುದ್ರೆ. ಮುಖದಲ್ಲಿ ಮೇರೆಯಿರದ ಮಂದಹಾಸ.

**ವಟತರುನಿಕಟನಿವಾಸಂ ಪಟುತರವಿಜ್ಞಾನಮುದ್ರಿತಕರಾಬ್ಜಮ್ ।**
**ಕಂಚನದೇಶಿಕಮಾದ್ಯಂಕೈವಲ್ಯಾನಂದಕಂದಲಂ ವಂದೇ ॥ ೧ ॥**

ಈ ಆದಿಗುರು ನೆಲೆಸಿರುವುದು ಆಲದ ಮರದಡಿಯಲ್ಲಿ. ಮೇಲೆ ಹೇಳಿದಂತೆ ಬಲಗೈಯಲ್ಲಿ ಚಿನ್ಮುದ್ರೆ. ಮುಕ್ತಿಯ ಆನಂದವು ಚಿಗುರೊಡೆದು ಹರಡಿಕೊಂಡಂತೆ ಇರುವ ಮೂರ್ತಿ.

## ಸ್ವಗುರುಸ್ತುತಿ

**ನಿರವಧಿಸಂಸೃತಿನೀರಧಿನಿಪತಿತಜನತಾರಣಸ್ಫುರನ್ನೌಕಾಮ್ ।**
**ಪರಮತಭೇದನಘುಟಿಕಾಂ ಪರಮಶಿವೇಂದ್ರಾರ್ಯಪಾದುಕಾಂ ನೌಮಿ ॥೨॥**

ಸಂಸಾರವೆಂಬ ಮೇರೆವರಿಯದ ಕಡಲಲ್ಲಿ ಬಿದ್ದು ತೊಳಲಾಡುವ ಮಂದಿಗೆ ದಡಹಾಯಿಸುವ ಹಡಗು, ಸದ್ಧರ್ಮದಿಂದ ಹೊರಗಾದವರನ್ನು ಎದುರಿಸುವ ಕಿಚ್ಚು, ಗುರು ಪರಮಶಿವೇಂದ್ರರ ಪಾದುಕೆ.

**ದೇಶಿಕಪರಮಶಿವೇಂದ್ರಾದೇಶವಶೋದ್ಬುದ್ಧದಿವ್ಯಮಹಿಮಾಽಹಮ್ ।**
**ಸ್ವಾತ್ಮನಿ ವಿಶ್ರಾಂತಿಕೃತೇ ಸರಸಂ ಪ್ರಸ್ತೌಮಿ ಕಿಂಚಿದಿದಮ್ ॥ ೩ ॥**

ಗುರು ಪರಮಶಿವೇಂದ್ರರ ಉಪದೇಶದಿಂದ ಹೊರಹೊಮ್ಮಿದ ಅಲೌಕಿಕ- ಮಹಿಮೆ ನನ್ನದು. ನನ್ನಲ್ಲಿಯೆ ನಾನು ನೆಲೆಸುವ ಬಯಕೆಯಿಂದ ಇದೊಂದು ಸಣ್ಣಕೃತಿಯನ್ನು ಸರಳವಾಗಿ ಹೇಳುತ್ತಿದ್ದೇನೆ.

## ಪರಮಾತ್ಮನ ಅಸ್ತಿತ್ವ

**ನಿರುಪಮನಿತ್ಯನಿರೀಹೋ ನಿಷ್ಕಲನಿರ್ಮಾಯನಿರ್ಗುಣಾಕಾರಃ ।**
**ವಿಗಲಿತಸರ್ವವಿಕಲ್ಪಃ ಶುದ್ಧೋ ಬುದ್ಧಶ್ಚಕಾಸ್ತಿ ಪರಮಾತ್ಮಾ ॥ ೪ ॥**

ಎಣೆಯಿಲ್ಲ, ಕೊನೆಯಿಲ್ಲ, ಬಯಕೆಯಿಲ್ಲ, ಕಳೆಗಳಿಲ್ಲ, ಮಾಯೆಯಿರದು, ಗುಣವಿರದು — ಇಂಥ ಆಕಾರವುಳ್ಳವನು ; ಯಾವೊಂದು ವಿಕಲ್ಪವೂ ತೋರಿಕೊಳ್ಳದು, ಶುದ್ಧ, ಬುದ್ಧ (ಎಂದರೆ ಅರಿವಿನಿಂದ ಕೂಡಿದವನು) ಎಲ್ಲೆಲ್ಲೂ ಬೆಳಗುತ್ತಿರುವ ಪರಮಾತ್ಮ.

**ಸ್ವಾವಿದ್ಯೈಕನಿಬದ್ಧಃ ಕುರ್ವನ್ಕರ್ಮಾಣಿ ಮುಹ್ಯಮಾನಃ ಸನ್ ।**
**ದೈವಾದ್ವಿಧೂತಬಂಧಃ ಸ್ವಾತ್ಮಜ್ಞಾನಾನ್ಮುನಿರ್ಜಯತಿ ॥ ೫ ॥**

ತನ್ನನ್ನು ತಾನು ಅರಿಯದೆ ಇರುವುದೇ ಬಂಧ; ಇದರಿಂದ ಒದಗುವುದು ಮೋಹ; ಇದರಿಂದಲೇ ಕರ್ಮಗಳಲ್ಲಿ ತೊಡಗುವುದು. ಈ ಕರ್ಮದ ಕಟ್ಟುಗಳು ಕಳಚಿ ಬೀಳುವುದು ತನ್ನನ್ನು ತಾನು ಅರಿತುಕೊಳ್ಳುವುದರಿಂದ. ಇದು ಸಾಮಾನ್ಯವಾಗಿ ಆಗದು; ಅದೃಷ್ಟದಿಂದ ಆದೀತು. ಹಾಗೆ ಆದವನೇ ಮುನಿ.

**ಮಾಯಾವಶೇನ ಸುಪ್ತೋ ಮಧ್ಯೇ ಪಶ್ಯನ್ ಸಹಸ್ರಶಃ ಸ್ವಪ್ನಾನ್ ।**
**ದೇಶಿಕವಚಃಪ್ರಬುದ್ಧೋ ದೀವ್ಯತ್ಯಾನಂದವಾರಿಧೌ ಕೋಽಪಿ ॥ ೬ ॥**

ಮಾಯೆಯ ಬಲದಿಂದ ಮಲಗಿ ನಿದ್ದೆಹೋದವನು, ನಡುನಡುವೆ ಸಾವಿರಾರು ಕನಸುಗಳನ್ನು ಕಾಣುತ್ತ ಇರುವವನು, ಗುರುವಿನ ಉಪದೇಶದಿಂದ ಎಚ್ಚೆತ್ತು ಆನಂದಸಾಗರದಲ್ಲಿ ಮುಳುಗುವವನು ಯಾವನೋ ಒಬ್ಬ!

**ಪ್ರಾಕೃತಭಾವಮಪಾಸ್ಯ ಸ್ವೀಕೃತನಿಜರೂಪಸಚ್ಚಿದಾನಂದಃ ।**
**ಗುರುವರಕರುಣಾಪಾಂಗಾತ್ ಗೌರವಮಾಸಾದ್ಯ ಮಾದ್ಯತಿ ಪ್ರಾಜ್ಞಃ ॥ ೭ ॥**

ಹುಟ್ಟಿನಿಂದ ಬಂದ ಲೌಕಿಕಪ್ರಸಕ್ತಿಯನ್ನು ತೊರೆದು, ಗುರುವಿನ ಕರುಣೆಯ ಕುಡಿನೋಟದಿಂದಾಗಿ ತನ್ನ ನಿಜರೂಪವಾದ ಇರವು, ಅರಿವು, ಆನಂದಗಳನ್ನು ಗ್ರಹಿಸಿಕೊಂಡು ಮನ್ನಣೆ ಪಡೆದುಕೊಂಡು ತಿಳಿವಳಿಕೆಯುಳ್ಳವನು ಸಂತೋಷದಿಂದಿರುವನು.

**ಶ್ರೀಗುರುಕೃಪಯಾ ಸಚ್ಚಿತ್ಸುಖನಿಜರೂಪೇ ನಿಮಗ್ನಧೀರ್ಮೌನೀ ।**
**ವಿಹರತಿ ಕಶ್ಚನ ವಿಬುಧಃ ಶಾಂತಾಹಂತೋ ನಿತಾಂತಮುದಿತಾಂತಃ ॥ ೮ ॥**

ಶ್ರೀಗುರುವಿನ ಕೃಪೆಯಿಂದ ಬುದ್ಧಿಯನ್ನು ಇರವು-ಅರಿವು-ಆನಂದ-ರೂಪವಾದ ಪರಬ್ರಹ್ಮ ವಸ್ತುವಿನಲ್ಲಿ ಮುಳುಗಿಸಿ, ನಾನು-ನನ್ನದೆಂಬ ಅಹಂಕಾರವನ್ನು ಅಡಗಿಸಿ, ಯಾರೊಂದಿಗೂ ಮಾತನಾಡದೆ ಸುಮ್ಮನಿದ್ದು, ತನ್ನಲ್ಲಿಯೇ ತಾನು ಒಳಗಣಸುಖವನ್ನು ಅನುಭವಿಸುತ್ತ ವಿಹರಿಸುವನು.

**ಗುರುವರಕರುಣಾಲಹರೀವ್ಯತಿಕರಭರಶೀತಲಸ್ವಾಂತಃ ।**
**ರಮತೇ ಯತಿವರ ಏಕೋ ನಿರುಪಮಸುಖಸೀಮನಿ ಸ್ವೈರಮ್ ॥ ೯ ॥**

ಗುರುವಿನ ಕರುಣೆಯೆಂಬ ಅಲೆಗಳು ಎಡೆಬಿಡದೆ ಬಡಿದು ಯತಿಯ ಒಳಗು ತಣ್ಣಗಾಗುತ್ತದೆ; ಎಣೆಯಿಲ್ಲದ ಆನಂದದ ಎಡೆಗೆ ಒಯ್ಯುತ್ತದೆ. ಇಲ್ಲಿ ಅವನು ಒಂಟಿಯಾಗಿ ತನ್ನಷ್ಟಕ್ಕೆ ತಾನು ಇದ್ದುಕೊಂಡು ಸುಖಪಡುವನು.

**ಶ್ರೀದೇಶಿಕವರಕರುಣಾರವಿಕರಸಮಪೋಹಿತಾಂತರಧ್ವಾಂತಃ ।**
**ವಿಹರನ್ಮಸ್ಕರಿವರ್ಯೋ ನಿರವಧಿಕಾನಂದನೀರಧಾವಾಸ್ತೇ ॥ ೧೦ ॥**

ಗುರುವಿನ ಕರುಣೆ ಸೂರ್ಯನಂತೆ; ಒಳಗಿನ ಕತ್ತಲೆಯನ್ನು ತೊಲಗಿಸುವ ಬೆಳಕು ಇದು. ಇದರಿಂದಾಗಿ ಯತಿಯು ಮೇರೆವರಿಯದ ಆನಂದಸಾಗರದಲ್ಲಿ ವಿಹರಿಸುತ್ತ ಇರುವನು.

**ಜನಿವಿಪರೀತಕ್ರಮತೋ ಬುದ್ಧ್ಯಾ ಪ್ರವಿಲಾಪ್ಯ ಪಂಚಭೂತಾನಿ ।**
**ಪರಿಶಿಷ್ಟಮಾತ್ಮತತ್ತ್ವಂ ಪಶ್ಯನ್ನಾಸ್ತೇ ಮುನಿಃ ಶಾಂತಃ ॥ ೧೧ ॥**

ದೇಹಕ್ಕೆ ಕಾರಣವಾದ ನೆಲ, ನೀರು, ಬೆಂಕಿ, ಗಾಳಿ, ಆಗಸಗಳೆಂಬ ಐದು ಭೂತಗಳನ್ನು ಅವು ತೋರಿಕೊಳ್ಳುವ ಕ್ರಮಕ್ಕೆ ವಿಪರೀತವಾದ ಕ್ರಮದಲ್ಲಿ, ಎಂದರೆ ಆಗಸವನ್ನು ಗಾಳಿಯಲ್ಲಿ, ಗಾಳಿಯನ್ನು ಬೆಂಕಿಯಲ್ಲಿ, ಬೆಂಕಿಯನ್ನು ನೀರಲ್ಲಿ, ನೀರನ್ನು ನೆಲದಲ್ಲಿ ಅಡಗಿಸಿದಾಗ ಉಳಿಯುವುದೇ ಆತ್ಮತತ್ತ್ವ; ಪಂಚಭೂತಗಳಲ್ಲದ್ದು. ಅದನ್ನು ಕಂಡುಕೊಂಡ ಮುನಿಯು ಲೌಕಿಕಪ್ರಸಕ್ತಿಯಿಲ್ಲದೆ ಶಾಂತನಾಗಿರುತ್ತಾನೆ.

**ಜಗದಖಿಲಮಿದಮಸಾರಂ ಮಾಯಿಕಮೇವೇತಿ ಮನಸಿ ಮನ್ವಾನಃ ।**
**ಪರ್ಯಟತಿ ಪಾಟಿತಾಶಃ ಪ್ರಗಲಿತಮದಮಾನಮತ್ಸರಃ ಕೋಽಪಿ ॥ ೧೨ ॥**

ಈ ಎಲ್ಲ ಜಗತ್ತೂ ಅಸಾರವಾದುದು, ಮಾಯೆಯಿಂದ ತೋರಿಕೊಂಡದ್ದು ಎಂಬುದನ್ನು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡು, ತನ್ನೆಲ್ಲ ಬಯಕೆಗಳನ್ನೂ ತರಿದುಹಾಕಿ, ಮದ-ಮಾನ-ಮತ್ಸರ ಮೊದಲಾದುವನ್ನು ದೂರಮಾಡಿ, ಯಾವನೋ ಒಬ್ಬ ಮುನಿಯು ಗೊತ್ತುಗುರಿಯಿಲ್ಲದೆ ಮನಬಂದಂತೆ ಅಲೆದಾಡುವನು.

**ನಾತ್ಮನಿ ಕಿಂಚಿನ್ಮಾಯಾ ತತ್ಕಾರ್ಯಂ ವಾಽಸ್ತಿ ವಸ್ತುತೋ ವಿಮಲೇ ।**
**ಇತಿ ನಿಶ್ಚಯವಾನ್ ಅಂತರ್ಹೃಷ್ಯತಿ ಆನಂದನಿರ್ಭರೋ ಯೋಗೀ ॥ ೧೩ ॥**

ಆತ್ಮವಸ್ತುವಿನಲ್ಲಿ ದಿಟವಾಗಿ ಮಾಯೆಯ ಲವಲೇಶವೂ ಇರದು, ಮಾಯೆಯ ಕಾರ್ಯವಾದ ಈ ಜಗತ್ತೂ ಇರದು. ಇದನ್ನು ಗಟ್ಟಿಮಾಡಿಕೊಂಡ ಯೋಗಿಯು ತನ್ನೊಳಗನ್ನು ಆನಂದದಿಂದ ತುಂಬಿಕೊಂಡು ಸುಖಿಸುವನು.

**ತ್ವಮಹಮಭಿಮಾನಹೀನೋ ಮೋದಿತನಾನಾಜನಾಚಾರಃ ।**
**ವಿಹರತಿ ಬಾಲವದೇಕೋ ವಿಮಲಸುಖಾಂಭೋನಿಧೌ ಮಗ್ನಃ ॥ ೧೪ ॥**

ನೀನು-ನಾನು ಎಂಬ ಅಭಿಮಾನದ ಕಲ್ಪನೆಗಳನ್ನು ಕೈಬಿಟ್ಟು, ಹಲವು ಜನರ ನಡಾವಳಿಗಳನ್ನು ಕಂಡು ನಗುತ್ತ, ತನ್ನೊಳಗೇ ನಿರ್ಮಲವಾದ ಆನಂದವೆಂಬ ಕಡಲಲ್ಲಿ ಮುಳುಗಿ, ಒಂಟಿಯಾಗಿ ಸಣ್ಣ ಹುಡುಗನಂತೆ ಇವನು ವಿಹರಿಸುತ್ತ ಇರುವನು.

**ಅವಧೂತಕರ್ಮಜಾಲೋ ಜಡಬಧಿರಾಂಧೋಪಮಃ ಕೋಽಪಿ ।**
**ಆತ್ಮಾರಾಮೋ ಯತಿರಾಡಟವೀಕೋಣೇಷ್ವಟನ್ನಾಸ್ತೇ ॥ ೧೫ ॥**

ಕರ್ಮದ ಬಲೆಯನ್ನು ಕಿತ್ತೊಗೆದು, ಜಡನಂತೆ ಕಿವುಡನಂತೆ ಕುರುಡನಂತೆ ಇರುವ ಈ ಒಬ್ಬಾನೊಬ್ಬ ಯತಿರಾಜನು ತನ್ನೊಳಗೇ ತಾನು ಸಂತೋಷವಾಗಿರುತ್ತ, ಅಡವಿಯ ಮೂಲೆಮೂಲೆಗಳಲ್ಲಿ ಅಲೆದಾಡುತ್ತಲಿರುವನು.

**ಶಾಂತ್ಯಾ ದೃಢೋಪಗೂಢಃ ಶಾಂತಸಮಸ್ತಾನ್ಯವೇದನೋದಾರಃ ।**
**ರಮತೇ ರಸಜ್ಞ ಏಕೋ ರಮ್ಯೇ ಸ್ವಾನಂದಪರ್ಯಂಕೇ ॥ ೧೬ ॥**

ಶಾಂತಿಯಿಂದ ತನ್ನನ್ನು ತಾನು ಕಾಪಿಟ್ಟುಕೊಂಡು, ಶಾರೀರಿಕವಾದ ಬಯಕೆಗಳೆಲ್ಲವನ್ನೂ ಅಡಗಿಸಿಕೊಂಡು, ತನ್ನೊಳಗಣ ಆನಂದವೆಂಬ ಮಂಚವನ್ನೇರಿ, ಒಂಟಿಯಾಗಿ ಮುಕ್ತಿಯ ರಸವನ್ನು ಅರಿತು ಸುಖಪಡುವನು.

**ಉನ್ಮೂಲಿತವಿಷಯಾರಿಃ ಸ್ವೀಕೃತವೈರಾಗ್ಯಸರ್ವಸ್ವಃ ।**
**ಸ್ವಾತ್ಮಾನಂದಮಹಿಮ್ನಿ ಸ್ವಾರಾಜ್ಯೇಽಸ್ಮಿನ್ ವಿರಾಜತೇ ಯತಿರಾಟ್ ॥ ೧೭ ॥**

ಈ ಯತಿರಾಜನು ಇಂದ್ರಿಯವಿಷಯಗಳೆಂಬ ಶತ್ರುಗಳ ಹುಟ್ಟಡಗಿಸಿ, ವೈರಾಗ್ಯವೇ ತನ್ನ ಆಸ್ತಿಯೆಂದು ಬಗೆದು, ತನ್ನ ಆತ್ಮವೆಂಬ ಆನಂದದ ಹಿರಿತನದಲ್ಲಿ ನಿಂತು, ತನ್ನದೇ ರಾಜ್ಯದಲ್ಲಿ ಬೇರೊಂದರ ಬೇರೊಬ್ಬರ ಅಂಕೆಯಿರದೆ ಬೆಳಗುವನು.

**ಸವಿತರ್ಯಪಿ ಶೀತರುಚೌ ಚಂದ್ರೇ ತೀಕ್ಷ್ಣೇಽಪ್ಯಧೋ ವಹತ್ಯಗ್ನೌ ।**
**ಮಾಯಿಕಮಿದಮಿತಿ ಜಾನನ್ ಜೀವನ್ಮುಕ್ತೋ ನ ವಿಸ್ಮಯೀ ಭವತಿ ॥ ೧೮ ॥**

ಸೂರ್ಯನ ಕಿರಣಗಳು ತಣ್ಣಗಿರಲಿ, ಚಂದ್ರನ ಕಿರಣಗಳು ಸುಡುತ್ತಿರಲಿ, ಬೆಂಕಿಯು ಕೆಳಮುಖನಾಗಿ ಉರಿಯಲಿ — ಯತಿಗೆ ಇದೇನು ಸೋಜಿಗವೆನಿಸುವುದಿಲ್ಲ, ಇವೆಲ್ಲವೂ ಮಾಯೆ ಎಂಬುದನ್ನು ಅರಿತು ಜೀವನ್ಮುಕ್ತನಾದವನು ಸುಮ್ಮನಿರುತ್ತಾನೆ.

**ಅಜ್ಞಾನವೈರಿವಿಜಯೀ ಪ್ರಜ್ಞಾಮಾತಂಗಮಸ್ತಕಾರೂಢಃ ।**
**ವಿಹರತಿ ಸಂಯಮಿರಾಜಃ ಸಮರಸಸುಖಧಾಮ್ನಿ ಸರ್ವತೋ ರಮ್ಯೇ ॥೧೯॥**

ಅಜ್ಞಾನವೆಂಬ ಹಗೆಯನ್ನು ಗೆದ್ದು, ಜ್ಞಾನವೆಂಬ ಆನೆಯ ತಲೆಯನ್ನೇರಿ, ಸಂಯಮಿಯಾದ ಈ ಯತಿಯು ಎತ್ತೆತ್ತಲೂ ಚೆಲುವಾಗಿರುವ ಸಮರಸವೆಂಬ ಸುಖದ ನೆಲೆಯಲ್ಲಿ ವಿಹರಿಸುವನು. ಸುಖವೆಂದರೆ ಹಿಗ್ಗುವುದಿಲ್ಲ, ದುಃಖವೆಂದರೆ ಕುಗ್ಗುವುದಿಲ್ಲ; ಲಾಭವೂ ಒಂದೇ ನಷ್ಟವೂ ಒಂದೇ. ತನಗೆ ಹಿತವರಿಲ್ಲ ಹಗೆಗಳಿಲ್ಲ, ಎಲ್ಲರೂ ಒಂದೇ. ಇದು ಸಮರಸ.

**ಶಾಂತಾಹಂಕೃತಿದೋಷಃ ಸುಸಮಾಹಿತಮಾನಃ ಕೋಽಪಿ ।**
**ಪೂರ್ಣೇಂದುಶಿಶಿರಭಾವೋ ರಾಜತ್ಯಾನಂದಸತ್ಯಚಿದ್ರಸಿಕಃ ॥ ೨೦ ॥**

ತಾನು-ತನ್ನದೆಂಬ ದೋಷಗಳನ್ನಡಗಿಸಿ, ಮನಸ್ಸನ್ನು ಕದಲದಂತೆ ಒಂದೆಡೆ ನಿಲ್ಲಿಸಿ, ಉದ್ವೇಗಕ್ಕೊಳಗಾಗದೆ, ಪೂರ್ಣಚಂದ್ರನಂತೆ ತಣ್ಣಗೆ ಬೆಳಗುತ್ತ ಸಚ್ಚಿದಾನಂದ ರಸಿಕನೊಬ್ಬಾನೊಬ್ಬನು ಕಂಗೊಳಿಸುವನು.

**ತಿಷ್ಠನ್ ಪರತ್ರಧಾಮ್ನಿ ಸ್ವೀಯಸುಖಾಸ್ವಾದಪರವಶಃ ಕಶ್ಚಿತ್ ।**
**ಕ್ವಾಽಪಿ ಧ್ಯಾಯತಿ ಕುಹಚಿದ್ಗಾಯತಿ ಕುತ್ರಾಪಿ ನೃತ್ಯತಿ ಸ್ವೈರಮ್ ॥ ೨೧ ॥**

ಎಲ್ಲಕ್ಕಿಂತ ಮಿಗಿಲಾದ ಪರಬ್ರಹ್ಮದ ನೆಲೆಯಲ್ಲಿ ನಿಂತು, ತನ್ನೊಳಗಣ ಆತ್ಮಾನಂದವನ್ನೆ ಸವಿಯುತ್ತ ಈ ಯೋಗಿಯು ಎಲ್ಲಿಯೋ ಧ್ಯಾನಕ್ಕೆ ಕೂಡುವನು, ಎಲ್ಲಿಯೋ ಹಾಡಿಕೊಳ್ಳುವನು, ಎಲ್ಲಿಯೋ ಕುಣಿಯುವನು, ಮನಬಂದಂತೆ ಇರುವನು.

**ಅಗೃಹೀತಾಘಕಲಂಕಃ ಪ್ರಶಮಿತಸಂಕಲ್ಪವಿಭ್ರಮಃ ಪ್ರಾಜ್ಞಃ ।**
**ನ್ಯಕ್ಕೃತಕಾರ್ಯಕಲಾಪಃ ತಿಷ್ಠತ್ಯಾಪೂರ್ಣಸೀಮನಿ ಕ್ವಾಪಿ ॥ ೨೨ ॥**

ಪಾಪದ ಕೊಳೆಯನ್ನು ಎಷ್ಟು ಮಾತ್ರಕ್ಕೂ ಹಚ್ಚಿಕೊಳ್ಳದೆ, ತನ್ನೆಲ್ಲ ಬಯಕೆಗಳನ್ನೂ ಗೊಂದಲಗಳನ್ನೂ ಚೆನ್ನಾಗಿ ಅಡಗಿಸಿಕೊಂಡು, ಕರ್ತವ್ಯಗಳ ಹೊರೆಯನ್ನು ಹೊರದೂಡಿ, ಈ ಜ್ಞಾನಿಯು ಎಲ್ಲಿಯೋ ತನ್ನೊಳಗಣ ಕೃತಾರ್ಥತೆಯ ಬೀಡಿನಲ್ಲಿ ನಿಲ್ಲುವನು.

**ಚಪಲಂ ಮನಃಕುರಂಗಂ ಚಾರು ಗೃಹೀತ್ವಾ ವಿಮರ್ಶವಾಗುರಯಾ ।**
**ನಿಗಮಾರಣ್ಯವಿಹಾರಶ್ರಾಂತಃ ಶೇತೇ ಸ್ವಧಾಮ್ನಿ ಕೋಽಪ್ಯೇಕಃ ॥ ೨೩ ॥**

ಒಂದೆಡೆ ನಿಲ್ಲದೆ ಅಲೆದಾಡುವ ಮನಸ್ಸೆಂಬ ಜಿಂಕೆಯನ್ನು ಎಚ್ಚರವಾದ ವಿಚಾರವೆಂಬ ಬಲೆಯಲ್ಲಿ ಹಿಡಿದು, ವೇದವೆಂಬ ವನದಲ್ಲಿ ವಿಹರಿಸುತ್ತ ಬಳಲಿ, ಒಬ್ಬಾನೊಬ್ಬ ಯತಿಯು ತನ್ನೊಳಗೇ ನೆಲೆಗೊಂಡು ಮಲಗಿ ನಿದ್ರೆಮಾಡುವನು.

**ದಾರುಣಚಿತ್ತವ್ಯಾಘ್ರಂ ಧೀರಮನಃ ಖಡ್ಗಧಾರಯಾ ಹತ್ವಾ ।**
**ಅಭಯಾರಣ್ಯೇ ಕೋಽಪಿ ಸ್ವೈರವಿಹಾರೀ ಜಯತ್ಯೇಕಃ ॥ ೨೪ ॥**

ಮನಸ್ಸೆಂಬುದೊಂದು ದೊಡ್ಡ ಹುಲಿ; ಅದನ್ನು ಧೀರಮನಸ್ಸೆಂಬ ಕತ್ತಿಯಿಂದ ಹೊಡೆದು ಕೊಂದು, ಬೆದರಿಕೆಯನ್ನು ಬಡಿದೋಡಿಸಿದ ಅಡವಿಯಲ್ಲಿ ಒಬ್ಬಾನೊಬ್ಬನು ಮನಬಂದಂತೆ ಒಂಟಿಯಾಗಿ ಅಲೆದಾಡುವನು.

**ಸಜ್ಜನಹೃದಯಸರೋಜೋನ್ಮೀಲನಕರಧೀಕರಪ್ರಸರಃ ।**
**ಏಕೋ ಯತಿವರಪೂಷಾ ನಿರ್ದೋಷಶ್ಚರತಿ ಚಿದ್ಗಗನೇ ॥ ೨೫ ॥**

ಒಳ್ಳೆಯ ಜನರ ಹೃದಯಕಮಲವನ್ನರಳಿಸುವ ಕಿರಣಗಳನ್ನು ಎಲ್ಲೆಡೆ ಹರಡುತ್ತ, ಯಾವೊಂದು ಕೊಳೆಯಾಗಲಿ ಕಳಂಕವಾಗಲಿ ಇರದೆ ಈ ಯತಿಯೆಂಬ ಸೂರ್ಯನು ಒಂಟಿಯಾಗಿ ತನ್ನೊಳಗಣ ಅರಿವೆಂಬ ಆಗಸದಲ್ಲಿ ಮುಂದೆಮುಂದೆ ಸರಿಯುವನು.

**ಕುವಲಯವಿಕಾಸಕಾರಣಮಜ್ಞಾನಧ್ವಾಂತಕೌಮುದೀಪ್ರಜ್ಞಃ ।**
**ಶುದ್ಧೋ ಮುನೀಂದ್ರಚಂದ್ರಃ ಸುರಸೇವ್ಯೇ ಲಸತಿ ವಿಷ್ಣುಪದೇ ॥ ೨೬ ॥**

ನೈದಿಲೆಯನ್ನರಳಿಸಿ, ಅಜ್ಞಾನವೆಂಬ ಕತ್ತಲೆಯನ್ನು ಜ್ಞಾನವೆಂಬ ಬೆಳದಿಂಗಳಿಂದ ಓಡಿಸಿ, ಪರಿಶುದ್ಧನಾದ ಈ ಮುನಿಯು ಚಂದ್ರನಂತೆ ಆಗಸದಲ್ಲಿ ಬೆಳಗುವನು.

**ಸ್ವಾನಂದಾಮೃತಸೇಕೈಃ ಅಂತರಸಂತಾಪಸಂತತಿಂ ಶಮಯನ್ ।**
**ಚಿತ್ರಮಚಂಚಲವೃತ್ತಿಶ್ಚಿದ್ವ್ಯೋಮನಿ ಭಾತಿ ಯೋಗಿವರ್ಯಘನಃ ॥ ೨೭ ॥**

ತನ್ನೊಳಗಣ ಆನಂದದ ಅಮೃತವರ್ಷದಿಂದ ಒಳಗಣ ಬೇಗೆಗಳನ್ನೆಲ್ಲ ಅಡಗಿಸಿ, ಸ್ಥಿರವಾದ ಮನಸ್ಸಿನ ಈ ಯೋಗಿಯೆಂಬ ಮೋಡವು ಅರಿವಿನ ಆಗಸದಲ್ಲಿ ಕಂಗೊಳಿಸುತ್ತಿದೆ.

**ಸುಮನಃ ಸೌರಭಮಂಜುಲಸಂಚಾರನಿವಾರಿತಾಖಿಲಶ್ರಾಂತಿಃ ।**
**ಸಂಯಮಿಚಾರುಸಮೀರೋ ವಿಹರತ್ಯಾನಂದಸಂವಿದಾರಾಮೇ ॥ ೨೮ ॥**

ಹೂಗಳ ಸುಗಂಧವನ್ನೊಳಗೊಂಡು, ಎಲ್ಲ ಆಯಾಸವನ್ನೂ ಕಳೆಯುವಂತೆ ಮೆಲ್ಲಗೆ ಬೀಸುತ್ತ; ಈ ಯತಿಯೆಂಬ ತಿಳಿಗಾಳಿಯು, ಆನಂದದ ಅರಿವೆಂಬ ಉದ್ಯಾನದಲ್ಲಿ ಬೀಸುತ್ತಿದೆ.

**ನಿಃಶ್ರೇಯಸಸರಸಫಲೇ ನಿರ್ಮಲವಿಜ್ಞಾನಪಲ್ಲವಮನೋಜ್ಞೇ ।**
**ವೀತಭಯೇ ವಿಪಿನತಲೇ ಯತಿಶಿತಿಕಂಠೋ ವಿಭಾತಿ ಕೋऽಪ್ಯೇಕಃ ॥ ೨೯ ॥**

ಮುಕ್ತಿಯೆಂಬ ಹಣ್ಣು, ನಿರ್ಮಲಜ್ಞಾನವೆಂಬ ಚಿಗುರು ಇಂಥವನ್ನುಳ್ಳ ಮರಗಳಿಂದ ತುಂಬಿ ಚೆಲುವಾದ ನಿರ್ಭಯವಾದ ಕಾಡಿನಲ್ಲಿ, ಈ ಯತಿಯೆಂಬ ನವಿಲು ಒಂಟಿಯಾಗಿ ನಲಿದಾಡುತ್ತಿದೆ.

**ನಿಸ್ಸಾರಭುವನಮರುತಲಮುತ್ಸಾರ್ಯಾನಂದಸಾರರಸಪೂರ್ಣೇ ।**
**ವರಸರಸಿ ಚಿನ್ಮಯೇಽಸ್ಮಿನ್ ಪರಹಂಸಃ ಕೋಽಪಿ ದೀವ್ಯತಿ ಸ್ವೈರಮ್ ॥೩೦॥**

ಸಾರವಿರದ ಪ್ರಾಪಂಚಿಕ ಮರುಭೂಮಿಯನ್ನು ತೊರೆದು, ಆನಂದದ ಸಾರವೆಂಬ ರಸದಿಂದ ತುಂಬಿದ ಅರಿವೆಂಬ ಕಾಸಾರದಲ್ಲಿ ಮನಬಂದಂತೆ ತೇಲಾಡುವ ಪರಮಹಂಸನೇ ಈ ಒಬ್ಬಾನೊಬ್ಬ ಯತಿಯು.

**ನಿಖಿಲಾಗಮಪಲ್ಲವಿತೇ ನಿಗಮಶಿರಸ್ತಂತ್ರಶೀತಲೋದ್ಯಾನೇ ।**
**ಮಧುರತರಮಂಜುವಾಚಃ ಕೂಜನ್ನಾಸ್ತೇ ಯತೀಂದ್ರಕಲಕಂಠಃ ॥ ೩೧ ॥**

ವೇದಗಳೆಲ್ಲ ಚಿಗುರು, ಉಪನಿಷತ್ತುಗಳು ಮತ್ತು ವೇದಾಂತಸೂತ್ರ ಇವುಗಳೇ ಹೂಗಳಾಗಿ ತಂಪಾಗಿರುವ ತೋಟದಲ್ಲಿ, ಇಂಪಾಗಿ ಕೂಗುತ್ತಿರುವ ಕೋಗಿಲೆ ಈ ಯತಿಯೇ.

**ದಾರಿತಮೋಹಮದೇಭೋ ದೂರೀಕೃತಸಕಲದುರಿತಶಾರ್ದೂಲಃ ।**
**ವಿಬುಧೋತ್ತಮಸಿಂಹವರೋ ವಿಹರತ್ಯಾನಂದವಿತತಕಾಂತಾರೇ ॥ ೩೨ ॥**

ಮೋಹವೆಂಬ ಮದಿಸಿದ ಆನೆಯನ್ನು ಸೀಳಿ, ಪಾಪವೆಂಬ ಹುಲಿಯನ್ನು ದೂರಕ್ಕಟ್ಟಿ, ಜ್ಞಾನಿಗಳಲ್ಲಿ ಉತ್ತಮನಾದ ಯತಿಯು ಸಿಂಹದಂತೆ ಆನಂದವು ಹರಡಿರುವ ಕಾಡಿನಲ್ಲಿ ಕಂಗೊಳಿಸುವನು.

**ಅಜ್ಞಾನಮೃಗವರೋಜ್ಝಿತವಿಜ್ಞಾನೋತ್ತುಂಗಶೃಂಗಶಿಖರಿತಲೇ ।**
**ಮತಿಸಲಿಲಶೀತಲಾಂಗೋ ಯತಿಮದಕಲಭೋ ವಿರಾಜತೇ ವಿಹರನ್ ॥೩೩॥**

ಅಜ್ಞಾನವೆಂಬ ಸಿಂಹದಿಂದ ದೂರಮಾಡಲ್ಪಟ್ಟು, ಜ್ಞಾನವೆಂಬ ಬೆಟ್ಟದ ತುದಿಯಲ್ಲಿ ಬುದ್ಧಿಯೆಂಬ ತಣ್ಣನೆಯ ನೀರಿನ ಕೊಳದಲ್ಲಿ ವಿಹರಿಸುತ್ತಿರುವ ಮದದಾನೆ ಈ ಯತಿಯೇ.

**ನಾಸಾಂಚಲನಿಹಿತಾಕ್ಷೋ ನಾಮಾದಿಭ್ಯೋ ನಿವರ್ತಿತಸ್ವಾಂತಃ ।**
**ತಟಿನೀತಟೇಷು ತತ್ತ್ವಂ ಧ್ಯಾಯನ್ನಾಸ್ತೇ ಯತಿಃ ಕೋಽಪಿ ॥ ೩೪ ॥**

ಮೂಗಿನ ತುದಿಯಲ್ಲಿ ನೆಟ್ಟ ನೋಟ, ನಾಮರೂಪಾದಿಗಳಿಂದ ಹಿಂದಿರುಗಿಸಲ್ಪಟ್ಟ ಒಳಗು, ಹೀಗಿರುವ ಯಾವನೋ ಒಬ್ಬ ಯತಿಯು ನದಿಗಳ ದಡದಲ್ಲಿ ತತ್ತ್ವಚಿಂತನೆ ಮಾಡುತ್ತ ಧ್ಯಾನದಲ್ಲಿ ತೊಡಗಿದ್ದಾನೆ.

**ಆಶಾವಸಾನೋ ಮೌನೀ ನೈರಾಶ್ಯಾಲಂಕೃತಃ ಶಾಂತಃ ।**
**ಕರತಲಭಿಕ್ಷಾಪಾತ್ರಃ ತರುತನಿಲಯೋ ಮುನಿರ್ಜಯತಿ ॥ ೩೫ ॥**

ದಿಕ್ಕುಗಳೇ ಅವನ ಬಟ್ಟೆ, ಆಶೆಯನ್ನು ಬಿಟ್ಟಿರುವುದೇ ಅವನ ಅಲಂಕಾರ, ಕೈಯಲ್ಲಿ ಭಿಕ್ಷಾಪಾತ್ರೆ, ಮರದ ಅಡಿಯಲ್ಲಿ ಅವನ ವಾಸ; ಆದರೂ ಶಾಂತವಾಗಿದ್ದಾನೆ, ಯಾರೊಂದಿಗೂ ಮಾತನಾಡದೆ ಸುಮ್ಮನಿದ್ದಾನೆ. ಇಂಥ ಮುನಿಯು ಗೆಲುವಾಗಿದ್ದಾನೆ.

**ವಿಜನನದೀಕುಂಜಗೃಹೇ ಮಂಜುಲಪುಲಿನೈಕಮಂಜುತರತಲ್ಪೇ ।**
**ಶೇತೇ ಕೋಽಪಿ ಯತೀಂದ್ರಃ ಸಮರಸುಖಬೋಧವಸ್ತುನಿಸ್ತಂದ್ರಃ ॥ ೩೬ ॥**

ನಿರ್ಜನವಾದ ನದಿಗಳ ದಡದಲ್ಲಿ, ಮರಗಿಡಗಳ ಒತ್ತುಮನೆಗಳಲ್ಲಿ ನದಿಯ ಅಂಚಿನ ಮರಳು ಹರವಿನ ಮೇಲೆ ಒಬ್ಬಾನೊಬ್ಬ ಯತಿಯು ಎಲ್ಲದರಲ್ಲಿಯೂ ಆತ್ಮನನ್ನೇ ಕಾಣುತ್ತ ಸಂತೋಷವಾಗಿ ಎಚ್ಚರದಲ್ಲೆ ಮಲಗಿರುವನು.

**ಭೂತಲಮೃದುತರಶಯ್ಯಃ ಶೀತಲವಾತೈಕಚಾಮರಃ ಶಾಂತಃ ।**
**ರಾಕಾಹಿಮಕರದೀಪೋ ರಾಜತಿ ಯತಿರಾಜಶೇಖರಃ ಕೋಽಪಿ ॥ ೩೭ ॥**

ಬರಿಯ ನೆಲವೇ ಅವನಿಗೆ ಮೃದುವಾದ ಹಾಸಿಗೆ, ತಣ್ಣಗೆ ಬೀಸುವ ಗಾಳಿಯೇ ಬೀಸಣಿಕೆ, ಹುಣ್ಣಿಮೆಯ ಚಂದ್ರನೇ ದೀಪ. ಈ ಯತಿಗೆ ಇನ್ನೇನು ಬೇಕು? ಕಳೆಕಳೆಯಿಂದ ಬೆಳಗುವನು.

**ವಿಪುಲಶಿಲಾತಲಫಲಕೇ ವಿಮಲಸರಿದ್ವಾರಿಪರಿವೃತೋದಾರೇ ।**
**ಮಂದಂ ಮಲಯಜಪವನೇ ವಾತಿ ಪ್ರಸ್ವಪಿತಿ ಕೋಽಪಿ ಯತಿರಾಜಃ ॥೩೮॥**

ನಿರ್ಮಲವಾದ ನದಿಯ ನೀರು ಜುಳುಜುಳು ಹರಿಯುತ್ತಿರಲು, ಅದರ ದಂಡೆಯ ಮೇಲೆ ದೊಡ್ಡದೊಂದು ಹಾಸುಗಲ್ಲಿನ ಬಂಡೆಯ ಮೇಲೆ ಈ ಯತಿಯು ಮಲಗಿದ್ದಾನೆ; ದಕ್ಷಿಣ ದಿಕ್ಕಿನಿಂದ ಬೀಸುವ ಮಲಯಮಾರುತವು ಅವನನ್ನು ತಣಿಸುತ್ತಿದೆ.

**ಅಂತರಮೇಕಂ ಕಿಂಚಿತ್ಸಂತತಮನುಸಂದಧನ್ಮಹಾಮೌನೀ ।**
**ಕರಪುಟಭಿಕ್ಷಾಮಶ್ನನ್ ಅಟತಿ ಹಿ ವೀಥ್ಯಾಂ ಜಡಾಕೃತಿಃ ಕೋಽಪಿ ॥ ೩೯ ॥**

ಒಬ್ಬಾನೊಬ್ಬ ಯತಿಯು ತನ್ನೊಳಗೆ ಇರುವ ಯಾವುದೋ ತತ್ತ್ವವನ್ನು ಎಡೆಬಿಡದೆ ಅನುಸಂಧಾನಮಾಡುತ್ತ, ಯಾರೊಂದಿಗೂ ಮಾತನಾಡದೆ, ತನ್ನ ಕೈಯಲ್ಲಿ ತಾನಾಗಿ ಒದಗಿಬಂದ ಆಹಾರವನ್ನು ಮೆಲ್ಲುತ್ತ, ಜಡನಂತೆ ಬೀದಿಯಲ್ಲಿ ತಿರುಗಾಡುವನು.

**ಪ್ರವಿಲಾಪ್ಯ ಜಗದಶೇಷಂ ಪರಿಶಿಷ್ಟಾಖಂಡವಸ್ತುಪರತಂತ್ರಃ ।**
**ಪ್ರಶ್ನಾತಿ ಕವಲಮಾಸ್ಯೇ ಪ್ರಾಪ್ತಂ ಪ್ರಾರಬ್ಧಕರ್ಮಣಾ ಕೋಽಪಿ ॥ ೪೦ ॥**

ಇಡೀ ಜಗತ್ತನ್ನು ಅದರಾಚೆ ಉಳಿದ ಅಖಂಡತತ್ತ್ವದಲ್ಲಿ ಲೀನಗೊಳಿಸಿ, ಆ ತತ್ತ್ವಕ್ಕೆ ಮಣಿದು, ಒಬ್ಬಾನೊಬ್ಬನು ಪ್ರಾರಬ್ಧವಶವಾಗಿ ತನ್ನ ಬಾಯೊಳಗೆ ಸೇರಿಕೊಂಡ ತುತ್ತನ್ನು ನುಂಗುತ್ತಿರುವನು.

**ನಿಂದತಿ ಕಿಮಪಿ ನ ಯೋಗಿ ನಂದತಿ ನೈವಾಪರಂ ಕಿಮಪ್ಯಂತಃ ।**
**ಚಂದನಶೀತಲಹೃದಯಃ ಕಂದಲಿತಾನಂದಮಂಥರಃ ಸ್ವಾಸ್ತೇ ॥ ೪೧ ॥**

ಈ ಯೋಗಿಯು ಏನನ್ನಾಗಲೀ ಜರಿಯುವುದಿಲ್ಲ; ಮತ್ತೆ ಯಾವುದನ್ನಾದರೂ ಒಳಗೆ ಬಯಸುವುದಿಲ್ಲ. ಚಂದನದಂತೆ ತಣ್ಣಗಿರುವ ಒಡಲು ಅವನದ್ದು. ಬುಳುಬುಳನೆ ಮೆಲುಕ್ಕುವ ಸಂತೋಷದಿಂದ ಇರುವನು.

**ಸಂತ್ಯಜ್ಯ ಶಾಸ್ತ್ರಜಾಲಂ ಸಂವ್ಯವಹಾರಂ ಚ ಸರ್ವತಸ್ತ್ಯಕ್ತ್ವಾ।**
**ಆಶ್ರಿತ್ಯ ಪೂಣರಪದವೀಮಾಸ್ತೇ ನಿಷ್ಕಂಪದೀಪವದ್ಯೋಗೀ ॥ ೪೨ ॥**

ಈ ಯೋಗಿಯು ಶಾಸ್ತ್ರದ ಹೊರೆಯನ್ನು ದೂರಸರಿಸಿರುವನು; ಲೋಕದ ವ್ಯವಹಾರವನ್ನೆಲ್ಲ ಕೈಬಿಟ್ಟಿರುವನು. ಯಾವೊಂದು ಬಯಕೆಯೂ ಕೊರೆಯೂ ಇರದೆ ಪೂರ್ಣವಾಗಿರುವ ಆತ್ಮತತ್ತ್ವವನ್ನು ಆಶ್ರಯಿಸಿರುವನು. ಗಾಳಿಗೆ ಅಲುಗಾಡದ ಸೊಡರಿನಂತೆ ಸ್ಥಿರವಾಗಿರುವನು.

**ತೃಣಪಂಕಚರ್ಚಿತಾಂಗಃ ತೃಣಮಿವ ವಿಶ್ವಂ ವಿಲೋಕಯನ್ಯೋಗೀ ।**
**ವಿಹರತಿ ರಹಸಿ ವನಾಂತೇ ವಿಜರಾಮರಭೂಮ್ನಿ ವಿಶ್ರಾಂತಃ ॥ ೪೩ ॥**

ಮೈಯೆಲ್ಲ ಧೂಳಿನಿಂದ, ಹುಲ್ಲುಕಡ್ಡಿಗಳಿಂದ ಮುಚ್ಚಿದ್ದು, ಜಗತ್ತನ್ನೆಲ್ಲ ಹುಲ್ಲುಕಡ್ಡಿಯಂತೆ ಬಗೆದಿರುವ ಈ ಯೋಗಿಯು ಕಾಡಿನ ನಡುವೆ ಯಾರಿಗೂ ತಿಳಿಯದಂತೆ ವಿಹರಿಸುತ್ತಿರುವನು; ಅವನು ನೆಲೆಗೊಂಡಿರುವುದು ಮುಪ್ಪಾಗಲೀ ಸಾವಾಗಲೀ ಮುಟ್ಟದ ಬ್ರಹ್ಮನಲ್ಲೇ.

**ಪಶ್ಯತಿ ಕಿಮಪಿ ನ ರೂಪಂ ನ ವದತಿ ನ ಶ್ರುಣೋತಿ ಕಿಂಚಿದಪಿ ವಚನಮ್ ।**
**ತಿಷ್ಠತಿ ನಿರುಪಮಭೂಮನಿ ನಿಷ್ಠಾಮವಲಂಬ್ಯ ಕಾಷ್ಠವದ್ಯೋಗೀ ॥ ೪೪ ॥**

ಈ ಯೋಗಿಯು ಏನನ್ನಾಗಲೀ ಕಣ್ಣಿಟ್ಟು ನೋಡುವುದಿಲ್ಲ, ಏನನ್ನಾಗಲೀ ನುಡಿಯುವುದಿಲ್ಲ, ಏನನ್ನಾಗಲೀ ಕೇಳುವುದಿಲ್ಲ; ಸಾಟಿಯಿರದ ಆತ್ಮವಸ್ತುವಿನಲ್ಲೇ ನೆಲೆಗೊಂಡು ಬೇರೂರಿ, ಕಟ್ಟಿಗೆಯ ತುಂಡಿನಂತೆ ಇರುವನು.

**ಜಾತ್ಯಭಿಮಾನವಿಹೀನೋ ಜಂತುಷು ಸರ್ವತ್ರ ಪೂರ್ಣತಾಂ ಪಶ್ಯನ್ ।**
**ಗೂಢಂ ಚರತಿ ಯತೀಂದ್ರೋ ಮೂಢವದಖಿಲಾಗಮಾರ್ಥತತ್ತ್ವಜ್ಞಃ ॥೪೫॥**

ತನ್ನ ಜಾತಿ ಯಾವುದೋ ಕುಲ ಯಾವುದೋ ಮನೆತನ ಯಾವುದೋ ಆದೊಂದರ ಅಭಿಮಾನವೂ ಅವನಿಗಿರದು; ಎಲ್ಲ ಪ್ರಾಣಿಗಳಲ್ಲೂ ಅವನು ಕಾಣುವುದು ಪರಿಪೂರ್ಣವಾದ ಆತ್ಮತತ್ತ್ವವನ್ನೇ. ಎಲ್ಲ ವೇದಗಳ ತಾತ್ಪರ್ಯವನ್ನು ಅರಿತವನಾದರೂ ಏನೂ ತಿಳಿಯದ ದಡ್ಡನಂತೆ ಇರುತ್ತ, ಯಾರಿಗೂ ತಿಳಿಯದಂತೆ ಬದುಕುತ್ತಲಿರುವನು.

**ಉಪಧಾಯ ಬಾಹುಮೂಲಂ ಪರಿಧಾಯಾಕಾಶಮವನಿಮಾಸ್ತೀರ್ಯ ।**
**ಪ್ರಸ್ವಪಿತಿ ವಿರತಿವನಿತಾಂ ಪರಿರಭ್ಯಾನಂದಪರವಶಃ ಕೋಽಪಿ ॥ ೪೬ ॥**

ಈ ಒಬ್ಬಾನೊಬ್ಬನು ತನ್ನ ತೋಳುಗಳನ್ನೆ ತಲೆದಿಂಬಾಗಿಸಿಕೊಂಡು, ಬಟ್ಟಬಯಲನ್ನೆ ಹೊದ್ದುಕೊಂಡು, ವಿರಕ್ತಿಯೆಂಬ ಹೆಂಗಳೆಯನ್ನು ಅಪ್ಪಿಕೊಂಡು, ಆನಂದದಿಂದ ನಿದ್ರಿಸುವನು.

**ಗತಭೇದವಾಸನಾಭಿಃ ಸ್ವಪ್ರಜ್ಞೋದಾರವಾರನಾರೀಭಿಃ ।**
**ರಮತೇ ಸಹ ಯತಿರಾಜಸ್ತ್ರಯ್ಯಂತಾಂತಃಪುರೇ ಕೋಽಪಿ ॥ ೪೭ ॥**

ಈ ಒಬ್ಬಾನೊಬ್ಬನು ಯತಿಗಳ ಅರಸ; ಅದು – ಇದೆಂಬ ಭೇದಬುದ್ಧಿ ಒಂದಿಷ್ಟೂ ಇರದೆ, ಆತ್ಮಜ್ಞಾನದ ಹರವಿನಿಂದ ಹೊರಹೊಮ್ಮಿದ ವರವನಿತೆಯ ರೊಡಗೂಡಿ, ಮೂರು ವೇದಗಳ ರಹಸ್ಯವೆಂಬ ಅಂತಃಪುರದಲ್ಲಿ ಕ್ರೀಡಿಸುವನು.

**ವೈರಾಗ್ಯವಿಪುಲಮಾರ್ಗಂ ವಿಜ್ಞಾನೋದ್ದಾಮದೀಪಿಕೋದ್ದೀಪ್ತಮ್ ।**
**ಆರುಹ್ಯ ತತ್ತ್ವಹರ್ಮ್ಯಂ ಮುಕ್ತ್ಯಾ ಸಹ ಮೋದತೇ ಯತಿರಾಟ್ ॥ ೪೮ ॥**

ಈ ಯತಿರಾಜನು ವಿರಕ್ತಿಯೆಂಬ ದೊಡ್ಡ ದಾರಿಯಲ್ಲಿ ಆತ್ಮಜ್ಞಾನವೆಂಬ ದೊಡ್ಡ ದೀವಟಿಗೆಯ ಬೆಳಕಿನಿಂದ ನಡೆದು, ತತ್ತ್ವಜ್ಞಾನವೆಂಬ ಅರಮನೆಯನ್ನೇರಿ, ಮುಕ್ತಿಯೆಂಬ ಅರಸಿಯೊಂದಿಗೆ ಸುಖಪಡುವನು.

**ವಿಜನತಲೋತ್ಪಲಮಾಲಾಂ ವನಿತಾವೈತೃಷ್ಣ್ಯ ಕಲ್ಪವಲ್ಲೀಂ ಚ ।**
**ಅಪಮಾನಾಮೃತಗುಟಿಕಾಮಾತ್ಮಜ್ಞಃ ಕೋಽಪಿ ಗೃಹ್ಣಾತಿ ॥ ೪೯ ॥**

ಈ ಒಬ್ಬಾನೊಬ್ಬ ಆತ್ಮಜ್ಞನು ಧರಿಸಿರುವ ಮಾಲೆ ಯಾರೂ ಇಲ್ಲದೆಡೆ ಬೆಳೆದಿರುವ ನೈದಿಲೆಗಳದ್ದು. ಅವನ ಪಾಲಿಗೆ ಎಲ್ಲವನ್ನೂ ನೀಡುವ ಕಲ್ಪವೃಕ್ಷವೆಂದರೆ ಹೆಣ್ಣು ಮೊದಲಾದ ಯಾವುದನ್ನೂ ಬಯಸದಿರುವುದು, ವಿರಕ್ತಿ; ಜನರು ಅವನಿಗೆ ಮಾಡುವ ಅವಮಾನಗಳನ್ನು ಅವನು ಅಮೃತಗುಳಿಗೆಯೆಂದೇ ಬಗೆದು ನುಂಗುವನು.

**ನ ನಿಷೇಧತಿ ದೋಷಧಿಯಾ ಗುಣಬುದ್ಧ್ಯಾ ವಾ ನ ಕಶ್ಚಿದಾದತ್ತೇ ।**
**ಅವಿದ್ಯಕಮಖಿಲಮಿತಿ ಜ್ಞಾತ್ವೋದಾಸ್ತೇ ಮುನಿಃ ಕೋಽಪಿ ॥ ೫೦ ॥**

ಈ ಒಬ್ಬಾನೊಬ್ಬ ಮುನಿಯು 'ಇದರಲ್ಲಿ ದೋಷವಿದೆ, ಇದು ಬೇಡ' ಎಂದಾಗಲಿ, 'ಇದರಲ್ಲಿ ಗುಣವಿದೆ, ಇದು ಬೇಕು' ಎಂದಾಗಲಿ ಯಾವುದನ್ನೂ ಬಗೆಯುವುದಿಲ್ಲ. ಎಲ್ಲವೂ ಅವಿದ್ಯೆಯಿಂದಲೇ ಆದುವು ಎಂಬುದನ್ನು ಅರಿತು ಎಲ್ಲದರಲ್ಲೂ ಉದಾಸೀನನಾಗಿಯೆ ಇರುತ್ತಾನೆ.

**ಭೂತಂ ಕಿಮಪಿ ನ ಮನುತೇ ಭಾವಿ ಚ ಕಿಂಚಿನ್ನಚಿಂತಯತ್ಯಂತಃ ।**
**ಪಶ್ಯತಿ ನ ಪುರೋವರ್ತ್ಯಪಿ ವಸ್ತು ಸಮಸ್ತಾರ್ಥಸಮರಸಃ ಕೋಽಪಿ ॥೫೧॥**

ಇವನು ಹಿಂದೆ ಆದುದನ್ನು ನೆನೆಸಿಕೊಳ್ಳುವುದಿಲ್ಲ; ಮುಂದೆ ಆಗುವುದನ್ನು ಕುರಿತು ಆಲೋಚಿಸುವುದಿಲ್ಲ; ಎದುರಿಗಿರುವುದನ್ನೂ ಗಮನಿಸುವುದಿಲ್ಲ. ಅವನಿಗೆ ಇರುವುದೊಂದೇ ವಸ್ತು, ಎಲ್ಲದರಲ್ಲಿಯೂ ಇರುವ ಆತ್ಮ. ಆದ್ದರಿಂದಲೇ ಅವನದ್ದು ಎಲ್ಲದರಲ್ಲಿಯೂ ಸಮನಾದ ಮನಸ್ಸಿನ ಸ್ಥಿತಿ.

**ನಿಗೃಹೀತಾಖಿಲಕರಣಃ ನಿರ್ಮೃಷ್ಟಾಶೇಷವಿಷಯೇಹಃ ।**
**ತೃಪ್ತಿಮನುತ್ತಮಸೀಮಾಂ ಪ್ರಾಪ್ತಃ ಪರ್ಯಟತಿ ಕೋಽಪಿ ಯತಿವರ್ಯಃ ॥೫೨ ॥**

ಈ ಯತಿಯು ತನ್ನೆಲ್ಲ ಇಂದ್ರಿಯಗಳನ್ನೂ ಬಿಗಿಹಿಡಿದು, ವಿಷಯಗಳ ಬಯಕೆಗಳೆಲ್ಲವನ್ನೂ ಬದಿಗಿಟ್ಟು, ಎಲ್ಲೆಗಳನ್ನೆಲ್ಲ ದಾಟಿಸುವ ತೃಪ್ತಿಯನ್ನು ಪಡೆದು ಕೊಂಡು ಒಂದೆಡೆ ನಿಲ್ಲದೆ ಅಲೆದಾಡುತ್ತಿರುವನು.

**ಸಂತ್ಯಜತಿ ನೋಪಪನ್ನಂ ನಾಸಂಪನ್ನಂ ಚ ವಾಂಛತಿ ಕ್ವಾಪಿ ।**
**ಸ್ವಸ್ಥಃ ಶೇತೇ ಯತಿರಾಡಾಂತರಮಾನಂದಮನುಭವನ್ನೇಕಃ ॥ ೫೩ ॥**

ಈ ಯತಿರಾಜನು, ತನ್ನ ಪಾಲಿಗೆ ಬಂದದ್ದನ್ನು ಬಿಡುವುದಿಲ್ಲ, ಬಾರದಿದ್ದನ್ನು ಎಂದೂ ಬಯಸುವುದಿಲ್ಲ. ತನ್ನೊಳಗಣ ಸುಖವನ್ನನುಭವಿಸುತ್ತ ತನ್ನಲ್ಲಿ ತಾನು ಇದ್ದುಕೊಂಡು ಮಲಗಿರುತ್ತಾನೆ.

**ಕಾಮಪಿ ವಿಮಲಾಂ ಪದವೀಮಾಸಾದ್ಯಾನಂದಸಂವಿದುನ್ನಿದ್ರಾಮ್ ।**
**ಆಸ್ತೇ ಭಿಕ್ಷುಕ ಏಕೋ ವಿಹರನ್ನಿರ್ಮುಕ್ತಬಂಧನಃ ಸ್ವೈರಮ್ ॥ ೫೪ ॥**

ಈ ಭಿಕ್ಷುಕನೊಬ್ಬನು ಯಾವುದೋ ಪರಿಶುದ್ಧವಾದ ಸ್ಥಿತಿಯನ್ನು ಹೊಂದಿ, ಆನಂದಚೈತನ್ಯಕ್ಕೆ ಎಚ್ಚೆತ್ತು, ಸಂಸಾರದ ಯಾವೊಂದು ಕಟ್ಟೂ ಇರದೆ, ಮನಬಂದಂತೆ ವಿಹರಿಸುತ್ತಾನೆ.

**ವಸ್ತುನ್ಯಸ್ತಮಿತಾಖಿಲವಿಶ್ವವಿಹಾರೇ ವಿಲೀನಮನಾಃ ।**
**ರಾಜತಿ ಪರಾನಪೇಕ್ಷೋ ರಾಜಾಖಿಲವೀತರಾಗಾಣಾಮ್ ॥ ೫೫ ॥**

ಬಯಕೆಗಳನ್ನೆಲ್ಲ ಬಿಟ್ಟಿರುವವರ ದೊರೆ ಇವನು; ಇಡೀ ಪ್ರಪಂಚವೆಲ್ಲ ಎಲ್ಲಿ ಮುಳುಗಿರುವುದೋ ಆ ಆತ್ಮವಸ್ತುವಿನಲ್ಲಿ ನಟ್ಟ ಮನಸ್ಸಿನವನು, ಯಾವೊಂದು ಕೊರೆಯೂ ಇವನಿಗಿರದು.

ಆಚಾರ್ಯಾಪಾಂಗದೃಶಾ ಸಮವಾಪ್ತಾಪಾರಸಂವಿದಾಕಾರಃ ।
ಪ್ರಶಮಿತಸಕಲವಿಭೇದಃ ಪರಹಂಸಃ ಕಶ್ಚಿದಾಭಾತಿ ॥ ೫೬ ॥

ಗುರುವಿನ ಕುಡಿನೋಟದಿಂದ ಮೇರೆಯಿರದ ಅರಿವಿನ ರೂಪವನ್ನೆ ತಳೆದವನು ಇವನು; ಸಂಸಾರದ ನಾಮರೂಪವಸ್ತುಗಳಿಂದಾದ ಎಲ್ಲ ಭೇದವನ್ನು ಅಡಗಿಸಿಬಿಟ್ಟವನು, ಪರಮಹಂಸನಿವನು, ಕಂಗೊಳಿಸುವನು.

ವರ್ಣಾಶ್ರಮವ್ಯವಸ್ಥಾಮುತ್ತೀರ್ಯ ವಿಧೂಯ ವಿದ್ಯಾದೀನ್ ।
ಪರಿಶಿಷ್ಯತೇ ಯತೀಂದ್ರಃ ಪರಿಪೂರ್ಣಾನಂದಬೋಧಮಾತ್ರೇಣ ॥ ೫೭ ॥

ವರ್ಣ ಆಶ್ರಮ ಮೊದಲಾದ ಏರ್ಪಾಟನ್ನೆಲ್ಲ ದಾಟಿರುವನು ಇವನು; ಶಾಸ್ತ್ರ ವಿಧಿಸುವ ಕಟ್ಟಳೆಗಳನ್ನೆಲ್ಲ ತೊಡೆದುಬಿಟ್ಟಿರುವವನು. ಪರಿಪೂರ್ಣವಾದ ಆನಂದದ ಅರಿವಿನಲ್ಲಿ ಮಾತ್ರ ಅದೇ ಅರಿವಾಗಿ ಉಳಿದುಕೊಂಡಿರುವವನು.

ಕ್ಷಯಮುಪನೀಯ ಸಮಸ್ತ ಕರ್ಮ ಪ್ರಾರಬ್ಧಮುಪಭುಜ್ಯ ।
ಪ್ರವಿಗಲಿತದೇಹಬಂಧಃ ಪ್ರಾಜ್ಞೋ ಬ್ರಹ್ಮೈವ ಕೇವಲಂ ಭವತಿ ॥ ೫೮ ॥

ಸಂಚಿತ, ಆಗಾಮಿಕರ್ಮಗಳೆಲ್ಲದರ ಕೊನೆಯನ್ನು ಮುಟ್ಟಿಸಿ, ನಾಶಪಡಿಸಿ, ಪ್ರಾರಬ್ಧಕರ್ಮವನ್ನು ಅನುಭವಿಸಿ, ಶರೀರದ ಕಟ್ಟನ್ನೆಲ್ಲ ಕಳಚಿ ಬಿಸುಟು ಈ ಜ್ಞಾನಿಯು ಬ್ರಹ್ಮವೇ ಆಗಿಬಿಡುತ್ತಾನೆ.

ಸ್ತಿಮಿತಮನಂತಮನಾದ್ಯಂ ಸಂತತಮಾನಂದಬೋಧಘನಮ್ ।
ಷವಿಕಲ್ಪಮಾದ್ಯಮೇಕಂ ಸನ್ಮಾತ್ರಂ ವಿದ್ಯತೇ ಕಿಮಪಿ ॥ ೫೯ ॥

ಇರುವುದೊಂದೇ ಬ್ರಹ್ಮ; ಬರಿಯ ಇರವು ಅದು. ನೆಲೆಗೊಂಡ ತತ್ತ್ವ, ಕೊನೆಯಿಲ್ಲದ್ದು ಮೊದಲಿಲ್ಲದ್ದು, ಎಂದೆಂದೂ ಇರುವಂಥದು, ಆನಂದವೆಂಬ ಅರಿವಿನ ಗಟ್ಟಿ, ಎಂದಿಗೂ ಬದಲಾಗದುದು. ಎಲ್ಲದರ ಮೊದಲಲ್ಲಿ ಇರುವುದು ಅದೊಂದೇ.

ಅಕ್ಷರಮಜರಮಜಾತಂ ಸೂಕ್ಷ್ಮತರಾಪೂರ್ವಶುದ್ಧವಿಜ್ಞಾನಮ್ ।
ಪ್ರಗಲಿತಸರ್ವಕ್ಲೇಶಂ ಪರತತ್ತ್ವಂ ವರ್ತತೇ ಕಿಮಪಿ ॥ ೬೦ ॥

ಯಾವುದೋ ಪರತತ್ತ್ವ ಅದೊಂದು ಇದೆ. ನಾಶವಿಲ್ಲದ್ದು, ಮುಪ್ಪಾಗದುದು, ಹುಟ್ಟಿಲ್ಲದುದು; ಸೂಕ್ಷ್ಮವಾದ ಪರಿಶುದ್ಧವಾದ ಹಿಂದೆಂದೂ ಅನುಭವಕ್ಕೆ ಬಂದಿರದ ತಿಳಿವು; ಕ್ಲೇಶಗಳನ್ನೆಲ್ಲ ತೊಡೆದುಹಾಕಿಕೊಂಡಿರುವುದು.

ಸಖತರಮಮರಮದೂರಂ ಸಾರಂ ಸಂಸಾರವಾರಿಧೇಸ್ತೀರಮ್ ।
ಸಮರಸಭಯಮಪಾರಂ ತತ್ಕಿಂಚನ ವಿದ್ಯತೇ ತತ್ತ್ವಮ್ ॥ ೬೧ ॥

'ಅದು' ಬ್ರಹ್ಮವಸ್ತು, 'ತತ್' ಎಂದೇ ಅದನ್ನು ನಿರ್ದೇಶಿಸಬೇಕು. ಹೆಚ್ಚುವ ಆನಂದ ಅದು, ಸಾವಿಲ್ಲದ್ದು, ಹತ್ತಿರವೇ ಇರುವಂಥದು, ಒಡಲೊಳಗೇ ಅದರ ನೆಲೆ. ಎಲ್ಲಕ್ಕೂ ಸಾರಭೂತವಾದುದು; ಸಂಸಾರದ ಆಚೆಯ ದಡ. ಪ್ರಪಂಚದ ಎಲ್ಲದರಲ್ಲೂ ಸಮನಾಗಿಯೇ ಇರುವುದು. ಸಂಸಾರದ ಭಯವನ್ನು ನೀಗಿಸುವುದು ಅದು. ಯಾವುದೋ ಆ ತತ್ತ್ವ!)

**ಅರಸಮಗಂಧಮರೂಪಂ ವಿರಜಸ್ಕಮಸತ್ತ್ವಮತಮಸ್ಕಮ್ ।**
**ನಿರುಪಮನಿರ್ಭಯತತ್ತ್ವಂ ತತ್ ಕಿಮಪಿ ದ್ಯೋತತೇ ನಿತ್ಯಮ್ ॥ ೬೨ ॥**

ಅದಕ್ಕೇನು ರಸವೇ ಗಂಧವೇ ರೂಪವೇ? ಏನೂ ಇರದು. ಪ್ರಪಂಚದಲ್ಲಿ ಹಾಸುಹೊಕ್ಕಾಗಿರುವ ರಜಸ್ಸು, ಸತ್ತ್ವ, ತಮಸ್ಸು ಎಂಬ ಗುಣಗಳಿಂದ ದೂರವಾದುದು. ಅದಕ್ಕೆ ಸರಿಸಮನಾದುದು ಬೇರೊಂದಿರದು. ಭಯವಿಲ್ಲದಿರುವ ಈ ತತ್ತ್ವ ಎಡೆಬಿಡದೆ ಎಲ್ಲೆಲ್ಲೂ ಬೆಳಗುತ್ತಿದೆ.

**ಇತಿ ಗುರುಕರುಣಾಪಾಗಾದಾರ್ಯಾಭಿರ್ದ್ವ್ಯಧಿಕಷಷ್ಟಿಸಂಖ್ಯಾಭಿಃ ।**
**ನಿರವದ್ಯಾಭಿರವೋಚಂ ನಿಗಮಶಿರಸ್ತಂತ್ರಸಾರಭೂತಾರ್ಥಮ್ ॥ ೬೩ ॥**

ಗುರುವಿನ ಕರುಣೆಯ ಕುಡಿನೋಟದಿಂದ ನಾನು ಏನೊಂದು ಕುಂದಿರದ ಅರವತ್ತೆರಡು ಆರ್ಯಾವೃತ್ತದ ಶ್ಲೋಕಗಳಲ್ಲಿ ವೇದದ ಶಿರೋಭಾಗವೆನಿಸುವ ಉಪನಿಷತ್ತುಗಳ ತಾತ್ಪರ್ಯವನ್ನು ತಿಳಿಯಹೇಳಿದ್ದೇನೆ.

**ಫಲಸ್ತುತಿ**

**ಗದಿತಮಿಮಾತ್ಮವಿದ್ಯಾವಿಲಾಸಮನುವಾಸರಂ ಸ್ಮರನ್ ವಿಬುಧಃ ।**
**ಪರಿಣತಪರಾತ್ಮವಿದ್ಯಃ ಪ್ರಪದ್ಯತೇ ಸಪದಿ ಪರಮಾರ್ಥಮ್ ॥ ೬೪ ॥**

ಹೀಗೆ ಹೇಳಲ್ಪಟ್ಟಿರುವ ಆತ್ಮವಿದ್ಯಾವಿಲಾಸವನ್ನು ದಿನವೂ ಮನನ ಮಾಡುವ ಬುದ್ಧಿವಂತನು ಆತ್ಮವಿದ್ಯೆಯಲ್ಲಿ ಪಳಗಿದವನಾಗಿ ಬೇಗನೆ ಪರಮಾರ್ಥವನ್ನು ಪಡೆದುಕೊಳ್ಳುವನು.

**ಸಮಾಪನ**

**ಪರಶಿವೇಂದ್ರಶ್ರೀಗುರುಶಿಷ್ಯೇಣೇತ್ಥಂ ಸದಾಶಿವೇಂದ್ರೇಣ ।**
**ರಚಿತೇಯಮಾತ್ಮ ವಿದ್ಯಾವಿಲಾಸನಾಮ್ನೀ ಕೃತಿಃ ಪೂರ್ಣಾ ॥ ೬೫ ॥**

ಪರಮಶಿವೇಂದ್ರರೆಂಬ ಗುರುಗಳ ಶಿಷ್ಯನಾದ ಸದಾಶಿವೇಂದ್ರನಿಂದ ವಿರಚಿತವಾದ ಆತ್ಮವಿದ್ಯಾವಿಲಾಸವೆಂಬ ಹೆಸರಿನ ಈ ಕೃತಿಯು ಮುಗಿದುದು.

★★★

ಸಾಕೃರಾ

## ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಕಾಲವಾದ ಕೆಲವು ತಿಂಗಳನಂತರ ಅವರ ಕುಟುಂಬದವರು ಅವರ ಹೆಸರಿನಲ್ಲಿ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದರು.

**ಈ ನಿಧಿಯ ಉದ್ದೇಶಗಳು ಹೀಗಿವೆ :**

★ ಪ್ರೊ. ರಾಮಚಂದ್ರರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬರೆದ ಹಲವಾರು ಪುಸ್ತಕಗಳನ್ನು ಹಾಗೂ ಲೇಖನಗಳನ್ನು ಸಂಗ್ರಹಿಸುವುದು.

★ ಇವುಗಳಲ್ಲಿ ಪ್ರಸ್ತುತ ದೊರೆಯದ ಪುಸ್ತಕಗಳನ್ನು ಪುನರ್ಮುದ್ರಣ ಮಾಡುವುದು.

★ ಅವರು ವಿವಿಧ ವಿಷಯಗಳ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಮಾಸಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದರು. ಅವುಗಳನ್ನು ಪುಸ್ತಕರೂಪದಲ್ಲಿ ತರುವುದು.

★ ಅವರು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡಿದ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ ಹೊರತರುವುದು. ಈಗಾಗಲೇ 25ಕ್ಕಿಂತ ಹೆಚ್ಚು ಧ್ವನಿಸುರುಳಿಗಳನ್ನು ಹೊರತರಲಾಗಿದೆ.

★ ರಾಯರು ಅವರ ಮನೆಯಲ್ಲಿ 3-4 ದಶಕಗಳಿಂದ ಭಗವದ್ಗೀತೆ, ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ತ್ರಿಪುರಾ ರಹಸ್ಯ, ಶಿಲ್ಪಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ಪ್ರವಚನಗಳನ್ನು ಮಾಡುತ್ತಿದ್ದರು. ಇದರ ಧ್ವನಿಸುರುಳಿಗಳನ್ನು ತಯಾರಿಸುವುದು. ಈಗಾಗಲೇ ಬ್ರಹ್ಮಸೂತ್ರ, ಗೀತಾ ವಿವೃತ್ತಿ, ಶಿವಸೂತ್ರ ಹಾಗೂ ಮಾಂಡೂಕ್ಯೋಪನಿಷತ್‌ಗಳ ಧ್ವನಿಸುರುಳಿಗಳು ತಯಾರಾಗಿವೆ.

★ ಅವರು ರಚಿಸಿದ ಕಲಾಕೃತಿಗಳ, ರೇಖಾ ಮತ್ತು ವರ್ಣಚಿತ್ರಗಳ ಸಂರಕ್ಷಣೆ ಮತ್ತು ಪ್ರದರ್ಶನ ಮಾಡುವುದು. 2007ರಲ್ಲಿ ಅವರ ಕಲಾವೈಭವದ ಪ್ರದರ್ಶನ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿತ್ತು.

ಪ್ರೊ. ರಾಮಚಂದ್ರರಾಯರ ಬರಹಗಳನ್ನು ಪ್ರಕಟಿಸುವ ಉದ್ದೇಶದಿಂದ ನಾವು 'ಸುರಮಾ ಪ್ರಕಾಶನ' ಎಂಬ ಹೆಸರಿನಲ್ಲಿ ಒಂದು ಪ್ರಕಟನಾ ವಿಭಾಗವನ್ನು ಸ್ಥಾಪಿಸಿ ರಾಯರ ಹನ್ನೊಂದು ಪುಸ್ತಕಗಳನ್ನು ಹೊರತಂದಿದ್ದೇವೆ.

**Sole Distributors :**

**JANAPADA PRAKASHANA**

**₹120/-**

ಸುರಮಾ ಪ್ರಕಾಶನ

ಬೆಂಗಳೂರು-11